ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು

# KARNATAKA LEGISLATIVE COUNCIL DEBATES

ಅಧಿಕೃತ ವರದಿ

## OFFICIAL REPORT

೧೨೯ ನೇ ಅಧಿವೇಶನ

## 129th SESSION

ಸಂಪುಟ–೪೩೭ ಕ್ರಮಾಂಕ (೧)

**Volume -437 (No. 1)**

( ೩೦ ನೇ ಜುಲೈ ೨೦೧೫)

**(30th July 2015)**


ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಬೆಂಗಳೂರು

**Karnataka Legislative Council Secretariat, Bangalore**

ಕರ್ನಾಟಕ ವಿಧಾನ ಪರಿಷತ್ತು

**ದಿನಾಂಕ: 30ನೇ ಜುಲೈ 2015**

**ಶುಕ್ರವಾರ,**

ವಿಷಯಾನುಕ್ರಮಣಿಕೆ


**1.** ಸಂತಾಪ ಸೂಚನೆ **2-10**

ಮಾಜಿ ರಾಷ್ಟ್ರಪತಿ, ಶ್ರೇಷ್ಠ ವಿಜ್ಞಾನಿ, ಭಾರತರತ್ನ ಹಾಗೂ ಭಾರತದ ಕ್ಷಿಪಣಿ ತಂತ್ರಜ್ಞಾನದ ಪಿತಾಮಹ ಡಾ: ಎ.ಪಿ.ಜೆ ಅಬ್ದುಲ್ ಕಲಾಂ ಹಾಗೂ ಮಾಜಿ ಸಚಿವ ಶ್ರೀ ವಸಂತ ವಿ.ಸಾಲಿಯಾನ ಅವರುಗಳು ನಿಧನರಾದ ಬಗ್ಗೆ.

**2.** ಪ್ರಕಟಣೆಗಳು **10**

- ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು)

- ಶ್ರೀ ಕೆ.ಎಸ್.ಶ್ವರಪ್ಪ (ವಿರೋಧ ಪಕ್ಷದ ನಾಯಕರು)

**3.** ಸಭೆಯ ಮುಂದಿಡಲಾದ ಕಾಗದ ಪತ್ರಗಳು **11**

**4.** ಅರ್ಜಿಯನ್ನೊಪ್ಪಿಸುವುದು **11**

**5.** ಸಭೆಯ ಮುಂದಿಡಲಾದ ಕಾಗದ ಪತ್ರಗಳು **11**

**6.** ನಿಯಮ **330** ಪ್ರಕಾರ ವಿಶೇಷ ಪ್ರಸ್ತಾವಗಳು **11-18**

ಅ) ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನ ಕುರಿತು.

- ಶ್ರೀಮತಿ ಮೋಟಮ್ಮ

- ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು)

- ಶ್ರೀ ಬಸವರಾಜ ಹೊರಟ್ಟಿ

- ಶ್ರೀ ಕೆ.ಬಿ.ಶಾಣಪ್ಪ

- ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)

- ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ

- ಶ್ರೀ ಗೋ.ಮಧುಸೂದನ್

- ಶ್ರೀ ಇ.ಕೃಷ್ಣಪ್ಪ

- ಶ್ರೀ ಬಿ.ಜೆ.ಪುಟ್ಟಸ್ವಾಮಿ ಶ್ರೀ ಭಾನುಪ್ರಕಾಶ್

- ಶ್ರೀ ಬಿ.ರಾಮಕೃಷ್ಣ

- ಡಾ: ವೀರಣ್ಣ ಮತ್ತಿಕಟ್ಟಿ

- ಶ್ರೀಮತಿ ತಾರಾಅನುರಾಧಾ

**ಆ)** ಸಾರ್ವಜನಿಕರು ದೂರು ನೀಡಲು ರಚಿಸಲಾಗಿರುವ ಪೊಲೀಸ್ ದೂರು ಪ್ರಾಧಿಕಾರಿಗಳ ಬಗ್ಗೆ ಜನಜಾಗೃತಿ ಮೂಡಿಸುವ ಕುರಿತು**.**

- ಶ್ರೀ ಟಿ.ಎ.ಶರವಣ

- ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು)

**7.** ಸಭಾಪತಿಯವರ ಅ ನುಮತಿಮೇರೆಗೆ ಪ್ರಸ್ತಾಪಿಸಲ್ಪಟ್ಟಿದ್ದ ವಿಷಯಗಳಿಗೆ ಸಂಬಂಧಿಸಿದಂತೆ **18-22**

ಸಚಿವರ ಹೇಳಿಕೆಗಳು

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಸರ್ಕಾರದ ಆದೇಶದನ್ವಯ ರಾಜ್ಯದ ಎಲ್ಲಾ ಹಿರಿಯ ನಾಗರಿಕರ ಟಿಕೇಟ್ ದರದಲ್ಲಿ ಶೇ.25ರಷ್ಟು ರಿಯಾಯಿತಿ ಸೌಲಭ್ಯವನ್ನು ಪ್ರಕಟಿಸಿದ್ದು, ಸದರಿ ಸೌಲಭ್ಯವನ್ನು ಪಡೆಯುವಲ್ಲಿ ಎದುರಾಗುತ್ತಿರುವ ಸಮಸ್ಯೆಗಳ ಬಗ್ಗೆ.

- ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು) (ಸಾರಿಗೆ ಸಚಿವರ ಪರವಾಗಿ)

**ಆ)** ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಇತರೆ ಹಾಲಿನ ಕೇಂದ್ರಗಳನ್ನು ಸ್ಥಾಪಿಸಲು ಅವಕಾಶ ನೀಡುವ ಮುನ್ನ ಕೆಎಂಎಫ್/ಬಿಮೂಲ್/ಬೆಮೂಲ್ ನಂದಿನಿ ಹಾಲಿನ ಮಳಿಗೆಗಳನ್ನು ಸ್ಥಾಪಿಸಲು ಆದ್ಯತೆ ಮೇರೆಗೆ ಅವಕಾಶ ನೀಡುವ ಬಗ್ಗೆ**.**

- ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು) ಸಾರಿಗೆ ಸಚಿವರ ಪರವಾಗಿ)

**ಇ)** ಯಶಸ್ವಿನಿ ರೈತ ಯೋಜನೆಯ ಬಗ್ಗೆ**.**

- ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು) ಸಹಕಾರ ಮತ್ತು ಸಕ್ಕರೆ ಸಚಿವರ ಪರವಾಗಿ)

**ಈ)** ರಾಜ್ಯದ ರಾಜಧಾನಿಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಯ ಸರ್ಕಾರಿ ದೊಡ್ಡಾಸ್ಪತ್ರೆಗಳೇ ಔಷಧಿ ಕೊರತೆ/ಜೀವ ರಕ್ಷಕ ಔಷಧಿಗಳ ಕೊರತೆಗೆ ತುತ್ತಾಗಿರುವ ಬಗ್ಗೆ**.**

- ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು) (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರ ಪರವಾಗಿ)

**8.** ಶಾಸನ ರಚನೆ **22-35**

**ಅ)** ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ **(**ತಿದ್ದುಪಡಿ**)** ವಿಧೇಯಕ**, 2015**

ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಸಚಿವರು)

ಶ್ರೀ ರಾಮಚಂದ್ರಗೌಡ

ಕ್ಯಾಪ್ಟನ್ ಗಣೇಶ್ ಕಾರ್ಣಿಕ್

ಶ್ರೀ ಅರುಣ್ ಶಹಾಪೂರ

ಪ್ರೊ.ಪಿ.ವಿ.ಕೃಷ್ಣಭಟ್

ಶ್ರೀ ಗೋ.ಮಧುಸೂದನ್

ಶ್ರೀ ವೈ.ಎ.ನಾರಾಯಣಸ್ವಾಮಿ

ಶ್ರೀ ವಿ.ಎಸ್.ಉಗ್ರಪ್ಪ

**9.** ಪ್ರಕಟಣೆ **35**

**10.** ಶಾಸನ ರಚನೆ **35-53**

**ಆ)** ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ **(**ತಿದ್ದುಪಡಿ**)** ವಿಧೇಯಕ**, 2015**

ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು)

ಕ್ಯಾಪ್ಟನ್ ಗಣೇಶ್ ಕಾರ್ಣಿಕ್

ಶ್ರೀ ಬಿ.ಜೆ.ಪಟ್ಟಸ್ವಾಮಿ

ಶ್ರೀ ಐವನ್ ಡಿ'ಸೋಜ

ಶ್ರೀ ಅಶ್ವತ್ಥನಾರಾಯಣ

ಶ್ರೀ ವಿ.ಎಸ್.ಉಗ್ರಪ್ಪ

ಶ್ರೀ ಸಿ.ಹೆಚ್.ವಿಜಯಶಂಕ

ಶ್ರೀ ಕೆ.ಬಿ.ಶಾಣಪ್ಪ

**11.** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ನೀತಿ ಮತ್ತು ಕಾರ್ಯಾಚರಣೆ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ**. 53-83**

ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು)

ಕ್ಯಾಪ್ಟನ್ ಗಣೇಶ್ ಕಾರ್ಣಿಕ್

ಶ್ರೀ ಬಿ.ಜೆ.ಪುಟ್ಟಸ್ವಾಮಿ

*ಕರ್ನಾಟಕ ವಿಧಾನ ಪರಿಷತ್ತು*

*ಶುಕ್ರವಾರ, 30ನೇ ಜುಲೈ 2015*

*ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ*

*ಅಪರಾಹ್ನ 12 ಗಂಟೆ 23 ನಿಮಿಷಕ್ಕೆ ಸಮಾವೇಶಗೊಂಡಿತು.*

*ಸಭಾಪತಿ (ಶ್ರೀ ಡಿ.ಎಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.*

**1.** ಸಂತಾಪ ಸೂಚನೆ

**'ಮಾಜಿ ರಾಷ್ಟ್ರಪತಿ, ಶ್ರೇಷ್ಠ ವಿಜ್ಞಾನಿ, ಭಾರತರತ್ನ ಹಾಗೂ ಭಾರತದ ಕ್ಷಿಪಣಿ ತಂತ್ರಜ್ಞಾನದ ಪಿತಾಮಹ ಡಾ|| ಎ.ಪಿ.ಜೆ.ಅಬ್ದುಲ್ ಕಲಾಂ ಹಾಗೂ ಮಾಜಿ ಸಚಿವ ಶ್ರೀ ವಸಂತ ವಿ.ಸಾಲಿಯಾನ ಅವರುಗಳು ನಿಧನರಾದ ಬಗ್ಗೆ'**

---

ಸಭಾಪತಿಯವರು:- ಮಾಜಿ ರಾಷ್ಟ್ರಪತಿ, ಶ್ರೇಷ್ಠ ವಿಜ್ಞಾನಿ, ಭಾರತರತ್ನ ಹಾಗೂ ಭಾರತದ ಕ್ಷಿಪಣಿ ತಂತ್ರಜ್ಞಾನದ ಪಿತಾಮಹ ಡಾ: ಎ.ಪಿ.ಜೆ. ಅಬ್ದುಲ್ ಕಲಾಂ ಹಾಗೂ ಮಾಜಿ ಸಚಿವ ಶ್ರೀ ವಸಂತ ವಿ. ಸಾಅಯಾನ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

**01.** ಡಾ: ಎ.ಪಿ.ಜೆ. ಅಬ್ದುಲ್ ಕಲಾಂ

ಅವುಲ್ ಫಕೀರ್ ಜೈನುಲಾದ್ದೀನ್ ಅಬ್ದುಲ್ಕಲಾಂ ಅವರು ದಿನಾಂಕ: 27.07.2015ರಂದು ನಿಧನ ಹೊಂದಿರುತ್ತಾರೆ.

15ನೇ ಅಕ್ಟೋಬರ್, 1931ರಲ್ಲಿ ತಮಿಳುನಾಡಿನ ರಾಮೇಶ್ವರಂ ಜಿಲ್ಲೆಯ ಧನುಷೋಡಿಯಲ್ಲಿ ಜನಿಸಿದ್ದ ಡಾ:ಎ.ಪಿ.ಜೆ. ಅಬ್ದುಲ್ ಕಲಾಂ ಅವರು 1954ರಲ್ಲಿ ತಿರುಚನಾಪಳ್ಳಿಯ ಸೆಂಟ್ ಜೋಸೆಫ್ ಕಾಲೇಜಿನಿಂದ ಭೌತಶಾಸ್ತ್ರದಲ್ಲಿ ಪದವಿ, 1960ರಲ್ಲಿ ಚೆನ್ನೈನ ಎಂ.ಐ.ಟಿ ಯಲ್ಲಿ ಏರೋಸ್ಪೇಸ್ ಇಂಜಿನಿಯರಿಂಗ್ ಪದವಿಯನ್ನು ಪಡೆದ ನಂತರ D.R.D.Oನ ಏರೋನಾಟಿಕ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್‌ನ ಪ್ರಧಾನ ವಿಜ್ಞಾನಿಯಾಗಿ ಸೇರ್ಪಡೆಯಾಗಿ, ಭಾರತೀಯ ಸೇನಾಪಡೆಯ ಸಣ್ಣ ಹೆಲಿಕಾಪ್ಟರ್ ಡಿಸೈನ್ ಮಾಡುವ ಮೂಲಕ ತಮ್ಮ ವೃತ್ತಿ ಜೀವನ ಆರಂಭಿಸಿದರು. ನಂತರ ಖ್ಯಾತ ಬಾಹ್ಯಾಕಾಶ ವಿಜ್ಞಾನಿ ವಿಕ್ರಮ್ ಸಾರಾಭಾಯಿ ಅವರೊಂದಿಗೆ ಸಹಾಯಕರಾಗಿ ಕೆಲಸ ನಿರ್ವಹಿಸಿದ್ದರು. 1969ರಲ್ಲಿ ಇಸ್ರೋಗೆ ವರ್ಗಾವಣೆಗೊಂಡು ಭಾರತದ ಮೊಟ್ಟ ಮೊದಲ ಸ್ವದೇಶಿ ನಿರ್ಮಿತ ಉಪಗ್ರಹ ಎಸ್.ಎಲ್.ವಿ. ಲಾಂಚ್ ವೆಹಿಕಲ್ ಪ್ರಾಜೆಕ್ಟ್‌ನ ಡೈರೆಕ್ಟರ್ ಆಗಿ, 1970-90ರ ಅವಧಿಯಲ್ಲಿ ಕಲಾಂ ಅವರು ಪೊಲಾ ಎಸ್‌ಎಲ್‌ವಿ ಮತ್ತು ಎಸ್‌ಎಲ್ ವಿ-3 ಪ್ರಾಜೆಕ್ಟ್‌ಗಳ ಯಶಸ್ವಿಗೆ ಬಹುವಾಗಿ ಶ್ರಮಿಸಿದ್ದರು.

1980ರಲ್ಲಿ ಸಂಶೋಧನೆ ಮತ್ತು ಶೈಕ್ಷಣಿಕ ಮುಂದಾಳತ್ವ ಅವರಿಗೆ ಬಹುದೊಡ್ಡ ಗೌರವವನ್ನು ತಂದುಕೊಟ್ಟಿತು. ಅಂದಿನ ರಕ್ಷಣಾ ಸಚಿವ ಶ್ರೀ ಆರ್. ವೆಂಕಟರಾಮನ್ ರವರ ಸೂಚನೆಯಂತೆ ಕಲಾಂ ಅವರು 388 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಇಂಟಗ್ರೇಟೆಡ್ ಗೈಡೆಡ್ ಮಿಸ್ಸೈಲ್ ಡೆವಲಪ್‌ಮೆಂಟ್ ಪ್ರೋಗ್ರಾಮ್ (ಐ.ಜಿ.ಎಂ.ಡಿ.ಪಿ) ಗೆ ಮುಖ್ಯ ಕಾರ್ಯನಿರ್ವಾಹಕರಾದರಲ್ಲದೆ, ಮಧ್ಯಂತರ ಬಾಅಸ್ಟಿಕ್ ಕ್ಷಿಪಣಿ 'ಅಗ್ನಿ' 'ಪೃಥ್ವಿ' ಮುಂತಾದವುಗಳ ತಯಾರಿಕೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದರು. 1992-99ರ ಅವಧಿಯಲ್ಲಿ ಪ್ರಧಾನ ಮಂತ್ರಿಗಳ ವೈಜ್ಞಾನಿಕ ಸಲಹೆಗಾರರು ಮತ್ತು ಡಿ.ಆರ್.ಡಿ.ಓ.ನ ಕಾರ್ಯದರ್ಶಿಯಾಗಿಯೂ ಸಹ ಕಾರ್ಯನಿರ್ವಹಿಸಿದ್ದರು. 1998ರಲ್ಲಿ ವಾಜಪೇಯಿ ಸರ್ಕಾರದ ವೇಳೆ ನಡೆದ ಪೋಟ್ರಾನ್-2ನಲ್ಲಿ ಪ್ರಧಾನ ಯೋಜನಾ ಸಮನ್ವಯ ಅಧಿಕಾರಿಯಾಗಿ ಸೇವೆಯನ್ನು ಸಲ್ಲಿಸಿದ್ದರು.

2002-2007ರ ಅವಧಿಯಲ್ಲಿ ಭಾರತದ 11ನೇ ರಾಷ್ಟ್ರಪತಿಯಾಗುವ ಮೂಲಕ ವಿಜ್ಞಾನಿಯೊಬ್ಬರು ರಾಷ್ಟ್ರದ ಅತ್ಯುತ್ತಮ ಪದವಿಗೇರಿದ ದಾಖಲೆ ಮತ್ತು ಕೀರ್ತಿಗೆ ಭಾಜನರಾದರು. 'ವಿಷನ್ 2020'ರ ಮುನ್ನೋಟವನ್ನು ದೃಢಗೊಳಿಸುವ ಪ್ರಯತ್ನ ಮಾಡಿ, ಮೂರು ತಿಂಗಳುಗಳ ಅವಧಿಯಲ್ಲಿ ಬಹುತೇಕ ರಾಜ್ಯಗಳ ಮುಖ್ಯಮಂತ್ರಿಗಳು, ಸಂಸದರು ಮತ್ತು ಹಿರಿಯ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿ ಹಲವಾರು ಮುಖಗಳಲ್ಲಿ ಭಾರತದ ಅಭಿವೃದ್ಧಿ ಕುರಿತಂತೆ ವ್ಯಕ್ತವಾದ ಅಭಿಪ್ರಾಯಗಳನ್ನು ಹತ್ತು ಭಾಗಗಳಾಗಿ ವಿಂಗಡಿಸಿ ಅದನ್ನು 'ಭಾರತ ನಿರ್ಮಾಣದ ಹತ್ತು ಸ್ಥಂಭಗಳು' ಎಂದು ಕರೆದರು. ಡಾ: ಕಲಾಂ ರವರು ರಾಷ್ಟ್ರಪತಿ ಹುದ್ದೆಯಿಂದ ನಿರ್ಗಮಿಸಿದ ನಂತರವೂ ಅಧ್ಯಯನ, ಸಂಶೋಧನೆ, ಉಪನ್ಯಾಸಕ್ಕೆ ಹೆಚ್ಚಿನ ಸಮಯವನ್ನು ಮೀಸಲಿಟ್ಟಿದ್ದರು. 00.00.89, ಐ.ಐ.ಎಂ.ಎಸ್ ಸೇರಿದಂತೆ ದೇಶದ

ಪ್ರಮುಖ ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರು. 'ಇಂಡಿಯಾ' 'ವಿಂಗ್ಸ್ ಆಫ್ ಫೈರ್' 'ಇಗ್‌ನೈಟೆಟ್ ಮೈಂಡ್' 'ಗೈಡಿಂಗ್ ಸೋಲ್' 'ಟಾರ್ಗೆಟ್ 3 ಬಿಲಿಯನ್' 'ಟರ್ನಿಂಗ್ ಪಾಯಿಂಟ್ಸ್' ಹಾಗೂ 'ಮೈ ಜರ್ನಿ' ಮುಂತಾದವು ಇವರ ಪ್ರಮುಖ ಕೃತಿಗಳಾಗಿವೆ.

ಸುವರ್ಣ ಕರ್ನಾಟಕ ಆಚರಣೆ ಸಂದರ್ಭದಲ್ಲಿ ಡಾ: ಕಲಾಂ ಅವರು ವಿಧಾನ ಮಂಡಲದ ಜಂಟಿ ಸದನ ಉದ್ದೇಶಿಸಿ ಭಾಷಣ ಮಾಡಿದ್ದರು. ರಾಜ್ಯದ ಅಭಿವೃದ್ಧಿಗಾಗಿ 1 ಅಂಶಗಳ ಸೂತ್ರದ ಮುನ್ನೋಟ ನೀಡಿದ್ದರು.

*ಕಲಾಂರ 79ನೇ ಜನ್ಮ ದಿನವನ್ನು ವಿಶ್ವಸಂಸ್ಥೆ ಪ್ರಪಂಚದ ವಿದ್ಯಾರ್ಥಿ ದಿನವನ್ನಾಗಿ ಪರಿಗಣಿಸಿದೆ. ಕಲಾಂ ರವರಿಗೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ವಿಶ್ವವಿದ್ಯಾಲಯಗಳು ಸುಮಾರು 40 'ಗೌರವ ಡಾಕ್ಟರೇಟ್' ನೀಡಿ ಗೌರವಿಸಿವೆ. ರಾಷ್ಟ್ರೀಯ ಏಕೀಕರಣಕ್ಕಾಗಿ ಇಂದಿರಾಗಾಂಧಿ ಪ್ರಶಸ್ತಿ, ಇಸ್ರೋ ಮತ್ತು ಡಿ.ಆರ್.ಡಿ.ಓ ನಲ್ಲಿ ಅವರು ನಿರ್ವಹಸಿದ್ದ ಕೆಲಸ ಕಾರ್ಯಗಳನ್ನು ಪರಿಗಣಿಸಿ ಭಾರತ ಸರ್ಕಾರವು 1981 ರಲ್ಲಿ 'ಪದ್ಮಭೂಷಣ' 1990 ರಲ್ಲಿ 'ಪದ್ಮ ವಿಭೂಷಣ' ಹಾಗೂ ಅವರು ದೇಶದ ರಕ್ಷಣಾ ಕ್ಷೇತ್ರದಲ್ಲಿ ವೈಜ್ಞಾನಿಕ ಹಾಗೂ ಆಧುನೀಕರಣಕ್ಕಾಗಿ ನೀಡಿದ ಕೊಡುಗೆಗಾಗಿ 1997ರಲ್ಲಿ 'ಭಾರತ ರತ್ನ' ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ. 1998ರಲ್ಲಿ ವೀರ ಸಾವರ್ಕರ್ ಪ್ರಶಸ್ತಿಗೂ ಸಹ ಭಾಜನರಾಗಿದ್ದರು. ಇದಲ್ಲದೆ ಅಮೇರಿಕಾದ ಹೂವ ಪ್ರಶಸ್ತಿ ಹಾಗೂ ಲಂಡನ್ ರಾಯಲ್ ಸೊಸೈಟಿಯ ಕಿಂಗ್ ಚಾರ್ಲ್ಸ್ ಪದಕಗಳನ್ನು ಪಡೆದಿದ್ದರು.*

*ಶ್ರೀಯುತರ ನಿಧನದಿಂದಾಗಿ ದೇಶವು ಅಪ್ರತಿಮ ವಿಜ್ಞಾನಿ ಹಾಗೂ ಮಾನವತಾವಾದಿಯೊಬ್ಬರನ್ನು ಕಳೆದುಕೊಂಡಂತಾಗಿದೆ.*

02. ವಸಂತ ವಿ. ಸಾಲಿಯಾನ

*ಮಾಜಿ ಸಚಿವರಾಗಿದ್ದ ಶ್ರೀ ವಸಂತ ವಿ. ಸಾಲಿಯಾನ ಅವರು ದಿನಾಂಕ:* ***25.07.2015****ರಂದು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.*

*23ನೇ ಸೆಪ್ಟೆಂಬರ್, 1940ರಂದು ಉಡುಪಿ ಜಿಲ್ಲೆಯ ಕಾಟಪಾಡಿಯಲ್ಲಿ ಜನಿಸಿದ್ದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಮುಂಬೈನಲ್ಲಿ ಮೆಕ್ಯಾನಿಕಲ್ ಇಂಜಿನಿಯರ್ ವಿದ್ಯಾಭ್ಯಾಸ ಮುಗಿಸಿದ ಬಳಕ ರಾಜಕೀಯ ಪ್ರವೇಶಿಸಿದ್ದ ಇವರು ಕ್ರೀಡಾ ಚಟುವಟಿಕೆಯಲ್ಲಿಯೂ ಆಸಕ್ತಿಯನ್ನು ಹೊಂದಿದ್ದರು.*

*ಉಡುಪಿ ಜಿಲ್ಲೆಯ ಕಾಪು ವಿಧಾನ ಸಭಾ ಕ್ಷೇತ್ರದಿಂದ ಐದು ಬಾರಿ ವಿಧಾನ ಸಭೆಗೆ ಆಯ್ಕೆಯಾಗಿದ್ದರಲ್ಲದೆ 1992-94ರ ಅವಧಿಯಲ್ಲಿ ಶ್ರೀ ಎಂ. ವೀರಪ್ಪ ಮೊಯ್ಲಿ ಮತ್ತು 1999-2004ರ ಅವಧಿಯಲ್ಲಿ ಶ್ರೀ ಎಸ್.ಎಂ. ಕೃಷ್ಣ ಅವರುಗಳ ಸಚಿವ ಸಂಪುಟದಲ್ಲಿ ಬಂದರು ಮತ್ತು ಮೀನುಗಾರಿಕೆ ರಾಜ್ಯ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಕರಾವಳಿಯ ಜ್ವಲಂತ ಸಮಸ್ಯೆ ಕಡಲು ಕೊರೆತಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಶ್ರಮಿಸಿದ್ದ ಶ್ರೀಯುತರು ಫ್ರಾನ್ಸ್ ದೇಶಕ್ಕೆ ಪ್ರವಾಸ ಕೈಗೊಂಡು ರಾಜ್ಯ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದರು.*

*ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.*

.

**ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು)**:-ಮಾನ್ಯ ಸಭಾಪತಿಗಳೆ, ಮಾಜಿ ರಾಷ್ಟ್ರಪತಿ, ಭಾರತರತ್ನ ಎ.ಪಿ.ಜೆ.ಅಬ್ದುಲ್ ಕಲಾಂರವರು ಹಾಗೂ ರಾಜ್ಯದ ಹಿಂದಿನ ಸಚಿವರಾದ ಶ್ರೀ ವಸಂತ ವಿ.ಸಾಲಿಯನರವರ ನಿಧನದ ನಿಮಿತ್ತ ತಾವು ಸೂಚಿಸಿದಂತಹ ಸಂತಾಪ ಸೂಚನೆ ಗೊತ್ತುವಳಿಯನ್ನು ಅಕ್ಷರಶಃ ಬೆಂಬಲಿಸುತ್ತಾ ಇವರ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

Peoples President, ಜನಸಾಮಾನ್ಯರ ರಾಷ್ಟ್ರಪತಿ ಎಂದೇ ಖ್ಯಾತರಾದಂತಹ ಭಾರತರತ್ನ ಮಹಾನ್ ಕನಸುಗಾರ, ಅಪ್ರತಿಮ ದೇಶಭಕ್ತ ಡಾ: ಎ.ಪಿ.ಜೆ.ಅಬ್ದುಲ್ ಕಲಾಂರವರ ನಿಧನದಿಂದ ನಿಜವಾಗಲೂ ಈ ದೇಶದ 120 ಕೋಟಿ ಜನರಿಗೆ ಬಹು ದೊಡ್ಡ ಆಘಾತವಾಗಿದೆ ಎಂದು ಹೇಳಬಯಸುತ್ತೇನೆ. ರಾಷ್ಟ್ರದ ಸಾರ್ವಜನಿಕ ಬದುಕು, ಅದರಲ್ಲೂ ವಿಶೇಷವಾಗಿ ವಿಜ್ಞಾನ ಕ್ಷೇತ್ರ ಸಂಪೂರ್ಣವಾಗಿ ಶೂನ್ಯವಾಗಿದೆ, ಶೂನ್ಯ ತುಂಬಿಕೊಡುವುದು ಬಹಳ ಕಷ್ಟ. ಏಕೆಂದರೆ, ಮಾನ್ಯ ಕಲಾಂ ಅವರಿಗೆ ಸಾಟಿ ಅವರೇ ಆಗಿದ್ದಾರೆ, ಅವರಿಗೆ ಇನ್ನೊಬ್ಬರು ಸಾಟಿಯಾಗುವಂತಹ ವ್ಯಕ್ತಿ ಇಲ್ಲ ಎಂದರೂ ತಪ್ಪಾಗಲಿಕ್ಕಿಲ್ಲ. ಅಂತಹ ಒಬ್ಬ ಮಹಾನ್ ವ್ಯಕ್ತಿಯ ಸಾವಿನಿಂದ ಈ ದೇಶದ ಸಾರ್ವಜನಿಕ ಕ್ಷೇತ್ರ, ವಿಜ್ಞಾನ ಕ್ಷೇತ್ರ ಸಂಪೂರ್ಣವಾಗಿ ಶೂನ್ಯವಾಗಿದೆ ಎಂದು ಹೇಳಬೇಕಾಗುತ್ತದೆ. ಸಮಾನತೆಗಾಗಿ ಹೋರಾಟ ಮಾಡಿದಂತಹ ಬುದ್ಧ, ಬಸವ, ಮತ್ತು ಈ ದೇಶದ ಸ್ವಾತಂತ್ರ ಹೋರಾಟಕ್ಕೆ ಬಹುದೊಡ್ಡ ಕೊಡುಗೆ ನೀಡಿ, ಬಲಿಷ್ಠ ಬ್ರಿಟಿಯರನ್ನು ಹೊಡೆದೊಡೆಸಿ ದೇಶಕ್ಕೆ ಸ್ವಾತಂತ್ರ ತಂದು ಕೊಡಲಿಕ್ಕೆ ಮುಂದಾಳತ್ವ ವಹಿಸಿದಂತಹ ರಾಷ್ಟ್ರಪಿತ ಮಹಾತ್ಮಾಗಾಂಧಿಯವರ ನಂತರ ನನ್ನ ಬದುಕಿನಲ್ಲಿ, ನನ್ನ ಮೇಲೆ ಹೆಚ್ಚು ಪ್ರಭಾವ ಬೀರಿದವರೆಂದರೆ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಎಂದು ಹೇಳಬಯಸುತ್ತಿದ್ದೇನೆ. ಅವರ ವಿಚಾರದಲ್ಲಿ ನನಗೆ ಮೆಚ್ಚುಗೆಯಾಗುವಂಥದ್ದು "ಪುರಾ" ಕಲ್ಪನೆ (PURA Concept). ಅದರ ಜೊತೆಗೆ ಅವರು "Vision 2020' ಯಲ್ಲಿ ಹೇಳುವ ಹಾಗೆ, ಈ ಒಂದು ತಂತ್ರಜ್ಞಾನ ಕೇವಲ ಕೆಲವೇ ಜನಕ್ಕೆ ಸೀಮಿತವಾಗಬಾರದು, ಸಮಾಜದ ಕಟ್ಟಕಡೆಯ ಮನುಷ್ಯನಿಗೂ ಕೂಡ "last man of the society' ಎಂದು ಏನು ಹೇಳುತ್ತೇವೆಯೋ ಅವರಿಗೂ ಮುಟ್ಟಬೇಕು, ಅದರ ಮುಖಾಂತರ ಅವರ living standard, ಬದುಕು ಉತ್ತಮಗೊಳ್ಳಬೇಕು ಎನ್ನುವ ಕನಸು ಕಾಣುತ್ತಿದ್ದರು. ಆ ದೃಷ್ಟಿಯಿಂದ "ಪುರಾ" concept ಬಗ್ಗೆ ಬಹಳಷ್ಟು ಪ್ರಭಾವಿತನಾಗಿ ನನ್ನ ಪುಟ್ಟದಾದಂಥ ಗ್ರಾಮದಲ್ಲಿ ಅಂತಾರಾಷ್ಟ್ರೀಯ come and assist you, I will advise" ಎಂದು ಹೇಳಿದರು. ಮಾನ್ಯ ಕಲಾಂರವರಿಗೆ ಸಲಹೆ ಮಾಡುವವರು ಸಿಕ್ಕಿದರು ಎಂದು ಸಂತೋಷವಾಯಿತು. ಅವರ ಸಲಹೆ ಪ್ರಕಾರ ತಂತ್ರಜ್ಞಾನ ಕೇವಲ set of people ಗೆ, ಪಟ್ಟಣದ ಜನಕ್ಕೆ ಕೆಲವೇ ಜನಾಂಗಕ್ಕೆ ಸೀಮಿತ ಆಗಬಾರದೆಂದು, ಅದು ಸಾಮಾನ್ಯ ಜನಕ್ಕೂ ಮುಟ್ಟಬೇಕು, last man of the society ಗೆ ಮುಟ್ಟಬೇಕು ಎನ್ನುವ ವಿಚಾರ ಇಟ್ಟುಕೊಂಡು 'Barefoot IT" ಎನ್ನುವಂತಹ Concept ಪ್ರಾರಂಭ ಮಾಡಿದೆ. ಅದು ಇನ್ನೂ ಒಂದು ಹಂತಕ್ಕೆ ಬಂದಿಲ್ಲ. ಆದ್ದರಿಂದ ಅದರ ಬಗ್ಗೆ ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ. "Barefoot IT" ಎಂದರೆ ಬರಿಗಾಲಿನಲ್ಲಿ ಅಡ್ಡಾಡುವಂತಹ, ಸಾಮಾನ್ಯರಲ್ಲಿ ಸಾಮಾನ್ಯ ವ್ಯಕ್ತಿಗಳಿಗೂ ಕೂಡ ಮಾಹಿತಿ ತಂತ್ರಜ್ಞಾನ ಮುಟ್ಟಬೇಕೆನ್ನುವುದು ಇದರ ಉದ್ದೇಶವಾಗಿದೆ. ಶ್ರೀ ಸೃಜನ್‌ಪಾಲ್ ಸಿಂಗ್‌ರವರು ಮಾನ್ಯ ಕಲಾಂರವರ ಕೊನೆಯ ಕ್ಷಣದಲ್ಲೂ ಜೊತೆಗೆ ಇದ್ದರು. ಮಾನ್ಯ ಕಲಾಂರವರು ಕುಸಿದು ಬಿದ್ದಾಗ ಇವರು ಎತ್ತುತ್ತಿರುವುದನ್ನು ನಾವು ಭಾವಚಿತ್ರದಲ್ಲಿ ನೋಡಿದ್ದೇವೆ. ಮಾನ್ಯ ಕಲಾಂರವರು ನಮ್ಮ ಜಿಲ್ಲೆಗೆ ಬಂದದ್ದನ್ನು ನಾನು ನೆನಸಿಕೊಳ್ಳುತ್ತೇನೆ. ಇಲ್ಲಿ ನಮ್ಮ ಜಲಸಂಪನ್ಮೂಲ ಸಚಿವರಿದ್ದಾರೆ. ಫೆಬ್ರವರಿ 2, 2007ರಂದು ಆಲಮಟ್ಟಿ ಜಲಾಶಯವನ್ನು ಅಂದರೆ 'ಲಾಲ್‌ಬಹದ್ದೂರ್ ಶಾಸ್ತ್ರೀ ಸಾಗರವನ್ನು ಈ ರಾಷ್ಟ್ರಕ್ಕೆ ಅರ್ಪಣೆ ಮಾಡಲಿಕ್ಕೆ ಬಂದಾಗ ಎಲ್ಲರನ್ನೂ ಉದ್ದೇಶಿಸಿ ಮಾತನಾಡಿದ ಮಾತುಗಳು ಇನ್ನೂ ನಮ್ಮ ಜಿಲ್ಲೆಯ ಜನತೆಯ ಅಂತರಾಳದಲ್ಲಿ ಪ್ರತಿಧ್ವನಿಗೊಳ್ಳುತ್ತಿವೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲರನ್ನೂ ಉದ್ದೇಶಿಸಿ ಮಾತನಾಡಿದ್ದರು, ಅದ್ಭುತವಾದ ಭಾಷಣ ಅದಾಗಿತ್ತು. ಉದ್ದೇಶಿಸಿ ಮಾತನಾಡುವ ಸಂದರ್ಭದಲ್ಲಿ ನಾನು ಮೇಲ್ಮನೆಯ ಸದಸ್ಯನಾಗಿ ಪಾಲ್ಗೊಂಡಿದ್ದೆ. ಹೇಳಿದ ವಿಚಾರಕ್ಕೆ ಎಲ್ಲಾ ಶಾಸಕರು ತಲೆದೂಗಿದರು ಅಷ್ಟೇ ಅಲ್ಲದೇ ಅವರಿಗೆ ಪ್ರೇರಣೆ ನೀಡಿದಂತಹ ಮಾತುಗಳು ನನ್ನ ಅಂತರಾಳದಲ್ಲಿ ಇನ್ನೂ ಕೂಡ ಉಳಿದಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಜಾತಿರಹಿತವಾದಂತಹ, ಒಂದು ಸಾಮಾಜಿಕ ಕ್ರಾಂತಿ ಮಾಡಿದಂತಹ ಅಣ್ಣ ಬಸವಣ್ಣನವರ ಪುಣ್ಯ ಸ್ಥಳ, ಐಕ್ಯ ಸ್ಥಳವಾದ ಕೂಡಲಸಂಗಮಕ್ಕೆ ಅವರು ಬಂದು, ಅಲ್ಲಿ ಸಾವಯವ ಕೃಷಿ ಮಿಷನ್‌ನ ಸಮಾವೇಶದಲ್ಲಿ ರೈತರನ್ನು ಉದ್ದೇಶಿಸಿ ಬಹಳ ಅದ್ಭುತವಾದ ಮಾತುಗಳನ್ನಾಡಿದರು. ಅನ್ನದಾತರನ್ನು ಉದ್ದೇಶಿಸಿ, ಕೃಷಿ ಬಗ್ಗೆ land fertility ಬಗ್ಗೆ, ನೀರಿನ ಬಳಕೆ ಬಗ್ಗೆ ಬಹಳಷ್ಟು ಚೆನ್ನಾಗಿ ಮಾತನಾಡಿದ್ದರು. ಅಂದು ಪುಣ್ಯವಶಾತ್ ಆನಂತರ, ಡಿಸೆಂಬರ್ 13, 2008ರಂದು ವಿಧಾನ ಮಂಡಳದ ಉಭಯ ಸದನಗಳನ್ನು ಅವರು ವರ್ಗರಹಿತವಾದಂತಹ, Today I was sharing dais with Dr. A.P.J. Abdul Kalam J, E ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ಮಹಾನ್ ಮೇಧಾವಿಯಾಗಿದ್ದರು. Tallest personality of

Indian political scene, ಮಾನ್ಯ ಅಟಲ್‌ಜಿಯವರು ಪ್ರಧಾನ ಮಂತ್ರಿಯಾದ ಸಂದರ್ಭದಲ್ಲಿ ಅವರು ಈ ರಾಷ್ಟ್ರದ ರಾಷ್ಟ್ರಪತಿಯಾಗಿ, Peoples President ಆಗಿ, ಜನಸಾಮಾನ್ಯರ ರಾಷ್ಟ್ರಪತಿಗಳಾಗಿ, ಅವರು ಈ ರಾಷ್ಟ್ರದ ಪ್ರಥಮ ಪ್ರಜೆಯಾಗಿದ್ದರೂ ರಾಷ್ಟ್ರದ ಕಟ್ಟಕಡೆಯ ಮನುಷ್ಯ ಯಾವರೀತಿ ಸರಳ ಜೀವನ ಮಾಡಿ ಬದುಕುತ್ತಾನೋ ಅಂತಹ ಒಂದು ಜೀವನ ನಡೆಸುತ್ತಿದುದು ನಮ್ಮೆಲ್ಲರಿಗೂ ಆದರ್ಶ. ಅವರಿಂದ ನಾವೆಲ್ಲರೂ ಕಲಿಯಬೇಕಾದುದು ಬಹಳಷ್ಟು ಇದೆ. ದೇಶ-ವಿದೇಶಗಳ ವಿಶ್ವವಿದ್ಯಾನಿಲಯಗಳಿಂದ 49ಕ್ಕಿಂತ ಹೆಚ್ಚು ಡಾಕ್ಟರೇಟ್ ಪಡೆದುಕೊಂಡಿರುವುದೇ ಅಲ್ಲದೇ, ಪದ್ಮಭೂಷಣ, ಪದ್ಮವಿಭೂಷಣ, ಇಂದಿರಾಗಾಂಧಿ ಪ್ರಶಸ್ತಿ, ಸಾವರ್ಕರ್ ಪ್ರಶಸ್ತಿ, ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಭಾರತರತ್ನ ಪ್ರಶಸ್ತಿಗೂ ಭಾಜನರಾಗಿದ್ದು ನಿಜವಾಗಲೂ ನಾವೆಲ್ಲರೂ ಹೆಮ್ಮೆಪಡಬೇಕು. ಇಂತಹ ಒಬ್ಬ ಮಹಾನ್ ಮೇಧಾವಿ, ಅಷ್ಟೆ ಅಲ್ಲ, ಅಪ್ಜಲ್‌ಗುರು ಸಂಸತ್ತಿನ ಮೇಲೆ ಅಟ್ಯಾಕ್ ಮಾಡಿದಂತಹ ಸಂದರ್ಭದಲ್ಲಿ ಅವರ ಕ್ಷಮಾಧಾನ ಅರ್ಜಿಯನ್ನು ತಿರಸ್ಕಾರ ಮಾಡಿದ್ದರು. ಬಹುತೇಕವಾಗಿ ಎಲ್ಲಾ ಕ್ಷಮ್ಯಧಾನ ಅರ್ಜಿಗಳನ್ನು ತಿರಸ್ಕಾರ ಮಾಡಿದ್ದರು, ದೇವಾಲಯ ಎನಿಸಿಕೊಂಡಿದ್ದ ದೇಶದ ಅತ್ಯುನ್ನತ ಸಂಸರು ಮೇಲೆ ಅಪ್ಜಲ್‌ಗುರು ಅವರಿಂದ ಅಟ್ಯಾಕ್ ಜೊತಿದಕ ಆಂತು ಸಂದರ್ಭದಲ್ಲಿ ಅವರ ಕ್ಷಮ್ಮಾನ ಅರ್ಜಿಯನ್ನು ತಿರಸ್ಕಾರ ಮಾಡಿದ ಮಹಾನ್ ದೇಶಭಕ್ತ, ಅಪ್ರತಿಮ ದೇಶ ಭಕ್ತ, great patriot ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ನನಗನಿಸುವುದೇನೆಂದರೆ, ಈ ದೇಶದ ಪ್ರಥಮ ಪ್ರಧಾನ ಮಂತ್ರಿ ಪಂಡಿತ್ ಜವಾಹರ್‌ಲಾಲ್ ನೆಹರೂರವರ ನಂತರ ಮಕ್ಕಳನ್ನು ಹೆಚ್ಚು ಪ್ರೀತಿಸಿದಂತಹವರು ಎಂದರೆ, ಡಾ:ಎ.ಪಿ.ಜೆ. ಅಬ್ದುಲ್ ಕಲಾಂ ಅವರು. ಅಂದರೆ, ಇಂದಿನ ಮಕ್ಕಳು ಭವ್ಯ ಭಾರತದ ಶಕ್ತಿಶಾಲಿ ಜವಾಬ್ದಾರಿಯುತವಾದಂತಹ ನಾಗರೀಕರನ್ನಾಗಿ ರೂಪಿಸಿ ಈ ದೇಶದ ಭವಿಷ್ಯತ್ತನ್ನೆ ಬದಲಾವಣೆ ಮಾಡಬೇಕೆನ್ನುವಂತಹ ವಿಚಾರದಿಂದ ಮಕ್ಕಳ ಜೊತೆ ಅವರು ಚರ್ಚೆ ಮಾಡುವಂತಹ ವಿಚಾರ, ಮಕ್ಕಳನ್ನು ಪ್ರೀತಿಸುವುದನ್ನು ನೋಡಿದರೆ ಚಾಚಾ ನೆಹರೂರವರ ನಂತರ ಇವರು ಎನ್ನುವಂತಹ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ಸಭಾಪತಿಯವರೇ, ಅವರಿಗೆ ಒಂದು ಕನಸು ಇತ್ತು. 2020ಕ್ಕೆ India will emerge as a global leader . India will emerge as a powerful country in the world scenario. ಈ ಪ್ರಪಂಚದಲ್ಲಿ ಭಾರತ ದೇಶ ಶಕ್ತಿಶಾಲಿಯಾದಂತಹ ಸಮೃದ್ಧಿಯಾದಂತಹ ಪ್ರಚಂಡವಾದಂತಹ ರಾಷ್ಟ್ರವಾಗಿ 2020 ಕ್ಕೆ ಹೊರ ಹೊಮ್ಮುತ್ತಿದೆ ಎಂದು ಅವರು ಕನಸು ಕಾಣುತ್ತಿದ್ದರು. ನನಗೆ ಬಹಳ ನೋವು ಎನಿಸುತ್ತಿದೆ. 2020 ಕ್ಕೆ ಈ ದೇಶ ಇಡೀ ಪ್ರಪಂಚದ ಗಮನ ಸೆಳೆಯುವಂತಹ ಶಕ್ತಿಶಾಲಿ, ಸಮೃದ್ಧ, ಪ್ರಚಂಡವಾದ ರಾಷ್ಟ್ರವಾಗುವುದಷ್ಟೇ ಅಲ್ಲ, ಪ್ರತಿಯೊಬ್ಬ ಭಾರತೀಯನು ಹೆಮ್ಮೆಯಿಂದ, ಗರ್ವದಿಂದ ನಾನು ಭಾರತೀಯ ಎನ್ನುವಂತಹ ಒಂದು ಅವಕಾಶ ನಮಗೆ ದೊರೆಯುವಂತಹ ಸಂದರ್ಭದಲ್ಲಿ ಡಾ.ಎ.ಪಿ.ಜೆ.ಅಬ್ದುಲ್ ಕಲಾಂರವರು ನಮ್ಮ ಮಧ್ಯದಲ್ಲಿ ಇರಬೇಕಾಗಿತ್ತು. ಇನ್ನು ನೂರಾರು ವಸಂತಗಳನ್ನು ಕಾಣಬೇಕಾಗಿತ್ತು. ಅವರ 98ನೇ ವಯಸ್ಸಿನ ಸಹೋದರ ಇದ್ದಾರೆ. ಇವರ 'ವಿಷನ್ 2020" ಏನಿದೆ ಆ ಸಂದರ್ಭದಲ್ಲಿ ಭಾರತ ದೇಶ ಶಕ್ತಿಶಾಲಿ, ಸಮೃದ್ಧವಾದ ರಾಷ್ಟ್ರವಾಗಿ ಹೊರಹೊಮ್ಮಿದ ಸಂದರ್ಭದಲ್ಲಿ ಪ್ರತಿಯೊಬ್ಬ ಭಾರತೀಯ ಹೆಮ್ಮೆ, ಗರ್ವದಿಂದ ನಾನು ಭಾರತೀಯ ಎನ್ನುವಂತಹ ಆ ಘಳಿಗೆಯ ಸಂದರ್ಭದಲ್ಲಿ ನಮ್ಮ ಜೊತೆಗಿದ್ದರೆ ನಿಜವಾಗಿಯೂ ಈ ದೇಶದ ಸಮಸ್ತ ಜನತೆ ಸಂತೋಷಪಡುತ್ತಿದ್ದರು ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಇಂತಹ ಮಹಾನ್ ದೇಶಭಕ್ತನನ್ನು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಭಗವಂತ ಚಿರಶಾಂತಿಯನ್ನು ಕಲ್ಪಿಸಲಿ. ಈ ಸಂದರ್ಭದಲ್ಲಿ ಅವರಿಗೆ ನಿಜವಾದಂತಹ ಶ್ರದ್ಧಾಂಜಲಿ ನಾವು ಅರ್ಪಿಸಬೇಕೆಂದರೆ ಅವರ ಕನಸು ಏನಿತ್ತು 2020ಕ್ಕೆ ದೇಶ ಶಕ್ತಿಶಾಲಿ ರಾಷ್ಟ್ರವಾಗಿ ಇಡೀ ಪ್ರಪಂಚದ ಗಮನ ಸೆಳೆಯುವಂತಹ ರಾಷ್ಟ್ರವಾಗಿ ಹೊರಹೊಮ್ಮುತ್ತದೆ ಎನ್ನುವ ಅವರ ಕನಸು ಇತ್ತಲ್ಲಾ ಆ ಕನಸನ್ನು ನನಸು ಮಾಡುವಂತಹ ನಾವೆಲ್ಲರೂ ನಮ್ಮ ಇತಿಮಿತಿಯಲ್ಲಿ ನಮ್ಮ ಶಕ್ತಿ ಅನುಸಾರ ನಾವೆಲ್ಲರೂ ಕೂಡ ನಮ್ಮದೇ ಆದಂತಹ ಕೊಡುಗೆಯನ್ನು ಸಲ್ಲಿಸಿದರೆ ಅವರಿಗೆ ನಿಜವಾದಂತಹ ಶ್ರದ್ಧಾಂಜಲಿ ಅರ್ಪಿಸಿದಂತಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅವರ ಕಾನ್ಸೆಪ್ಟ್ ಪ್ರಕಾರ ಪ್ರಾರಂಭ ಮಾಡಿದಂತಹ ನಮ್ಮ ಸಂಸ್ಥೆಯಲ್ಲಿಯೂ ಕೂಡ ಅವರ ಪುತ್ಥಳಿಯನ್ನು ನಿರ್ಮಿಸಬೇಕೆನ್ನುವಂತಹ ನಿರ್ಧಾರ ಮಾಡಿರುವುದನ್ನು ನಾನು ಈ ಸಂದರ್ಭದಲ್ಲಿ ನಿಮ್ಮ ಜೊತೆ, ಎಲ್ಲಾ ಸದಸ್ಯರ ಜೊತೆ ಹಂಚಿಕೊಳ್ಳುತ್ತಿದ್ದೇನೆ. ಅವರ ಅಗಲಿಕೆಯ ನೋವನ್ನು ಸಹಿಸುವಂತಹ ಶಕ್ತಿ ಈ ರಾಷ್ಟ್ರದ 120 ಕೋಟಿ ಜನತೆಗೂ ಕೂಡ ಆ ಭಗವಂತ ನೀಡಲಿ ಎಂದು ಪ್ರಾರ್ಥನೆ ಮಾಡುತ್ತೇನೆ. ಮಾನ್ಯ ಸಭಾಪತಿಯವರೇ, ನನ್ನ ಮಾತನ್ನು ಮುಗಿಸುವಂತಹ

ಪೂರ್ವದಲ್ಲಿ ಈ ರಾಜ್ಯದ ಹಿಂದಿನ ಸಚಿವರಾದಂತಹ ಶ್ರೀಮಾನ್ ವಸಂತ ಸಾಲಿಯಾನರವರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ವಸಂತ ಸಾಲಿಯಾನರವರು ವೃತ್ತಿಯಲ್ಲಿ ಇಂಜಿನಿಯರ್ ಆದರೂ ಕೂಡ ಪ್ರವೃತ್ತಿಯಿಂದ ಅವರೊಬ್ಬರು ಕೃಷಿಕರು ಎನ್ನುವಂತಹ ಅಭಿಮಾನ ಮತ್ತು ಕ್ರೀಡೆಯಲ್ಲಿ ಬಹಳಷ್ಟು ಆಸಕ್ತಿ ಹೊಂದಿದಂತಹ ಒಬ್ಬ ಕ್ರೀಡಾ ಪ್ರೇಮಿಯನ್ನು ಕಾಲ, ಶ್ರೀಮಾನ್ ನಾವು ಇವತ್ತು ಕಳೆದುಕೊಂಡಿದ್ದೇವೆ. ಉಡುಪಿ ಜಿಲ್ಲೆಯಿಂದ ಕಾಪು ವಿಧಾನಸಭಾ ಕ್ಷೇತ್ರದಿಂದ ಐದು ಬಾರಿ ವಿಧಾನಸಭೆಗೆ ಆಯ್ಕೆಯಾಗುವುದರ ಜೊತೆಗೆ ಶ್ರೀಮಾನ್ ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಎರಡು ವರ್ಷಗಳ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಐದು ವರ್ಷಗಳ ಕಾಲ, ಅಂದರೆ, ಏಳು ವರ್ಷಗಳ ಕಾಲ ಸಚಿವರಾಗಿ ಅತ್ಯುತ್ತಮವಾದ ಕೆಲಸ ಮಾಡಿದ್ದಾರೆ ಅಷ್ಟೆ ಅಲ್ಲ, ಅವರ ಹೆಜ್ಜೆ ಗುರುತುಗಳನ್ನು ಸಾರ್ವಜನಿಕ ಬದುಕಿನಲ್ಲಿ ಉಳಿಸಿಕೊಂಡಿದ್ದಾರೆ. ಈ ಕರಾವಳಿ ತೀರದಲ್ಲಿರುವಂತಹ ಜ್ವಲಂತ ಸಮಸ್ಯೆ ಕಡಲು ಕೊರೆತದ ಸಮಸ್ಯೆಗೆ ಅವರು ಏನಾದರೂ ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳುವ ದಿಸೆಯಲ್ಲಿ ಬದುಕಿನುದ್ದಕ್ಕೂ ಅವರು ಶ್ರಮ ಪಟ್ಟಿರುವುದನ್ನು ನಾನು ಇವತ್ತು ನೆನಪಿಸಿಕೊಳ್ಳುತ್ತಿದ್ದೇನೆ. ಅವರ ಅಗಲಿಕೆಯಿಂದ ಒಬ್ಬ ಶ್ರೇಷ್ಠ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ ಎನ್ನುವ ಮಾತನ್ನು ಹೇಳಿ ಮೃತರ ಆತ್ಮಕ್ಕೆ ಭಗವಂತನಲ್ಲಿ ಶಾಂತಿ ಕೋರಿ ಅವರ ಅಗಲಿಕೆಯ ನೋವನ್ನು ಸಹಿಸುವಂತಹ ಶಕ್ತಿ ಅವರ ಕುಟುಂಬ ವರ್ಗದವರಿಗೆ, ಬಂಧುಬಾಂಧವರಿಗೆ, ಅವರ ಹಿತೈಷಿಗಳಿಗೆ, ಅಭಿಮಾನಿಗಳಿಗೆ ನೀಡಲಿ ಎಂದು ಆ ಭಗವಂತನಲ್ಲಿ ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

ಶ್ರೀ ಕೆ.ಎಸ್.ಈಶ್ವರಪ್ಪ**(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಒಬ್ಬ ಅಪ್ರತಿಮ ರಾಷ್ಟ್ರ ಭಕ್ತ ವ್ಯಕ್ತಿಗೆ ಇವತ್ತು ನಾವು ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ ಎನ್ನುವ ಕಲ್ಪನೆ ಕೂಡ ನಾವು ಮಾಡಿರಲಿಲ್ಲ. ಡಾ:ಅಬ್ದುಲ್ ಕಲಾಂರವರು ಸಾಮಾನ್ಯ ಒಬ್ಬ ಪತ್ರಿಕೆ ಹಂಚುತ್ತಿದ್ದಂತಹ ವ್ಯಕ್ತಿ. ಇವತ್ತು ಇಡೀ ಪ್ರಪಂಚ ಡಾಅಬ್ದುಲ್ ಕಲಾಂರವರ ಶ್ರದ್ಧಾಂಜಲಿಯನ್ನು ಅರ್ಪಿಸಿರುವಂತಹ ಸಂದರ್ಭದಲ್ಲಿ ಶೋಕದಲ್ಲೇ ಮುಳುಗಿರುವುದನ್ನು ನಾವೆಲ್ಲಾ ಕಾಣುತ್ತಿದ್ದೇವೆ. ಎಷ್ಟರ ಮಟ್ಟಿಗೆ ಸಾಮಾನ್ಯ ಜನರ ಜೊತೆಗೆ ಬೆರೆಯುತ್ತಿದ್ದರು ಎಂದರೆ ಆಲಮಟ್ಟಿ ಜಲಾಶಯ ಅಣೆಕಟ್ಟನ್ನು ಉದ್ಘಾಟನೆ ಮಾಡುವಂತಹ ಸಂದರ್ಭದಲ್ಲಿ ನನ್ನ ಸೌಭಾಗ್ಯ ಎಂದು ಕಾಣುತ್ತದೆ. ನಾನು ಅವತ್ತು ನೀರಾವರಿ ಸಚಿವನಾಗಿದ್ದೆ. ಒಬ್ಬ ರಾಷ್ಟ್ರಪತಿ ಹತ್ತಿರ ಹೋಗಿ ಮಾತನಾಡಬೇಕೆನ್ನುವಂತಹ ಸಂದರ್ಭದಲ್ಲಿ ಸ್ವಾಭಾವಿಕವಾಗಿ ಹಿಂದೇಟು ಹಾಕುವಂತಹ ಪದ್ಧತಿ ಇದೆ. ಆದರೆ ಅವರೇ ಕರೆದರು. ಕರೆದು ದೇಶದಲ್ಲಿ ನೀರಾವರಿ ಮಂತ್ರಿಯಾಗುವಂತಹ ಅವಕಾಶ ಕೆಲವೇ ವ್ಯಕ್ತಿಗಳಿಗೆ ಮಾತ್ರ ಸಿಗುತ್ತದೆ. ಎಷ್ಟು ಸಾಧ್ಯವೋ ಅಷ್ಟು ರೈತರ ಹೊಲ ಗದ್ದೆಗಳಿಗೆ ನೀರನ್ನು ಕೊಡುವಂತಹ ದಿಕ್ಕಿನಲ್ಲಿ ಯಶಸ್ವಿಯಾಗಬೇಕು, ನೀವು ಆ ದಿಕ್ಕಿನಲ್ಲಿ ಕಠಿಣ ಪರಿಶ್ರಮ ಪಡಬೇಕೆಂದು ಅವರು ನನಗೆ ಮಾರ್ಗದರ್ಶನ ಮಾಡಿದರು. ನಾನು ಏಕೆ ಇವತ್ತು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳುತ್ತೇನೆಂದರೆ, ಅವರು ನಾನು ರಾಷ್ಟ್ರಪತಿ, ಒಬ್ಬ ಸಾಮಾನ್ಯ ವ್ಯಕ್ತಿಯ ಜೊತೆಗೆ ನಾನು ಮಾತನಾಡಿದರೆ ಹೇಗೆ ಎನ್ನುವ ಕಲ್ಪನೆಯೂ ಮಾಡಲಿಲ್ಲ. ಸಾಮಾನ್ಯ ಜನರಿಗೆ ನೀರು ಕೊಡುವಂತಹ ಒಂದು ಸ್ಥಾನದಲ್ಲಿರುವಂತಹ ವ್ಯಕ್ತಿಗೆ ನನ್ನ ಕರ್ತವ್ಯವನ್ನು ಅವರು ನೆನಪು ಮಾಡಿಕೊಟ್ಟರು. ಮತ್ತೊಂದು ಘಟನೆ ಏನೆಂದರೆ, ಶಿವಮೊಗ್ಗ ನಗರದಲ್ಲಿ ಜ್ಞಾನದೀಪ ವಿದ್ಯಾ ಸಂಸ್ಥೆ ಎಂದು ಇದೆ. ಅದು ತಮಗೂ ಗೊತ್ತಿದೆ. ಅವರು ಆ ಸಂಸ್ಥೆಯ ಕಾರ್ಯಕ್ರಮಕ್ಕೆ ಬಂದರು. ಮಾನ್ಯ ಸಭಾನಾಯಕರು ಹೇಳಿದ ಹಾಗೆ ಕಟ್ಟಡಗಳ ಉದ್ಘಾಟನೆ ಬಗ್ಗೆ ಅವರಿಗೆ ಆಸಕ್ತಿಯೇ ಇರಲಿಲ್ಲ. ಎಲ್ಲಾ ಮಕ್ಕಳನ್ನು ಒಂದು ಕಡೆ ಸೇರಿಸಿಕೊಂಡರು. ಸಂವಾದದಲ್ಲಿ ನೇರವಾಗಿ ಮಕ್ಕಳ ಕೈಗೆ ಮೈಕ್ ಕೊಟ್ಟು ನೀವು ಪ್ರಶ್ನೆಗಳನ್ನು ಕೇಳಿ ಎಂದರು. ಮೊದಲನೆ, ಎರಡನೆ ಮಕ್ಕಳುಗಳು ಅಬ್ದುಲ್ ಕಲಾಂ ಅಂತಹ ದೊಡ್ಡ ವ್ಯಕ್ತಿ ಹತ್ತಿರ ನಾನು ಹೇಗೆ ಮಾತನಾಡುವುದು ಎಂದು ಸ್ವಲ್ಪ ಸಂಕೋಚ ಮಾಡಿಕೊಳ್ಳುತ್ತಿದ್ದರು. ಕೊನೆಗೆ ಮನೆಯಲ್ಲಿರುವಂತಹ ತಾತನ ಜೊತೆಗೆ ಎಷ್ಟರ ಮಟ್ಟಿಗೆ ಮಕ್ಕಳು ಇರಬಹುದೋ ಅಷ್ಟು ಫ್ರೀಯಾಗಿಬಿಟ್ಟರು. ಮಕ್ಕಳಿಗೆ ಅವರ ಜೊತೆಯಲ್ಲಿ ಸಂವಾದ ಆಗುತ್ತಿರುವಂತಹ ಸಂದರ್ಭದಲ್ಲಿ ಆ ಮಕ್ಕಳಿಗೆ ರಾಷ್ಟ್ರದ ಬಗ್ಗೆ, ವಿಜ್ಞಾನದ ಬಗ್ಗೆ, ದೇಶದ ರಕ್ಷಣೆ ಬಗ್ಗೆ ರಾಜಕಾರಣದಲ್ಲಿರುವಂತಹ ಭ್ರಷ್ಟಾಚಾರದ ಬಗ್ಗೆ, ರೈತರ ಸಮಸ್ಯೆ ಬಗ್ಗೆ, ಎಲ್ಲಾ ಪ್ರಶ್ನೆಗಳಿಗೂ ಕೂಡ ಸರಾಗವಾಗಿ ಉತ್ತರ ಕೊಡುತ್ತಾ ಬಂದರು. ಆ ಮಕ್ಕಳ ಆನಂದ ನೋಡಬೇಕಾಗಿತ್ತು. ಒಬ್ಬ ರಾಷ್ಟ್ರಪತಿಯಾದಂತಹ ವ್ಯಕ್ತಿ ಇವತ್ತು ನಮ್ಮ ಜೊತೆಗೆ ಇಲ್ಲ ಎನ್ನುವುದಷ್ಟೇ ನಮಗೆ ನೋವು ಇಲ್ಲ. ಅವರು ಇಡೀ ಪ್ರಪಂಚದಲ್ಲಿರುವಂತಹ ಎಲ್ಲಾ ವರ್ಗದ ಜನರ ಮನಸ್ಸನ್ನು ಗೆದಿದ್ದರು. ಮದುವೆಯಾಗಿರಲಿಲ್ಲ, ಆದರೆ, ಮಕ್ಕಳನ್ನು ಪ್ರೀತಿ

ಮಾಡುತ್ತಿರುವಂತಹ ರೂಪ ವಿಶೇಷ. ಮದುವೆ ಇಲ್ಲ, ಮಕ್ಕಳಿಲ್ಲ, ಆದರೆ, ದೇಶಕ್ಕೇ ಸೂತಕ ಎನ್ನುವಂತಹ ಅಂಶವನ್ನು ನೀವು ಇವತ್ತು ಟ್ವೀಟ್‌ಗಳಲ್ಲಿ ನೋಡಿರಬಹುದು. "ಅಬ್ದುಲ್ ಕಲಾಂ' ಎಂದ ತಕ್ಷಣವೇ ನಮ್ಮ ದೇಶದ ಪ್ರತಿಯೊಬ್ಬ ರಾಷ್ಟ್ರಭಕ್ತನಿಗೂ ಕೂಡ ಇಂತಹ ಒಬ್ಬ ವ್ಯಕ್ತಿ ನಮಗೆ ಮಾರ್ಗದರ್ಶನ ಮಾಡುತ್ತಿದ್ದರಲ್ಲಾ ಎನ್ನುವಂತಹ ಒಂದು ಸಂತೋಷ, ದೇಶದ ರಕ್ಷಣೆ ಮಾಡುತ್ತಿರುವಂತಹ ಸೈನಿಕರಿಗಂತೂ, ಆ ಪೋಖ್ರಾನ್ ಅಣುಬಾಂಬ್ ಸ್ಫೋಟದ ಬಗ್ಗೆ, ನಮ್ಮ ಜೀವಕ್ಕೆ ರಕ್ಷಣೆ ಮತ್ತು ದೇಶದ ರಕ್ಷಣೆಗೆ ಯೋಚನೆ ಮಾಡಿದಂತಹ ಒಬ್ಬ ಮಹಾಪುರುಷ ಎನ್ನುವ ಚಿಂತನೆ. ಅಮೇರಿಕಾ ಎನ್ನುವಂತಹ ದೇಶಕ್ಕೂ ಕೂಡ ಗೌಪ್ಯತೆಯನ್ನು ಕಾಪಾಡಿ, ಅವರೆಲ್ಲಾ ದಿಕ್ಕಿನಲ್ಲಿ ಪ್ರಯತ್ನ ನಡೆಸಿದರೂ ಕೂಡ ಅಣುಬಾಂಬ್ ಆ ಪೋಖ್ರಾನ್‌ನಲ್ಲಿ ಸ್ಫೋಟವಾದಾಗ ಇಡೀ ವಿಶ್ವಕ್ಕೆ ಆಶ್ಚರ್ಯ. ಪೈಲಟ್ ಆಗಬೇಕೆಂದು ಅವರ ಕಲ್ಪನೆಯಿತ್ತು. ಆದರೆ, ಅವರು ಈ ದೇಶದ ಶ್ರೇಷ್ಠ ವಿಜ್ಞಾನಿಯಾದರು. ಆ ವಿಜ್ಞಾನಿ ಕೂಡ ದೇಶದ ರಕ್ಷಣೆಗೋಸ್ಕರ ಅಣುಬಾಂಬ್ ತಯಾರು ಮಾಡಿದಂತಹ ಒಂದು ದೊಡ್ಡ ಗುಂಪಿನ ನಾಯಕ ಎಂದು ಹೇಳಿಕೊಳ್ಳುವುದಕ್ಕೆ ನಮಗೆಲ್ಲರಿಗೂ ಕೂಡ ಇವತ್ತು ಆನಂದ. ಅವರು ಸ್ವೀಡರ್‌ಲ್ಯಾಂಡ್‌ಗೆ ಹೋಗಿ ಭಾಷಣ ಮಾಡಿದಂತಹ  ದಿನ ಇವತ್ತು 'ಸೈನ್ಸ್ ಡೇ' ಆಗಿ ಸ್ವಿಡರ್‌ಲ್ಯಾಂಡ್‌ನಲ್ಲಿ ಆಚರಣೆ ಮಾಡುತ್ತಿದ್ದಾರೆ. ವಿಜ್ಞಾನದ ದಿನವಾಗಿ ಆಚರಣೆ ಮಾಡುತ್ತಿದ್ದಾರೆ. ಅವರು ಹುಟ್ಟಿದ ದಿನ ಯುನೈಟೆಡ್ ನೇಷನ್‌ನಲ್ಲಿ 'ಸೂಡೆಂಟ್ ಡೇ' ಆಗಿ ಅಲ್ಲಿ ಆಚರಣೆ ಮಾಡುತ್ತಿದ್ದಾರೆ. ಅಂದರೆ ಭಾರತದ ಸಂಸ್ಕೃತಿಯನ್ನು ಇಡೀ ಪ್ರಪಂಚಕ್ಕೆ ಸಾರಿದ್ದರಲ್ಲಿ ಮೇಧಾವಿಯಾದಂತಹ ವ್ಯಕ್ತಿ ಎಂದು ಅವರು ಶಿವಮೊಗ್ಗಕ್ಕೆ ಬಂದಂತಹ ದಿನ ನಾನು ಹೇಳಿದೆ. ಸಂದರ್ಭದಲ್ಲಿ ಅವರು ಶಿವಮೊಗ್ಗದಿಂದ ಶೃಂಗೇರಿಗೆ ಎಷ್ಟು ದೂರವಾಗುತ್ತದೆ, ನಾನು ಶೃಂಗೇರಿಗೆ ಹೋಗಬೇಕೆಂದು ನನ್ನನ್ನು ಕೇಳಿದರು. ಯಾರಿಗೂ ಸಹ ಪ್ರೋಗ್ರಾಮ್ ಗೊತ್ತಿಲ್ಲ. ಶೃಂಗೇರಿಗೆ ಹೋದರು. ನಮ್ಮ ಸಂಸ್ಕೃತಿ ಬಗ್ಗೆ ಎಷ್ಟರಮಟ್ಟಿಗೆ ಆಸಕ್ತಿ ಎಂದರೆ ಸ್ವಾಮೀಜಿಯವರ ಜೊತೆ ಅವರು ಕುಳಿತು ಸುಮಾರು ಅರ್ಧ ಗಂಟೆ ಕಾಲ ಚರ್ಚೆ ಮಾಡಿದರು. ಏಕೆಂದರೆ, ಅಬ್ದುಲ್ ಕಲಾಂ ಎಂದ ತಕ್ಷಣ ಯಾರೋ ಒಬ್ಬ ಮುಸಲ್ಮಾನ್ ವ್ಯಕ್ತಿ ಎಂದು ಯಾರು ಯೋಚನೆ ಮಾಡುವುದಿ. ಅವರು ಧರ್ಮವನ್ನು ಮೀರಿದಂತಹ ವ್ಯಕ್ತಿ. ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರ ಹತ್ತಿರ ನಾವು ಒಂದು ದಿವಸ ಕುಳಿತಿದ್ದೆವು. ಯಾರು ರಾಷ್ಟ್ರಪತಿ ಅಭ್ಯರ್ಥಿಯಾಗುತ್ತಾರೆಂದು ಚರ್ಚೆ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ಅವರು ಅವರ ಹೆಸರನ್ನು ಹೇಳಿದರು. ಅಬ್ದುಲ್ ಕಲಾಂ ರವರು ರಾಷ್ಟ್ರಪತಿ ಅಭ್ಯರ್ಥಿಯಾಗುತ್ತಾರೆ ಎಂದು ಕೇಳಿದಾಗ ನಮಗೆಲ್ಲಾ ತಕ್ಷಣ ನೆನಪಾಗಿದ್ದು, ಪೋಖ್ರಾನ್. ಅಣುಬಾಂಬ್ ಸ್ಫೋಟದ ವಿಚಾರದಲ್ಲಿ ಈ ದೇಶವನ್ನೇ ರಕ್ಷಣೆ ಮಾಡಿದಂತಹ ವಿಶೇಷ ವಿಜ್ಞಾನಿ ಎಂದು ನಮಗೆ ನೆನಪಾಯಿತು. ಅವರು ರಾಷ್ಟ್ರಪತಿಯಾದಂತಹ ಸಂದರ್ಭದಲ್ಲಿ ಒಂದು ಕಡೆ ವಾಜಪೇಯಿ, ಮತ್ತೊಂದು ಕಡೆ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡೀಸ್, ಕಲಾಂ, ಫರ್ನಾಂಡೀಸ್, ವಾಜಪೇಯಿ. ಈ ಮೂರು ಜನ ಇದ್ದಂತಹ ಚಿತ್ರವನ್ನು ತಾವು ಪತ್ರಿಕೆಗಳಲ್ಲಿ ನೋಡಿರಬಹುದು. ಈ ದೇಶ ಸರ್ವಧರ್ಮಕ್ಕೂ ಅವಕಾಶ ಕೊಡುತ್ತದೆ ಒಂದು ಕಡೆ ಪ್ರಧಾನಿ, ಅಲ್ಲದೆ, ಅತಿ ಉನ್ನತ ಸ್ಥಾನವನ್ನು ಕೊಡುತ್ತದೆ ಎನ್ನುವುದು ತಿಳಿದು ಬರುತ್ತದೆ. ಹಿಂದು ಒಂದು ಕಡೆ ರಾಷ್ಟ್ರಪತಿ ಮುಸಲ್ಮಾನ್, ಮತ್ತೊಂದು ಕಡೆ ದೇಶದ ರಕ್ಷಣಾ ಸಚಿವ, ಕ್ರಿಶ್ಚಿಯನ್ ಇದನ್ನು ಬರಿ ಹೇಳುವುದಲ್ಲ, ಇದನ್ನು ಮಾಡಿ ತೋರಿಸಿದಂತಹ ದೇಶ ಇದಾಗಿದೆ. ಅಬ್ದುಲ್ ಕಲಾಂ ರವರನ್ನು ನಾವಿಂದು ಕಳೆದುಕೊಂಡಿದ್ದೇವೆ ಎನ್ನುವುದಕ್ಕಿಂತಲೂ ಅವರ ಮಾರ್ಗದರ್ಶನ ಸದಾ ನಮ್ಮ ಚಿಂತನೆಯಲ್ಲಿರಬೇಕಾಗುತ್ತದೆ. ಅವರನ್ನು 'ಮೇಸ್ಟು, ಮೇಸ್ಟು, ಮೇಸ್ಟು' ಎಂದು ನಾವೆಲ್ಲರೂ ಹೇಳುತ್ತೇವೆ. ಅವರ ರಾಷ್ಟ್ರಪತಿ ಸ್ಥಾನ ಮುಗಿದ ದಿನ 10 ನಿಮಿಷ ಅವರು ರಾಷ್ಟ್ರಪತಿ ಭವನದಲ್ಲಿ ಉಳಿಯಲಿಲ್ಲ. ಅವರು Groc ಏನಿದ್ದರೂ ಎರಡು ಸೂಟ್‌ಕೇಸ್ ತೆಗೆದು ಹೊರಟರು. ಹೋಗಿದ್ದು, ಇದೇ ರೀತಿಯಲ್ಲಿ ಮಕ್ಕಳ ಮಧ್ಯೆ ಅವರು ಅಂತಿಮ ಕ್ಷಣ' ಕಳೆದುಕೊಂಡಿದ್ದು ಹೇಗೆಂದರೆ, ಶಿಲ್ಲಾಂಗ್‌ನಲ್ಲಿ ಮಕ್ಕಳ ಜೊತೆಯಲ್ಲಿ ಸಂವಾದ.

ಐಐಎಂ.ನಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ ಮಾಡುತ್ತಿರುವಂತಹ ಸಂದರ್ಭದಲ್ಲಿ. ಜೊತೆ ಪ್ರೀತಿ ಎನ್ನುವುದು ಒಂದು, ೭ ಮಕ್ಕಳಲ್ಲೂ ರಾಷ್ಟ್ರಭಕ್ತಿ ನಿರ್ಮಾಣ ಮಾಡುವಂತಹ ಒಂದು ಪ್ರಯತ್ನ. ಸದಾ ದೇಶ, ದೇಶ ಎಂದು ಹೇಳುತ್ತಿದ್ದಂತಹ ವ್ಯಕ್ತಿ ಅವರಾಗಿದ್ದರು. ಎಷ್ಟೊಂದು ತಾಯಿ ಹೃದಯ ಎಂದರೆ, A ಎರಡೂವರೆ ಗಂಟೆ ಒಬ್ಬ ಸೈನಿಕ ಅವರನ್ನು ರಕ್ಷಣೆ ಮಾಡುವಂತಹ ಸಂದರ್ಭದಲ್ಲಿ ನಿಂತಿದ್ದರಂತೆ. ಆ ಸೈನಿಕನ ಹತ್ತಿರ ಹೋಗಿ, `ಎರಡುವರೆ ಗಂಟೆ ನನ್ನನ್ನು ರಕ್ಷಣೆ ಮಾಡುತ್ತಾ ನೀನು

ಹೇಳುತ್ತಾನೆಂದರೆ, ಎರಡುವರೆ ಗಂಟೆ ಅಲ್ಲ, ಬೇಕಾದರೂ ನೆಂತುಕೊಳ್ಳುತ್ತೇನೆಂದು ಹೇಳಿದನಂತೆ.

ನಿಮ್ಮಂತಹ ರಾಷ್ಟ್ರಭಕ್ತರ ರಕ್ಷಣೆಗೆ ನಾನು ಆರು ಗಂಟೆ ಏಕೆಂದರೆ, ಶ್ರದ್ಧಾಂಜಲಿ ಅರ್ಪಣೆ ಅರ್ಪಣೆ ಮಾಡುತ್ತಿರುವಂತಹ ಸಂದರ್ಭದಲ್ಲಿ ಯಾವ ವ್ಯಕ್ತಿಯಲ್ಲಿ ವಿಶೇಷ ಗುಣ ಇರುತ್ತದೆ, ಅದನ್ನು ನಾವು ನೆನಪು ಮಾಡಿಕೊಳ್ಳುತ್ತೇವೆ. ಆದರೆ, ಅಬ್ದುಲ್ ಕಲಾಂ ರವರ ಇಡೀ ಜೀವನವನ್ನೇ ನೆನಪಿಟ್ಟುಕೊಳ್ಳಬೇಕಾಗುತ್ತದೆ. ಪತ್ರಿಕೆಯನ್ನು ಹಾಕುತ್ತಿರುವಂತಹ ಒಬ್ಬ ವ್ಯಕ್ತಿ, ಪತ್ರಕರ್ತ ಒಬ್ಬ ರಾಷ್ಟ್ರಪತಿ ಆಗುತ್ತಾನೆ ಎನ್ನುವುದನ್ನು ಈ ದೇಶದಲ್ಲಿ ಮಾತ್ರ ಕಾಣಬಹುದೇ ವಿನಹ ಬೇರೆ ದೇಶದಲ್ಲಿ ಕಾಣಲಿಕ್ಕೆ ಆಗುತ್ತದೋ ಇಲ್ಲವೋ ಗೊತ್ತಿಲ್ಲ. ಅಂದರೆ ಅಲ್ಲಿಂದ ಪ್ರಾರಂಭವಾಗಿ, ಐಐಎಂ ನಲ್ಲಿ ಉಪನ್ಯಾಸ ಮಾಡುತ್ತಿರುವಂತಹ ಸಂದರ್ಭದಲ್ಲಿ ಕುಸಿದಾಗ ಇಡೀ ಪ್ರಪಂಚವೇ ಶೋಕ ಸಾಗರದಲ್ಲಿ ಮುಳುಗಿ ಹೋಯಿತು. ಬಹಳ ಅಪರೂಪದ ವ್ಯಕ್ತಿ ಇವರಾಗಿದ್ದರು. ನಿಜಕ್ಕೂ ಕೂಡ ಇವರು ನಮ್ಮ ದೇಶದ ರಾಷ್ಟ್ರಪತಿಯಾಗಿದ್ದರು ಎನ್ನುವುದು ನಮ್ಮ ಸುದೈವ. ಈ ವಿಚಾರವಾಗಿ ಮಾನ್ಯ ಸಭಾನಾಯಕರು ಏನು ಹೇಳಿದರು ಎಂದರೆ ಈ ದೇಶದ ಅತಿ ಉನ್ನತ ಪ್ರಶಸ್ತಿಗಳು ಯಾವ್ಯಾವು ಇವೆ, ಅವೆಲ್ಲವುಗಳು ಅವರಿಗೆ ಬಂದಿವೆ. ಡಾಕ್ಟರೇಟ್‌ಗಳು ಲೆಕ್ಕವೇ ಇಲ್ಲ. ಇವರು ಲೆಕ್ಕ ಕೊಟ್ಟಿರುವ ಪ್ರಕಾರ 47- 48 ಬಂದಿವೆ. ಆದರೆ, ಅವುಗಳು ಎಷ್ಟಿವೆ ಎನ್ನುವುದು ಗೊತ್ತಿಲ್ಲ. ಅದು ಬ್ರಹ್ಮಚಾರಿ ದೇಶದ ಕನಸನ್ನು ಇಟ್ಟುಕೊಂಡು ಇಲ್ಲಿಗೆ ಜಂಟಿ ಅಧಿವೇಶನಕ್ಕೆ ಬಂದಾಗ ನಾವೆಲ್ಲರೂ ರಾಜಕಾರಣಿಗಳು, ವಿಧಾನ ಪರಿಷತ್ತು, ಮತ್ತು ವಿಧಾನಸಭೆ ಸದಸ್ಯರುಗಳು ಒಟ್ಟಿಗೆ ಕುಳಿತಂತಹ ಸಂದರ್ಭದಲ್ಲಿ ದೇಶವನ್ನು ನೀವು ಕಟ್ಟಬೇಕಾದರೆ ಈ 'ಪುರಾಯೋಜನೆಯನ್ನು ಜಾರಿಗೆ ತರಲೇ ಬೇಕು. PURA (Providing Urban Amenities to Rural Areas) ಏಕೆಂದರೆ, ಅವರ ಕಲ್ಪನೆ ಏನಿತ್ತು ಎಂದರೆ, ನಾನು ಹೇಳುವುದನ್ನು ಹೇಳುತ್ತೇನೆ, ಆದರೆ, ಅದನ್ನು ಜಾರಿಗೆ ತರುವುದು, ಬಿಡುವುದು ನಿಮ್ಮ ವಿಚಾರ ಎಂದು ಹೇಳಿದರು. ಇದನ್ನು ಅವರು ಮನಮುಟ್ಟುವಂತೆ ಹೇಳುತ್ತಿದ್ದರು. 2020 ರ ಅವರ ಕನಸ್ಸು ಏನಿತ್ತು, ಆ ಕನಸು ನೆನಸಾಗುವುದು ಹತ್ತಿರ ಬರುವಂತಹ ಸಂದರ್ಭದಲ್ಲಿ ನಿಜಕ್ಕೂ ಅವರು ಜೀವಂತವಾಗಿ ಇರಬೇಕಾಗಿತ್ತು. ದೇಶ ಆ ದಿಕ್ಕಿನಲ್ಲಿ ಹೋಗುವಲ್ಲಿ ಪ್ರಯತ್ನ ನಡೆಸುತ್ತಿರುವ ಸಂದರ್ಭದಲ್ಲಿ ಇನ್ನು ಈ ದೇಶದ ಎಲ್ಲಾ ಕ್ಷೇತ್ರದ ಪ್ರಮುಖರಿಗೆ ಅವರು ಮಾರ್ಗದರ್ಶನ ಮಾಡುವಂತಹ ಅವಕಾಶವಿತ್ತು. ಅಂತಹ ವ್ಯಕ್ತಿಯನ್ನು ನಾವಿಂದು ಕಳೆದುಕೊಂಡಿದ್ದೇವೆ. ಅಂಗವಿಕಲರಿಗೆ ಅವರೇನೋ ನಡೆದಾಡಲು ಕೊಡುತ್ತಿದ್ದ ಕಬ್ಬಿಣದ ಉಪಕರಣ ಏನಿತ್ತು, ಅದು ಬಹಳ ದಪ್ಪ-ದಪ್ಪ ಇರುತ್ತಿತ್ತು. ಆ ಮಕ್ಕಳು ಅದನ್ನು ಹೊರಲಿಕ್ಕೆ ಕಷ್ಟವಾಗುತ್ತದೆ ಎಂದು ಹೇಳಿ, ತೂಕ ಕಮ್ಮಿಯಾಗಿರುವಂತಹ ಕಬ್ಬಿಣದ ಉಪಕರಣಗಳನ್ನು ಕೊಡಲಿಕ್ಕೆ ಪ್ರಯತ್ನ ಮಾಡಿದ ನಂತರ, ಆ ಮಕ್ಕಳು ತೂಕ ಕಡಿಮೆ ಇರುವಂತಹ ಕಬ್ಬಿಣದ ಉಪಕರಣವನ್ನು ಹಾಕಿಕೊಂಡು ಓಡಾಡುವುದನ್ನು ನೋಡಿ, ಅವರೇ ಸ್ವತಃ ಆನಂದವನ್ನು ಅನುಭವಿಸುತ್ತಿದ್ದರು.

ಏಕೆಂದರೆ, ಒಬ್ಬ ರಾಷ್ಟ್ರಪತಿಯಾಗಿದ್ದವರು ನಾನು ಇನ್ನು ಮುಂದೆ ಏನು ಹುದ್ದೆ ಪಡೆಯಬೇಕು, ಇದನ್ನು ಯೋಚನೆ ಮಾಡುವುದು ಸ್ವಾಭಾವಿಕ. ಶಾಸಕನಾದವನು ಮಂತ್ರಿಯಾಗಬೇಕು, ಮಂತ್ರಿಯಾದವನು ಮುಖ್ಯಮಂತ್ರಿಯಾಗಬೇಕು, ಪ್ರಧಾನ ಮಂತ್ರಿಯಾಗಬೇಕು, ಈ ರೀತಿಯಲ್ಲಿ ಮೇಲಿಂದ ಮೇಲೆ ಯೋಚನೆ ಮಾಡುತ್ತಿರುವಂತಹ ಸಂದರ್ಭದಲ್ಲಿ ರಾಷ್ಟ್ರಪತಿ ಹುದ್ದೆಯಲ್ಲಿದ್ದಂತಹ ವ್ಯಕ್ತಿ, ಅಂಗವಿಕಲರ ಹಿತದೃಷ್ಟಿಯ ಬಗ್ಗೆ ಚಿಂತನೆ ಮಾಡುತ್ತಾರೆಂದರೆ, "ಅವರು ಕೇವಲ ಮನುಷ್ಯರಲ್ಲ, ಅವರು ದೇವ ಮಾನವ" ಎಂದು ನನಗೆ ಅನಿಸುತ್ತದೆ. ಅದರಲ್ಲಿ ಏನೂ ಅನುಮಾನವಿಲ್ಲ. ಅನೇಕ ಮಹಾಪುರಷರನ್ನು ನಾವು ನೆನಪು ಮಾಡಿಕೊಳ್ಳುತ್ತೇನೆ. ಋಷಿಶ್ರೇಷ್ಠರಾದ ಶಿವಾನಂದರ ಶಿಷ್ಯ ಶ್ರೀಕಲಾಂ ರವರು. ಪ್ರಪಂಚ ನಮ್ಮ ದೇಶವನ್ನು ಮತ್ತು ಸಂಸ್ಕೃತಿಯನ್ನು ಹೊಗಳುತ್ತದೆ. ಇಲ್ಲಿ ಅನೇಕ ಸಂತರು ಬಂದು ಹೋಗಿದ್ದಾರೆ. ಸೇರುವುದು ಅಷ್ಟೇ ಅಲ್ಲ, ಅ ಸಂತರ ಅಗ್ರಗಣ್ಯ ನಾಯಕ ಯಾರೆಂದರೆ ಅಬ್ದುಲ್ ಕಲಾಂ ಎಂದು ನಾವು ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಇವತ್ತು ಅಬ್ದುಲ್ ಕಲಾಂ ರವರಿಗೆ ನಾವು ನಿಜಕ್ಕೂ ಕೂಡ ಶ್ರದ್ಧಾಂಜಲಿ ಅರ್ಪಿಸುತ್ತಿರುವಂತಹ ಸಂದರ್ಭದಲ್ಲಿ ನಾನು ಪತ್ರಿಕೆಗಳನ್ನು ನೋಡಿದ್ದೇನೆ. ಶಾಸ್ತ್ರವನ್ನು ಅರೆದು ಕುಡಿದವರು. ಭಗವದ್ಗೀತೆ, ಕರ್ನಾಟಕ ಸಂಗೀತ, ಸಂತರ ಸಾಲಿಗೆ ಭಾರತೀಯ ತತ್ವ ಇದರ ಜೊತೆಗೆ ವೀಣೆ ನುಡಿಸುವುದರಲ್ಲಿ ಪಾರಣ್ಯತೆಯನ್ನು ಪಡೆದವರು. ಅವರೇ ವೀಣೆಯನ್ನು ನುಡಿಸುತ್ತಿದ್ದರು. ಅದರಲ್ಲಿಯೇ ಆನಂದವನ್ನು ಕಾಣುತ್ತಿದ್ದರು. ಎನ್ನುವುದು ಬಹಳ ದೂರ. ಒಂದು ವಿಚಾರ, ನಾವು 24 ಗಂಟೆಗಳ ಕಾಲ ರಾಜಕೀಯವನ್ನು ಮಾಡುತ್ತೇವೆ. ವೀಣೆ-ಪಾಣೆ ಆದರೆ, ಅಭಿರುಚಿ ಸಮಯವನ್ನು ಹೇಗೆ ಕಳೆಯುತ್ತಿದ್ದರು, ಎನ್ನುವುದು ತಮ್ಮ ಇಡೀ ಜೀವನದಲ್ಲಿ ಬೆಳಗ್ಗೆ

ಎದ್ದಾಗಿನಿಂದ ರಾತ್ರಿ ಮಲಗುವವರೆಗೆ ನಾನು ಏನೋ ಮಾಡುತ್ತಿದ್ದೇನೆಂದು ಅಲ್ಲ. ನನ್ನ ಜೀವನವೇ ಒಂದು ರೀತಿಯಲ್ಲಿ ತೆರೆದ ಪುಸ್ತಕದ ರೀತಿಯಲ್ಲಿ ಇರಬೇಕು. ನನ್ನನ್ನು ನೋಡುತ್ತಿದ್ದ ಹಾಗೆಯೇ ಪ್ರತಿಯೊಬ್ಬ ವ್ಯಕ್ತಿಯೂ ಕೂಡ ಒಂದಲ್ಲಾ ಒಂದು ಪಾಠವನ್ನು ಕಲಿಯಬೇಕು. ಆ ದಿಕ್ಕಿನಲ್ಲಿ ಅವರು ಪ್ರಯತ್ನ ನಡೆಸಿದ್ದು ಅಲ್ಲ, ಅವರ ಜೀವನವೇ ಹಾಗೆ ಇತ್ತು. ಯಾರೋ ನನ್ನನ್ನು ನೋಡಿ ಕಲಿಯಬೇಕೆಂದು ಅಲ್ಲ. ಅವರು ಅವರ ಜೀವನವನ್ನು ಹಾಗೆಯೇ ನಡೆಸಿಕೊಂಡು ಹೋಗುತ್ತಿದ್ದರು. ಅವರು ಪ್ರತಿಯೊಬ್ಬ ಪುರುಷರಿಗೂ ಕೂಡ ಆದರ್ಶ ಪುರುಷರಾಗಿದ್ದರು. Nuclear Scientist ಆಗಬೇಕೆಂಬ ಕಲ್ಪನೆ ಮಾಡಿದ್ದವರು ನಂತರ ರಾಕೆಟ್‌ನಲ್ಲಿ ಸೈಂಟಿಸ್ಟ್ ಆದರು. Missile Man of India ಆದರು, ಕ್ಷಿಪಣಿ ಮಾನವ ಇಂತಹ ಒಬ್ಬ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ ಎಂಬ ಪದವನ್ನು ಹೇಳುವುದಕ್ಕೆ ಸಂಕೋಚವಾಗುತ್ತದೆ. ತೆರೆದ ಪುಸ್ತಕ ಅವರ ಜೀವನವೆಂದು ನಾನು ಅದಕ್ಕೋಸ್ಕರವೇ ಹೇಳಿದ್ದು. ಅವರ ಜೀವನವನ್ನು ಅಧ್ಯಯನ ಮಾಡುತ್ತಾ ಹೋದಾಗ ಅದರಲ್ಲಿ ನಮಗೆ ಎಷ್ಟು ಸಾಧ್ಯವೋ ಅಷ್ಟನ್ನು ಅರ್ಥ ಮಾಡಿಕೊಂಡು ನಾವೂ ಕೂಡ ಅವರ ದಾರಿಯಲ್ಲಿ ಹೋಗುವ ಪ್ರಯತ್ನವನ್ನು ನಡೆಸಿ ಅದರಲ್ಲಿ ಯಶಸ್ವಿಯಾದರೆ ಅದೇ ಆಗ ಅವರಿಗೆ ನಾವು ನಿಜವಾದ ಶ್ರದ್ಧಾಂಜಲಿಯನ್ನು ಅರ್ಪಿಸಿದ ಹಾಗಾಗುತ್ತದೆ. ಆ ದಿಕ್ಕಿನಲ್ಲಿ ನಾವೆಲ್ಲರೂ ಕೂಡ ನಡೆದುಕೊಳ್ಳಬೇಕಾಗುತ್ತದೆ. ಡಾ: ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಶ್ರದ್ಧಾಂಜಲಿ ಸಭೆಯಲ್ಲಿ ನನ್ನ ಅಪೇಕ್ಷೆ ಇಷ್ಟೆ. ಆ ಒಂದು ಅವರ " ಪುರಾ" ಯೋಜನೆ ಏನು ಇದೆ, ಇದನ್ನು ಜಾರಿಗೆ ತರುವ ದಿಕ್ಕಿನಲ್ಲಿ ಪ್ರಯತ್ನ ಆಗಬೇಕು ಮತ್ತು ಗ್ರಾಮೀಣ ಪ್ರದೇಶದಲ್ಲಿನ ರೈತರ ಹೊಲ - ಗದ್ದೆಗಳಿಗೆ ನೀರನ್ನು ಕೊಡಬೇಕೆನ್ನುವ ಕಲ್ಪನೆ ಏನು ಇತ್ತೋ? ಅದನ್ನು ಸಾಕಾರಗೊಳಿಸಬೇಕಾಗಿದೆ. ನಮ್ಮ ಭಾರತ ಪ್ರಪಂಚದಲ್ಲಿ ಮುಂದೆಯೇ ಉನ್ನತ ಸ್ಥಾನಕ್ಕೆ ಹೋಗಬೇಕೆನ್ನುವ ಕಲ್ಪನೆ ಏನು ಇತ್ತೋ ಆ ಒಂದು ಕಲ್ಪನೆಯನ್ನು ನನಸು ಮಾಡುವ ದಿಕ್ಕಿನಲ್ಲಿ ನಾವು ಪ್ರಯತ್ನ ಮಾಡಿ ಹೇಳಬಯಸುತ್ತೇನೆ. ಅವರಿಗೆ ಪ್ರಾಮಾಣಿಕವಾದ ಶ್ರದ್ಧಾಂಜಲಿಯನ್ನು ಅರ್ಪಿಸೋಣ ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಿಂದ ಕರ್ನಾಟಕ ವಿಧಾನ ಸಭೆಗೆ ಆಯ್ಕೆಯಾದ ಶ್ರೀ ವಸಂತ ಸಾಲಿಯಾನ ಅವರು ಕೂಡ ನಮ್ಮನ್ನು ಅಗಲಿದ್ದಾರೆ. ನನು 1989 ರಲ್ಲಿ ಕರ್ನಾಟಕ ವಿಧಾನ ಸಭೆಗೆ ಆಯ್ಕೆಯಾಗಿ ಬಂದಂತಹ ಸಮಯದಲ್ಲಿ ಅವರು ಕೂಡ ಶಾಸಕರಾಗಿದ್ದರು. ನಂತರ ಮಂತ್ರಿಗಳೂ ಕೂಡ ಆಗಿದ್ದರು. ಆಗ ನಮ್ಮ ಬಿ.ಜೆ.ಪಿ. ಪಕ್ಷದ ವತಿಯಿಂದ 4 ಜನ ಶಾಸಕರು ಮಾತ್ರ ಇದ್ದೆವು. ಜನ ಸಾಮಾನ್ಯರ ಸಮಸ್ಯೆಗಳ ಬಗ್ಗೆ ಏನೇ ವಿಚಾರವನ್ನು ತೆಗೆದುಕೊಂಡು ಹೋಗಿ ಇಟ್ಟರೆ ಬಹಳ ಸಂತೋಷದಿಂದ attend ಮಾಡಿ ಆ ಸಾಮಾನ್ಯ ಜನರ ಸಮಸ್ಯೆಯನ್ನು ಪರಿಹಾರ ಮಾಡುತ್ತಿದ್ದಂತಹ ಒಬ್ಬ ವ್ಯಕ್ತಿಯಾಗಿದ್ದರು. ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಅವರು ನಮ್ಮ ಭಾರತೀಯ ಜನತಾ ಪಕ್ಷವನ್ನು ಸೇರಿದರು. ಆದರೆ ಅವರು ನಿಜವಾಗಿಯೂ ಕೂಡ ಜನ ಸಾಮಾನ್ಯರ ಮಧ್ಯೆ 5-5 ಬಾರಿ ಚುನಾವಣೆಯನ್ನು ಗೆಲ್ಲುವುದು ಅಷ್ಟು ಸುಲಭದ ಮಾತಲ್ಲ. ಜನ ಸಾಮಾನ್ಯರ ಮಧ್ಯೆ ಇದ್ದುಕೊಂಡು ಸಾಮಾನ್ಯ ಜನರ ಪ್ರತಿನಿಧಿಯಾಗಿ ಜನರ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಪರಿಹಾರ ಮಾಡುವ ದಿಕ್ಕಿನಲ್ಲಿ ಬಹಳ ಪ್ರಯತ್ನ ಮಾಡಿದರು. ವಿಶೇಷವಾಗಿ ಕರಾವಳಿ ಪ್ರದೇಶದ ಜ್ವಲಂತ ಸಮಸ್ಯೆಯಾದ ಕಡಲ ಕೊರೆತಕ್ಕೆ ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಅವರು ಸಾಕಷ್ಟು ಶ್ರಮವನ್ನು ಹಾಕಿದ್ದರು. ಅಂತಹ ವ್ಯಕ್ತಿ ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ. ಕುಟುಂಬಕ್ಕೂ ಕೂಡ ಭಗವಂತ ಅವರ ಅಗಲುವಿಕೆಯ ನೋವನ್ನು ಸಹಿಸುವಂತಹ ಶಕ್ತಿಯನ್ನು ನೀಡಲಿ ಆತ್ಮಕ್ಕೂ ಕೂಡ ಭಗವಂತ ಶಾಂತಿಯನ್ನು ನೀಡಲಿ ಎಂದು

ಎಂದು ಪ್ರಾರ್ಥಿಸುತ್ತಾ ಈ ಇಬ್ಬರ ಪ್ರಾರ್ಥಿಸುತ್ತಾ ನನಗೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅವರ ಸಭಾಪತಿಯವರು:- ಸ್ರೀ ಒಂದೆರಡು ವಿಷಯವನ್ನು ನಾನು ತಮ್ಮ ಮುಂದೆ ಹೇಳಬಯಸುತ್ತೇನೆ. ಎ.ಪಿ.ಜೆ.ಅಬ್ದುಲ್ ಕಲಾಂ ಅವರ ಮತ್ತು ಕರ್ನಾಟಕದ ನಮ್ಮ ಬೆಂಗಳೂರಿನ ಸಂಬಂಧದ ಬಗ್ಗೆ ಎರಡು ವಿಷಯವನ್ನು ಸೇರಿಸುವುದಕ್ಕೆ ಇಷ್ಟಪಡುತ್ತೇನೆ. ಅವರೇ ಹೇಳಿದಂತಹ ಮಾತುಗಳಲ್ಲಿ ನೇರವಾದ ಮಾತುಗಳು ಇವೆ ಅದನ್ನು ಹೇಳುತ್ತೇನೆ. ನನ್ನ ಭವಿಷ್ಯ ರೂಪಿಸುವಲ್ಲಿ ಬೆಂಗಳೂರು ಮಹತ್ತರ ಪಾತ್ರವನ್ನು ವಹಿಸಿದೆ. " ಇದನ್ನು ಅವರೇ ಹೇಳಿದ್ದು, "ವಿಜ್ಞಾನ ಮತ್ತು ತಂತ್ರಜ್ಞಾನ ಜಗತ್ತಿನ ನನ್ನ ಪಯಣ ಆರಂಭವಾಗಿದ್ದು ಬೆಂಗಳೂರಿನಲ್ಲೇ. ನನ್ನ ವೈಜ್ಞಾನಿಕ ವೃತ್ತಿಯಾದ ಹಿರಿಯ ವೈಜ್ಞಾನಿಕ ಸಹಾಯಕನಾಗಿ 1958 ರಲ್ಲಿ ಬೆಂಗಳೂರಿನಲ್ಲಿನ ವೈಮಾನಿಕ ಅಭಿವೃದ್ಧಿ ಸಂಸ್ಥೆಗೆ ಸೇರಿದೆ. ನನ್ನ ಗುರು ಪ್ರೊ ಸತೀಶ್ ಧವನ್ ಅವರನ್ನು ಭೇಟಿ ಮಾಡಿದ್ದು ಇದೇ ಬೆಂಗಳೂರಿನಲ್ಲಿ ಕರ್ನಾಟಕವು ಬೌದ್ಧಿಕ ಪರಂಪರೆ ಈ ಎರಡನ್ನೂ ಹೊಂದಿರುವ ಜಾಗೃತಿ

ಹಾಗೂ ಅತಿ ಶ್ರೀಮಂತ ಸಾಂಸ್ಕೃತಿಕ ರಾಜ್ಯವಾಗಿದೆ. * ಈ ರೀತಿಯಾದ ಮಾತುಗಳನ್ನು ಕಲಾಂ ಅವರೇ ಹೇಳಿದ್ದು, ಇದರ ಜೊತೆಗೆ ಇನ್ನೊಂದ ಒಂದು ಸಣ್ಣ ಒಂದು ಘಟನೆಯನ್ನು ತಮಗೆಲ್ಲರಿಗೂ ತಿಳಿಸಬೇಕೆಂದು ಅನ್ನಿಸುತ್ತಿದೆ. ನಾನು ಹಿಂದೆ ಕರ್ನಾಟಕ ರಾಜ್ಯದ ಉನ್ನತ ಶಿಕ್ಷಣ ಸಚಿವನಾಗಿದ್ದಂತಹ ಸಂದರ್ಭದಲ್ಲಿ, ಅವರ ರಾಷ್ಟ್ರಪತಿಯ ಅವಧಿ ಆಗ ತಾನೆ ಮುಗಿದಿತ್ತು. ಬೆಳಗಾವಿಯಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ಶಿಕ್ಷಣ ಸಂಸ್ಥೆಯ Convocation ಬನ್ನಿ ಎಂದು ಕರೆದ ಒಂದೇ ಮಾತಿನಲ್ಲಿ ಅವರು ಒಪ್ಪಿಕೊಂಡು ಬಂದರು. ಅವರ Convocation Address ಅನ್ನು ಅವರು ಹೇಗೆ ಮಾಡಿದರು ಎಂದರೆ, ಮೊದಲು ಎಲ್ಲ ಮಕ್ಕಳಿಗೆ ಚಿನ್ನದ ಪದಕ, ಬೆಳ್ಳಿ ಪದಕ ಇವೆಲ್ಲವನ್ನೂ ಕೊಟ್ಟಾದ ಮೇಲೆ ಬಹಳ ಮೆಲ್ಲಗಿನ ಧ್ವನಿಯಲ್ಲಿ ಮುಂದೆ ಚಿನ್ನದ ಪದಕವನ್ನು ಹೆಚ್ಚಾಗಿ ಪಡೆದಿದ್ದ ಇಂಜಿನಿಯರಿಂಗ್ ಹೆಣ್ಣುಮಕ್ಕಳು ಕುಳಿತಿದ್ದರು ಅವರನ್ನು ಕುರಿತು “My dear children do you get dreams” ಎಂದರು. ಇಡೀ ಸಭೆ ಸ್ಥಬ್ದ ಆಯಿತು. ಆ ಹೆಣ್ಣುಮಕ್ಕಳು ಆಗ ತಾನೆ ಇಂಜಿನಿಯರಿಂಗ್ ಪದವೀಧರರಾಗಿದ್ದಾರೆ. ಯಾರೂ ಕೂಡ ಉತ್ತರ ಹೇಳಲಿಲ್ಲ. 3038 yes my girls, I want to know do you get dreams ಎಂದರು. ಯಾರೂ ಉತ್ತರ ಕೊಡಲಿಲ್ಲ. ಸ್ವಲ್ಪ ಧ್ವನಿಯೇರಿಸಿ, I want to know whether you get dreams o. ಆಗ ಒಂದು ಹುಡುಗಿ ಮೆಲ್ಲಗೆ yes sir' ಎಂದು ಹೇಳಿದಳು. ಆಗ ಅವರು ಹೇಳಿದರು, my dear children ನೀವು ಏನು ಕನಸು ಕಾಣಬೇಕು ಅಂದರೆ, 2020 ರಲ್ಲಿ ಭಾರತ ಪ್ರಪಂಚದ ರಾಷ್ಟ್ರಗಳಲ್ಲೇ ಅಗ್ರ ರಾಷ್ಟ್ರ ಆಗಬೇಕೆಂದು ಕನಸು ಕಾಣಿ ಮಕ್ಕಳೇ' ಎಂದು ಹೇಳಿ Convocation Address ಅನ್ನು ಮುಗಿಸಿಬಿಟ್ಟರು. ಎಂತಹ ಒಬ್ಬ ಅದ್ಭುತ ವ್ಯಕ್ತಿ ಕಲಾಂ ಅವರು. ಅವರನ್ನು ನಾವು ಇಂದು ಕಳೆದುಕೊಂಡಿದ್ದೇವೆ. ನಮ್ಮ ಕರ್ನಾಟಕಕ್ಕೆ ಬಹಳ ದೊಡ್ಡ ಬಾಂಧವ್ಯವೇನು ಇದೆ ಇದನ್ನು ನೆನಪು ಮಾಡಿಕೊಳ್ಳುತ್ತಾ ಅವರ ಆತ್ಮಕ್ಕೆ ಮತ್ತು ಶ್ರೀ ವಸಂತ ಸಾಲಿಯಾನ ಅವರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲುವಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗ ಮತ್ತು ಇಡೀ ದೇಶದ ಜನರಿಗೆ ಪರಮಾತ್ಮ ಶಕ್ತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಸದನವು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುವ ಸಲುವಾಗಿ ಒಂದು ನಿಮಿಷ ಮೌನವನ್ನು ಆಚರಿಸಿತು)**

ಸಭಾಪತಿಯವರು:- ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು. ಒಂದೆರಡು ಪ್ರಕಟಣೆ ಇದೆ.

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ ಅವರು ಭಾರತ ಸಂವಿಧಾನ ಅನುಚ್ಛೇದ 183 (ಬಿ) ಅದು ಪ್ರಕಾರ ಇಂದು ದಿನಾಂಕ 30-07-2015 ರಂದು ಉಪ ಸಭಾಪತಿಯವರ ಸ್ಥಾನಕ್ಕೆ ರಾಜೀನಾಮೆಯನ್ನು ನೀಡಿರುತ್ತಾರೆಂಬ ವಿಷಯವನ್ನು ಸದನದ ಗಮನಕ್ಕೆ ತರಲು ನಾನು ಬಯಸುತ್ತೇನೆ.

**2.** ಪ್ರಕಟಣೆಗಳು.

ಸಭಾಪತಿಯವರು:- ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆಯ 104ನೇ ನಿಯಮದ ಮೇರೆಗೆ ದಿನಾಂಕ 24-07-2015 ರಂದು 2015ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯೊಂದಿಗೆ ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

ಒಬ್ಬ ಮಾನ್ಯ ಸದಸ್ಯರು:- ಮಾನ್ಯ ಸಭಾಪತಿಯವರೆ, ಇಂದು ಶೂನ್ಯ ವೇಳೆಯ ಕಲಾಪವನ್ನು ತೆಗೆದುಕೊಳ್ಳುವುದಿಲ್ಲವೇ?

ಸಭಾಪತಿಯವರು:- ಶೂನ್ಯವೇಳೆ ಇಂದು ಇಲ್ಲ, ಬೇರೆ ಇದೆ ಅದನ್ನು ಹೇಳುತ್ತೇನೆ.

**3.** ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

**I** ಶ್ರೀ ಎಸ್.ಆರ್ ಪಾಟೀಲ (ಸಭಾನಾಯಕರು) ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿ) ಅವರ ಪರವಾಗಿ:- ಮಾನ್ಯ ಸಭಾಪತಿಯವರೆ

ಭಾರತ ಸಂವಿಧಾನದ ಅನುಚ್ಛೇದ **323(2)**ರ ಪ್ರಕಾರ

1. ಕರ್ನಾಟಕ ಲೋಕಸೇವಾ ಆಯೋಗದ 2013-14ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**II.** ಶ್ರೀ ವಿನಯ್‌ಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು) ಅವರು:- ಮಾನ್ಯ ಸಭಾಪತಿಯವರೆ

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ **1987**ರ ಕಲಂ **49**ರ ಮೇರೆಗೆ

1. ಕುಶಾಲನಗರ ಯೋಜನಾ ಪ್ರಾಧಿಕಾರದ 2014-15ನೇ ಸಾಲಿನ ವಾರ್ಷಿಕ ವರದಿ.

2. ಕೃಷ್ಣರಾಜನಗರ ಯೋಜನಾ ಪ್ರಾಧಿಕಾರದ 2014-15ನೇ ಸಾಲಿನ ವಾರ್ಷಿಕ ವರದಿಯ ಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಸಭಾಪತಿಯವರು: ಮಂಡಿಸಲಾಯಿತು

**4.** ಅರ್ಜಿಯನ್ನೊಪ್ಪಿಸುವುದು

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:-** ಮಾನ್ಯ ಸಭಾಪತಿಯವರೆ, ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕು ರಟ್ಟಾಡಿ ಗ್ರಾಮದ ಕೊನೆಯಲ್ಲಿರುವ ಮಾವಿನಕಾಡು, ಚಪ್ಪರಮನೆ, ನರಸೀಪುರ ಪ್ರದೇಶಕ್ಕೆ ಶಾಶ್ವತ ಸಿಮೆಂಟ್ ರಸ್ತೆಯನ್ನು ನಿರ್ಮಿಸುವ ಕುರಿತು ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಸಭಾಪತಿಯವರು**:-** ಒಪ್ಪಿಸಲಾಯಿತು.

**5.** ಸಭೆಯ ಮುಂದಿಡಲಾದ ಕಾಗದಪತ್ರಗಳು

ಕಾರ್ಯದರ್ಶಿ:- ಮಾನ್ಯ ಸಭಾಪತಿಯವರೆ, ವಿದಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ **2015**ನೇ ಸಾಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿದ್ಯಾಲಯ ಬ(ತಿದ್ದುಪಡಿ) ವಿಧೇಯಕ ಹಾಗೂ ವಿದಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾಧ ರೂಪದಲ್ಲಿರುವ **2015**ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಸಭಾಪತಿಯವರು: ಮಂಡಿಸಲಾಯಿತು

**6.** ನಿಯಮ **330** ಪ್ರಕಾರ ವಿಶೇಷ ಪ್ರಸ್ತಾವಗಳು

ಅ) ವಿಷಯ: ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನ ಕುರಿತು.

ಶ್ರೀಮತಿ ಮೋಟಮ್ಮ (ವಿಧಾನಸಭಾ ಕ್ಷೇತ್ರ)**:-** ಮಾನ್ಯ ಸಭಾಪತಿಯವರೆ, ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನದ್ದಡಿಯಲ್ಲಿ ಈ ಕೆಳಗಿನ ಜಿಲ್ಲೆಗಳ ಕಾಮಗಾರಿಗಳು ಒಂದು ವರ್ಷ ಆದರೂ ಪ್ರಾರಂಭ ಮಾಡಿರುವುದಲ್ಲ. 1) ಮಂಡ್ಯ ತಾಲ್ಲೂಕಿನ ಬಸರಾಳು ಹೋಬಳಿ, ಬೆನ್ನಟ್ಟಿ ಗ್ರಾಮದೀಮದ ಕೆಂಚನಹಳ್ಳಿಯ ಪರಿಶಿಷ್ಟ ಜಾತಿ ಕಾಲೋನಿಗೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ 2 ಲಕ್ಷ ರೂಪಾಯಿಗಳು 2) ಬೆಂಗಳೂರು ಜಿಲ್ಲೆಯ ಉತ್ತರಹಳ್ಳಿಯ ಮಹಾಪ್ರತ್ಯಾಂಕರಿ ದೇವಸ್ಥಾನದ ಹತ್ತಿರ ಸಾರ್ವಜನಿಕ ಸಮುದಾಯ ಭವನ ನಿರ್ಮಾಣಕ್ಕೆ 2.50 ಲಕ್ಷ ರೂಪಾಯಿಗಳು 3)

ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕು ನಂದಿಹಳ್ಳಿ, ಮಂಚೇನಹಳ್ಳಿ ಕಾವಲ್‌ನಲ್ಲಿ ಜಲ್ಲಿ ರಸ್ತೆ ನಿರ್ಮಾಣಕ್ಕೆ 3.00 ಲಕ್ಷ ರೂಪಾಯಿಗಳು 4)ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕು, ಕಸಬ ಹೋಬಳಿ, ದೊಡ್ಡನಹಳ್ಳಿ ಹತ್ತಿರ ಬಯಲುರಂಗ ಮಂದಿರಕ್ಕೆ 3.00 ಲಕ್ಷ ರೂಪಾಯಿಗಳು ಚಿಕ್ಕಮಗಳೂರು ಜಿಲ್ಲಾಧಿಕಾರಿಯಿಂದ ಹಣ ಮಂಜೂರಾಗಿ ಚೆಕ್ ಮುಖಾಂತರ ಕಳುಹಿಸಲಾಗಿದೆ. ಆದರೆ ಉದ್ದೇಶಿತ ಕಾಮಗಾರಿಗೆ ಮಂಡ್ಯ, ಹಾಸನ, ಬೆಂಗಳೂರು ಜಿಲ್ಲಾಧಿಕಾರಿಯವರು ಸಂಬಂಧಿಸಿದವರಿಗೆ ಹಣ ಬಿಡುಗಡೆ ಮಾಡಿರುವುದಿಲ್ಲ ಮತ್ತು ಸರಿಯಾದ ಸಮಯಕ್ಕೆ ಜನರ ಉಪಯೋಗಕ್ಕೆ ಕಾಮಗಾರಿ ಕೆಲಸ ಆಗುತ್ತಿಲ್ಲ. ವ್ಯರ್ಥ ಆಗುತ್ತಿದೆ, ಈ ಬಗ್ಗೆ ಸರ್ಕಾರ ಸೂಕ್ತ ಶಿಸ್ತಿನ ಕ್ರಮ ಜರುಗಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್.ಆರ್.ಪಾಟೀಲ್ **(**ಸಭಾನಾಯಕರು):- ಮಾನ್ಯ ಸಭಾಪತಿಯವರೆ, ಇದು ನನ್ನ ಇಲಾಖೆಗೆ ಸಂಬಂಧಿಸಿ ವಿಚಾರವಾಗಿದೆ. ಇಲ್ಲಿ Nodal District ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಿಗೆ ಮಾನ್ಯ ಸದಸ್ಯರು ಪ್ರದೇಶಾಭಿವೃದ್ಧಿ ನಿಧಿಯಲ್ಲಿ ಮಂಡ್ಯ, ಹಾಸನ್, ಬೆಂಗಳೂರು ಜಿಲ್ಲಾಧಿಕಾರಿಗಳಿಗೆ ಹಣ ಬಿಡುಗಡೆ ಮಾಡಬೇಕೆಂದು ಪತ್ರವನ್ನು ಕೊಟ್ಟಿದ್ದಾರೆ. ಅದೇ ರೀತಿ Nodal District ಚಿಕ್ಕಮಗಳೂರಿನ Deputy Commissioner ನವರು ಆ ಆ ಹಣ ಬಿಡುಗಡೆ ಮಾಡಲಿಕ್ಕೆ ಸಂಬಂಧಿಸಿದ ಮಂಡ್ಯ, ಹಾಸನ್, ಬೆಂಗಳೂರು ಜಿಲ್ಲಾಧಿಕಾರಿಗಳಿಗೆ ಹಣ ಬಿಡುಗಡೆ ಮಾಡಲಿಕ್ಕೆ ತಿಳಿಸಿದ್ದಾರೆ. ಆ ಪತ್ರವನ್ನು ಕಳುಹಿಸಿಯೂ ಕೊಟ್ಟಿದ್ದಾರೆ. ಆದರೆ ಕಾಮಗಾರಿಗಳು ಇನ್ನು ಪ್ರಾರಂಭವಾಗಿಲ್ಲ. ಮಂಡ್ಯ ಹಾಸನ ಬೆಂಗಳೂರು ಜಿಲ್ಲಾಧಿಕಾರಿಗಳು ಸಂಬಂಧಿಸಿದವರಿಗೆ ಏಕೆ ಹಣ ಬಿಡುಗಡೆ ಮಾಡಿಲ್ಲ ಮತ್ತು ಮೂರು ವರ್ಷದ ವರೆಗೆ ತಡವಾಗಿದೆ ಎಂದು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ತಂದಿದ್ದಾರೆ. ಇವೊತ್ತೆ ಆ ಮೂರು ಜಿಲ್ಲಾಧಿಕಾರಿಯವರೊಂದಿಗೆ ನಾನು ಮಾತನಾಡಿ ಏಕೆ ಬಿಡುಗಡೆ ಮಾಡಿಲ್ಲ ಎಂದು ಕೇಳುವುದಲ್ಲದೆ, ಏಕೆ ತಡವಾಗಿದೆ, ಅದಕ್ಕೆ ಕಾರಣೀಭೂತರು ಯಾರು ಎಂದು ಕೇಳುವುದಲ್ಲದೆ ಅವರ ಮೇಲೆ ಕ್ರಮವನ್ನು ಕೂಡ ಜರುಗಿಸಲಿಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಸವರಾಜ ಹೊರಟ್ಟಿ **(**ಶಿಕ್ಷಕರ ಕ್ಷೇತ್ರ**):-** ಮಾನ್ಯ ಸಭಾಪತಿಯವರೆ, ಇದು ಕೇವಲ ಮೋಟಮ್ಮನವರ ಸಮಸ್ಯೆಯಲ್ಲ. ಶಾಸಕರ ನಿಧಿಯ ಪ್ರಯೋಜವಾಗದ ಕಾರಣವೇನೆಂದರೆ ಅಲ್ಲಿನ ಜಿಲ್ಲಾಧಿಕಾರಿಗಳು, ಸಿ.ಇ.ಓನವರು ಇಂಜಿನಿಯರ್‌ಗಳು ಕೇವಲ ಭ್ರಷ್ಟಾಚಾರಕ್ಕೆ ನಿಂತಿರುತ್ತಾರೆ. ಇಲ್ಲದಿದ್ದರೆ ಇಷ್ಟು ಶೇಕಡ ಕೊಡಿ ಎಂದು ಕೇಳುತ್ತಾರೆ. ಅವರೆ ಮಾಡಬೇಕೆಂದರೆ ಮಾಡಲಿಕ್ಕೆ ಬಿಡುವುದಿಲ್ಲ. ಆದ್ದರಿಂದ ತೊಂದರೆಯಾಗುತ್ತಿದೆ. ಇದು ಒಬ್ಬರ ಸಮಸ್ಯೆಯಲ್ಲ. ಇದರ ಬಗ್ಗೆ ನಾವು ತಮಗೆ ಮೂರಾಲ್ಕು ಬಾರಿ ಹೇಳಿದ್ದೇವೆ. ಇಂತಹ ಅನೇಕ ಸಮಸ್ಯೆಗಳನ್ನು ಅವರು create ಮಾಡುತ್ತಿದ್ದಾರೆ. ಏಡೆಡ್ ನವರಿಗೆ ಕೊಟ್ಟರೆ ಅವರು ಕಟ್ಟಿಸಿಕೊಡುತ್ತೇವೆಂದರೆ ಇವರು ಇಷ್ಟು ಕೊಡಿ ಎಂದು ಕೇಳುತ್ತಾರೆ. Recognised Contractors ಗಳಿಂದ ಮಾಡಿಸಿ ಎಂದರೆ ಅದು ಕೂಡ ಮಾಡುವುದಿಲ್ಲ. ಇದರಿಂದಾಗಿ ಪೂರ್ತಿ ವ್ಯವಸ್ಥೆಯೇ ಕೆಟ್ಟು ಹೋಗಿದೆ. ದಯಮಾಡಿ ತಾವು ಸ್ವಲ್ಪ ಅದನ್ನು ನೋಡಿ, ಅದರ ಬಗ್ಗೆ ಗಮನ ಸಂಸೆಂದು ತೋರುತ್ತೇನೆ

ಶ್ರೀ ಕೆ.ಬಿ.ಶಾಣಪ್ಪ **(**ನಾಮನಿರ್ದೇಶಿತ ಕ್ಷೇತ್ರ:- ಮಾನ್ಯ ಸಭಾಪತಿಯವರೆ, ನಾನು ಕೋಲಾರದ ಶಾಲೆಯ ಕಟ್ಟಡಕ್ಕೆ 2011-12ನೇ ಸಾಲಿನಲ್ಲಿ 9ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೆ. ಆದರೆ ಅವರು ನಿನ್ನೆ ಬಂದು ತಾವು ಕೊಟ್ಟು ಐದು ವರ್ಷಗಳಾಗಿವೆ ಆದರೆ ಇದುವರೆಗೆ ಜಿಲ್ಲಾಧಿಕಾರಿಯವರು ಹಣವನ್ನು ಬಿಡುಗಡೆ ಮಾಡಿಲ್ಲ ಎಂದು ಹೇಳುತ್ತಿದ್ದಾರೆ. ಒಂದು ವೇಳೆ ಅವರು ಹಣವನ್ನು ಬಿಡುಗಡೆ ಮಾಡದಿದ್ದರೆ ಅವರು ಆ ಹಣವನ್ನು ಗುಲಬರ್ಗಾ ಜಿಲ್ಲಾಧಿಕಾರಿಯವರಿಗೆ ವಾಪಸ್ಸಾದರು ಕಳುಹಿಸಿಕೊಡಬೇಕು. The cheque was sent to them and they have not sent that cheque back to Gulbarga nor have they sanctioned the amount to construct the building. 5 ವರ್ಷದ 5 ಲಕ್ಷದ ಹಣದ ಬಡ್ಡಿಯೇ ಇಂದು 5ಲಕ್ಷ ಆಗುತ್ತದೆ. The cheque was sent to them. But, neither have they sent back that cheque to Gulbarga nor have they sanctioned the amount to construct the building. ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):- ನಾಯಕರು):- ಮಾನ್ಯ ಸಭಾಪತಿಯವರೆ, ಮೊದಲನೆಯದಾಗಿ ಶಾಸಕರ ಪ್ರದೇಶಾಭಿವೃದ್ಧಿ ಮುಖಾಂತರ ಬರುವಂಥ ಹಣವೆ ಕಡಿಮೆ. ಅದು ತಮಗೆ ಗೊತ್ತಿದೆ. ಬಹಳ ಕಡಿಮೆ ಎಂದರೆ ಬಹಳ ಕಡಿಮೆ. ಅದರಲ್ಲಿ ಶಾಸಕರು ಬಹಳ ಆಸಕ್ತಿ ತೋರಿಸಿ ಯಾವ ಕೆಲಸ ಆಗಲೇಬೇಕೆಂದು ಇರುತ್ತದೆ ಅದಕ್ಕೆ ಹಣವನ್ನು

ಕೊಟ್ಟಿರುತ್ತಾರೆನ್ನುವುದು ತಮಗೆ ಗೊತ್ತಿದೆ. ಅದು ಕೂಡ guidelines ಪ್ರಕಾರವೇ ಕೊಟ್ಟಿರುತ್ತಾರೆ. ಆದರು ಅದು ಅಷ್ಟು ಸುಲಭವಾಗಿ ಬಗೆಹರಿಯುತ್ತಿಲ್ಲ. ಪರಿಸ್ಥಿತಿ ಹೀಗಿರಬೇಕಾದರೆ ತಪ್ಪಿತಸ್ಥರು ಯಾರು ಎಂದು ಸ್ವಲ್ಪ ಹುಡುಕಬೇಕಲ್ಲ. ಎಂದು ಸ್ವಲ್ಪ ಹುಡುಕಬೇಕಲ್ಲ. ಇದನ್ನು ನಾವು ಸದನದಲ್ಲಿ ಕೇಳುತ್ತೇವೆ, ಅದಕ್ಕೆ ತಾವು ಒಂದು ಉತ್ತರವನ್ನು ಕೊಟ್ಟು ಈ ವಿಷಯವನ್ನು ಇಲ್ಲಿಗೆ ಬಿಡಬೇಡಿ. 5-6-8 ವರ್ಷ ಹೀಗೆ ತಡ ಆಗಿರುವ ವಿಚಾರಗಳನ್ನು ಗುರುತಿಸಿ ಸಂಬಂಧಪಟ್ಟಂಥ ಅಧಿಕಾರಿಗಳನ್ನು ಕರೆಸಿ ಅವರ ಬಗ್ಗೆ ಕ್ರಮ ಜರುಗಿಸುತ್ತೀರೋ, ಅವರಿಗೆ ಛೀಮಾರಿ ಹಾಕುತ್ತೀರೋ ಆ ಕ್ರಮಗಳನ್ನು ಮಾಡಲಿಲ್ಲವೆಂದರೆ ಇದು ಹಾಗೆಯೇ ಮುಂದುವರೆಯುತ್ತದೆ. ನೀವು ಒಬ್ಬರ ಬಗ್ಗೆ ಕ್ರಮವನ್ನು ತೆಗೆದುಕೊಂಡರೆ ಉಳಿದವರು active ಆಗುತ್ತಾರೆ. ದಯಮಾಡಿ ತಾವು ಈ ದಿಕ್ಕಿನಲ್ಲಿ ಗಮನ ಶ್ರೀ ಕೆ.ಬಿ.ಶಾಣಪ್ಪ (ನಾಮನಿರ್ದೇಶಿತ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ನಾನು ಗುಲಬರ್ಗಾದಿಂದ ಹಣವನ್ನು ಎಂ.ಪಿ. ಇದ್ದಾಗ ಕಳುಹಿಸಿದ್ದೇನೆ. ಕೋಲಾರದಲ್ಲಿ ಅನೇಕ ಜನ ಜಿಲ್ಲಾಧಿಕಾರಿಯವರು ಬಂದು ಹೋಗಿದ್ದಾರೆ. ಅವರು ಕೆಲಸವನ್ನು ಮಾಡದಿದ್ದರೆ ಹಣವನ್ನಾದರು ವಾಪಸ್ಸು ಕೊಡಬೇಕಲ್ಲ. ಈಗ ಅದರ ಬಡ್ಡಿಯೇ 5 ಲಕ್ಷ ಆಗಿದೆ.

ಸಭಾಪತಿಯವರು:- ಅವರು ವಾಪಸ್ಸು ಕೊಡಬೇಕು ಇಲ್ಲದಿದ್ದರೆ ಉಪಯೋಗಿಸಬೇಕು.

ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಐದು ವರ್ಷಗಳ ಹಿಂದಿನ ಘಟನೆಯನ್ನು ನೆನಪಿಸಿದ್ದಾರೆ. ಅವರು ನನಗೆ ಆ ಮಾಹಿತಿಯನ್ನು ಕೊಡಲಿ. ಈ ಇಲಾಖೆಗೆ ನಾನು ಬಂದು ಎರಡು ವರ್ಷಗಳಾಗಿವೆ. ಅದರಲ್ಲಿ ಯಾರು ತಪ್ಪಿತಸ್ಥರಿದ್ದಾರೆಂದು ನೋಡಿ ಕ್ರಮವನ್ನು ಕೈಗೊಳ್ಳುತ್ತೇನೆ. ನಾನು ಕೇವಲ ಅವರು ಪ್ರಶ್ನೆಯನ್ನು ಎತ್ತಿದಾಗ ಉತ್ತರವನ್ನು ಕೊಟ್ಟು ಹೋಗುವಂಥ ಸಚಿವನಲ್ಲ. ಈಗ ಈ ಮನೆಯ ಹಿರಿಯ ಸದಸ್ಯರಾಗಿದ್ದಂಥ ಶ್ರೀಮತಿ ಮೋಟಮ್ಮನವರು ಮಂಡ್ಯ, ಹಾಸನ್, ಬೆಂಗಳೂರು ಜಿಲ್ಲಾಧಿಕಾರಿಯವರಿಗೆ ಚಿಕ್ಕಮಗಳೂರಿನ ಜಿಲ್ಲಾಧಿಕಾರಿಯವರಿಂದ ಹಣ ಬಿಡುಗಡೆಯಾಗಿ ಬಟವಾಡೆ ಮಾಡಲು instructions ಇದ್ದಾಗ್ಯೂ ಕೂಡ ಒಂದು ವರ್ಷದಿಂದ ಆ ಹಣ ಬಿಡುಗಡೆಯಾಗಿಲ್ಲ ಎಂದು ನನ್ನ ಗಮನಕ್ಕೆ ತಂದಿದ್ದಾರೆ. ಈ ಮೂರು ಜಿಲ್ಲಾಧಿಕಾರಿಯವರ ಜೊತೆಗೆ ನಾನೆ ಚರ್ಚೆ ಮಾಡುತ್ತೇನೆ. ಅವರೊಂದಿಗೆ ದೂರವಾಣಿ ಮುಖಾಂತರ ಮಾತನಾಡುತ್ತೇನೆ. ಮಾನ್ಯ ಶಾಣಪ್ಪನವರು ಹೇಳಿದ ವಿಷಯವನ್ನು ಕೂಡ ಸಂಬಂಧಿಸಿದಂಥ ಜಿಲ್ಲಾಧಿಕಾರಿಯವರ ಜೊತೆಗೆ ಚರ್ಚೆ ಮಾಡುತ್ತೇನೆ. ಇದರಲ್ಲಿ ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಕ್ರಮವನ್ನು ಜರುಗಿಸುತ್ತೇನೆ.

ಕೆ.ಪ್ರತಾಪಚಂದ್ರಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :- ಮಾನ್ಯ ಸಭಾಪತಿಯವರೆ, ಇಲ್ಲಿ ಜಿಲ್ಲಾಧಿಕಾರಿಯವರಿಗೆ ಹಣ ಹೋಗುತ್ತದೆ. ಆದರೆ ಜಿಲ್ಲಾಧಿಕಾರಿಯವರು ಇಲಾಖೆಗೆ ಕಳುಹಿಸಿಕೊಡುತ್ತಾರೆ. ಅಲ್ಲಿ ಎರಡು ವರ್ಷ, ಮೂರು ವರ್ಷ ಉಪಯೋಗವಾಗದೆ ಹಾಗೆಯೇ ಉಳಿಯುತ್ತದೆ. ಆದ್ದರಿಂದ ಯಾರಿಂದ ಹಣ ಬಂದಿದೆ ಆ ಹಣ ಉಪಯೋಗವಾಗದೆ ಇದ್ದರೆ ಯಾರಿಗೆ ಹೋಗಬೇಕೆಂದು guidelines ನಲ್ಲಿ ಬದಲಾವಣೆ ಮಾಡಬೇಕಾಗುತ್ತದೆ. ಉದಾಹರಣಗೆ ಉಡುಪಿ ಜಿಲ್ಲೆಯವರು ಮಂಗಳೂರು ಜಿಲ್ಲೆಗೆ ಹಣವನ್ನು ಕಳುಹಿಸಿದ್ದರೆ ಅವರು ಅದನ್ನು ಜಿಲ್ಲಾಪಂಚಾಯ್ತಿಗೆ ಕಳುಹಿಸುತ್ತಾರೆ. ಜಿಲ್ಲಾಪಂಚಾಯ್ತಿಯವರು ಎರಡು, ವರ್ಷ ಹಣವನ್ನು ಇಟ್ಟುಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಅವರು ಕೆಲಸ ಮಾಡಬೇಕು, ಇಲ್ಲದಿದ್ದರೆ ಉಡುಪಿ ಜಿಲ್ಲಾಧಿಕಾರಿಗಳಿಗೆ ಮಂಗಳೂರು ಜಿಲ್ಲಾಧಿಕಾರಿಯವರ ಮೂಲಕ ಹಣವನ್ನು ವಾಪಸ್ಸು ಕಳುಹಿಸಬೇಕಾದಂಥ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅದಕ್ಕೆ ಕಾಲಮಿತಿ ಇಟ್ಟರೆ ಸಾಕು.

ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):- ಮಾನ್ಯ ಸಭಾಪತಿಯವರೆ, ನಾನು ಅವರ ಜಿಲ್ಲೆ ಹೋಗಿದ್ದೆ. ನಾನು ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿ Implementing Agency ಯವರಿಂದ ಕೆಲವು review ಕೂಡ ಮಾಡಿದ್ದೇನೆ. ಬಹುತೇಕವಾಗಿ Implementing Agency ಯವರು ಆ ಜಿಲ್ಲೆಯಲ್ಲಿ ಬಹಳಷ್ಟು ನಿಧಾನಗತಿಯಿಂದ ಕೆಲಸವನ್ನು ಮಾಡುತ್ತಿದ್ದಾರೆ. ಆ ಜಿಲ್ಲೆಯವರು ಬಹಳಷ್ಟು ಮುಂದುವರೆದಂಥ ಜಿಲ್ಲೆಯವರು. ಆ ಜಿಲ್ಲೆಯವರು ಬಹಳಷ್ಟು ಮುಂದುವರೆದಂಥ ಜಿಲ್ಲೆಯವರು ಎಂದು ರಾಜ್ಯದಲ್ಲಿ ಛಾಪಾ ಎ ಮೂಡಿಸಿದವರು ಎಂದು ನಾನು ಭಾವಿಸಿದ್ದೆ. ಆದರೆ ಆ ಜಿಲ್ಲೆಯಲ್ಲಿ ಬಹಳಷ್ಟು ನಿಧಾನಗತಿಯಿಂದ ಕೆಲಸವನ್ನು ಮಾಡುತ್ತಿರುವುದನ್ನು ನೋಡಿ ಏನು ನೀವು ಬೇರೆ ಜಿಲ್ಲೆಯವರಿಗಿಂತ ಮುಂದೆ ಇರುವವರು

ಬೇರೆಯವರಿಗಿಂತ ಹತ್ತು ಹೆಜ್ಜೆ ಹಿಂದೆ ಇದ್ದೀರಲ್ಲ ಎಂತು ತರಾಟೆಗೆ ತೆಗೆದುಕೊಂಡಿದ್ದೇನೆ. ಈಗ ಹಿರಿಯ ಸದಸ್ಯರಾದ ಹೊರಟ್ಟಿಯವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅದನ್ನು ನಾನು ಇಲ್ಲ ಎಂದು ಖಡಾಖಂಡಿತವಾಗಿ ಹೇಳುವುದಿಲ್ಲ. ಈ ಮೂರು ಜಿಲ್ಲಾಧಿಕಾರಿಯವರ ಜೊತೆ ಮತ್ತು ಶಾಣಪ್ಪನವರು ಹೇಳಿದಂಥ ಕೋಲಾರ್ ಜಿಲ್ಲೆಯ ಜಿಲ್ಲಾಧಿಕಾರಿಯವರ ಜೊತೆಗೆ ನಾನು ಮಾತನಾಡುತ್ತೇನೆ ಮತ್ತು ಯಾರು ಕಾರಣೀಭೂತರಿದ್ದಾರೆ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ಕೈಗೊಳ್ಳಲಿಕ್ಕೆ ನಾನು ಕ್ರಮವನ್ನು ಜರುಗಿಸುತ್ತೇನೆ. ಅದೇ ರೀತಿ ಎಲ್ಲಾ ಜಿಲ್ಲಾಧಿಕಾರಿಯವರಿಗೆ ಒಂದು ಸುತ್ತೋಲೆಯನ್ನು ಹೊರಡಿಸುತ್ತೇನೆ. ಅವರ ಮೇಲೆ ಜವಾಬ್ದಾರಿಯನ್ನು fix up ಮಾಡುತ್ತೇನೆ. ಅದು ಆಗಲಿಲ್ಲವೆಂದರೆ ಅವರನ್ನು ಹೊಣೆಗಾರರನ್ನಾಗಿ ಮಾಡುತ್ತೇನೆ. ಖಡಾಖಂಡಿತವಾಗಿ ನಾವು ಕ್ರಮವನ್ನು ಕೈಗೊಳ್ಳುತ್ತೇವೆ.ಶ್ರೀ ಕೆ.ಬಿ.ಶಾಣಪ್ಪ (ನಾಮನಿರ್ದೇಶಿತ ಕ್ಷೇತ್ರ):- ಮಾನ್ಯ ಸಭಾಪತಿಯವರೆ, They have tosend that Utilization Certificate. But, they have not sent it from past five years.

ಶ್ರೀ ಎಸ್.ಆರ್.ಪಾಟೀಲ್ **(**ಸಭಾನಾಯಕರು):- ಮಾನ್ಯ ಸಭಾಪತಿಯವರೆ, ನಾನು ಕಲಬುರ್ಗಿಗೆ review ಮಾಡುವುದಕ್ಕೆ ಹೋದಾಗ Utilization Certificate ಕೊಡದೆ ಇರುವಾಗ ಅದು ರಾಜ್ಯಸಭಾ ಸದಸ್ಯರದ್ದಿರಬಹುದು, ಲೋಕಸಭಾ ಸದಸ್ಯರದ್ದಿರಬಹುದು ಹಣವನ್ನು ಬಿಡುಗಡೆ ಮಾಡಿಲ್ಲ. ಅವರ ಹೆಸರನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಯಾವ ರಾಜ್ಯ ಸಭಾಸದಸ್ಯರ, ಯಾವ ಲೋಕಸಭಾ ಸದಸ್ಯರ ಹಣ ಬಿಡುಗಡೆಯಾಗಿಲ್ಲ ಎನ್ನುವದರ ಬಗ್ಗೆ ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಮೂರಾಲ್ಕು ವರ್ಷದಿಂದ ಅಲ್ಲಿ Utilization Certificate ಕೊಟ್ಟಿಲ್ಲ. ಕೇಂದ್ರದಲ್ಲಿ ನಮ್ಮ ಹಣ ಬಿಡುಗಡೆ ಮಾಡಿಲ್ಲ. ನಮ್ಮಲ್ಲಿ Utilization Certificate ಕೊಡದಿದ್ದರು ಕೂಡ ಹಣವನ್ನು ಬಿಡುಗಡೆ ಮಾಡುತ್ತೇವೆ. ಇದು ಪುಣ್ಯ. ಇದೆ ಆದರೆ ಲೋಕಸಭಾ ಮತ್ತು ರಾಜ್ಯಸಭಾದಲ್ಲಿ ಮಾನ್ಯ ಕೆ.ಬಿ.ಶಾಣಪ್ಪನವರು ರಾಜ್ಯಸಭಾದಲ್ಲಿ ಕೆಲಸ ಮಾಡಿದ್ದಾರೆ. ಮೂರು ವರ್ಷದ ಮೇಲ್ಪಟ್ಟು ಹಣ ಬಂದಿಲ್ಲ ಅಂತಹ ಘಟನೆಗಳು ಕೂಡ ಅಗಿದೆ. ಅದಕ್ಕೆ ಬೇಗ ಹಣ ಬಿಡುಗಡೆಯಾಗಬೇಕು.

ಪಾರದರ್ಶಕತೆಯಿಂದ ಕೆಲಸವಾಗಬೇಕು. .

ಶ್ರೀ ಕೆ.ಎಸ್.ಈಶ್ವರಪ್ಪ**(**ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರ ಅನುಕೂಲಕ್ಕೆ ಒಂದು ಮಾಹಿತಿಯನ್ನು ಕೊಡಬಯಸುತ್ತೇನೆ. ದಿನಾಂಕ 31.03.2015ಕ್ಕೆ ಸರ್ಕಾರದಿಂದಲೇ ಸಿಕ್ಕಿರತಕ್ಕಂತಹ ವರದಿಯ ಪ್ರಕಾರವಾಗಿ 730 ಕೋಟಿ ರೂಪಾಯಿಗಳು ವೆಚ್ಚವಾಗಿಲ್ಲ. ಇದು ಸೇರಿ ಒಟ್ಟು ನಾನು ಹೇಳುತ್ತಿರುವಂತಹ ಮಾಹಿತಿ,

ಪ್ರದೇವೃದ್ಧಿ ನಿಧಿ

ಶ್ರೀ ಎಸ್.ಆರ್.ಪಾಟೀಲ್:- ಮಾನ್ಯ ಸಭಾಪತಿಯವರೆ, ಮೊದಲು ಕೇವಲ 25 ಲಕ್ಷ ರೂಪಾಯಿಗಳಿತ್ತು. ಈಗ 2 ಕೋಟಿ ರೂಪಾಯಿಗಳನ್ನು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದತಕ್ಷಣ ವಿಧಾನಸಭಾ ಶಾಸಕರು ಇರಬಹುದು, ಮೇಲ್ಮನೆಯ ಸದಸ್ಯರಿರಬಹುದು ಒಬ್ಬರಿಗೆ ಒಂದು ವರ್ಷಕ್ಕೆ 2 ಕೋಟಿ ರೂಪಾಯಿಗಳನ್ನು ಪ್ರದೇಶಾಭಿವೃದ್ಧಿ ನಿಧಿಯನ್ನು ಕೊಡುವಂತಹ ಒಂದು ಯೋಜನೆ ಇದೆ. ಈ ಹಣ ಸದ್ಬಳಕೆಯಾಗಬೇಕು. ಹಣ ಜಿಲ್ಲಾಧಿಕಾರಿಗಳ ಹತ್ತಿರವೇ ಇರುತ್ತದೆ. ಅವರ ವಿವೇಚನೆಗೆ ಅನುಗುಣವಾಗಿ ಕೊಡಬೇಕು. ಎಲ್ಲಿ ತೊಂದರೆ ಇದೆ, ಎಲ್ಲಿ ಕಷ್ಟ ಇದೆ, ಇದಕ್ಕೆ ಯಾರು ಈ ಕಷ್ಟಕ್ಕೆ

/ ಕಾರಣರಾಗಿದ್ದಾರೆ. .

ಶ್ರೀ ಗೋ.ಮಧುಸೂದನ್:- ಮಾನ್ಯ ಸಭಾಪತಿಯವರೆ, ಧೋರಣೆ ಸರಿಯಿಲ್ಲ.

whose

ಎಸ್.ಆರ್.ಪಾಟೀಲ್**:-** ಮಾನ್ಯ ಸಭಾಪತಿಯವರೆ, ಯೋಜನೆ ಸರಿ ಇಲ್ಲ ಎಂದರೆ ಹೇಗೆ?

ಶ್ರೀ ಗೋ.ಮಧುಸೂದನ್:- ಯುಸಿ ಯನ್ನು ಬಿಡುಗಡೆ ಮಾಡದೇ ಇರುವಂತಹ ಧೋರಣೆ ಸರಿಯಿಲ್ಲ.

ಸಭಾಪತಿಯವರು**:-** ಮಾನ್ಯ ಕೆ.ಬಿ.ಶಾಣಪ್ಪನವರಿಂದಲೇ ಇಷ್ಟೊಂದು ಒಳ್ಳೆಯ ಚರ್ಚೆಯಾಗಿದೆ. ಶ್ರೀ ಇ.ಕೃಷ್ಣಪ್ಪನವರು ಆಗಿನಿಂದಲೂ ಕೇಳುತ್ತಿದ್ದಾರೆ. ಅವರು ಮಾತನಾಡಲಿ.

ಶ್ರೀ ಎಸ್.ಆರ್.ಪಾಟೀಲ್:- ಮಾನ್ಯ ಸಭಾಪತಿಯವರೆ, ಯುಸಿ ಯನ್ನು ಬಿಡುಗಡೆ ಮಾಡಬೇಕು ಎನ್ನುವುದು ನಮ್ಮ ಸರ್ಕಾರದ್ದಲ್ಲ. ಅದನ್ನು ಕೇಂದ್ರ ಸರ್ಕಾರ ಮಾಡಬೇಕು. ಇದು ಇಲ್ಲ. ಮಾನ್ಯ ಗೋ.ಮಧುಸೂದನ್‌ರವರು ನೋಡಿದ್ದರೋ ಇಲ್ಲವೋ ಗೊತ್ತಿಲ್ಲ.

ಇದೆ.

ಶ್ರೀ ಗೋ.ಮಧುಸೂದನ್:- ಮಾನ್ಯ ಸಭಾಪತಿಯವರೆ, ರಾಜ್ಯ ಸರ್ಕಾರ ಮಾಡುತ್ತಿರುವುದು ಸರಿ

ಸಭಾಪತಿಯವರು:- ಅದರ ಬಗ್ಗೆ ಬೇಡ. ಶ್ರೀ ಇ.ಕೃಷ್ಣಪ್ಪನವರೆ ನೀವು ಮಾತನಾಡಿ,

ಶ್ರೀ ಎಸ್.ಆರ್.ಪಾಟೀಲ್:- ಮಾನ್ಯ ಸಭಾಪತಿಯವರೆ, ಯುಸಿ ಯನ್ನು ಕೊಡದೇ ಹೋದರೆ ರಾಜ್ಯಕ್ಕೆ ಹಣವೇ ಬರುವುದಿಲ್ಲ.

ಶ್ರೀ ಇ.ಕೃಷ್ಣಪ್ಪ: ಮಾನ್ಯ ಸಭಾಪತಿಯವರೆ, ಯುಸಿ ಯನ್ನು ಕೊಡುವುದು ಒಂದು ಕಡೆ ಇರಲಿ, ಏನು ಯೋಜನಾ ಮಾರ್ಗದರ್ಶನ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿದೆ. ಗ್ರ್ಯಾಂಟ್‌ದ್ದು ಪೂರ್ತಿ ಲೆಟರ್ ತೆಗೆದುಕೊಂಡು ಬನ್ನಿ ಎಂದು ಹೇಳಿ, ಅವರು ನಮಗೆ ಕಮಾಂಡ್ ಮಾಡುತ್ತಾರೆ. ನಾವು ಲೆಟರ್ ಕೊಟ್ಟರೆ ಬಿಸಾಕುತ್ತಾರೆ. ನಮಗೆ ಏನಾದರು 50 ಲಕ್ಷ ರೂಪಾಯಿಗಳು ರಾಜ್ಯ ಸರ್ಕಾರ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯನ್ನು ಕೊಟ್ಟರೆ 50 ಲಕ್ಷ ರೂಪಾಯಿಗಳಿಗೂ ಇಂತಿಂತಹ ಕೆಲಸಕ್ಕೆ ಎಂದು ಒಟ್ಟಿಗೆ ಲೇಟರ್ ಕೊಡಬೇಕಂತೆ, ಅಂದರೆ ಎಲ್ಲೆಲ್ಲಿ ಮಾಡಬೇಕೆಂದು ನಾವೇ ಹುಡುಕಿ ಲೇಟರ್ ಕೊಡಬೇಕಂತೆ. ಇಲ್ಲ ಎಂದರೆ ಅದನ್ನು ಸ್ವೀಕರಿಸುವುದಿಲ್ಲವೆಂದು ಹೇಳುತ್ತಾರೆ.

ಶ್ರೀ ಎಸ್.ಆರ್.ಪಾಟೀಲ್:- ಮಾನ್ಯ ಸಭಾಪತಿಯವರೆ, ಎಲ್ಲಿ? ಆ ರೀತಿ ಎಲ್ಲಿ ಬರುತ್ತಿದೆ ಎಂದು ಸ ತಿರು

ಶ್ರೀ ಇ.ಕೃಷ್ಣಪ್ಪ:- ಮಾನ್ಯ ಸಭಾಪತಿಯವರೆ, ನಮ್ಮ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾನ್ಯ ಸಭಾಪತಿಯವರೆ, ಇದು ನಮ್ಮ ಮಂಗಳೂರು ಜಿಲ್ಲೆಯಲ್ಲಿಯೂ ಸಹ ಕೂಡ ಇದೆ. ಇದೇ 3 ಸಹೆಯುತ್ರಿದೆ.

ಸಭಾಪತಿಯವರು:- ಸಾಕು.

ಶ್ರೀ ಇ.ಕೃಷ್ಣಪ್ಪ: ಮಾನ್ಯ ಸಭಾಪತಿಯವರೆ, ನೀವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುತ್ತೀರಿ.

ಸಭಾಪತಿಯವರು:- ಇಲ್ಲಿರುವಂತಹ 75 ಜನ ವಿಧಾನ ಪರಿಷತ್ತಿನ ಸದಸ್ಯತೆಗಳ ಅಭಿಪ್ರಾಯ ಕೂಡ ಒಂದೇ ಅಗಿದೆ. ಸಭಾನಾಯಕರೆ ಅದರ ಬಗ್ಗೆ ಸ್ವಲ್ಪ ಗಮನಿಸಬೇಕು.

ಶ್ರೀ ಇ.ಕೃಷ್ಣಪ್ಪ:- ಮಾನ್ಯ ಸಭಾಪತಿಯವರೆ, ನಾನು ಬೆಂಗಳೂರು ಗ್ರಾಮಾಂತರದ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಎಸ್.ಆರ್.ಪಾಟೀಲ್:- ಮಾನ್ಯ ಸಭಾಪತಿಯವರೆ, ಸದನದಲ್ಲಿ ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಎಲ್ಲಿ ಇದು ಪಾರದರ್ಶಕವಾಗಿ ಕೆಲಸವಾಗುವುದಿಲ್ಲ; ಎಲ್ಲಿ ನಿಧಾನವಾಗಿದೆ, ಅದಕ್ಕೆ ಯಾರು ಕಾರಣೀಭೂತರಿದ್ದಾರೆ ಅವರ ಮೇಲೆ ನಿರ್ಧಾಕ್ಷಿಣ್ಯವಾದಂತಹ ಕ್ರಮವನ್ನು ಜರುಗಿಸುತ್ತೇವೆ. ಇದರಲ್ಲಿ ಯಾರ ಬಗ್ಗೆ ಕೂಡ ದಾಕ್ಷಿಣ್ಯವಿಲ್ಲ. ಮತ್ತೆ ಈ ವಿಷಯದ ಮೇಲೆ ಚರ್ಚೆ ಮಾಡುವುದು ಬೇಡ. ನಾನು ಈಗಾಗಲೇ ಹೇಳಿದ್ದೇನೆ. ಪ್ರತಿಯೊಬ್ಬರು ಹೇಳುವುದು ಬೇಡ.

ಶ್ರೀ ಇ.ಕೃಷ್ಣಪ್ಪ:- ಮಾನ್ಯ ಸಭಾಪತಿಯವರೆ, ನಾವು ಶಾಸಕರಾಗಿ ಒಂದು ಪತ್ರವನ್ನು ಕಳುಹಿಸಿದರೆ, ಅವರು ಪೂರ್ಣವಾಗಿ ಒಂದೇ ಸಾರಿ ಕೊಡಿ ಎಂದರೆ, ಹಾಗಾದರೆ ನಾವು ಹೀಗಿರುವಂತಹ ಕೆಲಸಕ್ಕೂ ಕೊಡಬೇಕೇ? ನಾವು ಯಾವ ಕೆಲಸಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಯೋ, ಎರಡು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಯೋ ಕೊಡುತ್ತೇವೆ. ಅದನ್ನು ಬಿಟ್ಟು ಒಟ್ಟಿಗೆ ಕೊಡಿ ಎಂದರೆ ಹೇಗೆ?

ಸಭಾಪತಿಯವರು:- ನೀವು ಹೇಳಿದ್ದನ್ನು ಕೂಡ ಮಾನ್ಯ ಸಭಾನಾಯಕರು ಕನ್ಸಿಡರ್ ಮಾಡಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸವೇ ನಾನು ಸ್ವರಿತ ನಾನು ಸ್ವತಃ ಮಾತನಾಡುತ್ತೇನೆ. ಇವತ್ತಿನ ಸಾಯಂಕಾಲವೇ ನನಗೆ ವರದಿಯನ್ನು ಕೊಡಿ ಎಂದು ಹೇಳುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಯಾವ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಮಾಡಿದ್ದೆ. ಮಲ್ಟಿ ಪರ್ಪಸ್‌ಗೆ ಅಲ್ಲಿ" ಒಂದು ಭವನವಾಗಬೇಕೆಂದು ಹೇಳಿ 50 ಲಕ್ಷ ರೂಪಾಯಿಗಳನ್ನು ಕೊಟ್ಟು 8 ತಿಂಗಳುಗಳಾಗಿದೆ.

ಸಭಾಪತಿಯವರು:- ಅದೂ ಅಗಿಲ್ಲವೇ?

ಶ್ರೀ ವಿ.ಎಸ್.ಉಗ್ರಪ್ಪ:- ಆ ನಿರ್ಮಿತ ಕೇಂದ್ರಕ್ಕೆ ಲೇಟರ್ ಕೊಟ್ಟಿದ್ದೆ. ಅಲ್ಲಿ ಸಂಬಂಧಪಟ್ಟಂತಹ ಜಿಲ್ಲೆಯ ಅಧಿಕಾರಿ ಶ್ರೀ ರಾಜಶೇಖರ್ ಎಂದು ಇದ್ದಾರೆ ಅವರು ಒಂದು ಮಾತನ್ನು ನನಗೆ ಏನು ಹೇಳಿದರು ಎಂದರೆ ಕೊಟ್ಟಿರುವಂದನ್ನು ಮಾಡಬೇಕೆಂದು ಗುತ್ತಿಗೆದಾರರಿಗೆ ಕೊಡಬಹುದು. ನೀವೇ /ಇಲಾಖೆಯವರಲ್ಲಿ ಸೋರಿಕೆಯಾಗಬಾರದು, ಸದುದ್ದೇಶದಿಂದ ಮಾಡಬೇಕೆಂದು ನಾನು ದೂರವಾಣಿಯನ್ನು ಇನ್‌ಸ್ಟ್ರಕ್ಷನ್ ಕೊಟ್ಟರೆ ಅವನು 8 ತಿಂಗಳುಗಳಿಂದ ನಾಪತ್ತೆಯಾಗಿದ್ದಾನೆ. ಶ್ರೀ ರಾಜಶೇಖರ್ ಎಂದು ನಮ್ಮ ಜಿಲ್ಲೆಯವನು. ಏಕೆಂದರೆ, ಈ ಕಮೀಷನ್ ಅವರಿಗೆ ಲಭ್ಯವಾಗುವುದಿಲ್ಲ. ನಾನು ಅವನು ಎಲ್ಲಿಯಾದರು ಸಿಗುತ್ತಾನೆಯೇ ಎಂದು ಏನೆಲ್ಲಾ ಮಾಡುತ್ತಿದ್ದೇನೆ, ಆದರೆ ಸಿಗುತ್ತಿಲ್ಲ. ಅವರು ಹತ್ತಾರು ವರ್ಷಗಳಿಂದ ಅಲ್ಲಿಯೇ ಇರುವುದರಿಂದ ಅವರು ತಳ ಊರಿರುತ್ತಾರೆ. ಎಲ್ಲಿ ಕಮೀಷನ್ ಸಿಗುತ್ತದೆ ಅಲ್ಲಿ ಕೆಲಸವನ್ನು ಮಾಡುತ್ತಾರೆ. ಇದರ ಬಗ್ಗೆ ಸರ್ಕಾರ ಗಮನ ಹರಿಸಬೇಕು.

ಶ್ರೀ ಬಿ.ಜೆ.ಪುಟ್ಟಸ್ವಾಮಿ:- ಮಾನ್ಯ ಸಭಾಪತಿಯವರೆ, ನಾನು ಸಭಾನಾಯಕರಿಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ. ಪೂರ್ಣಗೊಂಡಿದೆ ಪೂರ್ಣಗೊಂಡಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಅವರು ಏನು ಪೂರ್ಣವಾಗಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ, ಅದರಲ್ಲಿ 75% ಯಾವುದೂ ಕೂಡ ಪೂರ್ಣಗೊಂಡಿಲ್ಲ. ಅವರು ನಿರ್ಮಿತಿ ಕೇಂದ್ರಕ್ಕೆ ಚೆಕ್ ನೀಡಿದ ತಕ್ಷಣ 1 ಪೂರ್ಣಗೊಂಡಿದೆ ಎಂದು ಹೇಳುತ್ತಾರೆ. ಆದರೆ ಕೆಲಸವನ್ನೇ ಪ್ರಾರಂಭ ಮಾಡಿರುವುದಿಲ್ಲ. ಜಿಲ್ಲಾ ಪಂಚಾಯಿತಿಗೆ ಕೊಡುತ್ತಾರೆ. ಅವರು ಪೂರ್ಣಗೊಂಡಿದೆ ಎಂದು ಹೇಳುತ್ತಾರೆ. ಅದರ ಬಗ್ಗೆ ಮಾಹಿತಿಯನ್ನು ಮಾನ್ಯ ಸಭಾನಾಯಕರಿಗೆ ಕೊಡುತ್ತೇನೆ. ನಮ್ಮ ಪ್ರತಾಪಚಂದ್ರ ಶೆಟ್ಟಿಯವರು ಹೇಳಿದಂತೆ ಕೆಲವು ಮಾಡಿಫಿಕೇಷನ್ ಮಾಡಬೇಕಾಗುತ್ತದೆ. ಅದುದರಿಂದ ಶಾಸಕರುಗಳನ್ನು ಕರೆದು ದಯಮಾಡಿ ಒಂದು ಮೀಟಿಂಗ್ ಮಾಡಿ, ನಮ್ಮ ಸಮಸ್ಯೆಗಳನ್ನು ಬಗೆಹರಿಸಿ. ಅವರು ಒಂದು ತಿಂಗಳ ಕಾಲವಕಾಶವನ್ನು ಕೇಳಿದ್ದರು. ಈಗ ಉತ್ತರ ಬಂದಿದೆ.

ಶ್ರೀ ಎಸ್.ಆರ್.ಪಾಟೀಲ್:- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಬಿ.ಜೆ.ಪುಟ್ಟಸ್ವಾಮಿಯವರು ಹೇಳಿದಂತೆ ನಿರ್ಮಿತಿ ಕೇಂದ್ರಕ್ಕೆ ಚೆಕ್ ಕೊಟ್ಟ ಕೂಡಲೇ ಅದು ಪೂರ್ಣಗೊಂಡಿತು ಎಂದಲ್ಲ. ಹಣ ಬಟವಾಡೆಯಾಗಿರುತ್ತದೆ. ಅವರು ಪೂರ್ಣಗೊಳಿಸಬೇಕು. ಕಾಮಗಾರಿಯನ್ನು ಪೂರ್ಣಗೊಂಡಾಗ ಅವರು ಪೂರ್ಣಗೊಂಡಿದೆ ಎಂದು ಹೇಳಬೇಕಾಗುತ್ತದೆ. ಆ ದೃಷ್ಟಿಯಿಂದ ಕೆಲವು ಮಾರ್ಪಾಡುಗಳನ್ನು ಮಾಡುವಂತಹ ಅವಶ್ಯಕತೆ ಇದ್ದರೆ ನಿಶ್ಚಿತವಾಗಿ ಮಾರ್ಪಾಡುಗಳನ್ನು ಮಾಡುತ್ತೇವೆ. ಮಾನ್ಯ ಸದಸ್ಯರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೇಗೆ ಮಾಡಬೇಕು ಎನ್ನುವುದನ್ನೂ ಕೂಡ ಮಾಡುತ್ತೇವೆ. ಈಗಾಗಲೇ ಬಹಳಷ್ಟು ಗೈಡ್‌ಲೈನ್ಸ್ ಬದಲಾವಣೆ ಮಾಡಲಾಗಿದೆ.

ಸಭಾಪತಿಯವರು:- ಮಾನ್ಯ ಸಭಾನಾಯಕರೆ, ಶ್ರೀ ಇ.ಕೃಷ್ಣಪ್ಪನವರು ಹೇಳಿದ್ದನ್ನು ಶ್ರೀ ಭಾನುಪ್ರಕಾಶ್‌ರವರು ಉಲ್ಲೇಖ ಮಾಡುತ್ತಿದ್ದಾರೆ.

ಶ್ರೀ ಭಾನುಪ್ರಕಾಶ್:- Consolidated ಮಾಡಿ ಎರಡು ಕೋಟಿ ರೂಪಾಯಿಗಳ ಒಟ್ಟಿಗೆ ಪ್ರೋಗ್ರಾಮ್ ಕೊಡಬೇಕೆಂದು ಕೇಳುತ್ತಾರೆ. ಎರಡು ಕೋಟಿ ರೂಪಾಯಿಗಳನ್ನು ಕೊಡುವುದಕ್ಕಾಗುವುದಿಲ್ಲ. ಏಕೆಂದರೆ, ಇದಲ್ಲಿ ಓಡಾಟ ಮಾಡಬೇಕಾದರೆ, ಯಾವುದು ಇದೆ ಅದನ್ನು ನೋಡಿ ಕೊಡುವುದಕ್ಕೆ ಅವಕಾಶ ಇರಬೇಕು. ಹಣ ಬಿಡುಗಡೆಯಾದಾಗಲೇ ಕಾಮಗಾರಿಯನ್ನು ತೆಗೆದುಕೊಳ್ಳಲಿ. ಆದರೆ ಎರಡು ಕೋಟಿ ರೂಪಾಯಿಗಳ ಒಟ್ಟಿಗೆ ಪ್ರಾಪೋಸಲ್ ಬರುವ ವರೆಗೆ ಹಾಗೆಯೇ

ಇಟ್ಟುಕೊಂಡರೆ ಅಗುವುದಿಲ್ಲ. ಇದು ಎಲ್ಲಾ ಸದಸ್ಯರ ಸಮಸ್ಯೆ ಎಂದು ನಾನು ಅಂದುಕೊಂಡಿದ್ದೇನೆ. ದಯವಿಟ್ಟು ನಾವು ಕೊಟ್ಟಷ್ಟಕ್ಕೆ ಮಾಡಲಿ. ಹಣವನ್ನು ಬಿಡುಗಡೆ ಮಾಡಿದಾಗ ಕಾಮಗಾರಿಯನ್ನು ತೆಗೆದುಕೊಳ್ಳಲಿ. ಎರಡನೆಯದಾಗಿ ಎರಡು ಮನೆಯ ಅನ್ನ ಸರಿ 300 ಶಾಸಕರುಗಳದು ಒಟ್ಟು 600 ಕೋಟಿ ರೂಪಾಯಿಗಳಿದೆ. ಅದೇ ಪಿಆರ್‌ಡಿ ಯಲ್ಲಿ ಅದೇ ನಿರ್ಮಿತಿ ಕೇಂದ್ರ, ಅದೇ ಲ್ಯಾಂಡ್ ಆರ್ಮಿಯಲ್ಲಿ ಮಾಡುವುದರ ಬದಲು ಇದಕ್ಕೆ ಒಂದು ಪ್ರತ್ಯೇಕವಾದಂತಹ ವಿಂಗ್ ಮಾಡಿ, ಮೇಲ್ಗಡೆಯಿಂದ ಕೆಳಗಡೆಯ ವರೆಗೆ ಏನಾದರು ಮಾಡುವುದಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ದಯವಿಟ್ಟು ಮಾನ್ಯ ಸಭಾನಾಯಕರು ಯೋಚನೆ ಮಾಡಬೇಕು.

ಶ್ರೀ ಬಿ.ರಾಮಕೃಷ್ಣ:- ಮಾನ್ಯ ಸಭಾಪತಿಯವರೆ, ವಿ.ಎಸ್.ಉಗ್ರಪ್ಪನವರ ಅಧಿಕಾರಿಗಳಿಗೆ ಕಮೀಷನ್ ಕೊಡಬೇಕೆಂದು ಹೇಳಿದರು.

ಸಭಾಪತಿಯವರು:- ಅದರ ಬಗ್ಗೆ ಈಗ ಬೇಡ, ದಯಮಾಡಿ ಕುಳಿತುಕೊಳ್ಳಿ ಇದರ ಬಗ್ಗೆ ಒಳ್ಳೆಯ ಚರ್ಚೆಯಾಗಿದೆ. ಇಲ್ಲಿಗೆ ಸಾಕು.

| ಶ್ರೀಮತಿ ಮೋಟಮ್ಮ:- ಮಾನ್ಯ ಸಭಾಪತಿಯವರೆ, ನಾವು ಯಾವ ಸಂಸ್ಥೆಗೆ ಹಣವನ್ನು ಕೊಡುತ್ತೇವೆ ಅವರೇ ಕೆಲಸವನ್ನು ಮಾಡಲಿ.

ಡಾ: ವೀರಣ್ಣ ಮತ್ತಿಕಟ್ಟಿ:- ಮಾನ್ಯ ಸಭಾಪತಿಯವರೆ, ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾವು ಯಾವ ಸಂಸ್ಥೆಗೆ ನಮ್ಮ ಪ್ರದೇಶಾಭಿವೃದ್ಧಿಗೆ ಹಣವನ್ನು ಕೊಡುತ್ತೇವೆ. ಸಂಸ್ಥೆಯವರೆ ಮಾಡಿದರೆ ಅವರು ಚೆನ್ನಾಗಿ ಕಟ್ಟುತ್ತಾರೆ. ನಿರ್ಮಿತಿ ಕೇಂದ್ರಕ್ಕೆ ಕಾಮಗಾರಿಯನ್ನು ಕೊಡುವುದರ ಬದಲು ಅವರಿಗೆ ನೇರವಾಗಿ ಕೊಡಿ.

ಸಭಾಪತಿಯವರು:- ಅದರ ಬಗ್ಗೆ ಮಾನ್ಯ ಸಭಾನಾಯಕರು ನೋಡುತ್ತಾರೆ.

ಶ್ರೀಮತಿ ತಾರಾಅನೂರಾಧ(ನಾಮನಿರ್ದೇಶನ ಹೊಂದಿದವರು):- ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ನಮಗೆ ವಂದಿಸುತ್ತಾ, ಸಣ್ಣ ಮಕ್ಕಳನ್ನು ಬಳಸಿ ನಗರದಲ್ಲಿ ಭಿಕ್ಷಾಟನೆ ರಾಜ್ಯದಲ್ಲಿ ಭಿಕ್ಷಾಟನೆ ಕಾಯ್ದೆ ಜಾರಿಯಲ್ಲಿದ್ದರೂ ಕೂಡ ಹೆಚ್ಚುಅಲ್ಲದೇ ನಗರದ ಬೀದಿ • ಬೀದಿಯಲ್ಲಿ ಮಹಿಳೆಯರು ಸಣ್ಣ ಮಕ್ಕಳನ್ನು ವಾಮ ಮಾರ್ಗದಿಂದ ಕರೆ ತಂದು, ಈ ಮಹಾನಗರಗಳ ಸಿಗ್ನಲ್‌ಗಳಲ್ಲಿ ಭಿಕ್ಷಾಟನೆ ಹಾಗು ಇತ್ತೀಚಿನ ದಿನಗಳಲ್ಲಿ ಸಣ್ಣ ಸಣ್ಣ ಸಾಮಾಗ್ರಿಗಳನ್ನು ಮಾರಾಟ ಮಾಡುತ್ತಿರುವುದು, ಭೀಕ್ಷಾಟನೆ ಮಾಡುವಂತಹ ಸಮಯದಲ್ಲಿ ಸಣ್ಣ ಮಕ್ಕಳಿಗೆ ಮತ್ತು ಬರುವ ಔಷಧಿಯನ್ನು ಕೊಟ್ಟು ಭೀಕ್ಷಾಟನೆ ಮಾಡುತ್ತಿರುವುದು ನಿರಂತರವಾಗಿ ನಡೆಯುತ್ತಿದೆ. ಆದರೂ ಟ್ರಾಫಿಕ್ ಪೊಲೀಸ್‌ನವರಾಗಲಿ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಾಗಲಿ ಇದನ್ನು ತಡೆಗಟ್ಟಲು ವಿಫಲರಾಗಿದ್ದಾರೆ. ಇದೇ ಸದನದಲ್ಲಿ ಹಲವಾರು ಬಾರಿ ಸರ್ಕಾರವನ್ನು ಪ್ರಶ್ನೆಗಳ ಮುಖಾಂತರ ನಾನೇ ಗಮನ ಸೆಳೆದಿದ್ದೇನೆ. ಮಂತ್ರಿವರ್ಯರು ಇದನ್ನು ತಡೆಯುವ ಹಾಗು ನಿಯಂತ್ರಿಸುವ ಭರವಸೆಯನ್ನು ನೀಡಿದ್ದಾರೆ. ಇದಕ್ಕೆ ಈ ಸದನದಲ್ಲಿ ದಾಖಲೆ ಇದೆ. ನೆನ್ನೆಯ ದಿವಸ ಈ-ಟಿವಿ ಯಲ್ಲಿ ಇದರ ವಿಚಾರವಾಗಿ ಕಿಂಗ್ ಆಪರೇಷನ್ ಮುಖಾಂತರ ಆಘಾತಕಾರಿ ವಿಚಾರಗಳನ್ನು ಸೆರೆ ಹಿಡಿದು ಇಡೀ ದಿನ ಪ್ರಚಾರ ಮಾಡಿದ್ದಾರೆ. ಈ ಪ್ರಸಾರದಲ್ಲಿ ವಾಸ್ತವ ಇದೆ. ಮಂತ್ರಿವರ್ಯರು ಸದನದಲ್ಲಿ ನೀಡಿದ್ದಂತಹ ಭರವಸೆಗಳು ಈಡೇರಿಲ್ಲ. ಸರ್ಕಾರಿ ಅಧಿಕಾರಿಗಳು ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ. ಬೆಂಗಳೂರು ನಗರದಲ್ಲಿ ಇಂತಹ ಸಣ್ಣ ಮಕ್ಕಳ, ಮಹಿಳೆಯರ ಭವಿಷ್ಯ ಭವಿಷ್ಯ ನಾಶವಾಗುತ್ತಿದೆ. ಸಮಾಜ ಘಾತುಕರ ಅಟ್ಟಹಾಸ ಮುಂದುವರೆದಿದೆ. ಅಂತಾರಾಷ್ಟ್ರೀಯ ಖ್ಯಾತಿಯನ್ನು ಪಡೆದಿರುವಂತಹ ಬೆಂಗಳೂರು ನಗರವು, ಭೀಕ್ಷಕರ, ಸ್ವರ್ಗವಾಗಿ ರೂಪಗೊಂಡಿದೆ. ದೇಶದಲ್ಲಿ ಮತ್ತು ವಿಶ್ವದಲ್ಲಿ ಬೆಂಗಳೂರಿನ ಮಾನ ಹರಾಜು ಹಾಕುತ್ತಿದೆ. ತಕ್ಷಣ ಸರ್ಕಾರ ನೀಡಿರುವ ಭರವಸೆಗಳಂತೆ ಭಿಕ್ಷಾಟನೆಯಲ್ಲಿ ತೊಡಗಿರುವ ಸಣ್ಣ ಮಕ್ಕಳ ಮತ್ತು ಮಹಿಳೆಯರನ್ನು ರಕ್ಷಿಸಬೇಕೆಂದು ಆಗ್ರಹಪೂರ್ವಕವಾಗಿ ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಎಸ್.ಆರ್.ಪಾಟೀಲ್:- ಮಾನ್ಯ ಸಭಾಪತಿಯವರೆ, ಇದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಿಗೆ ಬರುವುದಿಲ್ಲ. ತಪ್ಪಾಗಿ ಅವರಿಗೆ ಹೋಗಿದೆ. ಇದು ಗೃಹ ಸಚಿವರಿಗೆ ಸಂಬಂಧಪಟ್ಟಂತಹ ವಿಷಯವಾಗಿರುವುದರಿಂದ ಮಾನ್ಯ ಗೃಹ ಸಚಿವರ ಗಮನಕ್ಕೆ ತೆಗೆದುಕೊಂಡು ಅವರ ಮುಖಾಂತರ ಉತ್ತರವನ್ನು ಕೊಡಿಸಿಕೊಡುತ್ತೇನೆ. ಮತ್ತು ಶ್ರೀಮತಿ ತಾರಾಅನೂರಾಧರವರು ಹೇಳಿದಂತೆ ಏನು ಭರವಸೆಗಳಿದೆ ಅದನ್ನು ಈಡೇರಿಸುವುದಕ್ಕೆ ಸರ್ಕಾರದ ಪರವಾಗಿ ಉತ್ತರವನ್ನು ಕೊಡಿಸುತ್ತೇನೆ. "ಸಾರ್ವಜನಿಕರು ದೂರು ನೀಡಲು ರಚಿಸಲಾಗಿರುವ ಪೊಲೀಸ್ ದೂರು ಪ್ರಾಧಿಕಾರಿಗಳ ಬಗ್ಗೆ ಜನಜಾಗೃತಿ ಮೂಡಿಸುವ ಕುರಿತು"

ಶ್ರೀ ಟಿ.ಎ.ಶರವಣ**(**ವಿಧಾನಸಭಾ ಕ್ಷೇತ್ರ:- ಸನ್ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದಿಸುತ್ತಾ, ರಾಜ್ಯದಲ್ಲಿ ಪೊಲೀಸರ ದುರ್ನಡತೆ ಹಾಗೂ ಅಕ್ರಮಗಳ ಬಗ್ಗೆ ಸಾರ್ವಜನಿಕರು ದೂರು ನೀಡಲು ರಚಿಸಲಾಗಿರುವ ಪೊಲೀಸ್ ದೂರು ಪ್ರಾಧಿಕಾರಗಳ ಬಗ್ಗೆ ಜನಜಾಗೃತಿ ಮೂಡಿಸದಿರುವ ಬಗ್ಗೆ ಉಚ್ಛ ನ್ಯಾಯಾಲಯವು ತೀವ್ರ ಅಸಮಧಾನವನ್ನು ವ್ಯಕ್ತಪಡಿಸಿದ್ದು, ಈ ವಿಚಾರ ವಿಜಯ ಕರ್ನಾಟಕ ಹಾಗೂ ಇನ್ನಿತರ ದಿನಪತ್ರಿಕೆಗಳಲ್ಲಿ ವರದಿಯಾಗಿದೆ. ಸರ್ಕಾರ ಸಾರ್ವಜನಿಕರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಇಂತಹ ಸಂಸ್ಥೆಗಳನ್ನು ತೆರೆದು ಸಾರ್ವಜನಿಕರಿಗೆ ಉಪಯೋಗಕ್ಕೆ ಬಾರದಂತಾಗಿದೆ ಎಂದು ಹಾಗೂ ಈ ಪೊಲೀಸ್ ದೂರು ಪ್ರಾಧಿಕಾರಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವಂತಹ ಕೆಲಸವನ್ನು ಮಾಡಬೇಕಾಗಿದೆ. ಕಾನೂನು ಸೇವಾ ಪ್ರಾಧಿಕಾರ, ಮಾನವಹಕ್ಕುಗಳ ಆಯೋಗ ಹಾಗೂ ಪೊಲೀಸ್ ಇಲಾಖೆಯ ಪ್ರಾಧಿಕಾರಗಳ ಬಗ್ಗೆ ವೆಬ್‌ಸೈಟ್ ಗಳಲ್ಲಿ ವಿವರವಾಗಿ ಮಾಹಿತಿ ನೀಡಿ ಅದನ್ನು ಜನರಿಗೆ ಮುಟ್ಟಿಸುವಂತಹ ರೀತಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಜನಪ್ರಿಯಗೊಳಿಸಬೇಕೆಂದು ನಾನು ಸರ್ಕಾರವನ್ನು ಈ ಮೂಲಕ ಆಗ್ರಹಿಸುತ್ತಿದ್ದೇನೆ.

ಶ್ರೀ ಎಸ್.ಆರ್.ಪಾಟೀಲ್ **(**ಸಭಾನಾಯಕರು): ಸನ್ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಮಾನ್ಯ ಗೃಹ ಸಚಿವರಿಂದ ನಂತರ ಉತ್ತರವನ್ನು ಒದಗಿಸಲಾಗುತ್ತದೆ.

ಸಭಾಪತಿಯವರು:- ಈ ಹಿಂದೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸರ್ಕಾರದಿಂದ ಉತ್ತರ ಬಂದಿರುತ್ತದೆ.

**7** ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಗಳಿಗೆ ಸಂಬಂಧೀಸಿದಂತೆ ಸಚಿವರ ಹೇಳಿಕೆಗಳು .

ಅ**)** ವಿಷಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಸರ್ಕಾರದ ಆದೇಶದನ್ವಯ ರಾಜ್ಯದ ಎಲ್ಲಾ ಹಿರಿಯ ನಾಗರಿಕರ ಟಿಕೇಟ್ ದರದಲ್ಲಿ ಶೇ.**25**ರಷ್ಟು ರಿಯಾಯಿತಿ ಸೌಲಭ್ಯವನ್ನು ಪ್ರಕಟಿಸಿದ್ದು**,** ಸದರಿ ಸೌಲಭ್ಯವನ್ನು ಪಡೆಯುವಲ್ಲಿ ಎದುರಾಗುತ್ತಿರುವ ಸಮಸ್ಯೆಗಳ ಬಗ್ಗೆ**.**

ಶ್ರೀ ಎಸ್.ಆರ್.ಪಾಟೀಲ್ **(**ಸಭಾನಾಯಕರು):- ಸನ್ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರಗೌಡ ಅವರು ದಿನಾಂಕ:10/07/2015ರಂದು ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಸಾರಿಗೆ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಸದನದಲ್ಲಿ ಮಂಡಿಸಲಾದ ಸರ್ಕಾರದ ಲಿಖಿತ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

ಶ್ರೀ ರಾಮಚಂದ್ರ ಗೌಡ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ಮಂಡಿಸಿರುವ ಶೂನ್ಯ ವೇಳೆಯ ಸೂಚನೆಗೆ ಸಾರಿಗೆ ಸಚಿವರ ಹೇಳಿಕೆ:

66 ಕ.ರಾ.ರ.ಸಾ.ನಿಗಮವು ಸರ್ಕಾರದ ಆದೇಶದನ್ವಯ 60 ವರ್ಷ ಮತ್ತು ಅದಕ್ಕೂ ಹೆಚ್ಚು ವಯಸ್ಸಿನ ಕರ್ನಾಟಕ ರಾಜ್ಯದ ಎಲ್ಲಾ ಹಿರಿಯ ನಾಗರಿಕರಿಗೆ ಟಿಕೇಟ್ ದರದಲ್ಲಿ ಶೇ.25ರಷ್ಟು ರಿಯಾಯಿತಿಯನ್ನು ಒದಗಿಸಿರುತ್ತದೆ. ಸದರಿ ರಿಯಾಯಿತಿ ಸೌಲಭ್ಯವನ್ನು ಕೆಳಕಂಡ ಯಾವುದಾದರೂ ಒಂದು ಗುರುತಿನ ಚೀಟಿಯನ್ನು ತೋರಿಸಿ ಪಡೆಯಬಹುದಾಗಿದೆ.

1) ನಿಗಮದ ವತಿಯಿಂದ ವಿತರಿಸುವ ಗುರುತಿನ ಚೀಟಿ,

2) ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ನಿರ್ದೇಶನಾಲಯದವರು ವಿತರಿಸಿರುವ ಭಾವಚಿತ್ರವಿರುವ ಗುರುತಿನ ಚೀಟಿ,

3) ಮೂಲ ಚಾಲನಾ ಪರವಾನಗಿ (ಡ್ರೈವಿಂಗ್ ಲೈಸೆನ್ಸ್).

4) ಕರ್ನಾಟಕ ರಾಜ್ಯ ಚುನಾವಣಾ ಆಯೋಗದವರು ವಿತರಿಸಿರುವ ಮೂಲ ಗುರುತಿನ ಚೀಟಿ. 5) ಕೇಂದ್ರ ಸರ್ಕಾರವು ವಿತರಿಸುವ ಮೂಲ ಪಾಸ್‌ಪೋರ್ಟ್,

ಈ ವಿಷಯದಲ್ಲಿ ಈಗಾಗಲೇ ನಿಗಮದ ಸಂಬಂಧಪಟ್ಟ ಎಲ್ಲಾ ಅಧಿಕಾರಿ/ಸಿಬ್ಬಂದಿಗಳು ಹಾಗೂ ಎಲ್ಲಾ ಚಾಲನಾ ಸಿಬ್ಬಂದಿಗಳಿಗೂ ಮೇಲೆ ತಿಳಿಸಿರುವ ಗುರುತಿನ ಚೀಟಿಗಳಲ್ಲಿ ಯಾವುದಾರೂ ಒಂದು ಗುರುತಿನ ಚೀಟಿ ತೋರಿಸಿದರೂ ಮಾನ್ಯ ಮಾಡುವಂತೆ ಸೂಚನೆ ನೀಡಲಾಗಿರುತ್ತದೆ. ಆದಾಗ್ಯೂ, ನಿಗದಿಪಡಿಸಿದ ದಾಖಲಾತಿಗಳನ್ನು ತೋರಿಸಿದರೂ ಸಹ ಮಾನ್ಯ ಮಾಡದಿರುವಂತಹ ಚಾಲನಾ ಸಿಬ್ಬಂದಿಗಳ ಬಗ್ಗೆ ನಿಖರ ಮಾಹಿತಿ ಅಂದರೆ ಬಸ್ಸಿನ ಸಂಖ್ಯೆ, ಪ್ರಯಾಣಿಸಿದ ದಿನಾಂಕ/ವೇಳೆ, ಮುಂತಾದ ಮಾಹಿತಿಯೊಂದಿಗೆ ನಿಗಮಕ್ಕೆ ದೂರು ನೀಡಿದ ಪ್ರಕರಣಗಳಲ್ಲಿ ಸದರಿ ಚಾಲನಾ ಸಿಬ್ಬಂದಿಗಳ ವಿರುದ್ಧ ಕಟ್ಟುನಿಟ್ಟಿನ ಶಿಸ್ತಿನ ಕ್ರಮ ಕೈಗೊಳ್ಳುವಂತೆ ನಿಗಮದ ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ಈಗಾಗಲೇ ನೀಡಲಾಗಿರುತ್ತದೆ.

**ಆ)** ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಇತರೆ ಹಾಲಿನ ಕೇಂದ್ರಗಳನ್ನು ಸ್ಥಾಪಿಸಲು ಅವಕಾಶ ನೀಡುವ ಮುನ್ನ ಕೆಎಂಎಫ್/ಬಿಮೂಲ್/ಬೆಮೂಲ್ ನಂದಿನಿ ಹಾಲಿನ ಮಳಿಗೆಗಳನ್ನು ಸ್ಥಾಪಿಸಲು ಆದ್ಯತೆ ಮೇರೆಗೆ ಅವಕಾಶ ನೀಡುವ ಬಗ್ಗೆ**.**

ಶ್ರೀ ಎಸ್.ಆರ್.ಪಾಟೀಲ್ **(**ಸಭಾನಾಯಕರು**)**:- ಸನ್ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಅರುಣ ಶಹಾಪೂರ ಅವರು ದಿನಾಂಕ:10/07/2015ರಂದು ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಸಾರಿಗೆ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಸದನದಲ್ಲಿ ಮಂಡಿಸಲಾದ ಸರ್ಕಾರದ ಲಿಖಿತ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

ಶ್ರೀ ಅರುಣ ಶಹಾಪೂರ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ಮಂಡಿಸಿರುವ ಶೂನ್ಯ ವೇಳೆಯ ಸೂಚನೆಗೆ ಸಾರಿಗೆ ಸಚಿವರ ಹೇಳಿಕೆ:

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿ ಸರಕಾರಿ | ಅರೇ ಸರಕಾರಿ ಸಂಸ್ಥೆಗಳಿಗೆ ಖಾಲಿ ಸ್ಥಳ ನೀಡಿ ಅವರ ಮಳಗೆಗಳನ್ನು ಅವರ ಮಳಿಗೆಗಳನ್ನು ಸ್ಥಾಪಿಸಲು ಅವಕಾಶ ನೀಡಲಾಗುತ್ತಿದೆ. ಅದರಂತೆ ಕೆಎಂಎಫ್/ಅಮೂಲ್/ಬೆಮೂಲ್ ಸಂಸ್ಥೆಗಳಿಗೆ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರಾಟಕ್ಕಾಗಿ ಮಳಿಗೆ ಸ್ಥಾಪಿಸಲು ಸ್ಥಳ ನೀಡಲಾಗಿದೆ. ವಾಕರಸಾಸಂಸ್ಥೆಯ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಈಗಾಗಲೇ ಕೆಎಂಎಫ್ ಹಾಲಿನ ಮಳಿಗೆಗಳನ್ನು ತೆರೆಯಲು ಅವಕಾಶ ಕಲ್ಪಿಸಲಾಗಿದೆ. ಸಂಸ್ಥೆಯ ವಾಣಿಜ್ಯ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಇತರೇ ಸರಕಾರಿ/ಅರೇ ಸರಕಾರಿ ಸಂಸ್ಥೆಗಳಿಗೆ ಸ್ಥಳ ಸ್ಥಳ ಹಂಚಿಕೆ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ. ಆದಾಗ್ಯೂ, ಈ ರೀತಿ ಇತರೆ ಹಾಲಿನ ಕೇಂದ್ರಗಳನ್ನು ಸ್ಥಾಪಿಸಲು ಅವಕಾಶ ನೀಡುವ ಮುನ್ನ ಕೆಎಂಎಫ್/ ಅಮೂಲ್/ಬೆಮೂಲ್ ನಂದಿನಿ ಹಾಲಿನ ಮಳಗೆಗಳನ್ನು ಸ್ಥಾಪಿಸಲು ಆದ್ಯತೆ ಮೇರೆಗೆ ಅವಕಾಶ ನೀಡಲು ಕ್ರಮ ಕೈಗೊಳ್ಳಲಾಗುವುದು."

**ಇ)** ವಿಷಯ ಯಶಸ್ವಿನಿ ರೈತ ಯೋಜನೆ ಬಗ್ಗೆ

ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):- ಸನ್ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪಟೇಲ್ ಶಿವರಾಂ ಅವರು ದಿನಾಂಕ:22/07/2015ರಂದು ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

`ಸದನದಲ್ಲಿ ಮಂಡಿಸಲಾದ ಸರ್ಕಾರದ ಲಿಖಿತ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

ಪ್ರಸ್ತಾಪಿಸಿರುವ ವಿಷಯ ಯಶಸ್ವಿನಿ ರೈತ ಯೋಜನೆ ಕುರಿತು ಉತ್ತರ (ಪರಿವೇಳೆಯಲ್ಲಿ

ಯಶಸ್ವಿನಿ ಸಹಕಾರ ರೈತರ ಆರೋಗ್ಯ ರಕ್ಷಣಾ ಯೋಜನೆಯನ್ನು ಜೂನ್ 1, 2003ರಲ್ಲಿ ಪ್ರಾರಂಭಿಸಲಾಗಿರುತ್ತದೆ. ಈ ಯೋಜನೆಯು ಗ್ರಾಮೀಣ ಭಾಗದ ರೈತರಿಗೆ ತುಂಬಾ ಪ್ರಯೋಜನಕಾರಿಯಾದ್ದರಿಂದ, ಈ ಯೋಜನೆಯನ್ನು ನಗರ ಪ್ರದೇಶಕ್ಕೆ ವಿಸ್ತರಿಸಲು ಬೇಡಿಕೆ ಬಂದಿದ್ದರಿಂದ, ದಿನಾಂಕ:1-06-2014 ರಿಂದ ಈ ಯೋಜನೆಯನ್ನು ನಗರ ಪ್ರದೇಶದ ಸಹಕಾರ ಸಂಘಗಳ ಸದಸ್ಯರಿಗೂ ಸಹ ವಿಸ್ತರಿಸಲಾಗಿದೆ.

ಈ ಯೋಜನೆಯಡಿ ಅನುಮೋದಿಸಲ್ಪಟ್ಟ ಒಟ್ಟು 823 ವಿವಿಧ ಶಸ್ತ್ರಚಿಕಿತ್ಸೆಗಳನ್ನು ರಾಜ್ಯಾದ್ಯಂತ ಇರುವ 572 ನೆಟ್‌ವರ್ಕ್ಸ್, ಆಸ್ಪತ್ರೆಗಳಲ್ಲಿ ಯಶಸ್ವಿನಿ ಸದಸ್ಯರಿಗೆ ಒದಗಿಸಲಾಗುವುದು. ಯಾವುದೇ ಆಸ್ಪತ್ರೆಯನ್ನು ಯಶಸ್ವಿನಿ ಯೋಜನೆಗೆ ಸೇರ್ಪಡೆ ಮಾಡುವ ಮೊದಲು ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ವೈದ್ಯಾಧಿಕಾರಿಗಳು, ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು ಮತ್ತು ಯಶಸ್ವಿನಿ ಟ್ರಸ್ಟ್‌ನ ಒಬ್ಬ ವೈದ್ಯ ಸದಸ್ಯರು ಇರುವ ಜಿಲ್ಲಾ ಮಟ್ಟದ ಸಮಿತಿಯು ನೆಟ್ ವರ್ಕ್ ಆಸ್ಪತ್ರೆಗಳ ಸೇರ್ಪಡೆಗೆ ಬಂದಿರುವ ಪ್ರಸ್ತಾವಿತ ಆಸ್ಪತ್ರೆಗಳಲ್ಲಿ ಸೌಲಭ್ಯಗಳನ್ನು ಪರಿಶೀಲಿಸಿ ಯಶಸ್ವಿನಿ ಟ್ರಸ್ಟ್‌ಗೆ ಶಿಫಾರಸ್ಸು ಮಾಡಿ ಕಳುಹಿಸುತ್ತಾರೆ.

ಯಶಸ್ವಿನಿ ಯೋಜನೆಯ ಅನುಷ್ಠಾನವನ್ನು ಪರಿಣಾಮಕಾರಿಯಾಗಿಸಲು ಹಾಗೂ ಪಾರದರ್ಶಕವಾಗಿ ನಿರ್ವಹಿಸಲು ಎಂ.ಡಿ.ಇಂಡಿಯಾ ಪ್ರೈ ಲಿ., ಎಂಬ ಸಂಸ್ಥೆಯೊಂದಿಗೆ ಹೊರಗುತ್ತಿಗೆ ಕರಾರು ಮಾಡಿಕೊಳ್ಳಲಾಗಿದೆ. ಆ ಸಂಸ್ಥೆಯವರು ಪ್ರತಿಯೊಬ್ಬ ಫಲಾನುಭವಿಗಳು ಚಿಕಿತ್ಸೆಗೆ ದಾಖಲಾದ ಹಂತದಿಂದ, ಫಲಾನುಭವಿಗಳಿಗೆ ನೀಡಲಾಗುವ ಚಿಕಿತ್ಸೆಯ ಅಗತ್ಯತೆ ಮತ್ತು ಬಿಲ್ ಕ್ಲೇಮುಗಳಲ್ಲಿ ನಮೂದಿಸಿರುವ ದರಗಳನ್ನು ಪರಿಶೀಲಿಸುವ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ಆಸ್ಪತ್ರೆಗಳು ಯಶಸ್ವಿನಿ ಯೋಜನೆಯಡಿ ಫಲಾನುಭವಿಗಳಿಗೆ ಶಸ್ತ್ರಚಿಕಿತ್ಸೆ ನಡೆಸಬೇಕಾದರೆ ಮ್ಯಾನೇಜ್‌ಮೆಂಟ್ ಸಪೋರ್ಟ್ ಏಜೆನ್ಸಿಯಿಂದ (ಎಂ.ಡಿ.ಇಂಡಿಯಾ ಪ್ರೈ ಲಿ., ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಪೂರ್ವಾನುಮತಿ ಕೊಡುವ ಸಮಯದಲ್ಲಿ ಯಶಸ್ವಿನಿ ಫಲಾನುಭವಿಯ ಮತ್ತು ಚಿಕಿತ್ಸೆಯ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿಯೇ ಪೂರ್ವಾನುಮತಿ ನೀಡುತ್ತಾರೆ. ಪೂರ್ವಾನುಮತಿಯಲ್ಲಿ ಶಸ್ತ್ರಚಿಕಿತ್ಸೆಯ ವಿವರ ಮತ್ತು ಆಸ್ಪತ್ರೆಗೆ ಆ ಶಸ್ತ್ರಚಿಕಿತ್ಸೆಗೆ ಪಾವತಿಸುವ ದರದ ವಿವರ ಇರುತ್ತದೆ. ಆಸ್ಪತ್ರೆಗಳು ಶಸ್ತ್ರಚಿಕಿತ್ಸೆ ನಡೆಸಿದ ನಂತರ ಹಣ ಪಾವತಿಗಾಗಿ ಆಸ್ಪತ್ರೆಗಳು ಎಲ್ಲಾ ದಾಖಲೆಗಳೊಂದಿಗೆ ಬಿಲ್ಲುಗಳನ್ನು

ಮ್ಯಾನೇಜ್‌ಮೆಂಟ್ ಸಪೋರ್ಟ್ ಸರ್ವಿಸ್ ಏಜೆನ್ಸಿಗೆ ಸಲ್ಲಿಸಬೇಕು, ಅಲ್ಲಿ ಯಶಸ್ವಿನಿ ಟ್ರಸ್ಟಿನಿಂದ ನೇಮಕ ಮಾಡಿದ ಚಾರ್ಟೆಡ್ ಅಕೌಟೆಂಟ್‌ರಿಂದ ಕ್ಲೇಮು ಬಿಲ್ಲುಗಳನ್ನು ಪ್ರೀಆಡಿಟ್ ಮಾಡಿಸಲಾಗುತ್ತದೆ. ಆನಂತರ ಆಸ್ಪತ್ರೆಗಳು ಸಲ್ಲಿಸಿರುವ ಕ್ಲೇಮುಗಳು ಸರಿಯಾಗಿವೆ ಎಂಬುದನ್ನು ದೃಢಪಡಿಸಿಕೊಂಡ ನಂತರ ಉಪ ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆದ ನಂತರ ಹಣ ಪಾವತಿಸಲಾಗುವುದು.

ಯಶಸ್ವಿನಿ ಯೋಜನೆಯಲ್ಲಿ ನೊಂದಾಯಿತರಾದ ರೈತ ಸದಸ್ಯರಿಗೆ ಯಾವುದೇ ನೆಟ್‌ವರ್ಕ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡುವಲ್ಲಿ ದೂರುಗಳು ಬಂದಲ್ಲಿ, ಅಂತಹ ದೂರುಗಳನ್ನು ಯಶಸ್ವಿನಿ ಟ್ರಸ್ಟ್ ಸಭೆಯಲ್ಲಿ ಪರಿಶೀಲಿಸಿ, ಅಂತಹ ಆಸ್ಪತ್ರೆಗಳ ವಿರುದ್ಧಕ್ರಮ ಕೈಗೊಳ್ಳಲಾಗುತ್ತಿದೆ. ತಪ್ಪಿತಸ್ಥರೆಂದು ಕಂಡು ಬಂದ ಆಸ್ಪತ್ರೆಗಳಿಗೆ ರೂ.25,000-00ರವರೆಗಿನ ದಂಡ ವಿಧಿಸಲಾಗುತ್ತದೆ. ಈವರೆಗೆ ಒಟ್ಟು 62 ಆಸ್ಪತ್ರೆಗಳ ಮೇಲೆ ದಂಡ ವಿಧಿಸುವ ಕ್ರಮ ಜರುಗಿಸಲಾಗಿರುತ್ತದೆ. ಮೂರು ಆಸ್ಪತ್ರೆಗಳನ್ನು ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳ ಪಟ್ಟಿಯಿಂದ ನೋಂದಣಿಯನ್ನು ರದ್ದುಪಡಿಸಲಾಗಿರುತ್ತದೆ.

ಯಶಸ್ವಿನಿ ಯೋಜನೆಯಲ್ಲಿ ಸದಸ್ಯರ ಅನುಕೂಲಕ್ಕಾಗಿ, ಪ್ರತಿ ಜಿಲ್ಲೆಯಲ್ಲಿ ದಿನದ 24 ಗಂಟೆಗಳ ಸೇವೆಯಿರುವ ಸೇವಾ ಕೇಂದ್ರ ಇದ್ದು, ಈ ಸೌಲಭ್ಯ ಮತ್ತು ಸೇವಾ ಕೇಂದ್ರದ ದೂರವಾಣಿ ಸಂಖ್ಯೆಗಳನ್ನು ಎಲ್ಲಾ ಯಶಸ್ವಿನಿ ನೆಟ್‌ವರ್ಕ ಆಸ್ಪತ್ರೆಗಳಲ್ಲಿ, ಸಹಕಾರ ಸಂಘಗಳಲ್ಲಿ ಮತ್ತು ಸಹಕಾರ ಇಲಾಖೆಯ ಕಾರ್ಯಾಲಯದಲ್ಲಿ ಪ್ರಕಟಿಸಲಾಗಿರುತ್ತದೆ ಹಾಗೂ ಈ ಯೋಜನೆಯಲ್ಲಿ ಸದಸ್ಯರಾಗುವ ಪ್ರತಿ ಸದಸ್ಯರಿಗೂ ನೀಡಲಾಗಿರುವ ಬೋಚರ್‌ನಲ್ಲಿ ಈ ಮಾಹಿತಿಯನ್ನು ನೀಡಲಾಗಿದೆ. ಚಿಕಿತ್ಸೆ ನೀಡುವಲ್ಲಿ ದೂರುಗಳು ಬಂದಲ್ಲಿ, ಕೂಡಲೇ ಈ ಕೇಂದ್ರಗಳ ಮೂಲಕ ಯಶಸ್ವಿನಿ ಯೋಜನೆಯ ಸದಸ್ಯ ರೈತರಿಗೆ ನೆರವು ನೀಡಲಾಗುತ್ತದೆ. ಯಶಸ್ವಿನಿ ಯೋಜನೆ ಕುರಿತಂತೆ ಯಾವುದೇ ನಿರ್ದಿಷ್ಟ ದೂರುಗಳು ಬಂದಲ್ಲಿ, ಸಹಕಾರ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಎಂ.ಡಿ.ಇಂಡಿಯಾ ಪ್ರೈ ಲಿ., ಈ ಸಂಸ್ಥೆಯಿಂದ ನೇಮಕಗೊಂಡ ಜಿಲ್ಲಾ ಸಮನ್ವಯಾಧಿಕಾರಿಗಳು ಆಸ್ಪತ್ರೆಗಳಿಗೆ ಭೇಟಿ ನೀಡಿ, ದೂರಗಳ ಬಗ್ಗೆ ಅಗತ್ಯ ಕ್ರಮವಹಿಸುತ್ತಾರೆ.?

**ಈ) ರಾಜ್ಯದ ರಾಜಧಾನಿಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಯ ಸರ್ಕಾರಿ ದೊಡ್ಡಾಸ್ಪತ್ರೆಗಳೇ ಔಷಧಿ ಕೊರತೆ/ಜೀವ ರಕ್ಷಕ ಔಷಧಿಗಳ ಕೊರತೆಗೆ ತುತ್ತಾಗಿರುವ ಬಗ್ಗೆ.**

**ಶ್ರೀಎಸ್.ಆರ್ .ಪಾಟೀಲ್ (ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ,

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ವೈ.ಎ.ನಾರಾಯಣಸ್ವಾಮಿಯವರು ದಿನಾಂಕ:23/07/2015ರಂದು ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಸದನದಲ್ಲಿ ಮಂಡಿಸಲಾದ ಸರ್ಕಾರದ ಲಿಖಿತ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

ಸಭಾಪತಿಯವರು:- ಮಂಡಿಸಲಾಯಿತು.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ವೈ.ಎ.ನಾರಾಯಣಸ್ವಾಮಿ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸರ್ಕಾರದ ಉತ್ತರ

ಈ ದಿನ ಅಂದರೆ 23-07-2015 ರಂದು “ಕನ್ನಡ ಪ್ರಭ” ದಿನ ಪತ್ರಿಕೆಯಲ್ಲಿ “ದೊಡ್ಡಾಸ್ಪತ್ರೆಗಳಲ್ಲೇ, ಔಷಧಿ ಕೊರತೆ” ಎಂಬ ಶೀರ್ಷಿಕೆಯಡಿ ಸುದ್ದಿ ಪ್ರಕಟವಾಗಿದೆ. ಕನಿಷ್ಠ ಜೀವರಕ್ಷಕ ಔಷಧಿಗಳೂ ಇಲ್ಲ, ಎಂಬ ಆತಂಕಕಾಲಿ ಸುದ್ದಿ ಪ್ರಕಟವಾಗಿದೆ. 'ರಾಜ್ಯದ ರಾಜಧಾನಿಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಯ ಸರ್ಕಾರಿ ದೊಡ್ಡಾಸ್ಪತ್ರೆಗಳೇ ಔಷಧಿ ಕೊರತೆ / ಜೀವ ರಕ್ಷಕ ಔಷಧಿಕಗಳ ಕೊರತೆಗೆ ತುತ್ತಾಗಿವೆ.

ಮಹಾನಗರದ ಪ್ರಮುಖ ಆಸ್ಪತ್ರೆಗಳಾದ ವಿಕ್ಟೋರಿಯಾ, ಬೌಲಿಂಗ್, ವಾಣಿವಿಲಾಸ್ ಮುಂತಾದ ಆಸ್ಪತ್ರೆಗಳಲ್ಲಿ ಜೀವರಕ್ಷಕ ಹಾಗೂ ಔಷಧಿಗಳಿಲ್ಲದೆ ಇಲ್ಲಿ ವಾಸಿಸುವ ಸುಮಾರು ಒಂದು ಕೋಟಿ ಜನಸಂಖ್ಯೆ ತೊಂದರೆಗೀಡಾಗಿದ್ದಾರೆ. ಔಷಧಿ ಖರೀದಿಗೆ ವೇತನ ಹಾಗೂ ಇತರ ಕಟ್ಟಡ ನಿರ್ಮಾಣಕ್ಕೆ ಇದ್ದ ಹಣವನ್ನು ಆಸ್ಪತ್ರೆಗಳ ವೇತನ ಹಾಗೂ ಉಪಯೋಗಿಸಲಾಗಿದೆ ಎಂದು ತಿಳಿದು ಬಂದಿದೆ. ಔಷಧಿ ಖರೀದಿ ನೀಡಬೇಕಾಗಿದ್ದ ಸುಮಾರು 12 ಕೋಟಿ ರೂ.ಗಳನ್ನು ಸುಮಾರು 6. ತಿಂಗಳನಿಂದ ಇಲಿಸಿಕೊಂಡಿದ್ದು, ಔಷಧಿ ಪೂರೈಕೆದಾರರು ಈ ಆಸ್ಪತ್ರೆಗಳಿಗೆ ಔಷಧಿ ಪೂರೈಸಿಲ್ಲ ಎಂದು ತಿಳಿದು ಬಂದಿದೆ. ಬಾಕಿ ಬಾಕಿ ಬಿಡುಗಡೆ ಔಷಧಿ ಖರೀದಿಗೆ ರಾಜ್ಯ ಡ್ರಗ್ ಲಾಜಿಸ್ಟಿಕ್ ಅಂಡ್ ವೆರ್ ಹೌಸಿಂಗ್ ಸೊಸೈಟಿಯ ಮೇಲೆ ಅವಲಂಬಿತವಾಗಿದೆ ಎಂದು ತಿಳಿದುಬಂದಿದೆ. ಮಾಡದೆ, ಔಷಧಿಗಳನ್ನು ಸರಿಯಾದ ಸಮಯಕ್ಕೆ ತರಿಸಿಕೊಳ್ಳದೆ ಇರುವುದರಿಂದ ನಿತ್ಯ ನೂರಾರು ರೋಗಿಗಳು ಔಷಧಿಯಿಲ್ಲದೆ ಪರದಾಡುತ್ತಿದ್ದು, ಮತ್ತು ಕನಿಷ್ಠ ತುರ್ತು ಚಿಕಿತ್ಸೆಗೆ ಬೇಕಾದ ರಾಸಾಯನಿಕಗಳೂ ಪೂರೈಕೆಯಾಗುತ್ತಿಲ್ಲ. ಇಂತಹ ದಂಭೀರ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಈ ವಿಷಯವನ್ನು ಸರ್ಕಾರ ನಿವಾರಿಸಬೇಕಾಗಿ ತಮ್ಮ ಮೂಲಕ ಸಂಬಂಧಪಟ್ಟ ಸಚಿವರಿಗೆ ಶೂನ್ಯ ವೇಳೆಯಲ್ಲ

ಆಗ್ರಹಿಸಲು ಕೊರುತ್ತೇನೆ.

***

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಗೆ ಸೇರಿದ ಪ್ರಮುಖ ಅಸ್ಪತ್ರೆಗಳಾದ ವಿಕ್ಟೋರಿಯಾ ಆಸ್ಪತ್ರೆ, ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ವಾಣಿ ವಿಲಾಸ ಆಸ್ಪತ್ರೆ, ಜೀವರಕ್ಷಕ ಮಿಂಟೋ ಆಸ್ಪತ್ರೆ ಹಾಗೂ ಸೂಪರ್ ಸ್ಪೆಷಾಲಿಟಿ (ಪಿಎಂಎಸ್‌ಎಸ್) ಆಸ್ಪತ್ರೆಗಳಲ್ಲಿ ಸಾಮಾನ್ಯ ಔಷಧಿಗಳ ಆಸ್ಪತ್ರೆಗಳಲ್ಲಿ ಪ್ರಸ್ತುತ ಹೊರತೆ ಇರುವುದಿಲ್ಲ ಔಷಧಿಗಳನ್ನೊಳಗೊಂಡಂತೆ ದಾಸ್ತಾನು ಮೊತ್ತವನ್ನು ಆಸ್ಪತ್ರೆವಾರು ಈ ಕೆಳಕಂಡಂತೆ ನೀಡಲಾಗಿದೆ.

ಸಭಾಪತಿಯವರು:- ಈಗ ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ತಿದ್ದುಪಡಿ ವಿಧೇಯಕ, 2015ರ ಮೇಲಿನ ಪ್ರಸ್ತಾವನೆಯನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು.

8. ಶಾಸನ ರಚನೆ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ **(**ತಿದ್ದುಪಡಿ**)** ವಿಧೇಯಕ**, 2015**ರ

ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ಅಂಗೀಕೃತವಾದ ರೂಪದಲ್ಲಿರುವ 20158 ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಆರ್.ವಿ.ದೇಶಪಾಂಡೆ(ಉನ್ನತ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಇದು ಬಹಳ ಸರಳವಾದ ವಿಧೇಯಕ. ಈ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಏನಿದೆ, ಇದಕ್ಕೆ ರಾಜ್ಯದಲ್ಲಿರುವ ಇಂಜಿನಿಯರಿಂಗ್ ಕಾಲೇಜ್ ಗಳೆಲ್ಲವೂ affiliate ಆಗಿವೆ ಎನ್ನುವಂತಹ ವಿಚಾರ ತಮಗೆ ಗೊತ್ತಿದೆ. ಆ ವಿಶ್ವವಿದ್ಯಾಲಯಕ್ಕೆ ಕೆಲವು ಹೊರದೇಶಗಳಲ್ಲಿ ಸಹ ಅವರು affiliate ಮಾಡಿಕೊಂಡಿದ್ದಾರೆ. ಮುಖ್ಯವಾಗಿ ತಾಂತ್ರಿಕ ಜ್ಞಾನ ಕೊಡುವುದರಲ್ಲಿ ಮತ್ತು ತಾಂತ್ರಿಕ ಜ್ಞಾನದಲ್ಲಿ ಇನ್ನೂ ಹೆಚ್ಚು ಗುಣಮಟ್ಟದ ಶಿಕ್ಷಣ ಕೊಡುವ ದೃಷ್ಟಿಯಿಂದ ಈ ವಿಶ್ವವಿದ್ಯಾಲಯ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡುತ್ತಿದೆ. ಆದರೆ ಈ ಕಾನೂನು ಯಾವಾಗ ಜಾರಿಗೆ ಬಂತು, ಆ ಸಮಯದಲ್ಲಿ ಈ ವಿಶ್ವವಿದ್ಯಾಲಯವನ್ನು profit motive ನಿಂದ ಪ್ರಾರಂಭಿಸಿರುವುದಿಲ್ಲ ಎಂಬುದು ಕಾನೂನಿನಲ್ಲಿ ಸ್ಪಷ್ಟವಾಗಿರಲಿಲ್ಲ. ಹಾಗಾಗಿ ಸಾಧಾರಣ 2004-05ನೇ ಸಾಲಿನಿಂದ 2013-14ನೇ ಸಾಲಿನವರೆಗೆ ಈ ವಿಶ್ವವಿದ್ಯಾಲಯದಿಂದ ರೂ. 430.91 ಕೋಟಿಗಳಷ್ಟು ತೆರಿಗೆ ಕೊಡಬೇಕು, ನೀವು ಲಾಭ ಮಾಡಿದ್ದೀರಿ ಎಂದು ಆದಾಯ ತೆರಿಗೆ ಇಲಾಖೆಯಿಂದ assessment ಆಗಿ ಆರ್ಡರ್ ಕೂಡ ಬಹಳಷ್ಟು ವರ್ಷಗಳಲ್ಲಿ ಆಗಿದೆ. ಇನ್ನು ಕೆಲವು ಆಗಬೇಕು. ಪೆನಾಲ್ಟಿ ಕೂಡ ಹಾಕಿದ್ದಾರೆ. ಹಾಗಾಗಿ ಇದರ liability ರೂ. 567 ಕೋಟಿ ಇದೆ, ಈಗಾಗಲೇ ಆದಾಯ ತೆರಿಗೆ ಇಲಾಖೆಯವರು ರೂ. 440.31 ಕೋಟಿಗಳನ್ನು ರಿಕವರಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಮತ್ತು ನಮ್ಮ ಮುಖ್ಯಮಂತ್ರಿಯವರು ಕೇಂದ್ರದ ಹಣಕಾಸಿನ ಸಚಿವರಾದ ಗೌರವಾನ್ವಿತ ಅರುಣ್ ಜೇಟ್ಲಿಯವರನ್ನು ಸಹ ಭೇಟಿಯಾಗಿ ಈ ವಿಚಾರವನ್ನು ಅವರ ಗಮನಕ್ಕೂ ತಂದಿದ್ದೇವೆ. ಅವರಿಗೆ ಬಹಳ go, if it is a Government University, why are they collecting these taxes ಎನ್ನುವಂತಹ ಒಂದು ಪ್ರಶ್ನೆಯನ್ನು ಕೇಳಿದಂತಹ ಸಂದರ್ಭದಲ್ಲಿ ನಾನು ಈ ರೀತಿ ಇದೆ ಎನ್ನುವಂತಹ ವಿಚಾರಗಳನ್ನೆಲ್ಲಾ ತಿಳಿಸಿ, profit motive ಏನಿಲ್ಲ, ಪರೀಕ್ಷೆಗಳು ನಡೆಯುತ್ತಿವೆ, affiliation fee, admission fee ಇಂತಹವುಗಳಿಂದ ಈ ಹಣ ಸಂಗ್ರಹವಾಗಿದೆ, ಬೆಳಗಾವಿಯ ಮುಖ್ಯ ಕೇಂದ್ರದಲ್ಲಾಗಲಿ, ತಾವು ಸಹ ನೋಡಿದ್ದೀರಿ, ಮುದ್ದೇನಹಳ್ಳಿಯಲ್ಲಾಗಲಿ, ಬೆಂಗಳೂರಿನಲ್ಲಾಗಲಿ, ಮೈಸೂರಿನಲ್ಲಾಗಲಿ, ಕಲಬುರಗಿಯಲ್ಲಾಗಲಿ ಏನು ನಮ್ಮ ಸೆಂಟರ್ ಮತ್ತು ಸಬ್ ಸೆಂಟರ್ ಇವೆ, ಅಲ್ಲಿ ಕೂಡ ಸಾಕಷ್ಟು ಒಳ್ಳೆಯ ರೀತಿಯಿಂದ ಮೂಲಭೂತ ಸೌಕರ್ಯಗಳು

ನಿರ್ಮಾಣವಾಗಿವೆ. ಒಮ್ಮೆ ಆದಾಯ ತೆರಿಗೆ ಇಲಾಖೆಯವರ ಕಣ್ಣು ಬಿದ್ದರೆ ಬಹಳ ಕಷ್ಟ, ಆ ರೀತಿ ಕಣ್ಣು ಬಿದ್ದ ನಂತರ ಅವರು ತೆರಿಗೆಯ ರೂಪದಲ್ಲಿ ಹಣವನ್ನು ತೆಗೆದುಕೊಂಡು ಹೋಗಿದ್ದಾರೆ. ಹಾಗಾಗಿ ಆದಾಯ ತೆರಿಗೆ ಇಲಾಖೆಯವರಿಗೆ ಸಂಶಯ

ಬಂದಿದೆ, ತಾವು ಕೆಲವು ತಿದ್ದುಪಡಿಗಳನ್ನು ಮಾಡಬೇಕಾಗುತ್ತದೆ, 1961ರ ಆದಾಯ ತೆರಿಗೆ ಕಾಯಿದೆಯ Section 12(a) ಅಡಿಯಲ್ಲಿ ನಿಮಗೆ ಕೆಲವು ವಿನಾಯಿತಿಗಳು ಬೇಕಾದರೆ ಕೆಲವು ತಿದ್ದುಪಡಿಗಳನ್ನು ತರಬೇಕಾಗುತ್ತದೆ ಎಂದು ಆದಾಯ ತೆರಿಗೆ ಇಲಾಖೆಯಿಂದ ಸಲಹೆಗಳು ಬಂದಿವೆ. ಆ ಆಧಾರದ ಮೇಲೆ ಮತ್ತು ವಿಶ್ವವಿದ್ಯಾಲಯ ಸಹ ತಮ್ಮ Chartered Accountants ಅವರ ಹತ್ತಿರ consult ಮಾಡಿದ ನಂತರ ಪ್ರಮುಖವಾಗಿ ಬಹಳ ಸರಳವಾದ ತಿದ್ದುಪಡಿಗಳನ್ನು ತರಲಾಗಿದೆ. ಮೊದಲನೆಯದಾಗಿ ಸೆಕ್ಷನ್ 5ಕ್ಕೆ ಅಮೆಂಡ್‌ಮೆಂಟ್ ಮಾಡಿ ಅಲ್ಲಿ ನಾವು ಏನು ಹೇಳುತ್ತಿದ್ದೇವೆ ಎಂದರೆ, “Non profit organization' ಎಂದು ಹೇಳುತ್ತಿದ್ದೇವೆ. ನಮ್ಮ ಉದ್ದೇಶ ಏನಿದೆ, ಆ ಉದ್ದೇಶವನ್ನು ನಾವು ವಿಧಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅಲ್ಲದೆ Scheduled Banks ನಲ್ಲಿ ಹಣವನ್ನಿಡಬೇಕೆಂದು ಸಲಹೆ ಮಾಡಿದ್ದಾರೆ. ಕೆಲವು ಕಡೆ compulsory ಆಗಿ ಬ್ಯಾಂಕ್‌ನಲ್ಲಿ ಹಣವನ್ನಿಟ್ಟಿದ್ದಾರೆ, ಆದರೆ ಕಡ್ಡಾಯವಾಗಿ ಷೆಡ್ಯೂಲ್ ಬ್ಯಾಂಕ್‌ನಲ್ಲಿ ಹಣ ಇಡಬೇಕೆಂದು ತಿಳಿಸಿದ್ದಾರೆ. ಅದೇರೀತಿ ಅವರ ತಿಳುವಳಿಕೆ ಏನೆಂದರೆ, ಸಿಂಡಿಕೇಟ್ ಮೆಂಬರ್, ಅಕಾಡೆಮಿಕ್ ಕೌನ್ಸಿಲ್ ಮೆಂಬರ್ ಇವರಿಗೆಲ್ಲಾ ಡಿವಿಡೆಂಟ್ ಹಂಚುತ್ತಿದ್ದಾರೆ ಎಂಬುದು ಅವರ ಕಲ್ಪನೆ. ಆದರೆ ಯಾರಿಗೂ ಆ ರೀತಿ ಡಿವಿಡೆಂಟ್ ಆ ರೂಪದಲ್ಲಾಗಲಿ, ಬೇರೆ ರೂಪದಲ್ಲಾಗಲಿ ಹಂಚಿಕೆ ಮಾಡುತ್ತಿಲ್ಲ. ಆದರೂ ಅವರು ಆ ರೀತಿ ಕಲ್ಪನೆ ಮಾಡಿಕೊಂಡಿದ್ದಾರೆ. ಹಾಗಾಗಿ ಆ ವಿಚಾರವನ್ನು ಸಹ ಕಾನೂನಿನಲ್ಲಿ ಸ್ಪಷ್ಟವಾಗಿ ಉಲ್ಲೇಖ ಮಾಡುವಂತೆ ಸಲಹೆ ಮಾಡಿದ್ದಾರೆ. ಹಾಗಾಗಿ ಈ ವಿಶ್ವವಿದ್ಯಾಲಯಕ್ಕೆ ಲಾಭ ಮಾಡುವ ಉದ್ದೇಶವಿಲ್ಲ. ಅಲ್ಲದೆ ಯಾವುದೇ ಸಿಂಡಿಕೇಟ್ ಮೆಂಬರ್‌ಗಾಗಲಿ, ಅಕಾಡೆಮಿಕ್ ಕೌನ್ಸಿಲ್ ಮೆಂಬರ್‌ಗಾಗಲಿ ಅಲ್ಲಿಯ ಲಾಭ ಅಥವಾ ಡಿವಿಡೆಂಟ್ ಕೊಡುತ್ತಿಲ್ಲ, ಕೊಡುವುದೂ ಇಲ್ಲ ಎನ್ನುವುದನ್ನು ಸಹ ಈ ತಿದ್ದುಪಡಿಯಲ್ಲಿ ಸ್ಪಷ್ಟೀಕರಿಸಿದ್ದೇವೆ. ಮತ್ತೊಂದು ವಿಚಾರವೆಂದರೆ, ಒಂದು ವೇಳೆ ವಿಶ್ವವಿದ್ಯಾಲಯವನ್ನು ಡಿಸಾಲ್ವ್ ಮಾಡಿದರೆ, ಆ ರೀತಿಯ ಸಂದರ್ಭ ಅಸಂಭವ, ಆದರೂ ಸಹ ಒಂದು ವೇಳೆ ಆ ರೀತಿ ಡಿಸಾಲ್ವ್ ಮಾಡಿದರೆ ಆ ಹಣವನ್ನು ಏನು ಮಾಡಬೇಕು ಎನ್ನುವಂತಹ ಪ್ರಶ್ನೆ ಬರುತ್ತದೆ. ಆ ರೀತಿಯ ಸಂದರ್ಭ ಬಂದಾಗ ಇದೇ ಉದ್ದೇಶದ ಯಾವುದಾದರೂ ವಿಶ್ವವಿದ್ಯಾಲಯ ಇದ್ದರೆ ಅದನ್ನು ಆ ವಿಶ್ವವಿದ್ಯಾಲಯಕ್ಕೆ ಕೊಡುವ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ ಎಂದು ತಿಳಿಸಿದ್ದೇವೆ. ಹಾಗಾಗಿ ಇದು ಬಹಳ ಸರಳವಾದ ತಿದ್ದುಪಡಿಯಾಗಿದ್ದು, ಈಗಾಗಲೇ ಇದನ್ನು ಕೆಳಮನೆಯಲ್ಲಿ ಸರ್ವಾನುಮತದಿಂದ ಅನುಮೋದಿಸಿ ಕೊಟ್ಟಿದ್ದಾರೆ. ಒಂದು ಸಂಸ್ಥೆಯ ಹಿತದೃಷ್ಟಿಯಿಂದ, ಅಲ್ಲಿನ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ಇದು ಸರ್ಕಾರದ ವಿಶ್ವವಿದ್ಯಾಲಯವಾದ್ದರಿಂದ ಅಲ್ಲಿ ಲಾಭ ಮಾಡಿಕೊಳ್ಳುವ ಉದ್ದೇಶವಿಲ್ಲ, ಆದರೆ ಕೆಲವು ವಿಚಾರಗಳು ಈ ವಿಶ್ವವಿದ್ಯಾಲಯ ಕಾನೂನಿನಲ್ಲಿ ಇರಲಿಲ್ಲವಾದ್ದರಿಂದ ಬಹಳ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಏಕೆಂದರೆ ಇವತ್ತು ವಿಶ್ವವಿದ್ಯಾಲಯದಲ್ಲಿ mostly ಎಲ್ಲಾ ಹಣವನ್ನು ತೆಗೆದುಕೊಂಡಿದ್ದಾರೆ. 2012ನೇ ಇಸವಿಯಲ್ಲಿ ತಮ್ಮ ಸರ್ಕಾರ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಆ ವಿಶ್ವವಿದ್ಯಾಲಯದ ಮುಖಾಂತರ 4 ಇಂಜಿನಿಯರಿಂಗ್ ಕಾಲೇಜ್‌ಗಳನ್ನು ನಿರ್ಮಾಣ ಮಾಡಬೇಕೆಂದು ಏನು ತಿಳಿಸಿದ್ದಿರಿ, ಆ ಪ್ರಕಾರ ರಾಯಚೂರು, ಕಾರವಾರ, ಗಂಗಾವತಿ, ಹೂವಿನಹಡಗಲಿ ಇಲ್ಲಿ ಇಂಜಿನಿಯರಿಂಗ್ ಕಾಲೇಜ್‌ಗಳ ನಿರ್ಮಾಣಕ್ಕಾಗಿ ಸುಮಾರು 44 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಏಳೆಂಟು ತಿಂಗಳಿನಿಂದ ಹಣ ಹೋಗದೆ ಮೊನ್ನೆ ನಾನು ಪುನಃ ಸಂಪುಟ ಸಭೆಯ ಮುಂದೆ ಈ ವಿಷಯವನ್ನು ತಂದು ಇವೆಲ್ಲಾ ಸರ್ಕಾರದ ಇಂಜಿನಿಯರಿಂಗ್ ಕಾಲೇಜ್‌ಗಳಾಗಿವೆ, ಈ ರೀತಿಯ ಪರಿಸ್ಥಿತಿಗಳಿಂದಾಗಿ ಆರ್ಥಿಕವಾಗಿ ಸ್ವಲ್ಪಮಟ್ಟಿಗೆ ತೊಂದರೆ ನಿರ್ಮಾಣವಾಗಿದೆ, ಈ ಕಾಲೇಜು ಕಟ್ಟಡಗಳ ಕಾಮಗಾರಿ ಪೂರ್ಣಗೊಳ್ಳಬೇಕಾದರೆ ಸರ್ಕಾರದಿಂದ ಹಣವನ್ನು ಬಿಡುಗಡೆಗೊಳಿಸಿ ಮಾಡಬೇಕೆಂದು ತಿಳಿಸಿದ್ದು, ಆ 4 4 ಇಂಜಿನಿಯರಿಂಗ್ ಕಾಲೇಜ್‌ಗಳ ಕಟ್ಟಡ ಕಾಮಗಾರಿಗಳನ್ನು ಪೂರ್ಣಗೊಳಿಸುವಂತಹ ವ್ಯವಸ್ಥೆಯನ್ನು ಸಹ ಮಾಡಿದ್ದೇವೆ. ಹಾಗಾಗಿ ನಾವು ತಂದಿರುವಂತಹ ಈ ತಿದ್ದುಪಡಿ ವಿಧೇಯಕವನ್ನು ಸದನ ಒಪ್ಪಬೇಕೆಂದು ತಮ್ಮ ಮೂಲಕ ಗೌರವಾನ್ವಿತ ಸದಸ್ಯರಲ್ಲಿ ನಾನು ಮನವಿ ಮಾಡುತ್ತಿದ್ದೇನೆ.

ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):- ಸನ್ಮಾನ್ಯ ಸಭಾಪತಿಯವರೇ, ಒಂದು ಪ್ರಶ್ನೆ ಏನೆಂದರೆ, ಈ ತಿದ್ದುಪಡಿಗಳನ್ನು ತಂದಿರುವುದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಅನ್ವಯಿಸುವಂತೆ ಮಾತ್ರವೇ ಅಥವಾ ಬೇರೆ ವಿಶ್ವವಿದ್ಯಾಲಯದಲ್ಲಿ ಈ ಕಾನೂನು ಇದೆಯೇ? ಉದಾಹರಣೆಗೆ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಈ ರೀತಿ ಆದಾಯ ತೆರಿಗೆ

ಇಲಾಖೆಯವರು ತೆರಿಗೆಯನ್ನು ಸಂಗ್ರಹಿಸಲು ಬಂದಿದ್ದಾರೆಯೇ ಹೇಗೆ ಎನ್ನುವಂತಹ ವಿಚಾರವನ್ನು ಸಹ ಮಾನ್ಯ ಸಚಿವರು ಸ್ಪಷ್ಟೀಕರಿಸಬೇಕಾಗುತ್ತದೆ. ಸರ್ಕಾರ ತಂದಿರುವಂತಹ ಈ ಮಾಡಲೇಬೇಕಾಗಿದ್ದರಿಂದ ಈ ತಿದ್ದುಪಡಿ ವಿಧೇಯಕವನ್ನು ತಂದಿರುವುದನ್ನು ನಾವು ಸ್ವಾಗತಿಸುತ್ತೇವೆ. ತಿದ್ದುಪಡಿಗಳನ್ನು ಅನುಸೂಚಿತ ಬ್ಯಾಂಕ್‌ಗಳ ಜೊತೆಗೆ ರಾಷ್ಟ್ರೀಕೃತ ಬ್ಯಾಂಕ್ ಗಳೆಂದು ಏಕೆ ಹೇಳಬಾರದು? ಅನುಸೂಚಿತ ಬ್ಯಾಂಕ್ ಎಂದು ಕೊ-ಆಪರೇಟಿವ್ ಬ್ಯಾಂಕ್‌ನಲ್ಲಿ ಹಣವನ್ನಿಟ್ಟರೆ ನಾಳೆ ಆ ಕೊ ಆಪರೇಟಿವ್ ಬ್ಯಾಂಕ್‌ಗಳು ದಿವಾಳಿ ಎದ್ದು ಹೋದರೆ ಏನು ಮಾಡುವುದು? ಆ ರೀತಿ ನಿರ್ದಿಷ್ಟವಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳು ಅಥವಾ ಆ ರೀತಿ ಹೇಳದೆ ಹೋದರೆ ಸಮಸ್ಯೆ ಆಗಬಹುದು ಎನ್ನುವುದನ್ನು ಸರ್ಕಾರ ನೆನಪಿನಲ್ಲಿಟ್ಟುಕೊಂಡರೆ ಒಳ್ಳೆಯದೆನಿಸುತ್ತದೆ. ಇನ್ನು ಕೊನೆಯದಾಗಿ 48(ಎ) ಪ್ಯಾರಾದಲ್ಲಿ 'ವಿಶ್ವವಿದ್ಯಾಲಯವನ್ನು ವಿಸರ್ಜಿಸುವ ಅಥವಾ ಪರಿಸಮಾಪನಗೊಳಿಸುವ ಸಂದರ್ಭದಲ್ಲಿ, ವಿಸರ್ಜನೆಯ ದಿನಾಂಕದಂದು ಉಳಿಯುವ ಆಸ್ತಿಗಳನ್ನು ಯಾವುದೇ ಸನ್ನಿವೇಶಗಳಲ್ಲಿಯೂ ಕಾರ್ಯಕಾರಿ ಪರಿಷತ್ತಿನ ಅಥವಾ ಹಣಕಾಸು ಸಮಿತಿಯ ಸದಸ್ಯರಿಗೆ ಹಂಚಿಕೆ ಮಾಡತಕ್ಕದ್ದಲ್ಲ, ಆದರೆ, ಈ ವಿಶ್ವವಿದ್ಯಾಲಯಕ್ಕೆ ಸದೃಶವಾದ ಉದ್ದೇಶಗಳನ್ನು ಹೊಂದಿರುವ ಮತ್ತೊಂದು ವಿಶ್ವವಿದ್ಯಾಲಯಕ್ಕೆ ಅದನ್ನು ವರ್ಗಾಯಿಸತಕ್ಕದ್ದು' ಎಂದು ತಿಳಿಸಿದ್ದೀರಿ. ಆದರೆ ಯಾರು ಕೇಳುವುದಕ್ಕೆ ಹೋಗುತ್ತಾರೆ? ಆಸ್ತಿಯನ್ನು ವಿಸರ್ಜನೆ ಮಾಡಿದರೆ ಯಾರಾದರೂ ಸಿಂಡಿಕೇಟ್ ಮೆಂಬರ್ ಕೇಳುವುದಕ್ಕೆ ಹೋಗುತ್ತಾರೆಯೇ? ಏನೋ ಕಾನೂನಿನಲ್ಲಿ ಅದನ್ನೆಲ್ಲಾ ಹೇಳಬೇಕೆನಿಸಿಬಿಟ್ಟಿದೆ, ಹೇಳಿದ್ದೀರಿ. ಸರಿ, ನನ್ನ ಮೊದಲನೆಯ ವಿಚಾರಕ್ಕೆ ಮಾನ್ಯ ಸಚಿವರು ಸ್ಪಷ್ಟೀಕರಣವನ್ನು ನೀಡಬೇಕಾಗುತ್ತದೆ. ಆದರೆ ನನಗೆ ಇದರ ಬಗ್ಗೆ ಒಂದು clarification ಬೇಕು. ಏಕೆಂದರೆ ಇದೊಂದೇ ವಿಶ್ವವಿದ್ಯಾನಿಲಯಕ್ಕೆ ಇನ್‌ಕಂಟ್ಯಾಕ್ಸ್‌ನವರು ಬಂದಿದ್ದಾರೆಯೇ, ಅಥವಾ ಬೆಂಗಳೂರು ಯೂನಿವರ್ಸಿಟಿ, ಕರ್ನಾಟಕ ಯೂನಿವರ್ಸಿಟಿ, ಅಥವಾ ಇನ್ನಿತರ ಬೇರೆ ಬೇರೆ ಯೂನಿರ್ವಸಿಟಿಗಳಿಗೂ ಬಂದಿದ್ದಾರೆಯೇ other than

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ)**: ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಂದಿರುವಂತಹ ಈ ವಿಧೇಯಕವನ್ನು ಸ್ವಾಗತ ಮಾಡುತ್ತಾ, ಒಂದಿಷ್ಟು ಗೊಂದಲಗಳು, ಸಮಸ್ಯೆಗಳು ಏಕೆ ಸೃಷ್ಠಿಯಾದವು? ಈಗ ಮಾನ್ಯ ರಾಮಚಂದ್ರಗೌಡರು ಹೇಳಿದಂತೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿಯೂ ಕೂಡ ಮಕ್ಕಳಿಂದ fee ಮೂಲಕ ಹಣ ಸಂಗ್ರಹವಾಗುತ್ತದೆ. ಯಾವುದೇ ವಿಶ್ವವಿದ್ಯಾನಿಲಯಕ್ಕೆ ಬರದೆ ಇರುವಂತಹ ಸಮಸ್ಯೆ ಈ ವಿ.ಟಿ.ಯು. ಗೆ ಏಕೆ ಬಂತು? ತಾವು ಕೊಡುವುದಕ್ಕೆ ಸಾಧ್ಯವಿದ್ದರೆ ವಿ.ಟಿ.ಯು.ನಲ್ಲಿ ಎಷ್ಟು ಹಣ ಸಂಗ್ರಹವಾಗಿದೆ? ಮತ್ತು ಆ ಹಣವನ್ನು ಯಾವ ರೀತಿ ಇನ್‌ವೆಸ್ಟ್ ಮಾಡಿದರು? ಗೊಂದಲ ಏಕೆ ಬಂತು ಎಂದು ಹೇಳಿದರೆ, ಅಲ್ಲಿ ಸಂಗ್ರಹವಾದ ಹಣವನ್ನು ಬೇರೆ ಬೇರೆ ಬ್ಯಾಂಕುಗಳಲ್ಲಿ ಇಡುವಾಗ ಒಂದಷ್ಟು ಬೇರೆ ಸಂಗತಿಗಳು ನಡೆದಿದೆ ಎಂಬ ವಿಷಯ ಗಮನಕ್ಕೆ ಬಂದಾಗ ಬಹುಶಃ ಇನ್‌ಕಂ ಟ್ಯಾಕ್ಸ್‌ನವರು ಹೋಗಿದ್ದಾರೆ. ಅದರಿಂದಾಗಿ ಈ ಸಮಸ್ಯೆ ಉದ್ಭವವಾಗಿದೆ. ಅದರಿಂದಾಗಿ ಈ ಸಮಸ್ಯೆ ಉದ್ಭವವಾಗಿದೆ. ರಾಜ್ಯದ ಬೇರೆ ಯಾವುದೇ ಈ Fee ಸಂಗ್ರಹ ವಿಶ್ವವಿದ್ಯಾನಿಲಯಕ್ಕೆ ಈ ಸಮಸ್ಯೆ ಇಲ್ಲ. ಅಲ್ಲಿಯೂ ಸಹ fee ಸಂಗ್ರಹ ಮಾಡುತ್ತಾರೆ. ಮಾಡುವುದಕ್ಕೆ ಒಂದು ಮಾನದಂಡವಿದೆ. ಹಾಗಾಗಿ ಇಲ್ಲಿ ಉಲ್ಲೇಖ ಮಾಡಬೇಕೆ ಬೇಡವೆ ಎಂದು ತಿಳಿಯುತ್ತಿಲ್ಲ. ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದಲ್ಲಿ ಸುಮಾರು 800 ಕೋಟಿ ಹಣ ಸಂಗ್ರಹವಾಗಿದೆ. ವಿದ್ಯಾರ್ಥಿಗಳು ನಮ್ಮಿಂದ ಜಾಸ್ತಿ fee ನ್ನು ಸಂಗ್ರಹ ಮಾಡುತ್ತಿದ್ದಾರೆಂಬ ಆತಂಕವನ್ನು ವ್ಯಕ್ತ ಪಡಿಸುತ್ತಿದ್ದಾರೆ. ಯೂನಿವರ್ಸಿಟಿಯ ಖರ್ಚು ವೆಚ್ಚಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳಿಂದ ಹಣ ಸಂಗ್ರಹ ಮಾಡಿದ್ದರೆ ಈ ರೀತಿಯ ಗೊಂದಲ ಆಗುವುದಕ್ಕೆ ಸಾಧ್ಯವಿಲ್ಲ. ಒಂದು ವಿಶ್ವವಿದ್ಯಾನಿಲಯ ಹಣ ಸಂಗ್ರಹ ಮಾಡುವಂತಹ ಕೇಂದ್ರವಾಗಿ, ಆ ಹಣವನ್ನು ತಪ್ಪು ದಾರಿಯಲ್ಲಿ ಇನ್‌ವೆಸ್ಟ್ ಮಾಡುವುದಕ್ಕೆ ಹೊರಟಾಗ ಅದರಲ್ಲಿ ವಯ್ಯಕ್ತಿಕ ಹಿತಾಸಕ್ತಿ ಬಂದಾಗ ಈ ರೀತಿಯ ಗೊಂದಲ ಆಗುವುದು ಸ್ವಾಭಾವಿಕ. ಇಲ್ಲಿ ಇನ್‌ಕಂ ಟ್ಯಾಕ್ಸ್ ತಪ್ಪಿಸಿಕೊಳ್ಳಬೇಕು ಎನ್ನುವ ಕಾರಣಕ್ಕಾಗಿ ಅಮೆಂಡ್‌ಮೆಂಟ್ ತರುವುದಕ್ಕಿಂತ ಮುಖ್ಯವಾಗಿ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳಿಂದ ಎಷ್ಟು ಹಣ ಸಂಗ್ರಹ ಮಾಡಬೇಕು? Affiliation inspection ಗೆ ಹೋದಾಗ ಆ ಕಾಲೇಜಿನಿಂದ ಎಷ್ಟು ಹಣವನ್ನು ಸಂಗ್ರಹ ಮಾಡಬೇಕು? ಒಂದು ಸರ್ಕಾರಿ ಸಂಸ್ಥೆಯಾಗಿ ನಾವೂ ಕೂಡ ಖಾಸಗಿ ಸಂಸ್ಥೆಗಳ ಹಾಗೆ, ವ್ಯವಹಾರಿಕವಾಗಿ ಆಲೋಚನೆ ಮಾಡಿದರೆ ಆ ಹಣವನ್ನು ಬ್ಯಾಂಕುಗಳಲ್ಲಿ ಇನ್‌ವೆಸ್ಟ್ ಮಾಡಬೇಕು, ಯಾವ ಬ್ಯಾಂಕಿಗೆ ಕೊಡಬೇಕು, ಯಾವ ಬ್ಯಾಂಕಿಗೆ ಕೊಟ್ಟರೆ ನಮಗೆ kick back ಸಿಗುತ್ತದೆ ಎಂಬ ದೃಷ್ಟಿಯಲ್ಲಿ ಯೋಚನೆ ಮಾಡಿದಾಗ ಬಹುಶಃ ಇನ್‌ಕಂ ಟ್ಯಾಕ್ಸ್ ಡಿಪಾರ್ಟ್

ಮೆಂಟ್‌ನವರು ಅವರು ನೀವು ಕೂಡ ಒಂದು ಆರ್ಥಿಕ ಸಂಸ್ಥೆಯಾಗಿ ವ್ಯವಹಾರ ನಡೆಸುತ್ತೀರೆಂದು ಹೇಳುವುದು ಸರಿ ಇದೆ. ನನಗೆ ಆಶ್ಚರ್ಯವಾಯಿತು. ಈ ಅಮೆಂಡ್‌ಮೆಂಟ್ *ತರಬೇಕಾದರೆ ಇದನ್ನು ಸಾರ್ವಜನಿಕ ಚಟುವಟಿಕೆಗಳಿಗೆ Clause 2 (9) of the Visveswaraiah Technological University (Amendment) (Amendment) Bill, 2015 reads thus; "undertake necessary or expedient action to pursue and promote the objectives of the University as a non-profit* organization." ಎಂಥಾ ದುರಂತ ನೋಡಿ. ರಾಜ್ಯ ಸರ್ಕಾರ ನಡೆಸುವಂತಹ ವಿಶ್ವವಿದ್ಯಾನಿಲಯದಲ್ಲಿ ನಾವು ಈ ಒಂದು objective ಆಗಬೇಕಾದ ಅವಶ್ಯಕತೆ ಬಂತಲ್ಲ ಇಲ್ಲಿ. ಹಾಗಾಗಿ ಎಲ್ಲೋ ಒಂದು ಕಡೆ ವಿಶ್ವವಿದ್ಯಾನಿಲಯಗಳಲ್ಲಿ ಈ ರೀತಿ ಚಟುವಟಿಕೆ ಮಾಡುವಾಗ ನಾವು ಸಂಗ್ರಹ ಮಾಡುವಂತಹ fee ನ ಬಗ್ಗೆ ಗಮನ ಕೊಡದೆ ಇದ್ದರೆ ಈ ರೀತಿಯ ಗೊಂದಲಗಳಾಗುವುದು ಸ್ವಾಭಾವಿಕ. ಮಾನ್ಯ ರಾಮಚಂದ್ರಗೌಡರು ಹೇಳಿದಂತೆ Scheduled Banks ಎಂದು ಹೇಳಿದರೆ ಅದರಲ್ಲಿ ಖಾಸಗಿ ಬ್ಯಾಂಕುಗಳು ಸಹ ಬಂದುಬಿಡುತ್ತವೆ. ಅದರಿಂದ ಮುಂದೆ ತೊಂದರೆಗಳಾಗಬಹುದು. ದಯವಿಟು ಈ ಹಣವನ್ನು ರಾಷ್ಟ್ರೀಯ ಬ್ಯಾಂಕುಗಳಲ್ಲಿ ಮಾತ್ರ ಇಡಬೇಕು, Scheduled Banks ಗಳಿಗೆ ಖಂಡಿತ ಅವಕಾಶ ಕೊಡಬೇಡಿ ಎಂದು ಹೇಳುವುದರ ಜೊತೆಗೆ, ಕೊನೆಗೆ ಇಂಗ್ಲೀಷಿನಲ್ಲಿ ಒಂದು ಸಣ್ಣ grammatical error ಆಗಿರಬಹುದೆಂದು ಅಂದುಕೊಳ್ಳುತ್ತೇನೆ. Clause 23 Funds of the University 39 "a grant not less the net expenditure incurred in the financial year immediately proceeding ..." ಎಂದು ಆಗಿದೆ. ಅದು preceding ಎಂದು ಆಗಬೇಕೆಂದು ಕಾಣುತ್ತದೆ. ಆ ಒಂದು ಬದಲಾವಣೆಯನ್ನು ತರಬೇಕೆಂದು ಹೇಳುತ್ತಾ, ವಿಶ್ವವಿದ್ಯಾನಿಲಯಗಳಲ್ಲಿ ನಾವು ವಿದ್ಯಾರ್ಥಿಗಳಿಂದ ಮತ್ತು affiliation ನಿಂದ examination fee ನಿಂದ ಸಂಗ್ರಹ ಮಾಡುವಂತಹ ಹಣವನ್ನು ಎಲ್ಲೋ ಒಂದು ಕಡೆ ವೈಜ್ಞಾನಿಕವಾಗಿ ಫಿಕ್ಸ್ ಮಾಡಬೇಕು, ಸರ್ಕಾರ ನಡೆಸುವಂತಹ ವಿಶ್ವವಿದ್ಯಾನಿಲಯಗಳೂ ಕೂಡ ಹಣ ಸಂಗ್ರಹ ಮಾಡುವಂತಹ ಒಂದು ಸಂಸ್ಥೆಯಾಗಬಾರದು. ಯಾವಾಗ ಹಣ ಸಂಗ್ರಹವಾಗುತ್ತದೆ, ಅಲ್ಲಿ ಅವ್ಯವಹಾರ ನಡೆಯುವಂತಹ ಎಲ್ಲಾ ಸಾಧ್ಯತೆಗಳು ಇರುತ್ತದೆ. ಹಾಗಾಗಿ ಇನ್‌ಕಂ ಟ್ಯಾಕ್ಸ್‌ಗೆ ಬೇಕಾದ ಕೆಲವೇ ಕೆಲವು ಬದಲಾವಣೆ caya nen the source of revenue for the university has to be streamlined and rationalized ಎಂದು ಹೇಳುತ್ತಾ, ಇವತ್ತು ಏನು ಇನ್‌ಕಂ ಟ್ಯಾಕ್ಸ್‌ಗೆ ಹಣ ಕಟ್ಟಿದ್ದಾರೆ

ಸಭಾಪತಿಯವರು:- ಸರ್ಕಾರ ಹಣ ಕಟ್ಟಿಲ್ಲ. ಸುಮಾರು 460 ಕೋಟಿ ರೂಪಾಯಿಗಳನ್ನು ಅವರು ಜಪ್ತಿ ಮಾಡಿದ್ದಾರೆ. ಅಂದರೆ ಇನ್‌ಕಂ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನವರು ಬ್ಯಾಂಕಿನಲ್ಲಿ ಇರುವಂತಹ ಹಣವನ್ನು ಬಂದು ತೆಗೆದುಕೊಂಡು ಹೋಗಿದ್ದಾರೆ.

ಕ್ಯಾಪ್ಟನ್ ಗಣೇಶ್ ಕಾರ್ಣಿಕ್:- ಮಾನ್ಯ ಸಭಾಪತಿಯವರೇ, what is the total amount they have seized? ನಮ್ಮ ರಾಜ್ಯದ ಹಣ ಆ ರೀತಿ ಇನ್‌ಕಂ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ಗೆ ಹೋಗದ ರೀತಿಯಲ್ಲಿ ಏನು ಅಮೆಂಡ್‌ಮೆಂಟ್ ತರುತ್ತಿದ್ದೀರಿ, ಅದಕ್ಕೆ ನಾನು ಸ್ವಾಗತ ಮಾಡುತ್ತಿದ್ದೇನೆ.

ಶ್ರೀ ಅರುಣ ಶಹಾಪೂರ(ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ವಿಧೇಯಕವನ್ನು ತಂದಿದ್ದಾರೆ. ಮಾನ್ಯ ಗಣೇಶ್ ಕಾರ್ಣಿಕ್‌ರವರು ಹೇಳಿರುವಂತಹ ಅಂಶಗಳಿಗೆ ನನ್ನ ಧ್ವನಿಯನ್ನು ಸೇರಿಸುತ್ತಾ, ಇನ್‌ಕಂ ಟ್ಯಾಕ್ಸ್ ಡಿಪಾರ್ಟ್ ಮೆಂಟ್‌ನ ಗಮನ ಯಾವ ಕಡೆಗೆ ಹೋಗುತ್ತದೆ ಎಂದರೆ, ಎಲ್ಲಿ ಇನ್‌ಕಂ ಜನರೇಟ್ ಆಗುತ್ತದೆ, ಎಲ್ಲಿ ಹಣ ಕ್ರೂಢೀಕರಣ ಆಗುತ್ತದೆ ಅತ್ತ ಕಡೆಗೆ ಅವರ ಗಮನ ಹೋಗುತ್ತದೆ. ಸುಮಾರು 441 ಕೋಟಿ ರೂಪಾಯಿಗಳಷ್ಟು ಹಣವನ್ನು ಅವರು ತೆಗೆದುಕೊಂಡು ಹೋಗುವಷ್ಟರ ಮಟ್ಟಿಗೆ ಅಲ್ಲಿ ಕ್ರೂಢೀಕರಣವಾಗಿದೆ ಎನ್ನುವಂಥದ್ದನ್ನು ನಾವು ಮೊದಲು ಗಮನಿಸಬೇಕಾದಂತಹ ಅಂಶ. ಈಗ exemption ಕೇಳುತ್ತಿರುವಂಥದ್ದು ಇದೊಂದು profit motive ಅಲ್ಲ ಎನ್ನುವ ಕಾರಣಕ್ಕಾಗಿ ಮಾನ್ಯ ಸಚಿವರು ಕೇಳಿದ್ದಾರೆ. ನಾನು 2014-15ನೇ ಸಾಲಿನ ಉನ್ನತ ಶಿಕ್ಷಣದ ಬಗ್ಗೆ ಬಜೆಟ್‌ನಲ್ಲಿ ಈ ರೀತಿ ಘೋಷಣೆ ಮಾಡಿದ್ದಾರೆ. "ವಿಜ್ಞಾನ ತಂತ್ರಜ್ಞಾನ, ಇಂಜಿನಿಯರಿಂಗ್ ಗಣಿತ ಶಾಸ್ತ್ರ ಕ್ಷೇತ್ರಗಳಲ್ಲಿ ಹೊಸ ವಿಚಾರ ಪ್ರವರ್ತಕ ತಂತ್ರಜ್ಞಾನಗಳಲ್ಲಿ ಮಾನವ ಸಂಪನ್ಮೂಲಗಳ ಪ್ರಗತಿಯನ್ನು ಉತ್ತೇಜಿಸುವ ಸಲುವಾಗಿ ಎರಡು ಸಂಶೋಧನಾ ಕೇಂದ್ರಗಳನ್ನು, ಒಂದನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ನಿಧಿಯಿಂದ ಬೆಂಗಳೂರಿನಲ್ಲಿ, ಅಂದರೆ ಅಲ್ಲಿ ಎಷ್ಟು

ಹಣ ಉಳಿತಾಯವಾಗುತ್ತದೆ ಎಂದರೆ ಇನ್‌ಕಂ ಟ್ಯಾಕ್ಸ್‌ನವರು ನೋಡುವಷ್ಟರ ಮಟ್ಟಿಗೆ ಉಳಿತಾಯವಾಗುತ್ತೆ. ಕಾರಣಕ್ಕಾಗಿ ಇವತ್ತಿನ ದಿವಸ ತಾಂತ್ರಿಕ ಶಿಕ್ಷಣ ಎನ್ನುವುದು ಬಡವರ ಗಗನ ಕುಸುಮವಾಗಿದೆ ಎಂದು ಚರ್ಚೆ ನಡೆಯುವಂತಹ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದಲ್ಲಿ ಏನು fee ಸಂಗ್ರಹವಾಗುತ್ತದೆ, ಅಲ್ಲಿ ಏನು ಕಾಲೇಜುಗಳಿಂದ affiliation fee ಸಂಗ್ರಹವಾಗುತ್ತದೆ, ಇವೆಲ್ಲವೂ ಕೂಡ ವಿದ್ಯಾರ್ಥಿಗಳಿಂದಲೇ ಸಂಗ್ರಹ ಮಾಡುವಂಥದ್ದು. ಅಂದರೆ ಪ್ರತಿಯೊಬ್ಬ ವಿದ್ಯಾರ್ಥಿಗೆ ತಲಾ ಖರ್ಚು ಎಷ್ಟು ಎಂದು ತಿಳಿದುಕೊಂಡೇ ಮಾಡುವಂಥದ್ದು. ಇಷ್ಟು ದೊಡ್ಡ ಪ್ರಾಮಾಣದಲ್ಲಿ ಹಣ ಉಳಿತಾಯವಾಗುವ ಮಟ್ಟದಲ್ಲಿ ಏಕೆ ಈ ರೀತಿ ಮಾಡುತ್ತಿದೆ? ಅದನ್ನು ಮೊದಲು ಕಡಿತಗೊಳಿಸಬೇಕು. ಎರಡನೆಯ ಸಂಗತಿ ಏನೆಂದರೆ, ವಿಧೇಯಕದಲ್ಲಿ ಅಮೆಂಡ್‌ಮೆಂಟ್ ತರುತ್ತಿರುವುದು ಏಕೆಂದರೆ, 23ನೇ ಪ್ರಕರಣದ ತಿದ್ದುಪಡಿಯಲ್ಲಿ ವಿಶ್ವವಿದ್ಯಾನಿಲಯದ ನಿಧಿಯನ್ನು ಯಾವ ಯಾವ ಅನುಸೂಚಿತ ಬ್ಯಾಂಕುಗಳಲ್ಲಿ ಹೂಡತಕ್ಕದ್ದು. ಇನ್‌ವೆಸ್ಟ್ ಎಂದು ಮಾಡುತ್ತಾರೆ. ಇದು ಡೆಪಾಸಿಟ್ ಅಲ್ಲ, ಇನ್‌ವೆಸ್ಟ್‌ಮೆಂಟ್ ರೀತಿಯಲ್ಲಿ ಬರುತ್ತಿದೆ.

ಸಭಾಪತಿಯವರು:- ಅದು “ಇಡತಕ್ಕದ್ದು” ಎಂದಾಗಬೇಕು.

ಶ್ರೀ ಅರುಣ ಶಹಾಪೂರ:- ಅದು ಬದಲಾವಣೆಯಾಗಬೇಕು. ಏಕೆಂದರೆ, ನೀವು ಇನ್‌ವೆಸ್ಟ್ ಎಂದು ಹೇಳಿದಾಗ ಇಲ್ಲಿ ಹಣ ಉಳಿಸಬಹುದು, ಅದನ್ನು ತೆಗೆದುಕೊಂಡು ಹೋಗಿ ಮತ್ತೊಂದು ಕಡೆ ನೀವು ಅದನ್ನು ಹೂಡುವುದು, ಈ ಎಲ್ಲಾ ಸಂಗತಿಗಳು ಇನ್‌ಕಂ ಟ್ಯಾಕ್ಸ್‌ನಲ್ಲಿ ಬಹಳ ಸ್ಪಷ್ಟವಾಗಿದೆ. ಇದನ್ನು ಡೆಪಾಸಿಟ್ ಮಾಡುವಂಥದ್ದು ಅಥವಾ ತಾತ್ಕಾಲಿಕವಾಗಿ ಇಡುವಂಥದ್ದು ಎಂದು ಮಾಡಬೇಕು. ಬಜೆಟ್‌ನಲ್ಲಿ ಎರಡಕ್ಕೂ ವಿಶ್ವವಿದ್ಯಾನಿಲಯದಿಂದ ಹಣ ತೆಗೆದುಕೊಂಡರೆ ಈ ವಿಶ್ವವಿದ್ಯಾನಿಲಯವನ್ನು ಪ್ರಾಫಿಟ್ ಆಗಿ ನಡೆಸುತ್ತಿರುವುದರಿಂದ ಅವರು ಸ್ವಾಭಾವಿಕವಾಗಿ ಹೇಳುತ್ತಿದ್ದಾರೆ. ಈ ಅಮೆಂಡ್ ಮೆಂಟ್ ಮಾಡುವುದಕ್ಕೂ ಮೊದಲು ಈಗೇನು fee ಸಂಗ್ರಹ ಮಾಡುತ್ತಿದ್ದೇವೆ ಅದನ್ನು ಕಡಿಮೆ ಮಾಡುತ್ತೇವೆ, ಅಲ್ಲಿ ಇವತ್ತಿನ ದಿವಸ ಏನು ಹೆಚ್ಚಾಗಿ residual ಹಣ ಉಳಿತಾಯವಾಗುತ್ತಿದೆ ಅದನ್ನು ತಡೆಯುತ್ತೇವೆಂದು ಅನೌನ್ಸ್‌ಮೆಂಟ್ ಮಾಡಿ ಈ ವಿಧೇಯಕಕ್ಕೆ ತಿದ್ದುಪಡಿ ತರಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ತಿಳಿಸಲಿಚ್ಛಿಸುತ್ತೇನೆ.

**ಪ್ರೊ.ಪಿ.ವಿ.ಕೃಷ್ಣಭಟ್ಟ(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಅರುಣ ಶಹಾಪೂರ ಅವರು ಏನು ಮಾತನಾಡಿದ್ದಾರೆ ಆ ವಿಷಯವನ್ನೇ ನಾನು ಹೇಳಬೇಕೆಂದು ಇದ್ದೆ. ಸರ್ಕಾರದ ಕಡೆಯಿಂದ ನಡೆಯುತ್ತಿರುವಂತಹ ವಿಶ್ವವಿದ್ಯಾನಿಲಯಲದಲ್ಲಿ ಖಾಸಗಿ ವಿಶ್ವವಿದ್ಯಾನಿಲಯಗಳ ಜೊತೆ ಸ್ಪರ್ಧೆ ಮಾಡುವಂತೆ ಈ ರೀತಿ ಲಾಭಗಳಿಕೆಯ ಒಂದು ಪ್ರಯತ್ನ ಆ ರೀತಿಯ ವ್ಯವಹಾರ ಏಕೆ ನಡೆಯುತ್ತಿದೆ ಎನ್ನುವುದು ತಿಳಿಸಬೇಕು. ಇಷ್ಟೊಂದು ಹಣ ಅಂದರೆ ಸುಮಾರು 450 ಕೋಟಿ ರೂಪಾಯಿ accumulate ಆಗಿದ್ದಾದರು ಹೇಗೆ? ಮತ್ತು ಸರ್ಕಾರದ ವತಿಯಿಂದ ನಡೆಯುತ್ತಿರುವಂತಹ ವಿಶ್ವವಿದ್ಯಾನಿಲಯ ಅದರ ವೆಚ್ಚಕ್ಕೆ ಅನುಗುಣವಾಗಿ fee ನ್ನು ಸಂಗ್ರಹ ಮಾಡುವುದೇ ಆದರೆ ಈ ರೀತಿ ಇಷ್ಟು ದೊಡ್ಡ ಮೊತ್ತದ ಹಣ ಸಂಗ್ರಹವಾಗುವುದಕ್ಕೆ ಸಾಧ್ಯವೇ ಇಲ್ಲ. ಎರಡನೆಯದಾಗಿ, ಈ ವಿಶ್ವವಿದ್ಯಾನಿಲಯದ ಬೇರೆ ವಿಶ್ವವಿದ್ಯಾನಿಲಯದ ಬೇರೆ ಬೇರೆ ಖರ್ಚುಗಳಿಗೋಸ್ಕರ ಸುಮಾರು ನಾಲ್ಕೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆಯೆಂದು ಇದರ ಬಗ್ಗೆ ಇತ್ತೀಚೆಗೆ ಸಾಕಷ್ಟು ಪತ್ರಿಕಾ ವರದಿಗಳು ಬಂದಿವೆ.

ಸಭಾಪತಿಯವರು:- ಈಗ ಆ ವಿಷಯದ ಬಗ್ಗೆ ಚರ್ಚೆ ಬೇಡ.

ಪ್ರೊ.ಪಿ.ವಿ.ಕೃಷ್ಣಭಟ್ಟ:- ಮಾನ್ಯ ಸಭಾಪತಿಯವರೇ, ವಿಶ್ವವಿದ್ಯಾನಿಲಯದಲ್ಲಿ ಬರತಕ್ಕಂತಹ ಹಣದ ಒಂದು ನಿರ್ವಹಣೆ ಅಥವಾ ವಿದ್ಯಾರ್ಥಿಗಳಿಂದ ಎಷ್ಟು ಹಣವನ್ನು ಸಂಗ್ರಹ ಮಾಡಬೇಕು ಎನ್ನುವ ವಿಷಯದಲ್ಲಿ ಒಂದು ವೈಜ್ಞಾನಿಕವಾಗಿರುವಂತಹ ನ್ಯಾಯಬದ್ಧವಾಗಿರುವಂತಹ ಒಂದು ವ್ಯವಸ್ಥೆಯ ಅಗತ್ಯವಿದೆ. ಈ ನಿಟ್ಟಿನಲ್ಲಿ ಯಾವ ಬ್ಯಾಂಕಿನಲ್ಲಿ ಡೆಪಾಸಿಟ್ ಇಡಬೇಕು ಎನ್ನುವುದರ ಬಗ್ಗೆ ಈಗಾಗಲೇ ಸಲಹೆಗಳು ಬಂದಿವೆ, ತಾವೂ ಕೂಡ ಇದರ ಬಗ್ಗೆ ಯೋಚನೆ ಮಾಡಿದ್ದೀರಿ. ಆದರೆ ಉಳಿದಂತೆ ವಿದ್ಯಾರ್ಥಿಗಳಿಂದ ಈ ರೀತಿಯ ಶೋಷಣೆ ಏನು ನಡೆಯುತ್ತಿದೆ, ಮತ್ತು ವಿಶ್ವವಿದ್ಯಾನಿಲಯದ ಹಣಕಾಸಿನ ವ್ಯವಹಾರಗಳ ವಿಷಯದಲ್ಲಿ ನಡೆಯುತ್ತಿರುವಂತಹ ಲೋಪದೋಷಗಳ ವಿಷಯದಲ್ಲಿ ಸರ್ಕಾರ ಗಮನಹರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಗೋ ಮಧುಸೂಧನ್ (ಮುಂದು): ನಮ್ಮ ವಿಶ್ವವಿದ್ಯಾನಿಲಯಕ್ಕೆ ಇರುವ ಆದಾಯ ಯಾವುದೆಂದರೆ ಸರ್ಕಾರ ಕೊಡುವಂತಹ ಅನುದಾನ, ಯುಜಿಸಿ ಕೊಡುವಂತಹ ಗ್ರಾಂಟ್ ಮತ್ತು ಬೇರೆ ಬೇರೆ ಸಂದರ್ಭಗಳಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹ ಮಾಡತಕ್ಕ ಶುಲ್ಕ. Laboratory ಯ ಹೆಸರಿನಲ್ಲಿ ಮಾಡುವಂತಹ ಶುಲ್ಕ, ಅದು Library ಯ ಹೆಸರಿನಲ್ಲಿ ಮಾಡುವಂತಹ ಶುಲ್ಕ, tuition fee ಗಾಗಿ ಮಾಡುವಂತಹ ಶುಲ್ಕ, ಆನಂತರದಲ್ಲಿ ಪರೀಕ್ಷೆಗಾಗಿ ಮಾಡುವಂತಹ ಶುಲ್ಕ. ಆಮೇಲೆ institution ಗಳಿಂದ ತಾವು Affiliation Fee ತೆಗೆದುಕೊಳ್ಳುತ್ತೀರಿ, ಈ ರೀತಿಯ ಆನೇಕ ಆದಾಯಗಳು ವಿಶ್ವವಿದ್ಯಾನಿಲಯಕ್ಕೆ ಇದೆ. ಹಾಗೆಯೇ ನಮ್ಮ ವಿಶ್ವವಿದ್ಯಾನಿಲಯಕ್ಕೆ ಖರ್ಚು ಸಹ ಇದೆ. ನಾವು ಇದನ್ನು ಬಹಳ ಪ್ರಮಾಣಿಕವಾಗಿ ಇದು non-profitable institution ಎನ್ನುವ ಹಾಗೆ ಇದ್ದಲ್ಲಿ ನಮ್ಮ ಆದಾಯ ಮತ್ತು ವೆಚ್ಚ ಎರಡು ಸಮ ಸಮ ಇರಬೇಕಾಗಿತ್ತು. ಅದಾಗಿಲ್ಲ, ಎಲ್ಲೋ ಒಂದು ಕಡೆ ಆದಾಯ ತೆರಿಗೆಯನ್ನು ಹಾಕಿದ್ದಾರೆ ಎನ್ನುವ ಭಯ ಬಂದು ಬಿಟ್ಟಿದೆ, ಎಂದರೆ ಇಲ್ಲಿ ಆದಾಯ ಜನರೇಟ್ ಆಗಿದೆ ಎನ್ನುವುದು ಅದಕ್ಕಿಂತ ಹೆಚ್ಚಿಗೆ ಹೆದರಿಸುವ ವಿಚಾರ ಆಗಬೇಕಾಗಿತ್ತು. ಅಂದರೆ ಯಾರಿಂದ ವಿಶ್ವವಿದ್ಯಾನಿಲಯಗಳು ಹೆಚ್ಚಿನ ಹಣವನ್ನು ವಸೂಲಿ ಮಾಡಿದ್ದಾರೆ. ನಮ್ಮ ರಾಜ್ಯದ ವಿದ್ಯಾರ್ಥಿಗಳಿಂದ ಹೆಚ್ಚಿನ ಹಣವನ್ನು ಸಂಗ್ರಹ ಮಾಡಲಾಗಿದೆ. ವಿದ್ಯಾರ್ಥಿಗಳಿಂದ ಹೆಚ್ಚಿನ ಹಣ ಸಂಗ್ರಹ ಮಾಡಿರುವುದು ಶೋಷಣೆ ಆಗಲಿಲ್ಲವೇ? Have we not exploited the students? ನಾವು ಮಾಡಿದರೆ exploitation ಅಲ್ಲ, ನಾವು ಹೆಚ್ಚಿನ ಹಣ ಸಂಗ್ರಹ ಮಾಡಿದರೆ extortion ಅಲ್ಲ, ಒಬ್ಬ ಖಾಸಗಿ ವ್ಯಕ್ತಿ ಈ ಕೆಲಸ ಮಾಡಿದರೆ Indian Penal Code ಸೆಕ್ಷನ್‌ಗಳೆಲ್ಲ ಇದಕ್ಕೆ ಬಂದುಬಿಡುತ್ತದೆ. ಯೂನಿವರ್ಸಿಟಿ ಮಾಡಿದರೆ ಏನು ಆಗುವುದಿಲ್ಲ. We have exploited. ವಿಶ್ವವಿದ್ಯಾನಿಲಯಗಳಲ್ಲಿ ಈಗ ಪೇಮೆಂಟ್ ಕೋಟ ಕೂಡ ಪ್ರಾರಂಭ ಆಗಿದೆ. ಒಂದು ಮೆರಿಟ್ ಕೋಟ ಆದರೆ ಮತ್ತೊಂದು ಮೆರಿಟ್ ಕೋಟ, ಯಾರಿಗಾದರೂ ಮೆರಿಟ್‌ನಲ್ಲಿ M.Sc.,ಗೆ ಸೀಟು ಸಿಗದಿದ್ದಲ್ಲಿ ಪೇಮೆಂಟ್ ಕೋಟದಲ್ಲಿ ಪಡೆಯಬಹುದು, ಮೆರಿಟ್ ಕೋಟದಲ್ಲಿ 12,000 ರೂಪಾಯಿ ಇರುವಂತಹದ್ದು ಪೇಮೆಂಟ್ ಕೋಟದಲ್ಲಿ 40,000 ರೂಪಾಯಿ, ಕೊಡಿ ಪರವಾಗಿಲ್ಲ ಸೀಟು ಕೊಡುತ್ತೇವೆ ಎನ್ನುತ್ತಾರೆ. ಹಾಗಾದಲ್ಲಿ ಖಾಸಗಿ ಸಂಸ್ಥೆಗಳಿಗೂ ಸರ್ಕಾರಿ ಸಂಸ್ಥೆಗಳಿಗೂ ಏನು ವ್ಯತ್ಯಾಸ ಇದೆ? ಈ ರೀತಿಯಲ್ಲಿ ವಿಶ್ವವಿದ್ಯಾನಿಲಯ ಹಣವನ್ನು ಹೆಚ್ಚಿಗೆ ಸಂಗ್ರಹ ಮಾಡುತ್ತಿದೆ. ಇದೆಲ್ಲಕ್ಕಿಂತ ಹೆಚ್ಚಾಗಿ ವಿಟಿಯು ನಲ್ಲಿ ಆದರೆ er ಎಲ್ಲಾ ಇದಕ್ಕಿಂತ ಹೆಚ್ಚಿನ ಹಣವನ್ನು ಅವರು ಜಪ್ತಿ ಮಾಡಬೇಕಾಗಿತ್ತು. ಇವರು ಬಹಳ ಕಷ್ಟಪಟ್ಟು ತುಂಬಾ ಹಣವನ್ನು ಖರ್ಚು ಮಾಡಿದ್ದಾರೆ. ಹೇಗೆ ಖರ್ಚು ಮಾಡಿದ್ದಾರೆ ಎಂದರೆ ಸೆಂಟರ್‌ಗಳಿಗೆ, ಮೈಸೂರಿನಲ್ಲಿ ಒಂದು ಸೆಂಟರ್ ಇದೆ. ಇವರದ್ದು 3-4 ಸ್ಟಡಿ ಮುದ್ದೇನಹಳ್ಳಿ, ಗುಲ್ಬರ್ಗಾ ಹಾಗೆಯೇ ಕೆಲವು ಕಡೆಗಳಲ್ಲಿ ವಿಟಿಯು ಸೆಂಟರ್‌ಗಳಿವೆ. ಆ ಕಟ್ಟಡಗಳನ್ನು ನೋಡಬೇಕು. They have been lavishly spent. ಆದಾಯ ತೆರಿಗೆಯವರು ಬರುತ್ತಾರೆಂದೆ lavish ಆಗಿ spend ಮಾಡಿ ಕಟ್ಟಡಗಳನ್ನು ಕಟ್ಟಿದ್ದಾರೆ. ಬಹುಶಃ ನನಗನಿಸುವುದು ಏನೆಂದರೆ ಅದರಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆದಿದೆ. ಇಷ್ಟೆಲ್ಲ ಹಣವನ್ನು lavish ಆಗಿ spend ಮಾಡಿ, ಸಾಧ್ಯವಿಲ್ಲದೆ ಅಷ್ಟು ಹಣ ಉಳಿದಿದೆ. ಇದು ವಿಟಿಯು ಒಂದರ ಕಥೆಯಲ್ಲ.

ಸಭಾಪತಿಯವರು:- ಈಗ ಆ ವಿಚಾರ ಬೇಡ. ಇನ್ನು ಖರ್ಚು ಮಾಡಲು ತಿದ್ದುಪಡಿಯ ಬಗ್ಗೆ ಮಾತ್ರ ಮಾತನಾಡಿ,

ಶ್ರೀ ಗೊಮಧುಸೂದನ್ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಗಳೇ, ಇದನ್ನು ಮುಂದೆ Karnataka State Open University (KSOU) ಗೂ ಸಹ ತರಬೇಕಾಗುತ್ತದೆ. ಎಕೆಂದರೆ KSOU ನಲ್ಲಿಯೂ ಸಹ ಹಣವಿದೆ. ನಮ್ಮ ಸಿಂಡಿಕೇಟ್ ಮೆಂಬರ್ ಇಲ್ಲಿದಿದ್ದರೆ ಗೊತ್ತಾಗುತ್ತಿತ್ತು. ನಮ್ಮಲ್ಲಿಯೂ ಸಹ ಚರ್ಚೆ ಆಗಿದೆ, ಇಲ್ಲಿಯೂ ಸಹ ಬಹಳ ದೊಡ್ಡ ಪ್ರಮಾಣದಲ್ಲಿ ಹಣವಿದೆ. KSOU ನಲ್ಲಿ 900 ಕೋಟಿ ರೂಪಾಯಿಗಳಿದೆ. ಈ ಹಣವನ್ನು ಹೇಗೆ ಖರ್ಚು ಮಾಡುತ್ತಿದ್ದಾರೆಂದರೆ ಮನಸ್ಸಿಗೆ ಬಂದ ಹಾಗೆ Lessons print ಮಾಡಲಾಗುತ್ತಿದೆ. ಯಾರಾರಿಗೆ ಗುತ್ತಿಗೆ ನೀಡಲಾಗುತ್ತಿದೆ, ಅನಾವಶ್ಯಕವಾಗಿ ಕಟ್ಟಡಗಳನ್ನು ಕಟ್ಟಲಾಗುತ್ತಿದೆ. ಇದೆಲ್ಲವುದರ ವಿರುದ್ಧ ನಮ್ಮ ಸನ್ಮಾನ್ಯ ರಾಜ್ಯಪಾಲರು ಕುಲಪತಿಗಳ ವಿರುದ್ಧ ತನಿಖೆಯನ್ನು ಮಾಡಿಸುತ್ತಿದ್ದಾರೆ. ಅದರಲ್ಲಿ regarding their expenditure ವಿಟಿಯು ವಿರುದ್ಧ ಕೂಡ ತನಿಖೆ ನಡೆಯುತ್ತಿದೆ. ಇದರ ನಡುವೆ ಆದಾಯ ತೆರಿಗೆಯವರು ಕೂಡ ಬಂದುಬಿಟ್ಟಿದ್ದಾರೆ ಎನ್ನುವ ಕಾರಣಕ್ಕಾಗಿ ಆ ಹಣವನ್ನು ಉಳಿಸುವುದಾದರೆ ಅದಕ್ಕಿಂತ ಆದಾಯ ತೆರಿಗೆಯವರು ಆ ಹಣವನ್ನು ತೆಗೆದುಕೊಂಡು ಹೋಗುವುದೇ ಸದ್ವಿನಿಯೋಗ ಎಂದು ನನಗೆ ಅನಿಸುವ ಮಟ್ಟಿಗೆ

ಜಿಗುಪ್ಸೆ ಉಂಟಾಗಿದೆ. ಇದರಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ಈ ಭ್ರಷ್ಟಾಚಾರದ ಬಗ್ಗೆ ಅನೇಕ ಆರೋಪಗಳನ್ನು ಮಾಡಿದ್ದೇವೆ. ಆದರೆ ರಾಜ್ಯ ಸರ್ಕಾರ ಅವರ ವಿರುದ್ಧ ಯಾವುದೇ ರೀತಿಯ ತನಿಖೆಯನ್ನು ಮಾಡಿರುವುದಿಲ್ಲ. ಇದು 460 ಕೋಟಿಗಳಿಗೆ ನಿಲ್ಲುವುದಿಲ್ಲ. ಅದಿನ್ನೂ ಕನಿಷ್ಟ 200-300

**ವೈ.ಎ.ನಾರಾಯಣಸ್ವಾಮಿ(ಮುಂದು:** ಇದರಿಂದ ಇವತ್ತು ನಮ್ಮ ಮುಂದೆ ತಾವು ಈ ಬಿಲ್ ತಂದು, ಇದನ್ನು ಪಾಸ್ ಮಾಡಿಕೊಡಿ ಎಂದು ಕೇಳಿಕೊಂಡು, ನಾವು ಪಾಸ್ ಮಾಡಿ ಅವರಿಗೆ ಖುಷಿ ಪಡಿಸಲು ನಮಗ್ಯಾರಿಗೂ ಇಷ್ಟ ಇಲ್ಲ. ನಿಮ್ಮ ಕಾಳಜಿಯನ್ನು ನಾವು ಒಪ್ಪಿಕೊಳ್ಳುತ್ತೇವೆ, ನಿಮ್ಮ ಕೈಗೆ ಶಕ್ತಿಯನ್ನು ಕೊಡುತ್ತೇವೆ. ಯನಿಟಿಯನ್ನು ಗಟ್ಟಿಗೊಳಿಸಿ. ಆದರೆ ಅಲ್ಲಿ ಇರುವ ಹುಳುಕನ್ನು ಹೊರಗೆ ಹಾಕಿ, ತಾವು ತನಿಖೆ ಮಾಡಿಸಬೇಕಾಗುತ್ತದೆ. ವರ್ಷಗಳ ಹಿಂದೆ State Accounts Department ನಿಂದ ಹೋದ Finance Officer ರನ್ನು ಏಕೆ ತೆಗೆದುಕೊಳ್ಳಲಿಲ್ಲ ಅವರು? ಏನು ಕಾರಣ ಅದಕ್ಕೆ? ಯಾರಿಗೆ ಲೆಕ್ಕ ಬರುವುದಿಲ್ಲ ಅವರಿಂದ ಇಷ್ಟಬಂದ ಹಾಗೆ ಲೆಕ್ಕ ಬರೆಯಿಸಿ ಕೊಳ್ಳಲು ಇಟ್ಟುಕೊಂಡಿದ್ದಾರೆಯೇ? ವಿಸಿ ಯವರಿಗೆ ಅಷ್ಟೊಂದು ಪರಮಾಧಿಕೆರವಿದೆಯೇ? ಅದನ್ನು ಕಟ್ ಮಾಡಿ ವಿಧೇಯಕವನ್ನು ತನ್ನಿ ನೀವು, ಆಗ ನಾವು ಖುಷಿ ಪಡುತ್ತೇವೆ. ಮಾನ್ಯ ರಾಮಚಂದ್ರಗೌಡರು ಮಾತನಾಡುತ್ತಾ ಹೇಳಿದರು, Income Tax ಸಂಬಂಧವಾಗಿ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಇದೆ ರೀತಿ ಆಗಿದೆಯಾ ಅಥವಾ ಈ ಒಂದು ವಿಶ್ವವಿದ್ಯಾನಿಲಯದಲ್ಲಿ ಈ ರೀತಿ ಆಗಿದೆಯೇ ಎಂದು ಕೇಳಿದರು. ಅದರ ಬಗ್ಗೆ ಮಂತ್ರಿಗಳು ಯೋಚನೆ ಮಾಡಬೇಕು. ಎರಡನೆಯದಾಗಿ, ಶೆಡ್ಯೂಲ್ಡ್ ಬ್ಯಾಂಕ್ ಬಗ್ಗೆ ಕೈಮುಗಿದು ಕೇಳುತ್ತೇನೆ, ಮುಂದೆ ಅವರು ಪಿ.ಎಲ್.ಡಿ., ಬ್ಯಾಂಕ್‌ಗೆ ಹೋಗಿಬಿಡುತ್ತಾರೆ. ಆದ್ದರಿಂದ ದಯಮಾಡಿ Nationalised Bank ಗೆ ಮಾತ್ರ invest ಮಾಡುವಂತಿರಬೇಕು. ವಿಸಿ ಯವರ ಅಧಿಕಾರಗಳು ಏನು ಎನ್ನುವ ಬಗ್ಗೆ ಒಂದು ಬಿಲ್ ತನ್ನಿ. ನಮಗೆ ವಿವರವಾಗಿ ಗೊತ್ತಾಗಲಿ, ಏಕೆಂದರೆ ನಾವು ಈ ಸದನ ಎಲ್ಲದಕ್ಕಿಂತ ದೊಡ್ಡದು ಅಂದುಕೊಂಡಿದ್ದೇವೆ. ಆದರೆ ವಿಸಿ ಯವರು ಈ ಸದನಕ್ಕಿಂತ ನಾವೇ ಹೆಚ್ಚು ಅಂದುಕೊಂಡಿದ್ದಾರೆ. ಆದ್ದರಿಂದ ಅದರ ಬಗ್ಗೆ ಚರ್ಚೆಯಾಗಲಿ ಎಂದು ಕೇಳಿಕೊಳ್ಳುತ್ತೇನೆ. ಈ ಬಿಲ್‌ನ್ನು ಪಾಸ್ ಮಾಡಿಕೊಡುತ್ತೇವೆ. ಆದರೆ ಅವರಿಗೆ ಕಡಿವಾಣ ಹಾಕಲು ಬೇರೆ ಬಿಲ್‌ನ್ನು ತರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಗಳೆ, Section 12A of the Income Tax Act ಕೆಳಗೆ ಅದರ benefits ಗಳನ್ನು ಪಡೆಯಲು ಈ ತಿದ್ದುಪಡಿಯನ್ನು ತಂದಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಸ್ವಾಗತ ಮಾಡುವುದರ ಜೊತೆಗೆ ನನಗೆ ಎರಡು-ಮೂರು ಸಂಶಯಗಳು ಇವೆ. ಅವುಗಳನ್ನು ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ. ವಿಶ್ವವಿದ್ಯಾನಿಲಯಕ್ಕೆ ADD FOR Wood that fund has to be utilized for the development of the University. ಆದರೆ ಇಲ್ಲಿ ವಿಧೇಯಕದಲ್ಲಿ ಸೂಚಿಸಿರುವಂತೆ ಸೆಕ್ಷನ್ 23 ನಲ್ಲಿ "(5) the funds of the University shall be invested in any of the Scheduled Banks" wo ಹೇಳಲಾಗಿದೆ. ದಿನ ಖರ್ಚು ಮಾಡಲಿಲ್ಲ wow *ಅಕಸ್ಮಾತ್ ಎಲ್ಲಿಯಾದರು ಒಂದಿಷ್ಟು ಮಾಡಲಿಲ್ಲ ಎಂದರೆ ಡಿಪಾಸಿಟ್ me, 'invest' o 28. Why this word 'invested' has ಎರಡನೆಯದಾಗಿ, ಈಗಾಗಲೇ ಮಾತನಾಡುತ್ತಾ ಶೆಡ್ಯೂಲ್ಡ್ been used, ನನಗೆ ಅರ್ಥವಾಗುತ್ತಿಲ್ಲ ಬ್ಯಾಂಕ್ ಬಗ್ಗೆ ಅನೇಕ ಸ್ನೇಹಿತರು ಹೇಳಿದ್ದಾರೆ. Instead of Scheduled Banks, Nationalised Banks ಎಂದು ಮಾಡುವುದು ಸೂಕ್ತ. ಇದು ಆದ ಮೇಲೆ ವಿಧೇಯಕದಲ್ಲಿ ಸೂಚಿಸಿರುವಂತೆ ಸೆಕ್ಷನ್ 23(6)8 "The funds and income of the University shall be solely utilized for ಎಂದು ಹೇಳಲಾಗಿದೆ. ಇಲ್ಲಿ achievement of the objects of the University "shall" od it is mandatory. it is mandatory. Be ಆದ ಮೇಲೆ ಇನ್ನೊಂದು

sentence add ಮಾಡಿದ್ದಾರೆ ಏಕೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಏಕೆ ambiguity ಮಾಡುತ್ತಿದ್ದಾರೆ? ಏನು add ಮಾಡಿದ್ದಾರೆ ಎಂದರೆ, .....and no payment shall be made to the trustee or members by way of rofit, interest or dividends etc." Why this sentence is needed here? the entire amount has to be utilized for the was University, which is made mandatory in the first part of the sentence. Si ಮಾಡುತ್ತಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಈ ambiguity ಎಲ್ಲೊ ambiguity create ಒಂದು ಕಡೆ We too have some interest ಎಂದು ಹೇಳಿ ನಾಳೆ ಯಾರಾದರು ಕೋರ್ಟ್‌ನಲ್ಲಿ ಪ್ರಶ್ನೆ ಮಾಡಿದರೆ? ಇದು ಒಂದು ಅಂಶ.

Similarly, under Section 48A ಅಲ್ಲಿಯು ಸಹ “In the event of dissolution or winding up of the University, the assets remaining as on the date of dissolution shall be transferred to another University, whose objects are similar to that of this University" odgo ಸಾಕಾಗಿತ್ತು. ಆದರೆ ಇಲ್ಲಿ ಏನು ಮಾಡಿದ್ದಾರೆ ಎಂದರೆ, ಮಧ್ಯೆ ಒಂದು ಸೇರಿಸಿದ್ದಾರೆ. It reads as on the date of dissolution shall under no circumstances be distributed among the members of the Executive Council or Finance Committee...... ಎಂದು ಹೇಳಿದ್ದಾರೆ. ಮೇಲೆನೆ “shall” ಎಂದು ಮಾಡಿರುವುದರಿಂದ as a Lawyer | am well aware that it is a mandatory provision. on 'shall be transferred to another University' ಎಂದರೆ ಮುಗಿದು ಹೋಗುತ್ತಿತ್ತು. ಇಲ್ಲಿಯು ಸಹ ambiguity create ಮಾಡಿರುವುದು ಬಹುಶ: judicial scrutiny ಇದಕ್ಕೆ ಸಾಕಾಷ್ಟು ವ್ಯಾಖ್ಯಾನಗಳು ಬರಲು ಅವಕಾಶವಿದೆ. ನಾನು ಇಷ್ಟು ಮಾತ್ರ ಹೇಳುತ್ತೇನೆ, ಈಗ ತೆಗೆಯುತ್ತೀರಾ, ನಂತರ ತೆಗೆಯುತ್ತೀರಾ ಈ ambiguities ಏನು ಇದು 2 'investment' other members have no interest' ಎಂದು ನೀವು ಹೇಳಿ ಅದನ್ನು ಮೇಲೆ ಎಳೆದುಕೊಳ್ಳುವ ಅಗತ್ಯವಿಲ್ಲ. ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕೆಂದು ಹೇಳಬಯಸುತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳ, ಸದನದ ಗೌರವಾನ್ವಿತ ಸದಸ್ಯರಾದ ಮಾನ್ಯ ರಾಮಚಂದ್ರಗೌಡರು, ಗಣೇಶ್ ಕಾರ್ಣೀಕರವರು, ಅರುಣ ಶಹಾಪೂರವರು, ಮಧುಸೂದನ್‌ರವರು, ಉಗ್ರಪ್ಪನವರು, ಪ್ರೊಕೃಷ್ಣಭಟ್ಟರವರು, ನಾರಾಯಣಸ್ವಾಮಿಯವರು ವಿಧೇಯಕದ ಮೇಲೆ ಮಾತನಾಡಿ ಕೆಲವು ಟೀಕೆ-ಟಿಪ್ಪಣೆಗಳನ್ನು ಮಾಡಿದ್ದಾರೆ, ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಮುಖ್ಯವಾಗಿ ಒಂದು ಸಂಸ್ಥೆ ಬೆಳೆಯಬೇಕಾದರೆ, ಆ ಸಂಸ್ಥೆಯಲ್ಲಿ ಒಳ್ಳೆಯ ಮೂಲಭೂತ ಸೌಲಭ್ಯಗಳು ಬೇಕು, ಒಳ್ಳೆಯ ಮಾನವ ಸಂಪನ್ಮೂಲ ಬೇಕು, ಸಂಶೋಧನೆಯಾಗಬೇಕು, innovations ಆಗಬೇಕು. ನೀವು ಹೇಳಿದ ಹಾಗೆ, ಒಂದು ಕಡೆ 'Receipt' ಒಂದು ಕಡೆ 'Expenditure' ಮಾಡಿ ಪ್ರತಿ ವರ್ಷ ಜೀರೊ ಮಾಡಿದರೆ ವಿಶ್ವವಿದ್ಯಾನಿಲಯ ಬೆಳೆಯಬೇಕು (ಹೇಗೆ? ಸರ್ಕಾರದ ಮೇಲೆ ಅವಲಂಬಿತವಾಗಬೇಕು. ಆದರೆ ಇದು ಸಾಧ್ಯವಿಲ್ಲ. ಏಕೆಂದರೆ ಸರ್ಕಾರ ಸಹ ಕೆಲವು ಸಮಯ ಸಹಾಯ ಮಾಡಬಹುದು. ಆ ಸಮಯವಾದ ಮೇಲೆ ಪ್ರತಿಯೊಂದು ವಿಶ್ವವಿದ್ಯಾನಿಲಯ ತನ್ನ ಕಾಲ ಮೇಲೆ ತಾನು ನಿಲ್ಲಬೇಕಾಗುತ್ತದೆ. ಅದರಲ್ಲಿ ಮುಖ್ಯವಾಗಿ ವಿಶ್ವೇಶ್ವರಯ್ಯ ವಿಶ್ವವಿದ್ಯಾನಿಲಯದ ಬಗ್ಗೆ ಕೆಲವು ಟೀಕೆ-ಟಿಪ್ಪಣಿಗಳನ್ನು ನೀವು ಮಾಡಿದ್ದೀರಿ. ರಾಜ್ಯಪಾಲರು ಇದರ ಬಗ್ಗೆ ತನಿಖೆ ಮಾಡಿಸುತ್ತಿರುವುದು ನಿಜ. the Visveswaraiah Technological University Act and the Karnataka Co-operative Societies Act ಪ್ರಕಾರ ವಿಶ್ವೇಶ್ವರಯ್ಯ ವಿಶ್ವವಿದ್ಯಾನಿಲಯದ Vice Chancellor ರನ್ನು ತನಿಖೆ ಮಾಡುವ ಅಧಿಕಾರ Chancellor ಗೆ ಇದೆ. ಆ ತನಿಖೆ ನಂತರ ಏನು ಬರುತ್ತದೆ. ಅದರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ಆದರೆ ಒಬ್ಬ ವ್ಯಕ್ತಿಯನ್ನು ಗುರುತಿಸಿ ಇಲ್ಲಿ ಭಾಷಣ ಮಾಡುವುದು ಬೇಡ. Institutions are more important. ಇಲ್ಲಿ ನಾನು ಎಷ್ಟು ದಿನ ಇರುತ್ತೇನೆ, ಎಷ್ಟು ವರ್ಷ ಇರುತ್ತೇನೆ ಎನ್ನುವುದು ಮುಖ್ಯವಲ್ಲ. ನಮ್ಮ ಕಾಲದಲ್ಲಿ ತಮ್ಮ ಕಾಲದಲ್ಲಿ ಒಳ್ಳೆಯ ಕೆಲಸವಾಗಬೇಕು. ಸಂಸ್ಥೆ ಮುಖ್ಯ, ಆ ಸಂಸ್ಥೆ ಚೆನ್ನಾಗಿ ಬೆಳೆಯಬೇಕು. Income Tax Department ನವರು 440 ಕೋಟಿ ರೂ.ಗಳನ್ನು ತೆಗೆದುಕೊಂಡು ಹೋಗಿರುವುದು ಸಂತೋಷದ ವಿಚಾರವಲ್ಲ. ಯಾವುದಾದರು ವಿಶ್ವವಿದ್ಯಾನಿಲಯದ ಬಗ್ಗೆ ತಮ್ಮ ತಲೆಯಲ್ಲಿ ಏನಾದರು ಇದ್ದರೆ ಅದನ್ನು ಬೇರೆ ರೂಪದಲ್ಲಿ ತಂದು ಚರ್ಚೆ ಮಾಡಿ ನಾನು ಉತ್ತರ ಕೊಡುತ್ತೇನೆ. ಪಾರದರ್ಶಕವಿರಬೇಕು, ಗುಣಮಟ್ಟದ ಶಿಕ್ಷಣ ಇರಬೇಕು ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಎಲ್ಲಲಿ ತಪ್ಪು ಆಗಿದೆ ತನಿಖೆಗೆ ನಾವು ಆದೇಶ ಮಾಡಿದ್ದೇವೆ. ರಾಜ್ಯಪಾಲರು ತನಿಖೆಗೆ ಆ ದೇಶ ಮಾಡಿದ್ದಾರೆ. ಆದರೆ ಇವತ್ತು ನಿಮ್ಮ ಮುಂದೆ ಇರುವುದು ತಿದ್ದುಪಡಿ ವಿಧೇಯಕ. ಇದನ್ನು Today, these amendments have been brought before the House as per the advice of the Income Tax Department Under Section 12A of The IncomeTax Act ತೆಗೆದುಕೊಳ್ಳಬೇಕಾದರೆ ವಿದೇಯಕಕ್ಕೆ ತಿದ್ದುಪಡಿ ತರಬೇಕು.

**ಶ್ರೀ ಗೋ. ಮಧುಸೂದನ್:-** ಮಂತ್ರಿಗಳೆ ಒಂದು ನಿಮಿಷ ಈಲ್ಡ್ ಆಗಿನಿಮಗೆ ನಾಣು ಸಹಾಯ ಮಾಡುತ್ತೇನೆ I will help You. I will bail you out.

**ಸಬಾಪತಿಯವರು:** ಬೇಡ,ಮಂತ್ರಿಗಳು ಮುಗಿಸಲಿ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಸಭಾಪತಿಯವರೇ, ಬಗ್ಗೆ ಹಿಂದು ಮಾತನ್ನು ಹೇಳಿದ್ದಾರೆ. 'Scheduled Bank' ಅಂದರೆ ಏನು? ಅದರಲ್ಲಿ Nationalised Banks wag? This is a suggestion which has come from the Income Tax Department. ಈ ಬಿಲ್ ಮಂಡನೆ ಮಾಡುವಾಗ ಆದಾಯ ತೆರಿಗೆ ಇಲಾಖೆಗೆ ಏನು ಭಯ ಎಂದರೆ ಮೊದಲು ಈ ಹಣ 'non-profit motive' ಎಂದು ಹೇಳಿ, ಹಣ ಬಂದ ನಂತರ ಸಿಂಡಿಕೇಟ್ ಮೆಂಬರ್, ಅಕಾಡೆಮಿಕ್ ಕೌನ್ಸಿಲ್ ಮೆಂಬರ್‌ಗೆ ಹಂಚಿಕೆ ಮಾಡಿದರು ಎನ್ನುವುದು ತಪ್ಪು ಕಲ್ಪನೆ. ಯಾರಿಗೂ ಕೊಡುತ್ತಿಲ್ಲ. ಅಂತಹ eventuality ಆಗುವುದು ಅಸಾಧ್ಯ. ಒಂದು ವೇಳೆ ವಿಶ್ವವಿದ್ಯಾಲಯವನ್ನು dissolve ಮಾಡುವ ಪ್ರಶ್ನೆ ಬಂದಾಗ ಅದೇ ಉದ್ದೇಶಕ್ಕೆ ವಿಶ್ವವಿದ್ಯಾಲಯಕ್ಕೆ ಕೊಡುತ್ತೇವೆ ಎಂದು it is their suggestion. ಹಾಗಾಗಿ ನಾವು ಇದನ್ನು ಅಳವಡಿಸಿದ್ದೇವೆಯೇ ವಿನ: ಯಾವ ವಿಶ್ವವಿದ್ಯಾಲಯ ಇದ್ದರೂ ಯಾವ ಸಿಂಡಿಕೇಟ್ ಮೆಂಬರ್‌ಗೆ ಸರ್ಕಾರ ಯಾವುದೇ Dividend ಕೊಡುವುದಿಲ್ಲ. ವಿಶ್ವವಿದ್ಯಾಲಯಕ್ಕೂ ಕೊಡುವುದಿಲ್ಲ. ಈಗ ಅವರು ಒಂದು ಪ್ರಶ್ನೆ ಕೇಳಿದರು. ನಾನು ಮೊನ್ನೆ ಮೈಸೂರಿನಲ್ಲಿ ಇದ್ದೆನು. ವೈಸ್ ಛಾನ್ಸಲರ್ ಕೇಳಿದಾಗ ಇಲ್ಲ ಸಾರ್ I have taken precaution ಎಂದು ಹೇಳಿದರು. ಅದೇರೀತಿ ಮುನ್ನೆಚ್ಚರಿಗೆ ಬಹಳ ದಿವಸಗಳಿಂದ ತೆಗೆದುಕೊಂಡಿಲ್ಲ, ಅದರ ಬಗ್ಗೆ ಎಚ್ಚರಿಕೆ ಮಾಡಿದ್ದೇವೆ. ಈಗ ರಾಜೀವ್ ಗಾಂಧಿ ವೈದ್ಯಕೀಯ ವಿದ್ಯಾಲಯದಲ್ಲಿ ಹಣ ಇದೆ, ಅದರ ಮೇಲೂ ಕಣ್ಣು ಬೀಳುತ್ತದೆ. ಸದನದಲ್ಲಿ ಚರ್ಚೆಯಾದಾಗ ಪತ್ರಿಕೆಯಲ್ಲಿ ಬಂದಾಗ ನಿರ್ದಿಷ್ಟವಾಗಿ Gad Dren tag weg. Even the Union Finance Minister asked me. He asked: "This is a Government University, why they have taken the money?" Shri Arun Jaitley asked me this question. are ಮುಖ್ಯಮಂತ್ರಿಯವರೂ ಇದ್ದರು. ಇದ್ದರು. ಆದ್ದರಿಂದ ದಯಮಾಡಿ ಅರ್ಥಮಾಡಿಕೊಳ್ಳಬೇಕು. ಯಾವುದೋ ಒಂದು ವಿಶ್ವವಿದ್ಯಾಲಯದಲ್ಲಿ ಹಣ ಇದ್ದರೆ ಅದನ್ನು ಹಂಚಬೇಕು ಎಂದಿಲ್ಲ. ಒಳ್ಳೆಯ ಗುಣಮಟ್ಟದ ಶಿಕ್ಷಣ ಸಿಗಬೇಕು. ಅಲ್ಲಿಗೆ ಹೋದಾಗ ಯಾವ ವಿದ್ಯಾರ್ಥಿಗಳು ಹೆಚ್ಚಿನ ಶುಲ್ಕ ತೆಗೆದುಕೊಳ್ಳುತ್ತಿದ್ದಾರೆ ಎಂದು ನನಗೆ ದೂರು ಹೇಳಲಿಲ್ಲ. ಇವತ್ತು ವಿಶ್ವವಿದ್ಯಾಲಯಕ್ಕೆ ಹಣ ಎಲ್ಲಿಂದ ಬರುತ್ತದೆ. ಅದರಲ್ಲಿ 200ಕ್ಕೂ ಹೆಚ್ಚು Affiliated Colleges ಇವೆ. Affiliation fees, examination fees, admission fees, library fees JAGOD ಬರುತ್ತವೆ. ಈ ಸಮಸ್ಯೆ ಬೇರೆ ವಿಶ್ವವಿದ್ಯಾಲಯಕ್ಕೂ ಬರುವ ಸಂಭವ ಇದೆ. ನಾನು ಮುನ್ನೆಚ್ಚರಿಕೆ ಕೊಟ್ಟಿದ್ದೇನೆ. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಿಗೆ ರಾಜೀವ್‌ಗಾಂಧಿ ವಿಶ್ವವಿದ್ಯಾಲಯವನ್ನು ತಕ್ಷಣ Contact ಮಾಡಿ ಕಾಯ್ದೆಯಲ್ಲಿರುವ ಪ್ರಾವಿಷನ್‌ಗಳು ಏನಿವೆ ಎಂಬುದನ್ನು ನೋಡಿ, ಈ ಕಾನೂನನ್ನು ಮಾಡಿದವರು ಉದ್ದೇಶಪೂರ್ವಕವಾಗಿ ಪ್ರಾವಿಷನ್ ಇಟ್ಟಿಲ್ಲ. ಒಮ್ಮೊಮ್ಮೆ by oversight ಆಗುತ್ತದೆ. ಪರಿಸ್ಥಿತಿ ಆಗ ಇರಲಿಲ್ಲ. ಈಗ ವಿಶ್ವವಿದ್ಯಾಲಯ ಬೆಳೆದಿದೆ, ಈಗ surplus fund ಬರಬಹುದು. ಒಂದು ಕಡೆ ಶಾಲೆಯಲ್ಲಿ ಸರಿಯಾದ ಕಟ್ಟಡ ಇಲ್ಲ ಎಂದರೆ ಕಟ್ಟಡ ಇಲ್ಲ ಎಂದು ಹೇಳುತ್ತಾರೆ. ಚೆನ್ನಾಗಿ ಕಟ್ಟಿದ್ದರೆ ಚೆನ್ನಾಗಿ lavish ಆಗಿ ಕಟ್ಟಿದ್ದಾರೆ ಎಂದು ಹೇಳುತ್ತಾರೆ. ಅವರ ಮಾರ್ಗದರ್ಶನ ನಮಗೆ ಬೇಕು. ಕಟ್ಟಡ ಕಟ್ಟಬೇಕು ಎಂದು ಅವರೇ ಅಳತೆ ಹಾಕಿಕೊಟ್ಟು, ಇದರ ಪ್ರಕಾರ ಕಟ್ಟಿ, ಇದರಂತೆ ಡಿಸೈನ್ ಮಾಡಬೇಕು ಎಂದು ಹೇಳಿಬಿಡಲಿ, ನಾನು ಜಗತ್ತಿನಲ್ಲಿ ಬಹಳ ಕಡೆ ಪ್ರವಾಸ ಮಾಡಿದ್ದೇನೆ. ಒಂದೊಂದು ವಿಶ್ವವಿದ್ಯಾಲಯಗಳನ್ನು ನೋಡಬೇಕು. ಸಂಶೋಧನೆ, ನವೀಕರಣ, ಮೂಲಭೂತ ಸೌಕರ್ಯಗಳನ್ನು ನೋಡಬೇಕು. ಇವತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಇನ್ನೂ ಕೆಲವು ಉಪನ್ಯಾಸಕರನ್ನು ನೇಮಕ ಮಾಡಬೇಕಾಗಿದ್ದು, ಇದನ್ನು ಮಾಡಿಲ್ಲ ಎಂದು NAAC accreditation ಬರುತ್ತಿದೆ. ಸಂಸ್ಥೆ 2. Institution is more important. Individuals may come and go. 'individual' ಬಂದಾಗ ಒಳ್ಳೆಯ ಕೆಲಸ ಮಾಡಬೇಕು. ಮಾನ್ಯ adrã ನಾರಾಯಣಸ್ವಾಮಿಯವರು ಹೇಳಿದಂತೆ ಸರಿ ಕ್ರಮ ತೆಗೆದುಕೊಳ್ಳಬೇಕು. Financial powers ಬಗ್ಗೆ ಹೇಳಿದ್ದಾರೆ. I have said, I will look into the matter. ಆದರೆ ಯಾರೋ ಒಬ್ಬ ವ್ಯಕ್ತಿ ಬಗ್ಗೆ ತಲೆಯಲ್ಲಿ ಇಟ್ಟುಕೊಂಡು ಈ ಕಾನೂನು ಏಕೆ ತಂದಿರಿ ಎಂದರೆ ಏನು ಹೇಳಬೇಕು? ಎಲ್ಲೆಲ್ಲಿ ವಿಶ್ವವಿದ್ಯಾಲಯಗಳು ಲಾಭ ಮಾಡುತ್ತಿವೆ ಅಥವಾ ಮಾಡುತ್ತಿಲ್ಲ ಎಂದು ಎಲ್ಲಾ ವಿಶ್ವವಿದ್ಯಾಲಯಗಳನ್ನು ತರಬೇಕು. ವಿಶ್ವೇಶ್ವರಯ್ಯ ವಿಶ್ವವಿದ್ಯಾಲಯದವರು ಕೇಳಿದರು, ಆ ಪತ್ರಿಕೆಗಳಲ್ಲಿ ಬಂತು ಎಂದು ಹಣ ಕೇಳುವುದಕ್ಕೆ ಹೋಗಿಲ್ಲ. ಅವರ ದೃಷ್ಟಿಯಿಂದ it is a profit making organisation. ಏಕೆಂದರೆ ಕಾನೂನಿನಲ್ಲಿ ಆ ವ್ಯವಸ್ಥೆ ಇಲ್ಲ. ಅದೇ ವ್ಯವಸ್ಥೆ ಬೇರೆ ಕಡೆ ಇರಲು ಸಾಧ್ಯ. ಹಾಗಾಗಿ ನಾವು ಈಗಾಗಲೇ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಸಂದೇಶ ಕಳುಹಿಸುತ್ತಿದ್ದೇವೆ. ನಮ್ಮ

ವಿಶ್ವವಿದ್ಯಾಲಯಗಳ ಕಾನೂನು 2011ರಲ್ಲಿ ಪ್ರಾವಿಷನ್ ಮಾಡುವ ಬಗ್ಗೆ ಚೆಕ್ ಮಾಡುತ್ತಿದ್ದೇವೆ. ಹಾಗಾಗಿ ಈ ತಿದ್ದುಪಡಿ ಕೇವಲ university is not a profit making organisation. ಆದಾಯ-ತೆರಿಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಇಲ್ಲಿ ಲಾಭ ಇಲ್ಲ ಮತ್ತು ದಂಧೆ ಹಾಗೂ ವ್ಯವಹಾರ ಇಲ್ಲ. With all respe4ct to the Income Tax Department, ಬಹಳ ಗೌರವದಿಂದ ಹೇಳುತ್ತೇನೆ. Income Tax Department's assumption was wrong. Their assumption is wrong. How can they (University) make profit here? ಅಲ್ಲಿ ವ್ಯವಹಾರ ಮಾಡುತ್ತಿದ್ದಾರೆಯೇ? ಹಾಗಾದರೆ ಏಕೆ ಕಣ್ಣು ಬಿತ್ತು? One Senior Officer of Government of India was in my flight. He was connected with the Finance. ನಾನು ಅವರನ್ನು ಏನಾಗಿದೆ, ಆದಾಯ ತೆರಿಗೆ ಇಲಾಖೆಗೆ? Even now they are trying to chase Government Universities'. ಅವರು ಏನೂ ನೋಡುವುದಿಲ್ಲ, ಒಂದು ಟಾರ್ಗೆಟ್ ಕೊಡುತ್ತಾರೆ, ಟಾರ್ಗೆಟ್ ರೀಚ್ ಮಾಡುವುದಕ್ಕೆ ನಾನಾ ಕಾರಣಗಳನ್ನು ನೋಡಿ ಟಾರ್ಗೆಟ್ ರೀಚ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ' ಎಂದು ಹೇಳಿದರು. ಶ್ರೀ ಕೆ.ಎಸ್. ಈಶ್ವರಪ್ಪ:- ನೇರವಾಗಿ ಆದಾಯ-ತೆರಿಗೆ ಇಲಾಖೆ ಮೇಲೆ ಈ ರೀತಿ ಆಪಾದನೆ ಮಾಡಿದರೆ ಅರ್ಥವೇ ಇಲ್ಲ. ಅವರು ಟಾರ್ಗೆಟ್ ಮುಟ್ಟುವುದಕ್ಕೋಸ್ಕರ ವಿಶ್ವವಿದ್ಯಾಲಯಗಳಿಗೆ ಬರುತ್ತಾರೆಯೇ? ಹಾಗಾದರೆ ಆದಾಯ-ತೆರಿಗೆ ಇಲಾಖೆ ಬೇಡವೇ?

ಶ್ರೀ ಆರ್.ವಿ. ದೇಶಪಾಂಡೆ:- ಆಪಾದನೆ ಮಾಡುತ್ತಿಲ್ಲ. ನಾನು ಬೇಡ ಎಂದು ಹೇಳಿದನೇ? ನಾನು ಆ ಬಗ್ಗೆ ಲಘುವಾಗಿ ಮಾತನಾಡಿಲ್ಲ, ಟಾರ್ಗೆಟ್ ಕೊಡುತ್ತಾರೆ ಎಂದು ಹೇಳಿದೆ.

**(ಗೊಂದಲ)**

ಶ್ರೀ ವಿ.ಎಸ್. ಉಗ್ರಪ್ಪ:- ಇಡೀ ದೇಶದಲ್ಲಿ ಯಾವುದೇ ವಿಶ್ವವಿದ್ಯಾಲಯದ ಮೇಲೆ ಈ ರೀತಿ ಕ್ರಮ ಜರುಗಿಸಿಲ್ಲ. ಆದರೆ ಇಲ್ಲಿ ಜರುಗಿಸಿರುವುದರಿಂದ ಮಂತ್ರಿಗಳು ವಿಚಾರ ಪ್ರಸ್ತಾಪ ಮಾಡುತ್ತಿದ್ದಾರೆ. ಹಾಗಾಗಿ ಟಾರ್ಗೆಟ್ ಇದೆ ಎಂದರೆ ಬೇರೆ ರೀತಿ ಏಕೆ ಅರ್ಥೈಹಿಸಿಕೊಳ್ಳಬೇಕು.

**(ಗೊಂದಲ)**

ಶ್ರೀ ಬಸವರಾಜ ಹೊರಟ್ಟಿ:- ಶಿಕ್ಷಣ ಇಲಾಖೆಯಲ್ಲಿ ಆದಾಯ ತೆರಿಗೆ ತೆಗೆದುಕೊಂಡರೆ ಎಲ್ಲಿ ಲಾಭ ಇದೆ? ಶಿಕ್ಷಣ ಇಲಾಖೆಯ ವಿಶ್ವವಿದ್ಯಾಲಯ ಆಗಲಿ ಮತ್ತೊಂದಾಗಲಿ ಅಲ್ಲಿ ಟ್ಯಾಕ್ಸ್ ಹಾಕುವುದು ಸರಿಯಲ್ಲ ಎಂದು ನಾನು ಹೇಳುತ್ತೇನೆ. ಗಳಿಸುವವರಿಗೆ ಟ್ಯಾಕ್ಸ್ ಹಾಕಬೇಕು.

Mr.CHAIRMAN: "They are not doing any business" ಎನ್ನುವ ಪದವನ್ನು ಮಾನ್ಯ ಮಂತ್ರಿಗಳು ಹೇಳಿದರು.

ಆರ್.ವಿ. ದೇಶಪಾಂಡೆ:- ಮಾನ್ಯ ಸಭಾಪತಿಯವರೇ, with highest respect to the Income Tax Department iqow Less JD. I myself is an Income Tax payee for year together, thirty years. Therefore, I have got highest respect. ನಾನು ಸಾಮಾನ್ಯವಾಗಿ ಒಂದು ಟಾರ್ಗೆಟ್ ಕೊಟ್ಟಾಗ... Every Department gives a target. ನಾವು ಒಂದು ಟಾರ್ಗೆಟ್ ಕೊಡುತ್ತೇವೆ. ಅವರ ಸರ್ಕಾರ ಇದ್ದಾಗ ಕೊಟ್ಟಿರಲಿಲ್ಲವೇ? They have to be given a target, ಅದನ್ನು review ಮಾಡಬೇಕಾಗುತ್ತದೆ. ನಾನು ಯಾರನ್ನೂ ಭೇಮ್ ಮಾಡುತ್ತಿಲ್ಲ. ಇವತ್ತು ವಿಶ್ವೇಶ್ವರಯ್ಯ ವಿಶ್ವವಿದ್ಯಾಲಯದ ಮೇಲೆ ಒಂದು ನಾಳೆ ರಾಜೀವ್ ಗಾಂಧಿ ಮೇಲೆ ಬರಬಹುದು, ಮತ್ತೊಂದು ವಿಶ್ವವಿದ್ಯಾಲಯದ ಮೇಲೆ ಬರಬಹುದು. ಹಾಗಾಗಿ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕಾಗುತ್ತದೆ. Now the matter is pending before the Supreme Court. We have gone to the Supreme Court to get the orders of the Income Tax Department quashed. ಹಾಗಾಗಿ ಆ ಕೇಸ್ ಬಲಪಡಿಸಲು ಮತ್ತು ಮುಂದೆ ಇಂತಹ ಸಮಸ್ಯೆಗಳು ಬರಬಾರದು ಹಾಗು ವಿದ್ಯಾರ್ಥಿಗಳ ಹಿತ, ವಿಶ್ವವಿದ್ಯಾಲಯಗಳ ಹಿತದಿಂದ ಮೂವ್ ಮಾಡಿದ್ದೇನೆ. ತಾವೆಲ್ಲರೂ ಒಪ್ಪಿಕೊಳ್ಳಬೇಕಾಗಿ ಕೋರುತ್ತೇನೆ.

ಶ್ರೀ ಅರುಣ ಶಹಾಪುರ:- ಮಾನ್ಯ ಸಭಾಪತಿಯವರೇ, ಬಿಡಿಎ ಹಣವನ್ನು ತೆಗೆದುಕೊಂಡು ಹೋಗಿ ಇದರಲ್ಲಿ ಹಾಕಿದ್ದಾರೆ. ಪತ್ರಿಕೆಗಳ ಎಡಿಟೋರಿಯಲ್ ನಲ್ಲಿ 'Investment dangerous' ಎಂದು ಹಾಕಿದ್ದಾರೆ

**ಶ್ರೀ ಆರ್.ವಿ. ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, Scheduled Banks ಗಳಲ್ಲಿ Debentures 3. Debentures are different. Mutual Funds ಇರುತ್ತವೆ. are different and deposits are different. I can assure this House that the University is not....

**(ಗೊಂದಲ)**

ಕ್ಯಾಪ್ಟನ್ ಗಣೇಶ್ ಕಾರ್ಣಿಕ್:- ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಇನ್ವೆಸ್ಟ್‌ಮೆಂಟ್ ಅಂದರೆ ಹೇಗೆ ವಿವರಣೆ ಕೊಡುತ್ತಾರೆ.

ಶ್ರೀ /ಮಧುಸೂದನ್:- ಒಂದು ತಿದ್ದುಪಡಿಗಾದರೂ ಒಪ್ಪಿಕೊಳ್ಳಬೇಕು. Kindly say 'deposit' and don't say 'investment' in the Bill.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಸಭಾಪತಿಯವರೇ, 'deposit' is a different word. ಡಿಪಾಸಿಟ್ ಎಂದರೆ ಬ್ಯಾಂಕ್‌ನಲ್ಲಿ ಡಿಪಾಸಿಟ್ ಇಡಬೇಕಾಗುತ್ತದೆ. It may take time to withdraw. In short, 'investment' means, it will be with the Scheduled Banks. Even Nationalised Banks are Scheduled Banks. Scheduled Banks ಅಂದರೆ ಅಲ್ಲಿ Mutual Fund, Debentures, Shares way. How can it come? Scheduled Bank means a Bank, it is also a Nationalised Bank.

**Sri RAMACHANDRAGOWDA**:- Mr.Chairman Sir, Scheduled Banks also invest in shares. If you invest with the Scheduled Banks, they will in-turn invest in shares.

ಶ್ರೀ ಆರ್.ವಿ.ದೇಶಪಾಂಡೆ: ಸನ್ಮಾನ್ಯ ಸಭಾಪತಿಯವರೇ, Scheduled Bank ಸಹ ರಾಷ್ಟ್ರೀಕೃತ ಬ್ಯಾಂಕ್ ಆಗಿವೆ. ಅವರ ಬ್ಯಾಂಕ್‌ನಿಂದ ಷೇರ್‌ಗಳು ಮಾರುಕಟ್ಟೆಯಲ್ಲಿ B.S.E. (Bombay Stock Exchange) ನಲ್ಲಿ ಮತ್ತು N.S.E. (National Stock Exchange) ನಲ್ಲಿ trade ಆಗುತ್ತಿರಬಹುದು. But no bank can deal in shares, ಯಾವ ಬ್ಯಾಂಕು ಡೀಲ್ ಮಾಡುವುದಿಲ್ಲ. understand that. ಸಾವಿರಾರು ಕಂಪನಿಗಳು ಇವೆ. They are listed, may be in the NASDAQ (National Association of Securities Dealers Automated Quotations), may be in the B.S.E. and may be in the N.S.E. So they do it. DJ WROL ಪ್ರತಿದಿನ ಷೇರುಗಳನ್ನು ತೆಗೆದುಕೊಳ್ಳುವ ಮತ್ತು ಮಾರಾಟ ಮಾಡುವ ವ್ಯವಹಾರ ಮಾಡಿರುವುದನ್ನು ನಾನು ಇವತ್ತಿನವರೆಗೆ ನೋಡಿಲ್ಲ. This is for your information,

ಶ್ರೀ ಗೋ.ಮಧುಸೂದನ್:- ಸನ್ಮಾನ್ಯ ಸಭಾಪತಿಯವರೇ, the I.C.I.C.I. Bank does it. ಐ.ಸಿ.ಐ.ಸಿ.ಐ ಬ್ಯಾಂಕ್‌ನಲ್ಲಿ ಷೇರುಗಳಿಗಾಗಿಯೇ ಒಂದು portfolio ಇದೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರು ಮಾನ್ಯ ಸದಸ್ಯರುಗಳ ಅಭಿಪ್ರಾಯವನ್ನು ತಿಳಿದುಕೊಂಡಿದ್ದಾರೆ. ಅವರು ಹೇಳಿರುವ ಅಂಶಗಳ ಬಗ್ಗೆ ಸರ್ಕಾರ ಗಮನ ಕೊಡಬೇಕಾಗುತ್ತದೆ. ಇಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವುದು ಅವರಿಗೂ ಗೊತ್ತಿದೆ. ಭ್ರಷ್ಟಾಚಾರದ ಬಗ್ಗೆ ಪ್ರತಿನಿತ್ಯ ದೂರದರ್ಶನದಲ್ಲಿ ಮತ್ತು ಪತ್ರಿಕೆಗಳಲ್ಲಿ ಬರುತ್ತಿದೆ. ಭ್ರಷ್ಟಾಚಾರವನ್ನು ತಡೆಯಬೇಕೆನ್ನುವುದು ಇಡೀ ಸದನದ ಅಭಿಪ್ರಾಯ ಹಾಗೂ ಅವರ ಅಭಿಪ್ರಾಯವೂ ಆಗಿದೆಯೆಂದು ನಾನು ಭಾವಿಸುತ್ತೇನೆ. ಈ ವಿಧೇಯಕಕ್ಕೆ ನಾವು ಖಂಡಿತವಾಗಿಯೂ ಒಪ್ಪಿಗೆಯನ್ನು ಕೊಡುತ್ತೇವೆ, ಇಲ್ಲವೆಂದು ಹೇಳಿಲ್ಲ. ಆದರೆ, ಈ ವಿಶ್ವವಿದ್ಯಾಲಯದಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ಅಧ್ಯಯನ ನಡೆಸಲು ಸರ್ಕಾರ ಒಂದು ಸಮಿತಿಯನ್ನು ನೇಮಕ ಮಾಡಬೇಕಾಗುತ್ತದೆ.

ಶ್ರೀ ಆರ್.ವಿ.ದೇಶಪಾಂಡೆ:- ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಕುಲಪತಿಗಳು ಆದೇಶ ಮಾಡಿ, ತನಿಖೆ ನಡೆಸುತ್ತಿದ್ದಾರೆ.

**Sri G. MADHUSUDHAN**: Sir, it has been stayed in the court.

**ಶ್ರೀ ಆರ್.ವಿ.ದೇಶಪಾಂಡೆ:-** ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಚಾನ್ಸಲರ್‌ರವರು ಈ ವಿಚಾರದ ಬಗ್ಗೆ ತನಿಖೆ ನಡೆಸುತ್ತಿರುವಾಗ, ನಾವು ಮತ್ತೊಂದು ಸಮಿತಿಯನ್ನು ರಚನೆ ಮಾಡುವುದು ಸರಿಯಾಗುತ್ತದೆಯೇ?

**Sri G. MADHUSUDHAN**: Sir, it has been stayed in the court. But inquiry on the K.S.O.U. has been allowed.

**Sri R.V. DESHPANDE**: I am not aware of it.

ಶ್ರೀ ಆರ್.ಕೆ.ಸಿದ್ದರಾಮಣ್ಣ- ಸನ್ಮಾನ್ಯ ಸಭಾಪತಿಯವರೇ, ಶಬ್ದಕೋಶದಲ್ಲಿ Investmentಗೂ ಮತ್ತು Depositಗೂ ಬೇರೆಯಾದ ಅರ್ಥವಿದೆ. 'Investment' ಎನ್ನುವ ಪದಕ್ಕೆ ಶಬ್ದಕೋಶದಲ್ಲಿ "If you invest in something or if you invest a sum of money, you use your money in a way that you hope will increase its value. For example, by paying it into a bank or buying shares and property, ಈ ರೀತಿಯಾದ ಅರ್ಥವಿದೆ. ಹಾಗೆಯೇ "Deposit ಎಂದರೆ, ಅದು Bank Deposit ಆದರೆ, Savings Bank Account ಇರಬಹುದು ಅಥವಾ Current Account ಇರಬಹುದು ಅಥವಾ Fixed Deposit ಇರಬಹುದು. ಮತ್ತು depositಗೂ ವ್ಯತ್ಯಾಸವಿದೆ.

ಶ್ರೀ ಆರ್.ವಿ.ದೇಶಪಾಂಡೆ: ಸನ್ಮಾನ್ಯ ಸಭಾಪತಿಯವರೇ, ನಾನು ಸಿಂಡಿಕೇಟ್ ಬ್ಯಾಂಕ್‌ನಲ್ಲಿ 10,000 ರೂಪಾಯಿಗಳನ್ನು investment ಮಾಡಿದರೆ, it also earns interest.

ಶ್ರೀ ರಾಮಚಂದ್ರಗೌಡ**:** ಸನ್ಮಾನ್ಯ ಸಭಾಪತಿಯವರೇ, if you invest money in a bank, there is no loss. You are not losing the money. But investment means, you may lose or you may incur loss.

**Sri R.K. SIDDARAMANNA**: The word 'Investment' has a very wide meaning.

**Sri R.V. DESHPANDE**: I will assure the House that this money will not be invested in debentures, shares or any other instruments than keeping it in the Savings Bank Accounts, Current Accounts and Fixed Deposits. And in case required, I will again study this. If required, I will come back to the House again.

ಶ್ರೀ ಕೆ.ಎಸ್.ಈಶ್ವರಪ್ಪ:- ಸನ್ಮಾನ್ಯ ಸಭಾಪತಿಯವರೇ, ಕುಲಪತಿಗಳ ಆದೇಶದ ಮೇರೆಗೆ ತನಿಖೆ ನಡೆಯುತ್ತಿದೆ ಎನ್ನುವುದನ್ನು ನಾನು ಒಪ್ಪಿಕೊಂಡಿದ್ದೇನೆ. ಅದಕ್ಕೆ ಸ್ಟೇ ಆಗಿದೆಯೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಗೋ.ಮಧುಸೂದನ್ :- ಸನ್ಮಾನ್ಯ ಸಭಾಪತಿಯವರೇ, ಸ್ಟೇ ಆಗಿದೆ.

ಸಭಾಪತಿಯವರು:- ಸ್ಟೇ ಆಗಿಲ್ಲ, ರಾಜ್ಯಪಾಲರ ಆದೇಶದ ಮೇರೆಗೆ ನಡೆಯುತ್ತಿರುವ ತನಿಖೆಗೆ ಸ್ಟೇ ಆಗಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ:- ಸನ್ಮಾನ್ಯ ಸಭಾಪತಿಯವರೇ, ತನಿಖೆ ನಡೆಯುತ್ತಿದೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಒಂದು ಸಮಿತಿ ರಚನೆ ಮಾಡಲಿ, ಅಲ್ಲಿಯೂ ತನಿಖೆ ನಡೆಯಲಿ, ಇಲ್ಲಿಯೂ ನಡೆಯಲಿ, ಅದರಲ್ಲೇನು ತಪ್ಪಿದೆ?

ಸಭಾಪತಿಯವರು:- ಘನತೆವೆತ್ತ ರಾಜ್ಯಪಾಲರ ಆದೇಶದ ಮೇರೆಗೆ ತನಿಖೆ ನಡೆಯುತ್ತಿರುವಾಗ ಇಲ್ಲಿ ಮತ್ತೊಂದು ಸಮಿತಿಯನ್ನು ರಚನೆ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಅಶ್ವತ್‌ನಾರಾಯಣ:- ಸನ್ಮಾನ್ಯ ಸಭಾಪತಿಯವರೇ, ವಿಧೇಯಕವನ್ನು ಸದನದ ಮುಂದೆ ತರಲಿ, ಮಾಡಲಿ. ಬದಲಾವಣೆ ಮಾಡಿ ಮನಃ

ಶ್ರೀ ವೈ.ಎ.ನಾರಾಯಣಸ್ವಾಮಿ: ಸನ್ಮಾನ್ಯ ಸಭಾಪತಿಯವರೇ, ಸದನ ಸಮಿತಿಯನ್ನು ರಚನೆ

ವೀರಣ್ಣ ಮತ್ತಿಕಟ್ಟಿ- ಸನ್ಮಾನ್ಯ ಸಭಾಪತಿಯವರೇ, ಈಗ ವಿಧೇಯಕದ ಮೇಲೆ ಚರ್ಚೆಯಾಗುತ್ತಿರುವುದು. ಸದನ ಸಮಿತಿಗೂ ವಿಧೇಯಕಕ್ಕೂ ಏನು ಸಂಬಂಧವಿದೆ?

ಶ್ರೀ ಆರ್.ವಿ.ದೇಶಪಾಂಡೆ:- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಭ್ರಷ್ಟಾಚಾರಕ್ಕೆ ಅವಕಾಶ ಇರಬಾರದು ಎನ್ನುವುದರಲ್ಲಿ ಯಾವುದೇ ಭಿನಾಭಿಪ್ರಾಯಗಳು ಇಲ್ಲ. ಕಾನೂನು ಪ್ರಕಾರ ತನಿಖೆ ಮಾಡುವ ಅಧಿಕಾರ ಚಾನ್ಸಲರ್ ಅವರಿಗಿದೆ. ಚಾನ್ಸಲರ್‌ರವರು ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಬಗ್ಗೆ ತನಿಖೆ ಮಾಡಲು ಆದೇಶವನ್ನು ನೀಡಿದ್ದಾರೆ. ತನಿಖೆ ನಡೆಯುತ್ತಿದೆ. ಈಗ ಆದಾಯ ತೆರಿಗೆಯ ವಿಚಾರವನ್ನು ತೆಗೆದುಕೊಂಡು ಬಂದು ಇಲ್ಲೊಂದು ಸಮಿತಿಯನ್ನು ರಚನೆ ಮಾಡುವುದು ರಾಜ್ಯಪಾಲರಿಗೆ ಅಗೌರವ ತೋರಿದಂತಾಗುತ್ತದೆ. ಇದು ಸರಿಯಲ್ಲ. ಒಂದು ವೇಳೆ ಆ ರೀತಿಯ ಪರಿಸ್ಥಿತಿ ನಿರ್ಮಾಣವಾದರೆ, ನಾನು ಸಿದ್ಧನಿದ್ದೇನೆ. ನಾನು ಮುಚ್ಚಿಡಬೇಕೆಂದು ಈ ಮಾತನ್ನು ಹೇಳುತ್ತಿಲ್ಲ.

ಸಭಾಪತಿಯವರು:- ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2015ರ ಕರ್ನಾಟಕ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ **2**ರಿಂದ **4**ರವರೆಗೆ

ಸಭಾಪತಿಯವರು**:-** "ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

**(**ಖಂಡ **2** ರಿಂದ **4**ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು**)**

ಖಂಡ **1** ಇತ್ಯಾದಿ

ಸಭಾಪತಿಯವರು**:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ,

ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

**(**ಮೊದಲನೆಯ ಖಂಡ ದೀರ್ಘ ಶೀರ್ಷಿಕೆ**,** ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಆರ್**.**ವಿ**.**ದೇಶಪಾಂಡೆ **(**ಉನ್ನತ ಶಿಕ್ಷಣ ಸಚಿವರು)- ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2015ರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಸಭಾಪತಿಯವರು**-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2015ರ ಕರ್ನಾಟಕ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಸಭಾಪತಿಯವರು:- ಈಗ ಭೋಜನ ವಿರಾಮಕ್ಕಾಗಿ ಸಭೆಯನ್ನು ಮಧ್ಯಾಹ್ನ 3 ಗಂಟೆ 45 ನಿಮಿಷಗಳವರೆಗೆ ಮುಂದೂಡಲಾಗುತ್ತಿದೆ.

**(ಭೋಜನ ವಿರಾಮದ ನಂತರ ಮಧ್ಯಾಹ್ನ 2 ಗಂಟೆ 26 ನಿಮಿಷಗಳಿಗೆ ಮುಂದೂಡಲ್ಪಟ್ಟ ಸದನವು, ಮನಃ ಸಂಜೆ 4.02 ಗಂಟೆಗೆ ಸಭೆ ಸೇರಿತು )**

**9. ಪ್ರಕಟಣೆ**

ಸಭಾಪತಿಗಳು:- ದಿನಾಂಕ 30.7.2015ರಂದು ವಿಧಾನಪರಿಷತ್ತಿನ ಕಾರ್ಯಕಲಾಪಗಳ ಸಲಹಾ ಸಮಿತಿಯು ಸಭೆ ಸೇರಿ ದಿನಾಂಕ 31.7.2015ರಂದು ವಿಧಾನಪರಿಷತ್ತಿನ ಕಾರ್ಯಕಲಾಪವನ್ನು ಬೆಳಗ್ಗೆ 10.00 ಗಂಟೆಗೆ ಪ್ರಾರಂಭಿಸಲು ಹಾಗೂ ದಿನಾಂಕ 1.8.2015ರಂದು ಬೆಳಗ್ಗೆ 10.00 ಗಂಟೆಗೆ ಸಭೆ ಸೇರಿ, ಉಪಸಭಾಪತಿಯವರ ಸ್ಥಾನಕ್ಕೆ ಚುನಾವಣೆ ನಡೆಸಲು ಶಿಫಾರಸ್ಸು ಮಾಡಿದೆ ಹಾಗೂ ಈ ವರದಿಗೆ ಸದನದ ಒಪ್ಪಿಗೆ ಇದೆ ಎಂದು ಭಾವಿಸುತ್ತೇನೆ.

**10. ಶಾಸನ ರಚನೆ**

**ಆ) ವಿದೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿದೇಯಕ ೨೦೧೫**

**ಪರ್ಯಾಲೋಚನೆ ಪ್ರಸ್ತಾವ**

**ಶ್ರೀ ವಿನಯ್ ಕುಮಾರ್ ಸೊರಕೆ :** ಮಾನ್ಯ ಸಭಾಪತಿಗಳೇ, ವಿದಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ೨೦೧೫ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ವಿನಯ್ ಕುಮಾರ್ ಸೊರಕೆ :** ಮಾನ್ಯ ಸಭಾಪತಿಗಳೇ, ಇಂತಹ ಲೇಔಟ್‌ಗಳನ್ನು ನಿರ್ಮಿಸುವಾಗ ಕಾನೂನು ಪ್ರಕಾರ ಸ್ಥಳೀಯ ಪ್ರಾಧಿಕಾರ ಸಂಸ್ಥೆಗೆ ಬಿಟ್ಟು ಕೊಡಬೇಕಾದ ರಸ್ತೆ, ಉದ್ಯಾನವನ, open space, civic amenities ಗಳಿಗೆ ಟಿಡಿಆರ್ ನೀಡಲು ಅವಕಾಶವಿರುವುದಿಲ್ಲ. ರಸ್ತೆ, ಉದ್ಯಾನವನ, open space, civic amenities ಇರಬಹುದು, ಇವುಗಳಿಗೆ ಲೇಔಟ್ ಅನ್ನು ನಿರ್ಮಾಣ ಮಾಡುವಂತಹ ಸಂದರ್ಭದಲ್ಲಿ ಅದಕ್ಕೆ ಅವಕಾಶವಿರುವುದಿಲ್ಲ. ತಪ್ಪು ಮಾಹಿತಿಯನ್ನು ನೀಡಿ ಟಿಡಿಆರ್ ಪಡೆದಲ್ಲಿ ಅದನ್ನು ಶಿಫಾರಸ್ಸು ಮಾಡಿದ ಸ್ಥಳೀಯ ಸಂಸ್ಥೆಯ ಮೇಲೆ ಕ್ರಮ ಮೋಸದಿಂದ ಟಿಡಿಆರ್ ಪಡೆದಲ್ಲಿ ಕಾರಾಗೃಹ ವಹಿಸುವಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಶಿಕ್ಷೆಗೂ ಸಹ ಅವಕಾಶವನ್ನು ಕಲ್ಪಿಸಿಕೊಂಡಿದ್ದೇವೆ. ಈ ಹಿಂದೆ ನೀಡಿದ ಟಿಡಿಆರ್‌ಗಳ ಮಾಹಿತಿಯೂ ಕೂಡ ಗಣಕೀಕರಣ ಮಾಡುವಂಥ ವ್ಯವಸ್ಥೆಯನ್ನು ಹಾಕಿಕೊಂಡಿದ್ದೇವೆ. Transferable Development Fund ಪ್ರತಿ ವರ್ಷ ಆಡಿಟ್ ಮಾಡುವಂಥ ಪದ್ಧತಿಯನ್ನು ಸಹ ಹಾಕಿಕೊಂಡಿದ್ದೇವೆ. ಈ ರೀತಿಯಾಗಿ ಲೇಔಟ್‌ನ ಬಗ್ಗೆ ಮತ್ತು development cess ಬಗ್ಗೆ ಸಹ ನಾನು ಈಗಾಗಲೇ ಪ್ರಸ್ತುತ ಪಡಿಸಿದ್ದೇನೆ. Master planನಲ್ಲಿ ಸಾರ್ವಜನಿಕ ಉದ್ದೇಶಗಳಿಗೆ ಅಂದರೆ ಉದ್ಯಾನವನ, open space, public, semi public uses, ಸಾರಿಗೆ, ಮೂಲಭೂತ ಸೌಲಭ್ಯಗಳಿಗೆ ಖಾಸಗಿ ಜಮೀನನ್ನು ಕಾದಿರಿಸಿದಾಗ master plan ಅನುಮೋದನೆಗೊಂಡ 5 ವರ್ಷಗಳೊಳಗೆ ಭೂಸ್ವಾಧೀನ ಪಡಿಸಿಕೊಳ್ಳುವ ಜವಾಬ್ದಾರಿ ಪ್ರಾಧಿಕಾರಗಳಿಗೆ ಇದೆ. ಒಂದು ವೇಳೆ ಭೂಸ್ವಾಧೀನ ಪಡಿಸಿಕೊಳ್ಳದೇ ಇದ್ದಲ್ಲಿ the designation shall be deemed to have been lapsed ಎಂದು ಕಾಯ್ದೆಯಲ್ಲಿ ವಿವರಿಸಲಾಗಿದೆ. ವರ್ಷಗಳ ನಂತರ

ಭೂಮಾಲಿಕರು ಭೂ ಬದಲಾವಣೆಗೆ ಅರ್ಜಿ ಸಲ್ಲಿಸಿದಾಗ ಪ್ರಾಧಿಕಾರವು ಈ ಜಮೀನಿನ ಸ್ಥಳೀಯ ಪಕ್ಕದ ಜಮೀನಿನ ಅಭಿವೃದ್ಧಿಯನ್ನು ಪರಿಗಣಿಸಿಕೊಂಡು ಅರ್ಜಿಯನ್ನು ತೀರ್ಮಾನಿಸಬೇಕು. ಪತ್ರಿಕೆಯಲ್ಲಿ ಈ ಕುರಿತು ಆಕ್ಷೇಪಣೆಗಳ ಬಗ್ಗೆ ಪ್ರಕಟಣೆಯನ್ನು ನೀಡಿ, ಆಕ್ಷೇಪಣೆಗಳ ಕುರಿತು ಪ್ರಾಧಿಕಾರದಲ್ಲಿ ತೀರ್ಮಾನಿಸಿ ಸರ್ಕಾರಕ್ಕೆ proceedings ನ್ನು ಸಲ್ಲಿಸಬೇಕೆಂದು ಇವತ್ತು ತಿಳುವಳಿಕೆಯನ್ನು ಕೊಟ್ಟಿದ್ದೇವೆ. ಅರ್ಜಿಯನ್ನು ತಿರಸ್ಕರಿಸಲು ಸಕಾರಣವನ್ನು ನೀಡಿ ಭೂಮಾಲೀಕರಿಗೆ ತಿಳಿಸಬೇಕೆಂದು ಆ ಒಂದು clause ಕೂಡ ಸೇರಿಸಿಕೊಂಡಿದ್ದೇವೆ. ಇದು ನಮ್ಮ ಪಟ್ಟಣಗಳ ರಸ್ತೆ, ಸಾರ್ವಜನಿಕ ಉದ್ದೇಶಗಳಿಗೆ ಬಹಳಷ್ಟು ಅನುಕೂಲವಾಗತಕ್ಕಂಥ ರೀತಿಯಲ್ಲಿ ನಾವು ತಂದಿದ್ದೇವೆ. ಇದನ್ನು ಬೇರೆ ರಾಜ್ಯಗಳ ಜೊತೆಗೆ ತುಲನೆ ಮಾಡಿ ನೋಡಿದ್ದೇವೆ. ಮಹಾರಾಷ್ಟ್ರದಲ್ಲಿ 1.5, ತಮಿಳುನಾಡಿನಲಿ 1.5, ಆಂಧ್ರಪ್ರದೇಶದಲ್ಲಿ 2 ಪಟ್ಟು ಇದೆ. ನಾವು ಸಹ 2 ಪಟ್ಟನ್ನು ಆರಿಸಿಕೊಂಡಿದ್ದೇವೆ. ಕಟ್ಟಡಕ್ಕೆ ಪ್ರಥಮ ಬಾರಿಗೆ ನಾವು ಒಂದು ಪಟ್ಟು ಟಿಡಿಆರ್ ಕೊಡಬೇಕೆನ್ನತಕ್ಕಂಥ ರೀತಿಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ.

ಕ್ಯಾಪ್ಟನ್ ಗಣೇಶ್ ಕಾರ್ಣಿಕ್ **(**ಶಿಕ್ಷಕರ ಕ್ಷೇತ್ರ): ಮಾನ್ಯ ಸಭಾಪತಿಯವರೆ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2015 ಅನ್ನು ಮಾನ್ಯ ಮಂತ್ರಿಗಳು ಮಂಡಿಸಿದ್ದಾರೆ. ಪ್ರಾಯಶಃ ಒಂದು ಉದಾಹರಣೆಯನ್ನು ತೆಗೆದುಕೊಂಡು ಇದರ ಬಗ್ಗೆ ವಿವರಿಸಿದ್ದರೆ ನಮ್ಮೆಲ್ಲರಿಗೂ ಸಹ ಹೆಚ್ಚು ಅರ್ಥವಾಗುತ್ತಿತ್ತು. ಇದರಲ್ಲಿ ತುಂಬಾ ತಾಂತ್ರಿಕ ಸಂಗತಿಗಳಿವೆ. ನಮ್ಮ ಅಭಿವೃದ್ಧಿಯ ಹಕ್ಕುಗಳನ್ನು ಇನ್ನೊಬ್ಬರಿಗೆ ವರ್ಗಾವಣೆ ಮಾಡುವಂಥ ಪ್ರಕ್ರಿಯೆ ಇದು. ಪಟ್ಟಣಗಳಲ್ಲಿ ರಸ್ತೆಗಳನ್ನು ಅಗಲ ಮಾಡಬೇಕು, ಸಾರ್ವಜನಿಕರಿಗೆ ಬೇಕಾದಂಥ ವ್ಯವಸ್ಥೆಯನ್ನು ಸಾರ್ವಜನಿಕರಿಂದ ಸ್ವೀಕಾರ ಮಾಡಬೇಕು. ನೇರವಾಗಿ ಹಣವನ್ನು ಕೊಡುವುದಕ್ಕೆ ನಮಗೆ ಆಗದೇ ಇದ್ದರೆ, ಏಕೆಂದರೆ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ಸಮಸ್ಯೆ ಏನೆಂದರೆ, ಅವರು ನೇರವಾಗಿ acquire ಮಾಡಲಿಕ್ಕೆ ಅವರ ಬಳಿ ಹಣವಿಲ್ಲ. ಹಣವಿಲ್ಲದಂಥ ಸಂದರ್ಭದಲ್ಲಿ ಅದನ್ನು ಹೇಗೆ ತೆಗೆದುಕೊಳ್ಳಬೇಕೆಂಬುದಕ್ಕೆ ರಾಷ್ಟ್ರದಲ್ಲಿ ಬೇರೆ ಬೇರೆ ಕಡೆಯೂ ಸಹ ಇದು ಇದೆ. ನನಗಿರುವಂತಹ ಸಂದೇಹವೇನೆಂದರೆ, ಸರ್ಕಾರ ಇದನ್ನೇನು ಮಾಡಲಿಕ್ಕೆ ಹೊರಟಿದೆ, ಅವನು Transferable Development Rights ಅನ್ನು ಖರೀದಿ ಮಾಡಿ ಆ ಅಭಿವೃದ್ಧಿ ಪ್ರಾಧಿಕಾರದ ಇನ್ನೊಂದು ಭಾಗದಲ್ಲಿ ಅವನಿಗೆ ನೇರವಾಗಿ ಏನು FAR (Floor Area Ratio) ratio ಇದೆ, ಅದಕ್ಕಿಂತ ಹೆಚ್ಚು bill ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಡುತ್ತೀರಿ. ಅದರ ಬಗ್ಗೆ ನಾನು ಹೇಳಿಬಿಡುತ್ತೇನೆ.

ಶ್ರೀ ವಿನಯ್ ಕುಮಾರ್ ಸೊರಕೆ**:-** ಮಾನ್ಯ ಸಭಾಪತಿಯವರೆ, ಇದನ್ನು FAR ಗೆ ಲಿಂಕ್ ಮಾಡಿರುವಂಥ ಉದ್ದೇಶವೇನೆಂದರೆ, ಉದಾಹರಣೆಗೆ ನಮ್ಮ ರಾಮನಗರದಲ್ಲಿ ಒಂದು FAR ಇದೆ. ಅಲ್ಲಿ TDR ಪಡೆದುಕೊಂಡು ಬಂದು ಇಲ್ಲಿ ಗಾಂಧಿನಗರದಲ್ಲಿ ಕೇಳುತ್ತಾನೆ. ಅದಕ್ಕೋಸ್ಕರ ರಾಮನಗರದ FAR ಅನ್ನು ಇಲ್ಲಿ ಗಾಂಧಿನಗರದಲ್ಲಿ utilize ಮಾಡಲಿಕ್ಕೆ ಆಗುವುದಿಲ್ಲ. ಆ ರೀತಿಯಲ್ಲಿ ನಾವು FAR ಗೆ ಲಿಂಕ್ ಮಾಡಿಕೊಂಡಿದ್ದೇವೆ.

ಕ್ಯಾಪ್ಟನ್ ಗಣೇಶ್ ಕಾರ್ಣಿಕ್:- ಮಾನ್ಯ ಸಭಾಪತಿಯವರೆ, ಗಾಂಧಿನಗರವೋ, ರಾಮನಗರವೋ ಅದರ ಬಗ್ಗೆ ನಾನು ಹೇಳುತ್ತಿಲ್ಲ. ಅವನು ಆ ಭಾಗದಲ್ಲಿ, ಸಾರ್ವಜನಿಕ ಸ್ಥಳದಲ್ಲಿ ಅಗತ್ಯವಿರುವ ಕಡೆ ಕಟ್ಟಡವನ್ನು ನಿರ್ಮಾಣ ಮಾಡಿಕೊಂಡಿದ್ದಾನೆ. ನಿಮಗೆ ರಸ್ತೆಯನ್ನು ಅಗಲ ಮಾಡಬೇಕು. ಕಟ್ಟಡವನ್ನು ತೆಗೆದು ಅವನಿಗೆ ಪರಿಹಾರವನ್ನು ನೀವು ಕೊಡಬಹುದು. ಆದರೆ ನಿಮ್ಮ ಬಳಿ ಹಣವನ್ನು ಕೊಡುವುದಕ್ಕೆ ಹಣವಿಲ್ಲ. ಹಾಗಾದರೆ ಏನು ಮಾಡುತ್ತೀರಿ? ಅವನ ಎಷ್ಟು ಕಟ್ಟಡವನ್ನು ತೆಗೆದುಕೊಂಡಿದ್ದೇವೆ, ಅಷ್ಟು ಕಟ್ಟಡವನ್ನು ಹೆಚ್ಚು ನಿರ್ಮಾಣ ಮಾಡಲಿಕ್ಕೆ ಇನ್ನೊಂದು ಜಾಗದಲ್ಲಿ ಅವನಿಗೆ ಅವಕಾಶವನ್ನು ಕೊಡುತ್ತೀರಿ. ಅವನು normal FAR ನಿರ್ಮಾಣ ಮಾಡುವುದಾದರೆ, ಅವನಿಗೆ TDR ಅವಶ್ಯಕತೆ ಇಲ್ಲ. ಇಲ್ಲಿ ನಾವೇನು ತಪ್ಪು ಮಾಡಿದ್ದೇವೆಂದರೆ, ಅಗತ್ಯಕ್ಕಿಂತ ಹೆಚ್ಚಾಗಿ ಕಟ್ಟಡವನ್ನು ನಿರ್ಮಾಣ ಮಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದೇವೆ. ಅದೇ ವ್ಯವಸ್ಥೆಯನ್ನು ಇನ್ನೊಂದು ಕಡೆ ಮಾಡಲಿಕ್ಕೆ ಇವತ್ತು ಇವರು ಹೊರಟಿದ್ದಾರೆ. ನಾನು ಸರ್ಕಾರಕ್ಕೆ ಇಷ್ಟನ್ನು ಮಾತ್ರ ಕೇಳುತ್ತೇನೆ. ಏನು National Building Code ಕೂಡಿದೆ, ಏನು ನಮ್ಮ specific FAR ಇದೆ, ನಗರಾಭಿವೃದ್ಧಿ ಪ್ರಾಧಿಕಾರದ set of norms ಏನಿದೆ, ಕಟ್ಟಡ ನಿರ್ಮಾಣದ norms ಏನಿದೆ, setback ಗೆ ಏನು norms ಇದೆ, ರಸ್ತೆ ಎಷ್ಟು ಅಗಲ ಇರಬೇಕೆಂದು ಇದೆ, ಈ TDR

ತೆಗೆದುಕೊಂಡು ಅದೆಲ್ಲವನ್ನು strict ಆಗಿ ನಿಮಗೆ ಇಂಪ್ಲಿಮೆಂಟ್ ಮಾಡುವುದಕ್ಕಾಗುತ್ತದೆಯೇ? ಅವನು ಏಕೆ ಟಿಡಿಆರ್ ಅನ್ನು ಖರೀದಿ ಮಾಡುತ್ತಾನೆ? ರಾಮನಗರವನ್ನೇ ಉದಾಹರಣೆಗೆ ತೆಗೆದುಕೊಂಡರೆ, FAR ratio ದ ಪ್ರಕಾರ ಅವನು ಎಷ್ಟು ಕಟ್ಟಬೇಕೆಂದು ಕಾನೂನಿದೆಯೋ, ಈ TDR ಖರೀದಿ ಮಾಡಿದರೆ ಆ ಭಾಗಕ್ಕೆ ಸಂಬಂಧಿಸಿದಂಥ ಆ FAR ratio ಗೆ one and half times or two times ಕಟ್ಟಲಿಕ್ಕೆ ತಾವು ಅವಕಾಶವನ್ನು ಮಾಡಿಕೊಡುತ್ತೀರಿ. ಅಂದರೆ ಮೂಲಭೂತವಾಗಿ ಕಟ್ಟಡ ನಿರ್ಮಾಣಕ್ಕೆ ಅಥವಾ ಲೇಔಟ್ ನಿರ್ಮಾಣ ಮಾಡಲಿಕ್ಕೆ ಆ ಭಾಗದ ಏನು ಕಾನೂನಿದೆ, ಆ ಕಾನೂನನ್ನು flout ಮಾಡಲಿಕ್ಕೆ, ಆ ಕಾನೂನನ್ನು ಮುರಿಯಲಿಕ್ಕೆ, ಕಾನೂನಿಗಿಂತ ಹೆಚ್ಚು ಕಟ್ಟಡವನ್ನು ನಿರ್ಮಾಣ ಮಾಡಲಿಕ್ಕೆ ಮುಂದೆ ನೀವು ಅನಧಿಕೃತ ಕಟ್ಟಡವನ್ನು ಸಕ್ರಮ ಮಾಡುತ್ತೀರಲ್ಲಾ, ಅವರ ಪ್ಲಾನಿಂಗ್‌ನಲ್ಲಿ ಸಂಪೂರ್ಣವಾಗಿ ಅದನ್ನು ನೀವು ಈಗಲೇ ಮಾಡುವುದಕ್ಕೆ ಹೊರಟಿದ್ದೀರಿ. ಇದಕ್ಕೆ ಮೂಲ ಕಾರಣವೇನೆಂದರೆ, ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಸಾರ್ವಜನಿಕ ಉಪಯೋಗಕ್ಕಾಗಿ ಇರುವಂಥ ಜಾಗವನ್ನು ವಶಪಡಿಸಿಕೊಳ್ಳಲು ಅವರ ಬಳಿ ಹಣವಿಲ್ಲ. ಅದಕ್ಕೆ ನೀವು ಮಾಡಬೇಕಾದ ಕೆಲಸವನ್ನು ಯಾರೋ ಒಬ್ಬ builder ಗೆ transfer ಮಾಡಿಕೊಂಡು ಅವನ ಹತ್ತಿರ ಹಣವನ್ನು ಖರೀದಿ ಮಾಡಿ ಹೆಚ್ಚು ನಿರ್ಮಾಣ ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಡುತ್ತಿದ್ದೀರಿ. ನಾನಿದನ್ನು ಏಕೆ ಉಲ್ಲೇಖ ಮಾಡುತ್ತೇನೆಂದರೆ, ನಾನು ಸದನದಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆ. ರಾಜ್ಯದಲ್ಲಿ ಬೇರೆ ಬೇರೆ ನಗರಗಳಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳಿವೆ. ಕೆಲಸವೇನು, ಅವರ ಉದ್ದೇಶವೇನು, ಅವರೇಕೆ ಇದನ್ನು ಪ್ರಾರಂಭ ಮಾಡಿದರು ಎಂದರೆ, ನಮ್ಮ ನಗರದ ಅಭಿವೃದ್ಧಿ ಒಂದು ಯೋಜನಾ ರೀತಿಯಲ್ಲಿ ಆಗಬೇಕು. ಅದಕ್ಕೆ ಒಂದು planned development, planned approach ಇರಬೇಕೆಂದು ಪ್ರಾರಂಭ ಮಾಡಿದರು. ಆದರೆ 50 ವರ್ಷಗಳ ಹಿಂದೆ ನೋಡಿದ ಬಡಾವಣೆಗೂ, ಇವತ್ತು ನೋಡಿದ ಬಡಾವಣೆಗೂ ನಾವೆಲ್ಲೋ ವಿಫಲವಾಗಿದ್ದೇವೆ ಎನಿಸುತ್ತದೆ. ಎನಿಸುತ್ತದೆ. ರಸ್ತೆಗಳು, ರಸ್ತೆಗಳು, underground facilities ಯಾವುದೇ sewage and drainage connection zo 29, je solid waste management ṅ ಅವಕಾಶಗಳಿಲ್ಲ. ಇದು ಯಾವುದೂ ಇಲ್ಲದೇ ಇದ್ದರೆ, ಹಾಗಾದರೆ ನಗರಾಭಿವೃದ್ಧಿ ಪ್ರಾಧಿಕಾರಗಳು ಏನು ಕೆಲಸವನ್ನು ಮಾಡುತ್ತಿವೆ? ಆ ಕೆಲಸಗಳನ್ನು ಮಾಡದೇ ಇರುವ ಕಾರಣದಿಂದಾಗಿ ಇವತ್ತು ನಗರಗಳಲ್ಲಿ ವಾಹನ ದಟ್ಟಣೆ, ಜನಸಂಖ್ಯೆ, ಮನೆಗಳು ಹೆಚ್ಚಾಗಿವೆ. ಎಲ್ಲಿ ನೋಡಿದರೂ ಓಡಾಡಲಿಕ್ಕೆ ಸ್ಥಳವಿಲ್ಲ, ಪಾದಚಾರಿ ರಸ್ತೆಗಳಿಲ್ಲ. ಇವತ್ತು ರಸ್ತೆಯನ್ನು ಅಗಲ ಮಾಡಬೇಕೆಂದರೆ ಅದು ಸಾಧ್ಯವೇ ಆಗುವುದಿಲ್ಲ. ಆ ಕಟ್ಟಡವನ್ನು ತೆಗೆದು ಸ್ವಾಧೀನ ಮಾಡುತ್ತೇವೆಂದರೆ, ಆ ಕಟ್ಟಡವನ್ನು ತೆಗೆದಾಗ ಅವರಿಗೆ ಪರಿಹಾರವನ್ನು ಕೊಡಲು ನಮ್ಮ ಬಳಿ ಹಣವಿಲ್ಲ. ನನ್ನ ಒಂದು ವಿನಂತಿ ಏನೆಂದರೆ, ಈ ಕಾನೂನನ್ನು ಬಹುಶಃ ತರಲೇಬೇಕಾದ ಅವಶ್ಯಕತೆ ಇದೆ. ನಮಗೆ ಬೇರೆ ಮಾರ್ಗೋಪಾಯಗಳಿಲ್ಲ. ಆದರೆ ನನ್ನ ಆತಂಕವೇನೆಂದರೆ, ಸರ್ಕಾರ ಇವತ್ತು ಏನನ್ನು ಮಾಡಲಿಕ್ಕೆ ಹೊರಟಿದೆ? ಮುಂದೆ ಯಾವ ಭಾಗ ಅಭಿವೃದ್ಧಿಯಾಗಬೇಕೆಂದು ಅಪೇಕ್ಷೆ ಪಡುತ್ತಿದ್ದೇವೆಯೋ, ಅಲ್ಲಿನ FAR ಇರಬಹುದು, ಕಾನೂನು ಪ್ರಕಾರ ಆಗಿರುವಂಥ ಮಾನದಂಡಗಳಿರಬಹುದು, ಅದನ್ನು ಈಗಲೇ ಹೇಳಿದ ಹಾಗೆ ಮುರಿಯಲಿಕ್ಕೆ ಕಾನೂನು ಪ್ರಕಾರ ಅವಕಾಶವನ್ನು ಮಾಡಿಕೊಡುತ್ತಿದ್ದಾರೆ. ಸಚಿವರು ರಾಮನಗರವನ್ನು ಉದಾಹರಣೆಯಾಗಿ ತೆಗೆದುಕೊಂಡರೆ, ರಾಮನಗರದಲ್ಲಿ ಒಂದು ಎಕರೆ ಪ್ರದೇಶದಲ್ಲಿ ಇಷ್ಟು ಅವನು TDR ಖರೀದಿ ಮಾಡಿದರೆ, ಕಟ್ಟಡವನ್ನು ನಿರ್ಮಾಣ ಮಾಡಬಹುದು ಎನ್ನುವಂಥ ಕಾನೂನಿದೆ.

ಅದಕ್ಕೆ ಎಷ್ಟೇ ದರ ಇರಬಹುದು, ರಾಮನಗರದ ಒಂದು ಎಕರೆ ಜಾಗದಲ್ಲಿ ಕಟ್ಟಲಿಕ್ಕೆ ಇರುವಂಥ FAR ಅನ್ನು ಬಿಟ್ಟು ಒಂದುವರೆ ಪಟ್ಟು ನಿರ್ಮಾಣ ಮಾಡಲಿಕ್ಕೆ ಅವನಿಗೆ ಅವಕಾಶವನ್ನು ಮಾಡಿಕೊಡುತ್ತಿದ್ದೇವೆ. ಹಾಗಾದರೆ FAR, developmental planning ಮಾಡಿದ್ದು ಏಕೆ? ಏಕೆ ಪ್ರಾಧಿಕಾರ ಈ ರೀತಿಯ ಕಾನೂನುಗಳನ್ನು ಹಾಕಿಕೊಂಡಿರುವಂಥಾದ್ದು? ಹಾಗಾಗಿ ತುಂಬಾ ಗಂಭೀರವಾಗಿ ಆಲೋಚನೆಯನ್ನು ಮಾಡಿಕೊಂಡು ಅಕ್ರಮವಾಗಿ ಅಕ್ರಮವಾಗಿ ಮಾಡಿದ್ದನ್ನು ಸಕ್ರಮಗೊಳಿಸುವುದಕ್ಕೆ ಹೊರಟಿರುವಂಥಾದ್ದು ಅಥವಾ ಸಾರ್ವಜನಿಕ ಉಪಯೋಗಕ್ಕಾಗಿ ರಸ್ತೆ ಅಗಲ ಅಥವಾ ಬೇರೆ ಎಲ್ಲಾ ಸೌಲಭ್ಯವನ್ನು ಕೊಡಲಿಕ್ಕೆ ಹೊರಟಿರುವಂಥಾದ್ದು, ಅದನ್ನಿಟ್ಟುಕೊಂಡು ನಮಗೆ ಹಣವನ್ನು ಕೊಡುವುದಕ್ಕಾಗುವುದಿಲ್ಲವೆನ್ನುವ ಕಾರಣಕ್ಕಾಗಿ ಇನ್ನೊಬ್ಬರಿಗೆ TDR ಕೊಟ್ಟು ಅವನು ಮುಂದಿನ ದಿನಗಳಲ್ಲಿ ಇರುವ ಕಾನೂನನ್ನು ಮೀರಿ ಹೆಚ್ಚಿನ ಕಟ್ಟಡವನ್ನು ಕಟ್ಟಲಿಕ್ಕೆ ಏನು ಅವಕಾಶವನ್ನು ಮಾಡಿಕೊಡುತ್ತಿದ್ದೇವೆ, ಅದು ಎಲ್ಲೋ ಒಂದು ಕಡೆ ನಾವು ಹಾಕಿಕೊಂಡ ನಿಯಮಗಳನ್ನು ನಾವೇ ಗಾಳಿಗೆ ತೂರಿದ ಹಾಗಾಗುತ್ತದೆ. ಇದರ ಉದ್ದೇಶ ಚೆನ್ನಾಗಿದೆ. ಏಕೆಂದರೆ ನಮ್ಮ

ಬಳಿ ಕೊಡಲಿಕ್ಕೆ ಹಣವಿಲ್ಲ. ಆದರೆ ಮುಂದೆ ಏನು ಅನಾಹುತವಾಬಹುದು? ಮಾನ್ಯ ನಗರಾಭಿವೃದ್ಧಿ ಸಚಿವರಲ್ಲಿ ನನ್ನ ಒಂದು ವಿನಂತಿ ಇದೆ. ಈ ರೀತಿಯ ಕಾನೂನನ್ನು ತರುವುದಕ್ಕಿಂತ ಬೆಂಗಳೂರು, ಬೃಹತ್ ಬೆಂಗಳೂರು ಅಥವಾ New Bangalore ಎಂದು ಹೆಸರಿಟ್ಟುಕೊಂಡು ಮುಂದೆ ಅಭಿವೃದ್ಧಿ ಮಾಡುತ್ತಾ ಹೋಗುತ್ತೇವಲ್ಲಾ, 50 ಕಿ.ಮೀ. ವ್ಯಾಪ್ತಿ ಇರುವುದು 100 ಕಿ.ಮೀ. ವ್ಯಾಪ್ತಿ ಆಯಿತು, 200 ಚದುರ ಕಿ.ಮೀ. ವ್ಯಾಪ್ತಿಯಾಯಿತು. ವ್ಯಾಪ್ತಿ ಹೆಚ್ಚಾದ ಹಾಗೆ ನಮ್ಮ master plan ಏನಿದೆ, ಅದರಲ್ಲಿ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಕೊಡಲಿಕ್ಕೆ ಬೇಕಾದಂಥ ಸಂಗತಿಗಳನ್ನು ಗುರುತಿಸಿಕೊಂಡು contour mapping ಮಾಡಲಿಕ್ಕೆ ಆಗುತ್ತದೆ, ಅದೇ ರೀತಿ ನಮಗೆ satellite map ಸಿಗುತ್ತದೆ. ಅಧಿಕೃತವಾಗಿ ನಮಗೆ ಎಲ್ಲಿ ರಸ್ತೆಗಳಿರಬೇಕು, ಸಾರ್ವಜನಿಕ ಉಪಯೋಗಕ್ಕಾಗಿ ಎಲ್ಲಿ ಸ್ಥಳಗಳಿರಬೇಕು ಎಂಬುದನ್ನು ರಾಜ್ಯದ ಗ್ರಾಮ ಪಂಚಾಯ್ತಿಯಿಂದ ಹಿಡಿದು ರೆವಿನ್ಯೂ ಮಂತ್ರಾಲಯದವರೆಗಿನ ಎಲ್ಲಾ ನಕ್ಷೆಗಳಲ್ಲಿ red zone ಆಗಿ ಮಾಡಿ ಇಡಿ. ಯಾವ ಒಬ್ಬ ಗ್ರಾಮ ಪಂಚಾಯಿತಿ ಸದಸ್ಯನಿಗೂ ಕೂಡ, ಒಂದು ಸಾರ್ವಜನಿಕ ರಸ್ತೆ ಹೋಗುತ್ತಿದ್ದರೆ, ಅಲ್ಲಿಗೆ ಯಾವುದೇ ಕಾರಣಕ್ಕೂ ಲೈಸೆನ್ಸ್ ಕೊಡಲಿಕ್ಕೆ ಸಾಧ್ಯವಿಲ್ಲ. ಅಲ್ಲಿ ಯಾರೂ ಕೂಡ ಅದನ್ನು ಪರಿವರ್ತನೆ ಗ್ರಾಮ ಪಂಚಾಯಿತಿ ಕಚೇರಿಯಿಂದ ಹಿಡಿದು ಕಂದಾಯ ಇಲಾಖೆಯ ಮಾಡಲಿಕ್ಕೆ ಸಾಧ್ಯವಿಲ್ಲ. ಕಾರ್ಯಾಲಯದವರೆಗೆ ಒಂದು ಮ್ಯಾಪ್‌ನಲ್ಲಿ ಇದನ್ನು ರೆಕಾರ್ಡ್ ಮಾಡಿದರೆ ಇವತ್ತು ಏನು ಬೆಂಗಳೂರು ಸುತ್ತ ಮುತ್ತ ದೊಡ್ಡ ದೊಡ್ಡ ನಗರಗಳ ಸುತ್ತಮುತ್ತ ಏನು ಅವ್ಯವಹಾರಗಳು ನಡೆಯುತ್ತಿವೆ, ಅದಾಗಲಿಕ್ಕೆ ಸಾಧ್ಯವೇ ಇಲ್ಲ. ಅದನ್ನು ನೀವು ಮಾಡದೇ ಈ ಟಿಡಿಆ ಕಾನೂನನ್ನು ತೆಗೆದುಕೊಂಡು ಬಂದರೆ ಪ್ರಾಯಶ: ನಮ್ಮ ಜವಾಬ್ದಾರಿಯನ್ನು ಯಾರಿಗೆ ಹಸ್ತಾಂತರ ಮಾಡುತ್ತೇವೆ. ಆದರೆ, ಮುಂದಿನ ದಿನಗಳಲ್ಲಿ ಭಾಗದಲ್ಲಿ ಬೆಳವಣಿಗೆಯಾಗಬೇಕಾದರೆ, ನಾವಾಗಿಯೇ ಮುಂದೆ ಬರುವಂತಹ ಆಪತ್ತಿಗೆ ನಾವು ನಾಂದಿ ಹಾಕಿದಂತಾಗುತ್ತದೆ. ನಾನು ಅದಕ್ಕೆ ತಮ್ಮ ಹತ್ತಿರ ಪ್ರಮಾಣಿಕವಾಗಿ ಕೇಳಿದೆ. ತಾವು ಇಲ್ಲಿ ಏನು ಎರಡು ಉದಾಹರಣೆಗಳನ್ನು ಕೊಟ್ಟಿದ್ದೀರಿ, ಇದನ್ನು ತಾವು ಸ್ವಲ್ಪ study ಮಾಡಿದರೆ ಪ್ರಾಯಶ: ಮುಂದೆ ಏನು ಈ ವಿಚಾರವನ್ನು ತೊಂದರೆಗಳಾಗಬಹುದು, ಎನ್ನುವುದನ್ನು ಅರ್ಥ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಹೇಳುತ್ತಾ, ಈ ಎರಡರ ನಡುವೆ ಹುಡುಕುವಂತಹ ಅವಶ್ಯಕತೆ ಇದೆ. ಅಷ್ಟು ದುಡ್ಡು ಕೊಡಲಿಕ್ಕೆ ಆಗುವುದಿಲ್ಲ. ಇರಬೇಕಾದರೆ, ಅಥವಾ ನಿರಂತರವಾಗಿ ನಾವು ಅಕ್ರಮವನ್ನು ಸಕ್ರಮ ಮಾಡುವುದೇ ನಮ್ಮ ಉದ್ಯೋಗ ಎನ್ನುವುದನ್ನು ಮಾಡಿಕೊಂಡು ಇಟ್ಟುಕೊಂಡರೆ ನಮ್ಮ ನಗರಗಳು ಹೀಗೇಯೇ ಕೊಳೆತು ಹೋಗುತ್ತವೆ. ಕೇವಲ ನಾವು ಬೆಂಗಳೂರು ನಗರ ಒಂದನ್ನೇ ಹೇಳುತ್ತಿಲ್ಲ. ನೀವು ಯಾವುದೇ ನಗರಗಳನ್ನು ತೆಗೆದುಕೊಳ್ಳಿ. ಮಂಗಳೂರು ನಗರವನ್ನು ತಾವು ನೋಡಿದ್ದೀರಿ. ಮಂಗಳೂರಿನಲ್ಲಿ ಇರುವಂತಹ ರಸ್ತೆ ಬಹಳ ಚಿಕ್ಕದು. ಆ ರಸ್ತೆ ಇಕ್ಕೆಲಗಳಲ್ಲಿ ಎಷ್ಟು ದೊಡ್ಡ ದೊಡ್ಡ ಕಟ್ಟಡಗಳು ಬರುತ್ತಿವೆ. ಆ ಕಟ್ಟಡಗಳನ್ನು ಕಟ್ಟುವಾಗ underground facilities. ಅಂದರೆ ಒಂದು, ಈಗ ಆಗಿರುವಂತಹ ಅಪತ್ತುಗಳಿಗೆ ನಾವು ಪರಿಹಾರ ಏಕೆಂದರೆ, ಯಾವುದೇ ಸರ್ಕಾರವಾದರೂ acquire ಮಾಡಲಿಕ್ಕೆ ಆದರೆ, ಇನ್ನು ಮುಂದೆ ಈ ರೀತಿಯ ಸಂಗತಿಗಳು ಆಗದೇ

ಶ್ರೀ ಐವನ್ ಡಿ'ಸೋಜಾ:- ಮಾನ್ಯ ಸಭಾಪತಿಯವರೆ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಒಂದು ನಿಮಿಷ ನಿಲ್ಲಿಸಬೇಕು. ಮಾನ್ಯ ಸದಸ್ಯರು ಮಂಗಳೂರು ನಗರವನ್ನು ಉಲ್ಲೇಖ ಮಾಡಿದರು. ಮಂಗಳೂರಿನ ರಸ್ತೆಗಳನ್ನು ಅಗಲ ಮಾಡಲಿಕ್ಕೆ ಈ ಟಿಡಿಆರ್ ತಂದರೆ ಲಾಭವಾಗುತ್ತದೆಯೇ ಎನ್ನುವ ಬಗ್ಗೆ ಮಾನ್ಯ ಸಚಿವರು ಹೇಳಬೇಕಾಗುತ್ತದೆ. ಏಕೆಂದರೆ, ಮಂಗಳೂರು ರಸ್ತೆಯನ್ನು ಅಗಲ ಮಾಡಲಿಕ್ಕೆ ಕೇಳುವುದೇ ಇಲ್ಲ. ಒಂದು ಇಂಚು ಜಾಗ ಬಿಡಿ ಎಂದು ಕೇಳುತ್ತಿಲ್ಲ. ಈ ಟಿಡಿಆರ್ ವ್ಯವಸ್ಥೆ ಬಂದರೆ ನಗರಗಳಲ್ಲಿ ರಸ್ತೆ ಅಗಲ ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ ಎನ್ನುವ ಬಗ್ಗೆ ನಾನು clarification ಕೇಳಲಿಕ್ಕೆ ಬಯಸುತ್ತೇನೆ.

ಕ್ಯಾಪ್ಟನ್ ಗಣೇಶ್ ಕಾರ್ಣಿಕ್:- ಶ್ರೀಯುತ ಐವನ್ ಡಿ'ಸೋಜಾ ರವರು ಈ ಬಗ್ಗೆ ಉಲ್ಲೇಖ ಮಾಡಿದರು. ಮಂಗಳೂರಿನಲ್ಲಿ ಟಿ.ಡಿ.ಆರ್. ಅನ್ನು introduce ಮಾಡಿದ್ದೇವೆ. ಆದರೆ, ಬಹಳ ಲಾಭವಾಗಲಿಲ್ಲ. ಇವತ್ತು ಅಲ್ಲಿ ಟಿಡಿಆರ್ ತೆಗೆದುಕೊಳ್ಳುವವರಿಲ್ಲ. ಇದು ವಾಸ್ತವಾಂಶ. ತೆಗೆದುಕೊಂಡು ಮಾಡಿದ್ದಾರೆ. ಆದರೆ, ತುಂಬಾ ಕಡೆ ಬಹಳ ಲಾಭವಾಗಿಲ್ಲ. ಕೆಲವು ಕಡೆ ಆಮೇಲೆ, ಈ ಟಿಡಿಆರ್ ನಿಜವಾಗಿಯೂ ಹೇಳಬೇಕೆಂದರೆ ವರ್ಗಾವಣೆ ಮಾಡಬೇಕಾದರೆ ಮಂಗಳೂರಿನ ಹಂಪನ ಕಟ್ಟೆ ಏರಿಯಾದಲ್ಲಿ ಸ್ವಲ್ಪ ಹಿಂದುಗಡೆ ಕಟ್ಟಡ ಕಟ್ಟುತ್ತಾನೆಂದರೆ ಅದರದ್ದು ಲಾಭ ಇದೆ. ಆದೇ ನೀವು 2 ಕಿ.ಮೀ, ಹಿಂದುಗಡೆ ಹೋಗಿಬಿಟ್ಟು ಕೊಠಾರಾ

ಚೌಕ್ ಹತ್ತಿರ ಮಾಡುತ್ತಾನೆಂದರೆ ಅಲ್ಲಿ ಅವನಿಗೆ ಲಾಭವಾಗುವುದಿಲ್ಲ. ನಮ್ಮ ದೃಷ್ಟಿಕೋನ ಚೆನ್ನಾಗಿದೆ. ಆದರೆ, ಒಬ್ಬ ಬಿಲ್ಡರ್, ಒಬ್ಬ ಡೆವಲಪರ್ ಅವನು ಅವನಿಗೆ ಯಾವುದು ಲಾಭ ಹೆಚ್ಚಿದೆ ಎನ್ನುವುದನ್ನು ನೋಡುತ್ತಾನೆ. ಹಾಗಾಗಿ, ಇದನ್ನು ಜಾರಿಗೆ ತರುವುದಕ್ಕಿಂತ ಮುಂಚೆ, ಬಹುಶ ರಾಷ್ಟ್ರದ ಪ್ರಮುಖ ನಗರಗಳಲ್ಲಿ ಈ ಟಿಡಿಆರ್ ಬಗ್ಗೆ ಸಾಕಷ್ಟು ಚರ್ಚೆಗಳಾಗಿವೆ, ಜಾರಿಗೆ ತಂದಿದ್ದಾರೆ, ಕಷ್ಟ- ಸುಖ ಅನುಭವಿಸಿದ್ದಾರೆ. ಅದರ ಅನುಭವವನ್ನು ಪಡೆದುಕೊಂಡು ವಾಸ್ತವಾಗಿ ಜಾರಿಗೆ ತರಬೇಕಾದರೆ, ಮತ್ತೆ, ಯಾವುದೋ ಬಿಲ್ಡರ್ ಲಾಭಿಗೆ, ಡೆವಲಪರ್ ಲಾಭಿಗೆ ಅನುಕೂಲವಾಗದೇ ಇರುವ ಹಾಗೆ, ಸಾರ್ವಜನಿಕರಿಗೆ ತೊಂದರೆಯಾಗದೇ ಇರುವ ಹಾಗೆ ಯಾವ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಟಿಡಿಆರ್ ತರಲಿಕ್ಕೆ ಹೊರಟಿದ್ದೀರಿ, ಅದಕ್ಕೆ ದಕ್ಕೆ ಬಾರದೇ ಇರುವ ಹಾಗೆ ಕೂಡ ರಸ್ತೆ ಅಗಲ ಮಾಡಲಿಕ್ಕೆ ಆಗದೇ ಇರುವ ವಾತಾವರಣ ನಿರ್ಮಾಣ ಆಗದೇ ಇರುವ ಹಾಗೆ ತಾವು ಕ್ರಮ ತೆಗೆದುಕೊಂಡರೆ ಪ್ರಾಯಶ: ನಿಮ್ಮ ಉದ್ದೇಶವನ್ನು ಈಡೇರಿಸಲಿಕ್ಕೆ ಸಾಧ್ಯವಿದೆ. ಹಾಗಾಗಿ, ಇದನ್ನು ಮತ್ತೊಮ್ಮೆ ತುಂಬಾ ಚೆನ್ನಾಗಿ ವಿಮರ್ಶೆ ಟಿಡಿಆರ್ ತೆಗೆದುಕೊಂಡರೂ ಮಾಡಬೇಕೆಂದು ಹೇಳಿಕೊಂಡು, ಅನಿವಾರ್ಯ

ಕಾರಣ ಆಗಿರುವುದರಿಂದ ಇದಕ್ಕೆ ಬದಲಾವಣೆಗಳನ್ನು ತರಲಿಕ್ಕೆ ಸಾಧ್ಯವಾದರೆ ನಾನು ಈ ಬಿಲ್ಲನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟಿದ್ದಕ್ಕಾಗಿ ಯೋಜನಾ ಧನ್ಯವಾದಗಳು. ಒಂದು ಪ್ರಾಧಿಕಾರ ಇರುವಂತಹದ್ದು, ನಗರವನ್ನು ಅಲ್ಲಿ ಯೋಜನಾಬದ್ಧವಾಗಿ ಮಾಡಬೇಕೆನ್ನುವುದಕ್ಕೆ ಅವರು guidelines ಕೊಡಬೇಕು, ಒಂದು blueprint ಕೊಡಬೇಕು. ಆದರೆ, ದುರ್ದೈವ ಆ ಯೋಜನಾ ಪ್ರಾಧಿಕಾರ ಎನ್ನುವುದು ಬಂದ ಮೇಲೆ ಇನ್ನು ಸಹ ಅವ್ಯವಸ್ಥೆಯಾಗಿದೆ. ಇವತ್ತು ಈ ಸಿಡಿಪಿ ಪ್ಲಾನ್ ಏನು ಮಾಡುತ್ತಾರೆ, ಸಿಡಿಪಿ plan ಮಾಡಿದಾಗ green belt area ಇರುತ್ತದೆ. ಆ green belt area ದಲ್ಲಿ ಹಲವಾರು ಬಿಲ್ಡರ್‌ಗಳು ಜಮೀನನ್ನು ಖರೀದಿ ಮಾಡುತ್ತಾರೆ. ಇವರೇ ಅದಕ್ಕೆ ಅವಕಾಶವನ್ನು ಕೊಡುತ್ತಾರೆ. ಅಲ್ಲಿ ಲೇಔಟ್ ಮಾಡಲಿಕ್ಕೆ ಅವಕಾಶವನ್ನು ಕೊಡುತ್ತಾರೆ. ಸಿಡಿಪಿ ಬದಲಾವಣೆ ಮಾಡುವಾಗ ಒಂದು ಗೆರೆಯನ್ನು ಮತ್ತೊಂದು ಕಡೆ ಎಳೆಯುತ್ತಾರೆ. ಆಗ ಅದನ್ನು yellow belt ಮಾಡುತ್ತಾರೆ. ಅದನ್ನು residential area ಮಾಡುತ್ತಾರೆ. ಅವ್ಯವಹಾರಗಳು ನಡೆಯುತ್ತಿರುತ್ತವೆ. ಎಲ್ಲರೂ ಮಾಡುವುದಿಲ್ಲ. ಅಲ್ಲಿ ಮೊದಲು ಖದೀಮರು ಇದ್ದರು. ಇಲ್ಲದಿದ್ದರೆ ಈಗ ಅವರು ಸ್ವಯಂ ನಿವೃತ್ತಿಯನ್ನು ತೆಗೆದುಕೊಂಡು ಮನೆಗೆ ಹೋಗಿದ್ದಾರೆ. ಅವರು ಇದ್ದರೆ, ನಾನು ಅವರ ಬಗ್ಗೆ/personal case ಹಾಕಬೇಕೆಂದು ನಾನಿದ್ದೆ. ಅವರು ತಮಗೂ ಗೊತ್ತಿರಬಹುದು, ಸ್ವಯಂ ನಿವೃತ್ತಿಯನ್ನು ತೆಗೆದುಕೊಂಡು ಹೋಗಿದ್ದಾರೆ ಮಹರಾಯ. ಅಲ್ಲಿ ಇರತಕ್ಕಂತಹ ದೊಡ್ಡ ದೊಡ್ಡ ತಿಮಿಲಿಂಗಗಳು, ಉದಾಹರಣೆಗೆ ನೀವು ಬೆಂಗಳೂರು ಮಹಾನಗರ ಪಾಲಿಕೆಗೆ ಹೋಗಿ ನೋಡಿ. ಎಲ್ಲಿ ಪ್ಲಾನ್‌ಗೆ ಮಂಜೂರಾತಿ ಕೊಡುತ್ತಾರೆ. ಅಲ್ಲಿ ಅವರಿಗೆ demand ಜಾಸ್ತಿ ಇರುತ್ತದೆ. ನಿಮ್ಮ regular subdivisioni demand ಇರುವುದಿಲ್ಲ. ಹಾಗೆಯೇ ಇಲ್ಲಿ ನಿಮ್ಮ ಪ್ರಾಧಿಕಾರದಲ್ಲಿ ನಡೆಯಬಾರದ್ದು ನಡೆಯುತ್ತದೆ. ಇಲ್ಲಿ ಯಾವ ಕಾನೂನಿಗೂ ಬೆಲೆಯಿರುವುದಿಲ್ಲ. ಅದಕ್ಕೆ ನಾನು ಎರಡು ನಿದರ್ಶನಗಳನ್ನು ನಿಮ್ಮ ಹತ್ತಿರ ಹೇಳಲಿಕ್ಕೆ ಬಯಸುತ್ತೇನೆ.

ಮೊದಲನೆಯದಾಗಿ, ಖಾಸಗಿಯವರು ಕೆಲವು ಕಡೆ ಖಾಸಗಿ ಬಡಾವಣೆಗಳನ್ನು ಮಾಡುತ್ತಾರೆ. ಸಿಎ ಸೈಟ್‌ಗಳು ಇಷ್ಟು ಪರ್ಸೆಂಟ್ ಎಂದು ಮೀಸಲಿಡುತ್ತಾರೆ. ಇಲ್ಲಿ ಸೆಕ್ಷನ್ 6 ರಲ್ಲಿ ಹಕ್ಕನ್ನು transfer ಮಾಡಿದ ಮೇಲೆ ನೋಂದಣಿ ಮಾಡಬೇಕೆಂದು ಹೇಳಿದ್ದೀರಿ. ಅವರು ಲೇಔಟ್‌ಗಳನ್ನು ಮಾಡಿದ ಮೇಲೆ ಫೈನಲ್ ಲಿಸ್ಟ್ ಆಗಿ 40% ಏನು ರಿಲೀಸ್ ಆಗುತ್ತದೆ. ರಿಲೀಸ್ ಆದ ಮೇಲೆ ಸಿಎ. ಸೈಟ್ ಆಗಿ convert ಮಾಡಿಕೊಂಡು ಮಾರಿಕೊಂಡಿದ್ದಾರೆ. ನಿಮ್ಮ ಇಲಾಖೆಯವರು ಈ ಲೇಔಟ್ ಅನ್ನು ಏನು approval ಮಾಡಿದ್ದಾರೆ, ಎಷ್ಟು ಲೇಔಟ್‌ಗಳಲ್ಲಿ ಸಿ.ಎ. ಸೈಟ್ ಇಲ್ಲಿಯವರೆಗೆ ಉಳಿದಿದೆ ಎನ್ನುವುದರ ಮಾಹಿತಿಯನ್ನು ಕೊಡಬೇಕಾಗುತ್ತದೆ. ಮತ್ತೆ ರಸ್ತೆಗಳನ್ನು ಮಾಡಲಿಕ್ಕೆ ಏನು ಮಾಡುತ್ತಾರೆಂದರೆ ವಾಸ್ತವಿಕವಾಗಿ ಅಲ್ಲಿ ಎಲ್ಲೂ ರಸ್ತೆ ಮಾಡಲಿಕ್ಕೆ ಆಗದೇ ಇದ್ದಂತಹ ಕಡೆ 80 ಅಡಿ ಹಾಕುತ್ತಾರೆ. ಎಲ್ಲಿ ಲ್ಯಾಂಡ್ ಸುಲಭವಾಗಿ ಸಿಕ್ಕುತ್ತದೆ, ಅಲ್ಲಿ ವಿಶಾಲವಾಗಿ ರಸ್ತೆ ಮಾಡಬಹುದು, ಆದರೆ, ಅಲ್ಲಿ 80 ಅಡಿ ರಸ್ತೆ ಮಾಡುವ ಬದಲು 30 ಅಡಿ ರಸ್ತೆ ಮಾಡುತ್ತಾರೆ. ಇದು practical ಆಗಿ ಇರುವಂತಹದ್ದಾಗಿದೆ. ಈ ಬಗ್ಗೆ ಇರುವಂತಹ ಒಂದು ಪ್ಲಾನ್ ಅನ್ನು ನಾನು ತರಲಿಲ್ಲ. Connectivity ಎಲ್ಲಿ ಮಾಡಬೇಕು; ಮುಖ್ಯ ರಸ್ತೆಗಳಲ್ಲಿ ಮಾಡುವುದಿಲ್ಲ, ಸಂದಿಗೊಂದಿಗಳಲ್ಲಿ ಅಲ್ಲಿ ಮಾಡುವುದಿಲ್ಲ, ಸಂದಿ-ಗೊಂದಿಗಳಲ್ಲಿ ಕಟ್ ಮಾಡುವುದು,

ಇಲ್ಲಿಂದ ಅಲ್ಲಿಗೆ 80 ಅಡಿ ರೋಡ್ ಮಾಡಿದರೆ, ಇಲ್ಲಿಂದ ಮತ್ತೆ 30 ಅಡಿ ರೋಡ್‌ಮಾಡಿ ಕಲ್ಪಿಸುವುದು. ಅದು Continuity ಇರುವುದಿಲ್ಲ. Planning Committee ಯವರು ಒಂದು ಕಾರ್ಡ್ ರೋಡ್ ಮಾಡಿದರು. ಅದಕ್ಕೆ 100 ವರ್ಷಗಳ ಪ್ಲಾನಿಂಗ್ ಇರಬೇಕಾಗಿತ್ತು. ಈಗ ಬೆಂಗಳೂರು ಸುತ್ತ-ಮುತ್ತ ಕಾರ್ಡ್ ರೋಡ್‌ಗಳನ್ನು ಏನು ಮಾಡಿದ್ದಾರೆ, 100 ವರ್ಷಗಳ 80 ಅಡಿ ರೋಡ್‌ಗೆ ಸಂಪರ್ಕ ಪ್ಲಾನಿಂಗ್‌ನಲ್ಲಿ ಅಥವ 8 ಪದಗಳ ರಸ್ತೆಗಳನ್ನು ಮಾಡಿದ್ದರೆ ಇವತ್ತು ಬೆಂಗಳೂರಿನಲ್ಲಿ ಈ ರೀತಿಯ congestion ಇರುತ್ತಿರಲಿಲ್ಲ. ಬೆಂಗಳೂರಿನಲ್ಲಿ ಸಾಕಷ್ಟು ಜಾಗ ಲಭ್ಯ ಇತ್ತು. ಆಗ ರೋಡ್‌ಗಳನ್ನು sufficient ಆಗಿ widen ಮಾಡಿದ್ದರೆ, ಅಥವಾ reserve ಮಾಡಿದ್ದರೆ ಅವಕಾಶವಿತ್ತು. ಎಂದರೆ 2-2 ಪದ ಮಾಡಿ ಕಾರ್ಡ್ ರೋಡ್ ಮಾಡಿದ್ದಾರೆ. ಆ ಕಾರ್ಡ್ ರೋಡ್ ಮಾಡಿದ ಮೇಲೆ ಅವುಗಳು ಸಹ congest ಆಗಿ, ಇವತ್ತಿನ ದಿವಸ ಚಿಕ್ಕಪೇಟೆ ರೀತಿಯಲ್ಲಿ ಆಗಿವೆ. ಉದಾಹರಣೆಗೆ, ನೈಸ್ ರೋಡ್ ಮಾಡಿದ್ದಾರೆ. ಅಲ್ಲಿಗೆ ಹೋಗಿ ನೋಡಿ, ಅಲ್ಲಿ ಎಷ್ಟು congestion ಇದೆ, ಬೇರೆ ಕಡೆ ಹೋಗಿ ನೋಡಿ, ಅಲ್ಲಿ ಎಷ್ಟು congestion ಇದೆ ನೋಡಿ. ಅಂದರೆ ಯುನಿವರ್ಸಿಟಿಗೆ ಮಾಗಡಿ ರೋಡ್ ಮೇಲೆ ಒಂದು ಕಾರ್ಡ್ ರೋಡ್ ಹೋಗುತ್ತದೆ ನೋಡಿ. ಹೋಗುವ ರೋಡ್ ಅದು ಚಿಕ್ಕಪೇಟೆ ರೋಡ್ ರೀತಿಯಲ್ಲಿ ಆಗಿದೆ. ಅಲ್ಲಿ ಹೋಗಲಿಕ್ಕೆ ಆಗುವುದಿಲ್ಲ. ಅವರಿಗೆ vision ಇಲ್ಲ. ಎಷ್ಟು ವರ್ಷಗಳಿಗೆ ಬೆಂಗಳೂರಿನ ಬೆಳವಣಿಗೆ ಇದೆ, ಎಷ್ಟು Width ಇಡಬೇಕು, ಮತ್ತು ಇವತ್ತು ಸ್ಥಳ ಲಭ್ಯತೆ ಇದ್ದಾಗ ಚಿಕ್ಕದು ಮಾಡಿ ಅಮೇಲೆ ಬಿಲ್ಡಿಂಗ್ ಕಟ್ಟಿದ ಮೇಲೆ ಟಿಡಿಆರ್ ತರುವುದಾಗಿದೆ. ಬಿಲ್ಡಿಂಗ್ ಹೊಡೆಯುವುದು, ಅವರಿಗೆ ಪರಿಹಾರವನ್ನು ಕೊಡುವುದು. ಮುಖ್ಯ ರಸ್ತೆಯನ್ನು ಯಾವ ರೀತಿ ಮಾಡಬೇಕೆನ್ನುವುದರಲ್ಲಿ ಯೋಜನಾ ಇಲಾಖೆಯ Planning Committee ಯವರಿಗೆ ದೂರದೃಷ್ಟಿ ಕಡಿಮೆ ಇದೆ. ಈ ನಿಟ್ಟಿನಲ್ಲಿ ಅವರು ಗಮನಹರಿಸಬೇಕೆನ್ನುವುದು ನನ್ನ ಅಭಿಪ್ರಾಯ. ಮತ್ತೆ ಶುಲ್ಕ ನಿಗದಿ ಮಾಡುವಂತಹದ್ದು. ಇದಕ್ಕೆ ಒಂದು existing fees ಇದೆ. ಉತ್ತಮತೆಯ ಶುಲ್ಕ ಅಂದರೆ development charges ಅನ್ನು ಇಂಡಸ್ಟ್ರೀಗೆ ಇಷ್ಟು, ರೆಸಿಡೆನ್ಸಿಗೆ ಇಷ್ಟು, ಇವೆರಡನ್ನೂ ಬಿಟ್ಟು ಇತರೆ ಎಂದು ಇನ್ನೊಂದು ಇದೆ. ನಾನು ಯಾವುದೇ ಲೇಔಟ್ ಮಾಡಿಲ್ಲ, ಅದರ ವ್ಯವಹಾರ ನನಗೆ ಗೊತ್ತಿಲ್ಲ. ಆದರೆ, ನಾವು ಒಂದು ಧರ್ಮ ಸಂಸ್ಥೆಯನ್ನು ಮಾಡಿದೆವು. ಈ ಸಂಸ್ಥೆಗೆ ಉತ್ತಮತೆಯ ಶುಲ್ಕವನ್ನು ಕಟ್ಟಬೇಕೆಂದರು. ಹಿಂದೆ ಇದ್ದಂತಹ ಮಹರಾಯ ಅವರು ಇದಕ್ಕೆ ಒಂದು square meterಗೆ 75 ರೂಪಾಯಿಗಳನ್ನು ಹಾಕಿದರು. ಇಂಡಸ್ಟ್ರಿಯಲ್ ರೇಟ್ ಹಾಕಿದರು. ಇದನ್ನು ಏತಕ್ಕೆ ಹಾಕಿದ್ದೀರಿ ಎಂದು ನಾನು ಅವರಿಗೆ ಕೇಳಿದರೆ, ನಾನು ಹಾಕಿದ್ದೇನೆ, ನೀವು ಬೇಕಾದರೆ ಬದಲಾವಣೆ ಮಾಡಿಸಿಕೊಳ್ಳಿ ಎಂದು ಹೇಳಿದರು. ಇತರೆ ಎಂದು ಇದೆಯಲ್ಲಾ, ಅದರಲ್ಲಿ ಹಾಕಿದರು. ಇತರೆಯಲ್ಲಿ ಧರ್ಮ ಸಂಸ್ಥೆಗೆ ಎಂದು ಎಲ್ಲೂ ಇಲ್ಲ. ಬಿಎಂಆರ್‌ಡಿ.ಯಲ್ಲಿ ಇದ್ದಂತಹ ಮಹೇಂದ್ರ ಅವನು ಸಾವಿರಾರು ಕೋಟಿ ರೂಪಾಯಿಗಳನ್ನು ಮಾಡಿ ಸ್ವಯಂ ನಿವೃತ್ತಿಯನ್ನು ತೆಗೆದುಕೊಂಡು ನೂರಾರು ಕೋಟಿ ಬೆಲೆ ಬಾಳುವಂತಹ ಇಂಡಸ್ಟ್ರೀ ಮಾಡಿಕೊಂಡು ಆರಾಮ ಆಗಿ ಇದ್ದಾರೆ. ಏಕೆಂದರೆ, ಇಲ್ಲಿ ಇದ್ದರೆ ಸಮಸ್ಯೆ ಎಂದು ಹೇಳಿ ಹೊರಟು ಹೋದರು. ಕೊನೆಗೆ ಈ ವಿಚಾರವಾಗಿ ನಾನು ಇಲ್ಲಿ ಹೌಸ್‌ನಲ್ಲಿ raise ಮಾಡಿದೆ. ನಮ್ಮದೇ ಸರ್ಕಾರ ಇದ್ದರೂ ಸಹ ಅದನ್ನು ಸರಿಪಡಿಸಲಿಕ್ಕೆ ಆಗಲಿಲ್ಲ. ಅವನು ಇತರೆ ಎಂದು ಇದೆ ಎಂದು ಹೇಳುತ್ತಾನೆ. ಇತರೆ ಎಂದರೆ ಧರ್ಮ ಸಂಸ್ಥೆಗೆ ಎಂದು ಎಲ್ಲಿ ಇದೆ, ಸ್ಕೂಲ್‌ಗೆ ಆದ್ದರಿಂದ, ಗರಿಷ್ಠ ರೇಟ್ ಆದ ಇಂಡಸ್ಟ್ರಿ ರೇಟ್ ಹಾಕುತ್ತೇನೆಂದು ಹೇಳುತ್ತಾನೆ. ಬಂತು. ಸದನದಲ್ಲಿ ಬಂದು ಗಲಾಟೆ ಮಾಡಿದ ಮೇಲೆ ಆಗ ಮುಖ್ಯಮಂತ್ರಿಗಳು ಆ ಕಡತವನ್ನು ತರಸಿಕೊಂಡು ನೋಡಿದ ಮೇಲೆ ಇತರೆ ಎನ್ನುವ ರೇಟ್ ಹಾಕಿ ಕೊಟ್ಟರು. ಅಂದರೆ ಎಷ್ಟು harassment ನಡೆಯುತ್ತದೆ ಎನ್ನುವುದಕ್ಕೆ ಅದು ಒಂದು ದೊಡ್ಡ ಉದಾಹರಣೆ. ಆದರೆ, ಫೀಸ್ ನಿಗದಿ ಮಾಡುವಾಗ specific ಆಗಿ ಯಾವ್ಯಾವ ಐಟಂಗಳಿಗೆ ಎಷ್ಟೆಷ್ಟು ಎಂದು ಹೇಳಿ specify ಮಾಡಿ. ಎಂದು ಎಲ್ಲಿ ಇದೆ? ಆ ವಿಚಾರ ಸದನಕ್ಕೆ ಇಲ್ಲವೆಂದು ಹೇಳಿದರೆ ಅಂತಹ ಖದೀಮರಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆ ಮನುಷ್ಯ ದೊಡ್ಡ ಖದೀಮ. ಮತ್ತೆ ಇನ್ನೊಂದು ವಿಷಯ ಏನೆಂದರೆ, ತಾತ್ಕಾಲಿಕ ಬಡಾವಣೆ ನಕ್ಷೆ ಎಂದು approval ಮಾಡಿದ್ದಾರೆ. ತಾತ್ಕಾಲಿಕವಾಗಿ ಎಂದು ಏತಕ್ಕೆ ನೀವು approval ಮಾಡುತ್ತೀರಿ, ಕೆಲವು ಕಡೆ ಏನಾಗಿದೆ ಎಂದರೆ ಈಗಾಗಲೇ ಒಂದು ಬಾರಿ ನೀವು ಬಡಾವಣೆ ಮಾಡುತ್ತೀರಿ, 40% ಅಥವಾ 60% ರಿಲೀಸ್ ಮಾಡುತ್ತೀರಿ, ಅದಾದ ಮೇಲೆ final ಮಾಡುವಾಗ ಏನು ಮಾಡುತ್ತಾರೆಂದರೆ ಅದು ಸರಿಯಿಲ್ಲ, ಇದು ಸರಿಯಿಲ್ಲವೆಂದು ಹೇಳಿ ನೂರೆಂಟು ನೆಪಗಳನ್ನು ಹೇಳಿಕೊಂಡು, ಅದರಲ್ಲಿ ಇವತ್ತು ದುರಪಯೋಗವಾಗುತ್ತಿರುವುದು ಹೆಚ್ಚಾಗುತ್ತಿದೆ. ಆದರೆ, ನೀವು ತಾತ್ಕಾಲಿಕ ನಕ್ಷೆ ಮತ್ತು ಕಾಯಂ ನಕ್ಷೆ ಎಂದು ಎಲ್ಲಿದೆ? ನೀವು ಒಂದು ಬಾರಿ ನಕ್ಷೆಯನ್ನು

approval ಮಾಡುತ್ತೀರಿ, ಅದನ್ನು ಅವರು ಸೇಲ್ ಮಾಡುವುದು, ಮತ್ತೊಂದು ಮಾಡುವುದು, public utility ಆಗಿ ಹೋಗುತ್ತದೆ. Public utility ಆದಮೇಲೆ ನೀವು ಕಾಯಂ ನಕ್ಷೆ ಕೊಡುವಾಗ ಇನ್ನೊಂದು ವ್ಯತ್ಯಾಸ ಮಾಡಿದಾಗ ಅವನ ಗತಿ ಏನಾಗಬೇಕು. ಸಾರ್ವಜನಿಕವಾಗಿ ಕೊಂಡುಕೊಂಡವನು ಏನಾಗಬೇಕು? ಇಲ್ಲವೆಂದು ಹೇಳಿದರೆ ಅಂತಹ ಖದೀಮರಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆ ಮನುಷ್ಯ ದೊಡ್ಡ ಖದೀಮ. ಮತ್ತೆ ಇನ್ನೊಂದು ವಿಷಯ ಏನೆಂದರೆ, ತಾತ್ಕಾಲಿಕ ಬಡಾವಣೆ ನಕ್ಷೆ ಎಂದು approval ಮಾಡಿದ್ದಾರೆ. ತಾತ್ಕಾಲಿಕವಾಗಿ ಎಂದು ಏತಕ್ಕೆ ನೀವು approval ಮಾಡುತ್ತೀರಿ, ಕೆಲವು ಕಡೆ ಏನಾಗಿದೆ ಎಂದರೆ ಈಗಾಗಲೇ ಒಂದು ಬಾರಿ ನೀವು ಬಡಾವಣೆ ಮಾಡುತ್ತೀರಿ, 40% ಅಥವಾ 60% ರಿಲೀಸ್ ಮಾಡುತ್ತೀರಿ, ಅದಾದ ಮೇಲೆ final ಮಾಡುವಾಗ ಏನು ಮಾಡುತ್ತಾರೆಂದರೆ ಅದು ಸರಿಯಿಲ್ಲ, ಇದು ಸರಿಯಿಲ್ಲವೆಂದು ಹೇಳಿ ನೂರೆಂಟು ನೆಪಗಳನ್ನು ಹೇಳಿಕೊಂಡು, ಅದರಲ್ಲಿ ಇವತ್ತು ದುರಪಯೋಗವಾಗುತ್ತಿರುವುದು ಹೆಚ್ಚಾಗುತ್ತಿದೆ. ಆದರೆ, ನೀವು ತಾತ್ಕಾಲಿಕ ನಕ್ಷೆ ಮತ್ತು ಕಾಯಂ ನಕ್ಷೆ ಎಂದು ಎಲ್ಲಿದೆ? ನೀವು ಒಂದು ಬಾರಿ ನಕ್ಷೆಯನ್ನು approval ಮಾಡುತ್ತೀರಿ, ಅದನ್ನು ಅವರು ಸೇಲ್ ಮಾಡುವುದು, ಮತ್ತೊಂದು ಮಾಡುವುದು, public utility ಆಗಿ ಹೋಗುತ್ತದೆ. Public utility ಆದಮೇಲೆ ನೀವು ಕಾಯಂ ನಕ್ಷೆ ಕೊಡುವಾಗ ಇನ್ನೊಂದು ವ್ಯತ್ಯಾಸ ಮಾಡಿದಾಗ ಅವನ ಗತಿ ಏನಾಗಬೇಕು. ಸಾರ್ವಜನಿಕವಾಗಿ ಕೊಂಡುಕೊಂಡವನು ಏನಾಗಬೇಕು?

ಶ್ರೀ ಐವನ್ ಡಿಸೋಜಾ (ನಾಮ ನಿರ್ದೇಶಕ):- ಮಾನ್ಯ ಸಭಾಪತಿಯವರೆ, ನಗರಾಭಿವೃದ್ಧಿ ಸಚಿವರು ತಂದಿರತಕ್ಕಂತಹ ತಿದ್ದುಪಡಿ ವಿಧೇಯಕ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) 2015 ಅನ್ನು ನಾನು ಸ್ವಾಗತ ಮಾಡುತ್ತೇನೆ. ಅವರ ಉದ್ದೇಶ ಸರಿಯಾಗಿದೆ. ಮಾನ್ಯ ಗಣೇಶ್ ಕಾರ್ಣಿಕ್ ಅವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. TDR (Transfer of Development Rights) ಏನು ಇವೆ ಇವು ಎಲ್ಲೋ ಒಂದು ಕಡೆ ಉಪಯೋಗ ಮತ್ತು ದುರುಪಯೋಗ ಎರಡೂ ಕೂಡ ಆಗುತ್ತಿದೆ. ಮಂಗಳೂರಿನಂತಹ ನಗರದ ಒಳಗಡೆ ನಾವು ಇದ್ದೇವೆ. ಮಂಗಳೂರು ನಗರಕ್ಕೆ ಎಲ್ಲಿಯೋ ಒಂದು ಕಡೆಯಲ್ಲಿ ಪ್ರಯೋಜನ ಆಗಬಹುದು ಎಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಹಿಂದೆ ಈ TDR Rights ಅನ್ನು ಬರೀ ಭೂಮಿಗೆ ಮಾತ್ರ ಕೊಡುತ್ತಿದ್ದರು. ಈಗ ನೀವು ತಿದ್ದುಪಡಿಯನ್ನು ಮಾಡುವ ಮೂಲಕ ಕಚೇರಿಗಳಿಗೂ ಕೂಡ ಕೊಡುವುದಕ್ಕೆ ಹೊರಟಿದ್ದೀರಿ. ನಮಗೆ ಕಟ್ಟಡಗಳ ಭಾಗವನ್ನು ಕೊಡುವುದರ ಮುಖಾಂತರ ರಸ್ತೆಗಳ ಅಗಲೀಕರಣ ಮಾಡುವುದಕ್ಕೆ ಸಾಧ್ಯವಾಗಬಹುದು.

ಶ್ರೀ ದಯನಂದ:- ಈ ಬಿ.ಬಿ.ಎಂ.ಪಿ. ಯಲ್ಲಿ scandals ಬಹಳ ದೊಡ್ಡದಿರುತ್ತದೆ. ಅಲ್ಲಿ ಕಟ್ಟಡ 1000 ಅಡಿ ಇದ್ದರೆ ಅದನ್ನು ಬರೆಯುವಾಗ 1 ಲಕ್ಷ ಅಡಿ ಎಂದು ಬರೆದು ಅದಕ್ಕೆ TDR ಅನ್ನು ಕೊಡುತ್ತಾನೆ. ಈ ರೀತಿಯ scandals ಇದೆ. ಅದು ಇನ್ನೂ ಕೂಡ ದಡ ಮುಟ್ಟಿಲ್ಲ. ಇದೆಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡು ಈ ತಿದ್ದುಪಡಿಯಲ್ಲಿ ಆ ರೀತಿ ಆಗದ ಹಾಗೆ ನೋಡಿಕೊಳ್ಳಬೇಕೆಂದು ನನ್ನ ಮನವಿ.

ಶ್ರೀ ಐವನ್ ಡಿಸೋಜಾ:- ನನ್ನ ವಿಚಾರವನ್ನು ಹೇಳುವುದಕ್ಕೆ ಬಯಸುತ್ತೇನೆ. ಗಣೇಶ್ ಕಾರ್ಣಿಕ್ ಅವರು ಹೇಳಿದ್ದನ್ನು ನಾನು ಪುಷ್ಟೀಕರಿಸುತ್ತೇನೆ. ಸುಮಾರು 20-30 ವರ್ಷಗಳ ಮುಂದೆ ಆಗತಕ್ಕಂತಹ ವಿಚಾರಗಳನ್ನು ನಾವು ಆಲೋಚನೆ ಮಾಡಿದರೆ, ಈ TDR ತೆಗೆದುಕೊಂಡು ಹೋದವನು ಎಲ್ಲಿ ಅಭಿವೃದ್ಧಿ ಮಾಡುತ್ತಾನೆಂದು ಹೇಳುವುದಕ್ಕೆ ಬರುವುದಿಲ್ಲ. ಈ ಕಾನೂನಿನ ಉಪಯೋಗವನ್ನು ಪಡೆದುಕೊಂಡು ಎಲ್ಲಿ ಅವರಿಗೆ TDR value ಸಿಗುತ್ತದೆ ಅಲ್ಲಿ ಅವರು ಅದನ್ನು ಅಲ್ಲಿ ಯಾರು ಅದು ಬೇರೆ ವಿಚಾರ. ಪೇಪರಿನಲ್ಲಿ purchase ಮಾಡುತ್ತಾರೆ. ನಗರದೊಳಗೆ ಅದನ್ನು ಉಪಯೋಗ ಮಾಡಿ ಎಂದು ಹೇಳಿದರೆಆಗುವುದಿಲ್ಲ. ಎಲ್ಲಿ ನಗರ ಬೆಳೆಯುತ್ತಿದೆ ಅಲ್ಲಿ ಅವರು ಕೇಳುವುದಕ್ಕೆ ಹೋಗುವುದಿಲ್ಲ. ಈ ಕಾನೂನಿನ ಪ್ರಕಾರ TDR ಅನ್ನು ಕೊಡುವುದು ಅಕ್ರಮವನ್ನು ಸಕ್ರಮ ಮಾಡುವುದು ಏನು ಇದೆ ಇದು ಒಳ್ಳೆಯದು. ಆದರೆ ಇದನ್ನು ಜಾರಿಗೆ ತರುವಾಗ ನೀವು ಬಹಳ ಜಾಗೃತರಾಗಿ ಇರಬೇಕಾಗುತ್ತದೆ. ಈ ಕಾನೂನನ್ನು strict ಆಗಿ follow ಮಾಡಬೇಕು. ವಿಧೇಯಕದ ಪುಟ ಸಂಖ್ಯೆ 10, 69 ರಲ್ಲಿ, ಇದರಲ್ಲಿ ಮಾಸ್ಟರ್ ಪ್ಲಾನ್‌ನಲ್ಲಿ ಕೆಲವು ಉದ್ದೇಶಗಳಿಗಾಗಿ ಗೊತ್ತುಪಡಿಸಿದ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವುದು ಎಂದು ತಾವು ಹೇಳುತ್ತೀರಿ. ತಾವು ಬೆಂಗಳೂರಿನಲ್ಲಿ ಕುಳಿತುಕೊಂಡು ಮಾಸ್ಟರ್ ಪ್ಲಾನ್ ಅನ್ನು ತಯಾರು

ಮಾಡುತ್ತೀರಿ. ಯಾವುದೇ ಜಾಗವನ್ನು open spacC ಬಿಡಬೇಕು. ಪಾರ್ಕಿಗೆ, ರಸ್ತೆಗೆ ಇಷ್ಟು ಜಾಗ ಬಿಡಬೇಕು ಇನ್ನು ಯಾವುದೋ ಉದ್ದೇಶಕ್ಕೆ ಬಿಡಬೇಕೆಂದು ಇಲ್ಲಿ ಕುಳಿತುಕೊಂಡು ತಾವು ಹೇಳುತ್ತೀರಿ. ಮಾಸ್ಟರ್ ಪ್ಲಾನ್ ಏನು ಇದೆ ಅದು ನಿಮ್ಮದು. ನಮ್ಮಂಥಹವರು objection ಕೇಳಬಹುದು. ಆದರೆ ಇದು ಎಷ್ಟು ಜನರಿಗೆ ಗೊತ್ತಿರುತ್ತದೆ. ಆಕ್ಷೇಪಣೆಯನ್ನು ಹಾಕುವುದಕ್ಕೆ ಬರುತ್ತಾರೋ ಬಿಡುತ್ತಾರೋ ಕೊಡುತ್ತೀರಿ. ಆದರೆ ಇದು ಸಾಮಾನ್ಯ ಜನರ ಅರಿವಿಗೆ ಬರುವುದಿಲ್ಲ. ಆದರೆ ಮಾಸ್ಟರ್ ಪ್ಲಾನ್‌ನಲ್ಲಿ ತೋರಿಸಿದಂತಹ ನೀವು ವಶಪಡಿಸಿಕೊಂತಹ ಸ್ಥಳವನ್ನು 5 ವರ್ಷಗಳ ಕಾಲ ತಾವು ಉಪಯೋಗ ಮಾಡದಿದ್ದರೆ, ಆ ಮಾಸ್ಟರ್ ಪ್ಲಾನ್‌ನಲ್ಲಿ ನೀವು ತೋರಿಸಿದಂತಹ ಜಾಗ ಏನು ಇದೆ ಅದನ್ನು ನೀವು ಅಭಿವೃದ್ಧಿಗೊಳಿಸುವುದಕ್ಕೆ ಆಗಲಿಲ್ಲವೆಂದರೆ, ಆ ಭೂಮಿ ಆ ಜಾಗ ಯಾರು ಮಾಲೀಕರು ಇರುತ್ತಾರೆ ಅವರಿಗೆ ಹೋಗಬೇಕು ಎಂದು ಹೇಳುವುದು ತಮ್ಮ ತಿದ್ದುಪಡಿಯಲ್ಲಿ ಇದೆ. ತಾವು ಹೋದ ಮೇಲೆ ಪುನ: ನೀವು publication ಕೊಟ್ಟು ಅದರ ಸುತ್ತಮುತ್ತಲಿನ ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಅವರು ಉಪಯೋಗಿಸಿದ್ದಾರೆ ಆ ಉದ್ದೇಶಕ್ಕೆ ಕೊಡಬೇಕೋ ಬೇಡವೋ ಎಂದು ಹೇಳಿ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಯೋಜನಾ ಪ್ರಾಧಿಕಾರದವರು ಏನು ವಿಚಾರ ಮಾಡುತ್ತಿದ್ದೀರಿ ಅದರ ಬಗ್ಗೆ ವಿಚಾರ ಮಾಡಬೇಕಾಗಿದೆ. ಒಮ್ಮೆ ನೀವು ಆ ಜಾಗವನ್ನು ಸ್ವಾಧೀನ ಮಾಡುತ್ತೇವೆಂದು ಹೇಳಿ 5 ವರ್ಷ ಅವನನ್ನು ಕತ್ತಲೆಯಲ್ಲಿ ಇಡುತ್ತೀರಿ. ಇದರಿಂದಾಗಿ ಅವನು ಆ ಜಾಗವನ್ನು ಅಭಿವೃದ್ಧಿ ಮಾಡುವುದಕ್ಕೆ ಆಗುವುದಿಲ್ಲ. ಅದಾದ ಮೇಲೆ ನಿಮ್ಮ ಪರ್ಪಸ್‌ಗೆ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದ ಮೇಲೆ ಪುನ: ಅದನ್ನು ಅವನ ಪರ್ಪಸ್ ಉಪಯೋಗಿಸುವುದಕ್ಕೆ ಕೊಡುವುದನ್ನು ಬಿಟ್ಟು ನೀವು ಪುನ: ಪತ್ರಿಕೆಯಲ್ಲಿ ಪ್ರಕಟಣೆ ಕೊಡು ಎಂದು ಹೇಳುವುದು, ಕಷ್ಟ ಕೊಡುವುದು ಇದೆಯಲ್ಲಾ ಇದು ಎಲ್ಲೋ ಒಂದು ಕಡೆಯಲ್ಲಿ impeachment of Fundamental Rights ಎಂದು ನನಗನ್ನಿಸುತ್ತದೆ. ಅದು ಅವನ ಹಕ್ಕಿಗೆ ಧಕ್ಕೆ ಬರುವ ಕೆಲಸ ಆಗುತ್ತದೆ ಇದರ ಬಗ್ಗೆ ತಾವು ಆಲೋಚನೆ ಮಾಡಬೇಕು. ನೀವು ಉಪಯೋಗ ಮಾಡುವುದಾದರೆ ತೆಗೆದುಕೊಳ್ಳಿ. ಆದರೆ ನಿಮ್ಮ ಬಳಿ ಅದನ್ನು ಅಭಿವೃದ್ಧಿ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ ಮೇಲೆ ಆ ಜಾಗವನ್ನು ಅವನ ಪರ್ಪಸ್ ಉಪಯೋಗ ಮಾಡುವುದಿದ್ದರೆ, ಅದರ ಸುತ್ತಮುತ್ತಲಿನ ಜಾಗವನ್ನು ಉಪಯೋಗ ಮಾಡಿದ್ದೇನೆಂದು ಪತ್ರಿಕೆಯಲ್ಲಿ ಪ್ರಕಟಣೆ ಮಾಡಬೇಕು. ಮನ: ಅಥಾರಿಟಿಗೆ ಹೋಗಿ ಅಲ್ಲಿಂದ discretionary power of the Authority ಎಂದು ಹೇಳುವುದು ಏನು ಇದೆ ಇದು ಸಮಂಜಸವಲ್ಲ. ಈ ಬಗ್ಗೆ ವಿವರಣೆಯನ್ನು ಕೊಡಬೇಕೆಂದು ಹೇಳಬಯಸುತ್ತೇನೆ. ಪುಟ 8 ರಲ್ಲಿ 17 ನಲ್ಲಿನ ಲೇ ಔಟ್ ಬಗ್ಗೆ ಮಾತನಾಡಬಯಸುತ್ತೇನೆ. ಲೇಔಟ್ ಮಾಡುವುದರ ಬಗ್ಗೆ ಮಾತನಾಡುತ್ತೀರಿ. ಈ ಹಿಂದೆ ಲೇಔಟ್‌ಗಳನ್ನು ಹೇಗೆ ಮಾಡುತ್ತಿದ್ದರು ಎಂದರೆ, ಜಾಗವನ್ನು ತೆಗೆದುಕೊಳ್ಳುವುದು ಅವರಿಗೆ ಬೇಕಾದಂತೆ ಕಟ್ಟುವುದು ನೊಂದಣಿ ಮಾಡಿಸಿಕೊಂಡು ಹೋಗುವುದು ಈ ರೀತಿ ಆಗುತ್ತಿತ್ತು. ತಾವು ಉತ್ತಮ ಕೆಲಸ ಮಾಡಿದ್ದೀರಿ. ಅವರು ಲೇಔಟ್ ಮಾಡಬೇಕು open space ಎಷ್ಟು ಇಡಬೇಕೋ ಅಷ್ಟು ಇಡಬೇಕು. ಪಾರ್ಕಿಗೆ ಜಾಗ ಇಡಬೇಕು. ರಸ್ತೆ ಮತ್ತು public amenities ಗೆ ಜಾಗವನ್ನು ಒದಗಿಸಿ ಕೊಡಬೇಕು ಮತ್ತು ಅದನ್ನು ಮಾಡಿಕೊಡಬೇಕು. ಮತ್ತು ಇದೆಲ್ಲವನ್ನೂ ಮಾಡಿಕೊಟ್ಟ ಮೇಲೆ register deed ಅನ್ನು ಕೊಟ್ಟ ಮೇಲೆ ಅವನು ಬೇರೆಯವರಿಗೆ ಮಾರಾಟ ಮಾಡುವುದಕ್ಕೆ, ವರ್ಗಾವಣೆ ಮಾಡುವುದಕ್ಕೆ ಅವಕಾಶ ಕೊಡುತ್ತೀರಿ. ನಾನು ಇದನ್ನು ಸ್ವಾಗತ ಮಾಡುತ್ತೇನೆ. ಮಾನ್ಯ ದಯಾನಂದ್ ಅವರು ಮಾಫಿಯಾದವರು ಇದ್ದಾರೆ ಎಂದು ಹೇಳಿದರು. ಇದರಿಂದಾಗಿ ಒಂದು ದಂಧೆಯಾಗುತ್ತಿದೆ ಎಂದು ಹೇಳುತ್ತಿದ್ದೀರಿ ಅದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಕಟ್ಟುನಿಟ್ಟಾಗಿ ಫಾಲೋ ಮಾಡಬೇಕು. ಕಾನೂನನ್ನು ತಂದರೆ ಮಾತ್ರ ಸಾಲದು. ಈ ಕಾನೂನನ್ನು ಮೀರಿ ಕೆಲಸ ಮಾಡತಕ್ಕಂತಹ ಜನರು ಇದ್ದಾರೆ. ಇವೆಲ್ಲವನ್ನೂ ಮೀರಿ ಲೇಔಟ್ ಮಾಡತಕ್ಕಂತಹ ಮಾಫಿಯಾದವರು ಬಿಲ್ಡರ್‌ಗಳು ಇದ್ದಾರೆ. ಇದರ ಬಗ್ಗೆ ನಿಮ್ಮ ಅಧಿಕಾರಿಗಳು ಗಮನ ಹರಿಸಿ ಇದನ್ನು ಜಾರಿಗೆ ತರುವುದಕ್ಕೆ ಮತ್ತು ಇದರ supervision ಅನ್ನು ಮಾಡುವುದಕ್ಕೆ ಸೂಕ್ತವಾದ ಅಧಿಕಾರಿಗಳನ್ನು ನೇಮಕ ಮಾಡುವ ಅವಶ್ಯಕತೆ ಇದೆ ಎಂದು ಹೇಳಬಯಸುತ್ತೇನೆ. ಬೇರೆ ಎಲ್ಲಾ ವಿಚಾರಗಳನ್ನು ಹೇಳಿದ್ದೀರಿ. ಈ ತಿದ್ದುಪಡಿಯನ್ನು ಸ್ವಾಗತ ಮಾಡಿ ಅಭಿನಂದನೆಯನ್ನು ಸಲ್ಲಿಸಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಅಶ್ವತ್ಥನಾರಾಯಣ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಐವಾನ್ ಡಿಸೋಜಾ ಅವರು ಈ ವಿಧೇಯಕವನ್ನು ಸ್ವಾಗತಿಸಿ ನಂತರ ಬಹಳ ಮಾತನಾಡಿದರು. ನಾನು ಇದನ್ನು ಸ್ವಾಗತ ಮಾಡಿ ಸುಮ್ಮನೆ ಕುಳಿತುಕೊಂಡು ಬಿಡುತ್ತಾರೆಂದು ಭಾವಿಸಿದ್ದೆನು. ಇದರಲ್ಲಿನ negative ವಿಷಯಗಳ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದಾರೆ.

ಮಾನ್ಯ ಪುಟ್ಟಸ್ವಾಮಿಯವರು ಮಾತನಾಡಿದ ವಿಚಾರದ ಬಗ್ಗೆ ನಾನು ಮುಂದುವರೆದು ಒಂದು ವಿಷಯವನ್ನು ಹೇಳಬಯಸುತ್ತೇನೆ. ಈ ಪ್ಲಾನ್‌ನಲ್ಲಿ ತಾತ್ಕಾಲಿಕ ಪ್ಲಾನ್ ಆಮೇಲೆ ಪರ್ಮನೆಂಟ್ ಪ್ಲಾನ್ ಎಂದು ಹೇಳುತ್ತಾರೆ. ಮಾಸ್ಟರ್ ಪ್ಲಾನ್ ಎಂದು ಮಾಡುತ್ತಾರೆ. ಮಾನ್ಯ ಸಚಿವರಿಗೆ ಬೆಂಗಳೂರು ಸುತ್ತ ಮುತ್ತ ಆಗುತ್ತಿರುವಂತಹ ಅನುಭವಗಳನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. Private Layouts, Housing Societies ನಿಮ್ಮ ಬೆಂಗಳೂರು ಮಹಾನಗರವನ್ನು ಬಿಟ್ಟು ನಿಮ್ಮ ವ್ಯಾಹಿತಿಗೆ ಬರತಕ್ಕಂತಹ ನೆಲಮಂಗಲ, ಮಾಗಡಿ, ಚನ್ನಪಟ್ಟಣ, ರಾಮನಗರ Development Authority ಅಲ್ಲಿ ಯಾರಾದರೂ ಡೆವಲಪರ್ ಯಾರಾದರೂ 500-200 ಎಕರೆಯಲ್ಲಿ ಲೇಔಟ್ ಮಾಡುವ ಸಂದರ್ಭದಲ್ಲಿ ಒಂದು ಪ್ಲಾನ್ ಅನ್ನು ಮಂಜೂರು ಮಾಡಿಕೊಡುತ್ತಾರೆ Concerned Local Planning Authority ಮಾಡಿಕೊಟ್ಟ ಮೇಲೆ ನಿವೇಶನ ವಿತರಣೆಯಾದ ನಂತರ ಮತ್ತೆ modification plan ಎಂದು ಅರ್ಜಿ ಹಾಕುತ್ತಾರೆ. ಈ modification plan ಎಂದು apply ಮಾಡಿ ಸಿವಾ ಜಾಗವನ್ನು 10 ಎಕರೆ 5 ಎಕರೆ ಬಿಟ್ಟಿರತಕ್ಕಂತಹ ಸಿ.ಎ. ಜಾಗವನ್ನು, ಎಲ್ಲಿ 30440 ಅಡಿ ರಸ್ತೆ ಬಂದಿರುತ್ತದೆ, ಅದರ ಪಕ್ಕದಲ್ಲಿ ಯಾರದ್ದೋ ಒತ್ತಡಕ್ಕೆ ಮಣಿದು, ಇಲ್ಲವೇ ಆ ಟೌನ್ ಪ್ಲಾನಿಂಗ್‌ನಲ್ಲಿ ಇರತಕ್ಕಂತಹ ಅಧಿಕಾರಿಗಳ ಒತ್ತಡಕ್ಕೆ ಮಣಿದು, ಇಲ್ಲವೇ ಸಂಬಂಧಿಕರಿಗೆ ನಿವೇಶನವನ್ನು ಕೊಡುವುದಕ್ಕೋಸ್ಕರ ಆ ಸಿ.ಎ. ಜಾಗವನ್ನು ಕಡಿಮೆ ಮಾಡಿಕೊಂಡು modification plan ಎಂದು ಇನ್ನೊಂದು ಮಾಡಿಕೊಳ್ಳುತ್ತಾರೆ. ದಯಮಾಡಿ ಈ ವಿಧೇಯಕವನ್ನು ಸದುದ್ದೇಶವನ್ನು ಇಟ್ಟುಕೊಂಡು ಇದನ್ನು ಇಲ್ಲಿ ತರುತ್ತಿದ್ದೀರಿ. ಆದರೆ ಆ ಸದುದ್ದೇಶವನ್ನು ದುರುಪಯೋಗ ಪಡಿಸಿಕೊಳ್ಳುವುದೇ ಜಾಸ್ತಿಯಾಗುತ್ತದೆ. ಬೆಂಗಳೂರಿನಲ್ಲಿ ಆಗಿರತಕ್ಕಂತಹ ಕೆಲವೊಂದು ಅನುಭವಗಳು ಕೆಲವೊಂದು ಅನುಭವಗಳು ಇದೆಯಲ್ಲಾ ಇದನ್ನು ನೋಡಿ ಹೇಳುತ್ತಿದ್ದೇನೆ. ವಿಧಾನ ಸೌಧಕ್ಕೆ ಬರುವುದಕ್ಕೆ ಒಂದು ರಸ್ತೆ ಇದೆಯಲ್ಲಾ ಅದರ ಪಕ್ಕದಲ್ಲಿ ರಸ್ತೆಯನ್ನು ಅಗಲ ಮಾಡಬೇಕೆಂದು 30 140 50' $60' ಜಾಗವನ್ನೋ acquire ಮಾಡಿಕೊಳ್ಳುತ್ತಾರೆ ಎಂದು ಇಟ್ಟುಕೊಳ್ಳಿ. ಈ ನಿಮ್ಮ ಅಧಿಕಾರಿಗಳು ರಸ್ತೆಯ ಸೆಂಟರನಿಂದ ಅವನಿಗೆ ಹದಿನೈದು ಅಡಿ ಸೇರಿಸಿಕೊಂಡು ಒಟ್ಟಾರೆ ಅವನಿಗೆ ಟಿ.ಡಿ.ಆರ್. ಕೊಟ್ಟುಬಿಡುತ್ತಾರೆ. ಅವನ 15' 40' ಜಾಗ ಮಾತ್ರ ಅಕ್ವೇರ್ ಆಗಿರುತ್ತದೆ. ಅದಕ್ಕೆ ಸುಮಾರು 600 ಅಡಿ ಹೋಗಬಹುದು. ಆದರೆ ಅಧಿಕಾರಿಗಳು ಸೆಂಟರ್ ಆಫ್ ರಸ್ತೆಯಿಂದ ಅವನಿಗೆ ಹದಿನೈದು ಅಡಿ ಸೇರಿಸಿಕೊಂಡು ಒಟ್ಟಾರೆ ಟಿ.ಡಿ.ಆರ್. ಅನ್ನು ಅವರಿಗೆ ಏನು ಬೇಕು ಅದನ್ನು ತೆಗೆದುಕೊಂಡು ಕೊಟ್ಟುಬಿಡುತ್ತಾರೆ. ಬೆಂಗಳೂರಿನಲ್ಲಿ ಟಿ.ಡಿ.ಆರ್. ಬಜಾ ಎಂದು ಒಂದು ಟೀಮ್ ಇದೆ. ಇದೆಲ್ಲಾ ಖಾಸಗಿ ಇದೆ. ಅವರು ಟಿ.ಡಿ.ಆರ್. ಬ್ಯಾಂಕ್ ಎಂದು ಮಾಡಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ಯುಬಿಸಿಟಿ ಎಂದು ಹೈಫೈ ಸಿಟಿ ಇದೆ. ಅಲ್ಲಿ ಯಲಹಂಕ, ಏರ್‌ಪೋರ್ಟ್ ರೋಡ್, ದೇವನಹಳ್ಳಿ ರೋಡ್, ನೆಲಮಂಗಲ ರಸ್ತೆಯಲ್ಲಿನ 'ಸಿ' ಜೋನ್ಸ್, ಟಿ.ಡಿ.ಆರ್ ಅನ್ನು ಎ ಜೋನ್‌ಗೆ ತಂದು ಹಾಕಿಕೊಂಡಿದ್ದಾರೆ. 'ಸಿ' ಜೋನ್‌ನಲ್ಲಿ 1000-1500/ಒಂದು ಚದರ ಅಡಿಗೆ ದರ ಇದೆ. ಅವಂದು ರಸ್ತೆಗೆ ಸುಮಾರು ಮುನ್ನೂರು ಅಡಿ ಹೋಗಿರುತ್ತದೆ. 3000 ಅಡಿಗೆ ಒಂದುವರೆ ಪಟ್ಟು ಎಂದರೆ 4000 ಅಡಿ ಚದರ ಅಡಿ, ಅವನು 25000 ಅಡಿ ಚದರ ಅಡಿಯನ್ನು ಕೊಡುತ್ತಾನೆ. ಅವನು" ಸಿಬ್ಬಸಳ್ಳಿ ಒಂದು- ಯು.ಬಿ.ಸಿಟಿಗೋ, ಎಂ.ಜಿ. ರೋಡ್‌ನಲ್ಲಿ, ಹೈರೈಸ್ ಬಿಲ್ಡಿಂಗ್ ಕಟ್ಟುವವನು ಒಟ್ಟಾರೆ ಮಿಸ್‌ಯೂಸ್ ಮಾಡಿಕೊಳ್ಳುತ್ತಾನೆ. ಜಾಗವನ್ನು ಕನ್ಸರ್ನ್ ಲೋಕಲ್ ಅಥಾರಿಟಿಯವನು ತೆಗೆದುಕೊಂಡಿರುವುದಿಲ್ಲ. ಬೆಂಗಳೂರಿನಲ್ಲಿ ಇಂತಹವು ಸಾಕಷ್ಟು ನಿದರ್ಶನಗಳಿವೆ. ಕಡೆಗೆ ಅವನು ಟೈಮ್ ನೋಡಿಕೊಂಡು ಟಿ.ಡಿ.ಆರ್. ಫೆಸಿಲಿಟೀಸ್ ತೆಗೆದುಕೊಳ್ಳುತ್ತಾನೆ ಮತ್ತು ಈ ಜಾಗದ ಪೊಸಿಶನ್ ಕೂಡ ತೆಗೆದುಕೊಳ್ಳುತ್ತಾನೆ. ಇಂತಹ ನೂರಾರು ಘಟನೆಗಳು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಡೆಯುತ್ತಿವೆ. ನಾನು ಒಂದು ವರ್ಷದ ಹಿಂದೆ ಟಿ.ಡಿ.ಆರ್. ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಆದರೆ ಇದುವರೆಗೆ ನನಗೆ ಉತ್ತರ ಕೊಟ್ಟಿಲ್ಲ. ನಗರ ಪ್ರದೇಶದಲ್ಲಿ, ಪಟ್ಟಣ ಪ್ರದೇಶದಲ್ಲಿ ಅದರ ಬೆಳವಣಿಗೆಗಾಗಿ ಎನ್ನುವ ಉದ್ದೇಶದಿಂದ ಬೆಂಗಳೂರಿನಲ್ಲಿ ಟಿ.ಡಿ.ಆರ್. ಪದ್ಧತಿಯನ್ನು ನೀವು ತರಲು ಹೊರಟಿದ್ದೀರಿ. ಅದು ಒಳ್ಳೆಯದು. ಆದರೆ ನೀವು ತಂಮ್ ಈ ಬಿಲ್ ಪಾಸ್ ಆದ ತಕ್ಷಣವೇ ನಿಮ್ಮನ್ನು ನಮ್ಮನ್ನು ಯಾರು □□□□□□□ ಕೇಳುವುದಿಲ್ಲ. ಇದಕ್ಕೆ ಆದ ಒಂದು ಟೀಮ್ ಹುಟ್ಟಿಕೊಳ್ಳುತ್ತದೆ. ಇವೊತ್ತು ಏನಾದರು ಟಿ.ಡಿ.ಆರ್.ಗೆ ಇವನ ಇಷ ಡಿಮ್ಯಾಂಡ್ ಇದ್ದರೆ ಬೆಂಗಳೂರಿನಲ್ಲಿ ಟಿ.ಡಿ.ಆರ್.ಗೆ ಡಿಮ್ಯಾಂಡ್ ಇದೆ. ಮಂಗಳೂರಿನಲ್ಲಿ ಹೈರೈಸ್ / ಬಿಲ್ಡಿಂಗ್ಸ್ ಳು ಇವೆ. ಮತ್ತು ಎರಡನೇ ಮಹಾ ನಗರವಾಗಿ ಬೆಳೆಯುತ್ತಿದೆ, ಆದ್ದರಿಂದ ಅಲ್ಲಿ ಡಿಮ್ಯಾಂಡ್ wussth ಇದೆ. ಇನ್ನು ಸ್ವಲ್ಪ ಮೈಸೂರಿನಲ್ಲಿ ಇದೆ. ಇನ್ನು ಬೇರೆ ಭಾಗಗಳಲ್ಲಿ ಟಿ.ಡಿ.ಆರ್.ಗೆ ಅಷ್ಟು ಡಿಮ್ಯಾಂಡ್ ಇರುವುದಿಲ್ಲ. ಆದರೆ ಬೆಂಗಳೂರಿನ ಪಕ್ಕ

ನೆಲಮಂಗಲದಂತಹ ಕಡೆಯಲ್ಲಿರುವಂಥ ಡೆವಲಪರ್ರವರುಗಳು ಆ ಒಂದು ಕಡೆ ಟಿ.ಡಿ.ಆರ್. ರೈಟ್ಸ್ ತೆಗೆದುಕೊಳ್ಳುತ್ತಾರೆ, ಮತ್ತೊಂದು ಕಡೆ ಆ ಜಾಗದಲ್ಲಿ ಅವರೇ ಪೊಸಿಶನ್‌ನಲ್ಲಿರುತ್ತಾರೆ. ದಯಮಾಡಿ ಇದು ಆಗುವುದು ಬೇಡ. ಒಂದು ಸಣ್ಣ ಉದಾಹರಣೆಯನ್ನು ನಾನು ಕೊಡುತ್ತೇನೆ. ಮೈಲಹಳ್ಳಿ, ಕನ್ನಳ್ಳಿ, ಇವೆಲ್ಲವುಗಳ ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಬರತಕ್ಕಂಥ ಪ್ರದೇಶಗಳು. ಅಲ್ಲಿ ಸಾವಿರಾರು ಚದರ ಅಡಿ, ಎಕರೆ ಗಟ್ಟಲೇ ಟಿ.ಡಿ.ಆರ್. ತೆಗೆದುಕೊಂಡಿದ್ದಾರೆ. ಮತ್ತು ಅದನ್ನು ಮಾರಿಕೊಂಡಿದ್ದಾರೆ. ಅದರಿಂದ ಬಿಲ್ಡರ್ ಡೆವಲಪ್ ಆಗಿದ್ದಾರೆ. ಆದರೆ ಇಲ್ಲಿ ನಾವು ಆ ಜಾಗವನ್ನು ಕೂಡ ಪೊಸಿಶನ್ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಇವೊತ್ತಿನ ವರೆಗೆ ಹಾಗೆಯೇ ಬಿದ್ದಿದೆ. ಬಿಬಿಎಂಪಿಯು ಅಲ್ಲಿನ ಟಿ.ಡಿ.ಆರ್.ಗೆ ನೂರಾರು ಕೋಟಿ ರೂಪಾಯಿಗಳನ್ನು ಇನ್ವೆಸ್ಟ್ ಮಾಡಿದೆ. ಆದರೆ ಇವೊತ್ತು ಅಲ್ಲಿ ಏನೂ ಆಗಿಲ್ಲ. ಇದು ಅರ್ಧ ಗಂಟೆ, ಒಂದು ಗಂಟೆಯಲ್ಲಿ ಚರ್ಚೆ ಮಾಡಿ ನಿರ್ಣಯ ತೆಗೆದುಕೊಳ್ಳುವಂಥದ್ದಲ್ಲ. ನಿಮ್ಮ ಉದ್ದೇಶ ಒಳ್ಳೆಯದಿರಬಹುದು. ಆದರೆ ಈ ಟಿ.ಡಿ.ಆರ್. ಸ್ಕೀಮ್‌ನ ಅರ್ಥ ಬಿಬಿಎಂಪಿಯ ಕೆಲವೆ ಕೆಲವು ಅಧಿಕಾರಿಗಳಿಗೆ, ಮೂಡಾದ ಕೆಲವು ಅಧಿಕಾರಿಗಳಿಗೆ, ಬಿಂಎಂಆರ್‌ಡಿ, ಮಂಗಳೂರು ಡೆವಲಪ್ ಮೆಂಟ್ ಅಥಾರಿಟಿಯ ಕೆಲವೆ ಕೆಲವು ಅಧಿಕಾರಿಗಳಿಗೆ ಅರ್ಥ ಆಗುತ್ತದೆ. ಅದರ ನಂತರ ಪಾತಕಿಗಳು, ಲ್ಯಾಂಡ್ ಗ್ರಾಬ ಯಾರು ಇದ್ದಾರೆ ಅವರು ಇದರ ಬಗ್ಗೆ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ಟಿ.ಡಿ.ಆರ್. ಬಜಾರ್ ಎಂದು ಓಪನ್ ಮಾಡಿಕೊಂಡು ಬೆಂಗಳೂರಿನಲ್ಲಿ ಸರ್ಕಾರಿ ಜಾಗವನ್ನು ತೆಗೆದುಕೊಂಡು ಖಾಸಗಿಯವರು ಮಾರುತ್ತಾರೆಂದರೆ ಹೇಗೆ? ಇವೊತ್ತಿಗು | ಜಾಗ ಖಾಸಗಿಯವರ ಪೊಸಿಶನ್‌ನಲ್ಲಿದೆ. ಸರ್ಕಾರದವರು ಅವರಿಗೆ ಟಿ.ಡಿ.ಆರ್. ಕೊಟ್ಟಿದ್ದಾರೆ. ಅವನು ಇನ್ನೊಬ್ಬ ಡೆವಲಪರ್‌ಗೆ ಮಾರುತ್ತಾನೆ. ನಿಮ್ಮ ಉದ್ದೇಶ ಸರಿ ಇದೆ. ಆದರೆ ನಿಮ್ಮ ಬಿಲ್ ಪಾಸ್ ಆದ ತಕ್ಷಣ ರಾಮನಗರ, ಮೈಸೂರು, ಮಂಗಳೂರು, ಬೆಳಗಾವಿಯಂತಹ ಕಡೆಗಳಲ್ಲಿ ಈ ರೀತಿ ಭೂಮಾಫಿಯಾದವರು ಹುಟ್ಟಿಕೊಳ್ಳುತ್ತಾರೆ, ಎಷ್ಟು ಮಿಸ್‌ಸ್ ಮಾಡಿಕೊಳ್ಳಬೇಕೋ ಅಷ್ಟು ಮಾಡಿಕೊಳ್ಳುತ್ತಾರೆ. ಆದ್ದರಿಂದ ತರಾತುರಿಯಲ್ಲಿ ಹೀಗೆ ಒಂದೆರಡು ದಿವಸಗಳು ಇದ್ದಾಗ ಇಂತಹ ಬಿಲ್‌ಗಳನ್ನು ಪಾಸ್ ಮಾಡಿಕೊಳ್ಳಬೇಡಿ. ಇನ್ನು ಈ ಬಿಲ್‌ಗಳನ್ನು ಕನ್ನಡದಲ್ಲಿ ಹೇಗೆ ಮಾಡುತ್ತಾರೋ ಅರ್ಥ ಆಗುತ್ತಿಲ್ಲ. ಈ ಜ್ಯುಡಿಶಿಯರಿ ಬಿಲ್‌ಗಳನ್ನು ಕನ್ನಡದಲ್ಲಿ ಅರ್ಥವೇ ಆಗುವುದಿಲ್ಲ. ಇದರಲ್ಲಿ ಮಡಿವಂತಿಕೆ ಕನ್ನಡ ಇದೆ. 17 ಬಿ, 18 ಬಿ ಏನು ಅನ್ನುವುದೇ ಅರ್ಥ ಆಗುವುದಿಲ್ಲ.

ಕ್ಯಾಪ್ಟನ್ ಗಣೇಶ್ ಕಾರ್ಣಿಕ್:**-** ಮಾನ್ಯ ಸಭಾಪತಿಯವರೆ, ಇದರಲ್ಲಿ ಮಜಾ ಅಂದರೆ ಮೊದಲು ಕನ್ನಡದಲ್ಲಿ ಕರಡನ್ನು ಮಾಡುವುದಿಲ್ಲ. ಮೊದಲು ಇಂಗ್ಲೀಷ್‌ನಲ್ಲಿ ಕರಡನ್ನು ಮಾಡಿ ಅದನ್ನು ನಂತರ ಕನ್ನಡಕ್ಕೆ ಭಾಷಾಂತರ ಮಾಡುತ್ತಾರೆ. ಭಾಷಾಂತರ ಮಾಡಬೇಕಾದರೆ ಮೊದಲು ನಿಘಂಟನ್ನು ಹುಡುಕುತ್ತಾರೆ. ಆ ಪದದ ಅಥವನ್ನು ಅಲ್ಲಿ ಹಾಕಿದರೆ ಅದು ಸಾಮಾನ್ಯ ಜನರಿಗೆ ಅರ್ಥ ಆಗುವುದಕ್ಕೆ ಸಾಧ್ಯವೇ ಇಲ್ಲ. ಮೊದಲು ಪ್ರಾರಂಭದಲ್ಲಿ ಇದನ್ನು ಕನ್ನಡದಲ್ಲಿಯೇ ಬರೆಯಲು ಏಕೆ ಪ್ರಯತ್ನ ಮಾಡಬಾರದು? ಕನ್ನಡ ಓದಿದರೆ ದೇವರ ಆಣೆಗೂ ಯಾರಿಗೂ ಅರ್ಥ ಆಗುವುದಿಲ್ಲ.

ಶ್ರೀ ಅಶ್ವತ್ಥನಾರಾಯಣ:- ಮಾನ್ಯ ಸಭಾಪತಿಯವರೆ, ರಿಯಲ್ ಎಸ್ಟೇಟ್‌ನಲ್ಲಿ ಒಂದು ಲಾಬಿ ಇದೆ.

**SRI K.B.SHANAPPA**: They are there.

ಶ್ರೀ ಅಶ್ವತ್ಥನಾರಾಯಣ:- ಮಾನ್ಯ ಸಭಾಪತಿಯವರೆ, ರಿಯಲ್ ಎಸ್ಟೇಟ್‌ನಲ್ಲಿ ಒಂದು ಲಾಬಿ ಇದೆ. ಎಷ್ಟು ಸಾಧ್ಯವೋ ಅಷ್ಟು ಕನ್ವಿಯನ್ಸ್ ಮಾಡಲು ಪ್ರಯತ್ನಿಸುತ್ತಾರೆ. ಕನ್ವೆಯನ್ಸ್ ಆಗಲಿಲ್ಲವೆಂದರೆ ಕೊನೆಗೆ ಕನ್‌ಫ್ಯೂಶನ್ ಅವನು ಮಾಡಿಬಿಡುತ್ತಾರೆ. ಇನ್ನು ಎಲ್ಲೂ ಸೈಟ್ ತೆಗೆದುಕೊಳ್ಳಬಾರದು ಹಾಗೆ ಮಾಡಿಬಿಡುತ್ತಾರೆ. ಅವನು ಇನ್ನು ಎಲ್ಲೂ ಸೈಟ್ ತೆಗೆದುಕೊಳ್ಳಬಾರದು ಎನ್ನವ ರೀತಿಯಲ್ಲಿ ಈ ಬಿಲ್‌ಗಳಿವೆ. ನಾವು ಕಳೆದ ಐದು ವರ್ಷಗಳಿಂದ ಇದನ್ನು ನೋಡುತ್ತಿದ್ದೇವೆ. ಆದ್ದರಿಂದ ಇನ್ನು ಮುಂದೆ ಸಾಮಾನ್ಯ ಜನರಿಗೆ ಅರ್ಥ ಆಗುವ ರೀತಿಯಲ್ಲಿ ಬಿಲ್‌ಗಳನ್ನು ತೆಗೆದುಕೊಂಡು ಬನ್ನಿ, ನಿನ್ನೆ ಈ ಬಿಲ್ ಅನ್ನು ಒಬ್ಬ ವಕೀಲರಿಗೆ ಕೊಟ್ಟಿದ್ದೆ. ಅವರು ಇದು ನನಗೆ ಅರ್ಥ ಆಗುವುದಿಲ್ಲ. ದಯಮಾಡಿ ಇಂಗ್ಲೀಷ್ ಇದ್ದರೆ ತೆಗೆದುಕೊಂಡು ಬನ್ನಿ ಎಂದು ಹೇಳಿದ. ಕನ್ನಡ ಪರ ಹೋರಾಟ ಮಾಡತಕ್ಕಂಥ ಚಳುವಳಿಗಾರರಿಗೆ ಫ್ರೀ ಕೆಲಸ ಮಾಡುವಂಥ ಒಬ್ಬ ವಕೀಲರು ನನಗೆ ಈ ಬಿಲ್ ಅರ್ಥ ಹೇಳುತ್ತಾರೆ. ಅವರಿಗೆ ಅರ್ಥ ಆಗುವುದಿಲ್ಲ ಇಂಗ್ಲೀಷ್ ಇದ್ದರೆ ತೆಗೆದುಕೊಂಡು ಬನ್ನಿ ಎಂದು ಆಗುವುದಿಲ್ಲವೆಂದರೆ ಸಾಮಾನ್ಯ ಜನರಿಗೆ ಏನು ಅರ್ಥ ಆಗುತ್ತದೆ ಹೇಳಿ. ಹಾಗಾಗಿ ಇದರಲ್ಲಿ ಸಾಕಷ್ಟು ಚರ್ಚೆ

ಮಾಡುವಂಥದ್ದಿದೆ. ಇನ್ನು ಇದರಲ್ಲಿ 2013ರ ಭೂಕಾಯಿದೆಯ ಪ್ರಕಾರ ಅಕ್ವೈರ್ ಮಾಡುವುದಿದೆ ಎಂದು ಹೇಳುತ್ತೀರಿ. ಕೆಲವು ಸಂದರ್ಭದಲ್ಲಿ ಅದಕ್ಕೆ ಮಾರ್ಕೆಟ್ ವ್ಯಾಲ್ಯುನ ನಾಲ್ಕು ಪಟ್ಟು ಕೊಡುತ್ತೀರಿ. ಬೆಂಗಳೂರಿನಲ್ಲಿ ಟಿ.ಡಿ.ಆರ್. ನೂರಾರು ಕೋಟಿ ಮಿಸ್‌ಸ್ ಆಗಿರುವಂಥ ನಿದರ್ಶನಗಳಿವೆ. ಇವೊತ್ತು ಆ ಇಲಾಖೆಯ ಅಧಿಕಾರಿಗಳಿಗೆ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು, ಯಾವ ರೀತಿ ಮಿಸ್‌ಯೂಸ್ ಆಗಿದೆ ಎಂದು ತಿಳಿದುಕೊಳ್ಳುವುದಕ್ಕೆ ಆಗುತ್ತಿಲ್ಲ. ಇನ್ನು ನಗರದ ಅಧಿಕಾರಿಗಳು ಯಾವುದೋ ಬಿಲ್ಡರ್ ಅಥವಾ ಡೆವಲಪರ್ ಯಾವುದಾದರೊಂದು ಜಾಗವನ್ನು ಖರೀದಿ ಮಾಡುವುದಕ್ಕೋಸ್ಕರ ಅವಶ್ಯಕತೆ ಇಲ್ಲದೆ ಇರುವ ಜಾಗಗಳಿಗೆ ಟಿ.ಡಿ.ಆರ್.ಗಳನ್ನು ಕೊಡುತ್ತಾರೆ. ಅದು ಅದು ಗೊತ್ತಾಗುವುದಿಲ್ಲ. ಬೆಂಗಳೂರಿನಲ್ಲಿ ಟಿ.ಡಿ.ಆರ್.ನಲ್ಲಿ 'ಎ' ಜೋನ್ 'ಬಿ' ಜೋನ್ 'ಸಿ' ಜೋನ್ ಎಂದು ಇದೆ. ಹಾಗೆಯೇ ನೀವು ಪಟ್ಟಣ ಪ್ರದೇಶಗಳಲ್ಲಿ ಜೋನ್‌ಸ್ ಮಾಡುತ್ತೀರಾ? ಅದರ ಬಗ್ಗೆ ಇದರಲ್ಲಿ ಏನೂ ಏಕೆಂದರೆ ಯಾವುದೋ ರಾಮನಗರ ಮುಖ್ಯರಸ್ತೆಯಲ್ಲಿರುವಂಥ ಜಾಗದಲ್ಲಿ ಬಿಲ್ಡಿಂಗ್ ಕಟ್ಟುವಂಥವನು ನಮಗೆ ಯಾರಿಗೂ ಇಲ್ಲ. ಮಾಯಗನಹಳ್ಳಿಯಲ್ಲಿ ಟಿ.ಡಿ.ಆರ್.ಅನ್ನು ಕ್ರಿಯೇಟ್ ಮಾಡುತ್ತಾನೆ. ಮಾಯಗನಹಳ್ಳಿಯಲ್ಲಿ ರಸ್ತೆಯನ್ನು ವೈಡನ್ ಮಾಡಿಸಿಬಿಟ್ಟು, ಮಾಯಗನಹಳ್ಳಿಯ ಟಿ.ಡಿ.ಆರ್.ಅನ್ನು ತೆಗೆದುಕೊಂಡು ರಾಮನಗರ ಮುಖ್ಯರಸ್ತೆಯಲ್ಲಿರುವಂಥ ಜಾಗದಲ್ಲಿ ಬಿಲ್ಡಪ್ ಮಾಡುತ್ತಾನೆ. ಏಕೆಂದರೆ ಮಾಯಗನಹಳ್ಳಿಯಲ್ಲಿ ಯಾರೂ ತೆಗೆದುಕೊಳ್ಳುವವರು ಇರುವುದಿಲ್ಲ. ಆದ್ದರಿಂದ ನಗರ ಪ್ರದೇಶದಲ್ಲಿ ಯಾವ ರೀತಿ ಜೋನ್‌ವೈಸ್ ಇದೆಯೋ ಆ ರೀತಿ ಅಲ್ಲೂ ಕೂಡ ಜೋನ್‌ಸ್ ಮಾಡಬೇಕಾಗುತ್ತದೆ. ಮತ್ತು ಯಾವುದೇ ಕಾರಣಕ್ಕಾಗಿ ಜೋನ್ ಬದಲಾವಣೆಗಳಾಗಬಾರದು. ಆ ರೀತಿ ಆದರೆ ಅವರು ಶೇಕಡಾವಾರು ಜಾಸ್ತಿ ತೆಗೆದುಕೊಳ್ಳುತ್ತಾರೆ. 'ಸಿ' ಜೋನ್‌ದಿಂದ 'ಎ'ಜೋನ್‌ಗೆ ಬಂದಾಗ ಅವರಿಗೆ ಮೂರು ಪಟ್ಟು, ನಾಲ್ಕು ಪಟ್ಟು ಜಾಸ್ತಿಯಾಗುತ್ತದೆ. ದಯಮಾಡಿ ಇದರ ಬಗ್ಗೆ ಸಂಪೂರ್ಣವಾಗಿ ಸ್ಪಷ್ಟೀಕರಣವನ್ನು ಕೊಟ್ಟು ಇನ್ನು ಈ ಬಿಲ್‌ಗಳ ಮೇಲೆ ಸಾಕಷ್ಟು ಚರ್ಚೆಗಳಾಗಿ ಆ ಮೇಲೆ ನೀವು ಇದನ್ನು ಮಂಡಿಸುವುದು ಸೂಕ್ತ ಎಂದು ನನಗನಿಸುತ್ತದೆ.

**SRI V.S.UGRAPPA**: Mr. Chairman, Sir, Karnataka Town and Country Planning (Amendment) Bill 2015 ಅನ್ನು ತಂದಿದ್ದಾರೆ. ಈ ಬಿಲ್‌ನಲ್ಲಿ they have assigned four reasons, to regulate the development of land in a planned and organized manner, to define the boundary, to prescribe minimum infrastructural facilities by the owner in the layout plan and certain other consequential provisions. Reasons 1961ರ ಆಕ್ಟ್‌ನಲ್ಲಿ ಈ ಹಿನ್ನಲೆಯಲ್ಲಿ ಲೇಔಟ್ ಡೆವಲಪ್ ಮೆಂಟ್ ಮಾಡತಕ್ಕಂಥದ್ದಕ್ಕೆ ಪ್ರಾವಿಜನ್ಸ್ ಇಲ್ಲವೇ? ಲೇಔಟ್ಸ್ ಅಪೂವಲ್ಸ್ ಆಗಬೇಕಾದರೆ 1961ನೇ ಆಕ್ಟ್ ಪ್ರಕಾರ ಅಪೂವಲ್ಡ್ ಆಗುತ್ತಿವೆ. ಆದರೆ ಒಬ್ಬ ವಕೀಲನಾಗಿ ಈ ಅಪೂವೆಲ್ಸ್ ಮಾಡುವಂಥದ್ದರಲ್ಲಿ ಸೆಕ್ಷನ್ 14 (ಬಿ)ಗೆ ಒಂದೆ ಸೆಕ್ಷನ್‌ಗೆ ನಾಲ್ಕು ಪೇಜ್ ಇದೆ.

ಮಾನ್ಯ ಸಭಾಪತಿಯವರೆ, ಈ ಸೆಕ್ಷನ್ ಬಗ್ಗೆ ಮೊದಲನೆಯ ಪೇಟ್‌ನಿಂದ ಹಿಡಿದು 8ನೇ ಪುಟದವರೆಗೂ ಒಂದೇ ಒಂದು ಸೆಕ್ಷನ್ ಬಗ್ಗೆ ವಿವರಣೆ ಇದೆ. ಬಹುಶಃ ನನ್ನ ವಕೀಲಿಯ ಅವಧಿಯಲ್ಲಿ ಇಷ್ಟು ದೊಡ್ಡ ಸೆಕ್ಷನ್ ಅನ್ನು ನಾನು ಯಾವ ಆ್ಯಕ್ಟ್ ನಲ್ಲಿಯೂ ನೋಡಿರಲಿಲ್ಲ. ಏಕೆ ಈ ಸೆಕ್ಷನ್ ಅನ್ನು complicate ಮಾಡಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಯಾವುದನ್ನು ಅಚೀವ್ ಮಾಡುವುದಕ್ಕೋಸ್ಕರವಾಗಿ they have made this provision, 354 ಅರ್ಥವಾಗುತ್ತಿಲ್ಲ. 988 emphasis anachopa TDR (Transferable Development Rights). ಬಹುಷಃ ಇವತ್ತಿನ ದಿವಸ Deccan Herald ಪ್ರತಿಕೆಯಲ್ಲಿ ಒಂದು ದೊಡ್ಡ article ಇದರ ಮೇಲೆ ಬರೆದಿದ್ದಾರೆ. ಕಳೆದ ಮೂಾಲ್ಕು ವರ್ಷಗಳಲ್ಲಿ ಕನಿಷ್ಠ 5,000 ಕೋಟಿಯಷ್ಟು scam ಬೆಂಗಳೂರಿನಲ್ಲಿ ಯಾವುದಾದರು ಅದರಲ್ಲಿಯೂ ವಿಶೇಷವಾಗಿ 2010 ರಿಂದ 2013ನೇ ಇಸವಿಯ ಅವಧಿಯಲ್ಲಿ ಈ ನಾಮು ವರ್ಷಗಳಲ್ಲಿ ನಡೆದಿದ್ದರೆ ಇದಾಗಿದೆ. ಇದನ್ನು ನಾನು ಹೆಚ್ಚು ಬೆಳೆಸುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಉದಾಹರಣೆಯನ್ನು ಮಾತ್ರ ಕೊಡುವುದಕ್ಕೆ ಬಯಸುತ್ತೇನೆ. ಮೈಸೂರ್ ರೋಡ್‌ನಲ್ಲಿರುವ ಕೊಟ್ಟಿಗೆ ಪಾಳ್ಯ ಹತ್ತಿರ ಸುಮಾರು 24-25 gemaba), and at the rate of 25 to 30 lakhs ಮಾಡಿದರು. ಮಾರಿ purchase Maximum 50 lakhs ಕೊಟ್ಟಿದ್ದಾರೆ. ಆ ಭೂಮಿಯನ್ನು ಬಿಬಿಎಂಪಿಗೆ ಕಸ ಮತ್ತು ಇನ್ನಿತರವನ್ನು ಹಾಕುವುದಕ್ಕೆ ಕೊಟ್ಟಿದ್ದಾರೆ. ಅದಕ್ಕೆ ಟಿಡಿಆರ್ ಅನ್ನು ಒಂದುವರೆ ಪಟ್ಟು ಕೊಟ್ಟಿದ್ದಾರೆ. ಟಡಿಆರ್ ಅನ್ನು 25 ಕಿಲೋ ಮೀಟರ್ ಇದರಲ್ಲಿ ಬಳಸಿಕೊಳ್ಳುವುದಕ್ಕೆ

ಅವಕಾಶ ಕೊಡಲಾಗಿದೆ. ಆ ಏರಿಯ ನದ ನೋಡಿದರೆ ಬೆಂಗಳೂರು ಸೌತ್/ ಇದೆ ಸೌತ್‌ನಲ್ಲಿ ಯಾವ ಏರಿಯದಲ್ಲಿ ಬೇಕಾದರೂ ಈ ಟಿಡಿಆರ್ ರೈಟ್ಸ್ ಅನ್ನು ಬಳಸಿಕೊಳ್ಳುವುದಕ್ಕೆ ಸಾಧ್ಯತೆ ಇದೆ. ಅಲ್ಲಿ ಅವರು ಒಂದು ಎಕರೆಯನ್ನು 25 ಲಕ್ಷ ರೂಪಾಯಿಗಳಿಂದ ಗಡಿ 50 ಲಕ್ಷ ರೂಪಾಯಿಗಳನ್ನು ಕೊಟ್ಟು ಖರೀದಿ ಮಾಡಿರುವಂಥದ್ದು, ಸೌತ್ ಬೆಂಗಳೂರಿನಲ್ಲಿ ಯಾವ ಏರಿಯವಾಗಲಿ ಅಥವಾ ಬೆಂಗಳೂರಿನಲ್ಲಿ ಎಲ್ಲಿಗೆ ಹೋದರೂ ಸಹಾ ಆನೇಕ ಕಡೆಗಳಲ್ಲಿ ಉದಾಹರಣೆಗೆ ಹೇಳುವುದಾದರೆ ಹೆಚ್ ಎಸ್‌ಆರ್ ಲೇಔಟ್ ನಲ್ಲಿ ಒಂದು ಅಡಿ ಎಂತಹ ಜಾಗವೇ ಆದರೂ ಸಹಾ ಕನಿಷ್ಠ 10,000 ರೂಪಾಯಿಗಳಿವೆ. ಅಂದರೆ 10,000 ರೂ ಗಳು X 44,000 ಅಡಿಗೆ ಎಷ್ಟು ಅಯಿತು? ಒಂದು ಎಕರೆಗೆ ಎಷ್ಟು ಆಯಿತು. ಅದರ ಒಂದೂವರೆ ಪಟ್ಟು ಪ್ರಕಾರ ಎಷ್ಟು ಆಯಿತ್ತೆಂದರೆ, ಅಲ್ಲಿಗೆ 10,000 ರೂಪಾಯಿಗಳಂತೆ ಎಪ್ಪತ್ತು ಕೋಟಿ ರೂಪಾಯಿಗಳಾಯಿತು. teeth ಇದೆಯೇ ಎಂದು ನಾನು ನೋಡುತ್ತಿದ್ದೆ. ಮಾನ್ಯ ಸಭಾಪತಿಯವರೆ, ನಾನು ಸ್ಪಷ್ಟವಾಗಿ ಇದನ್ನು ತಡೆಗಟ್ಟುವಂಥದ್ದಕ್ಕೆ ಏನಾದರು ಇದರಲ್ಲಿ ನಾನು ಇದನ್ನು ಸ್ವಾಗತ ಮಾಡುವುದು ಬೇರೆ. ಹೇಳುವುದೇನೆಂದರೆ, ಇತ್ತಿಚೆಗೆ ಲ್ಯಾಂಡ್ ತೆಗೆದು ಲೇಔಟ್ ಮಾಡಿ ದುಡ್ಡು ಮಾಡುವುದಕ್ಕಿಂತಲೂ ಹೆಚ್ಚು ಜನ ಈ ಟಿಡಿಆರ್ ರೈಟ್ಸ್ ಅನ್ನು ಖರೀದಿ ಮಾಡಿ ದುಡ್ಡು ಮಾಡುವಂಥದ್ದಕ್ಕೆ ಬಹಳಷ್ಟು ಜನ ತುದಿಗಾಲಿನಲ್ಲಿ ಇರುವಂಥವರು ಇದ್ದಾರೆ. ಇವರುಗಳ ಮೇಲೆ what type of action you are going to initiate? ಇದರ ಬಗ್ಗೆ ಎಲ್ಲಿಯೂ ಸಹಾ ಪ್ರಸ್ತಾಪ ಮಾಡಿಲ್ಲ. ಇವರು ಚಾರ್ಟ್‌ನಲ್ಲಿ ಏನು ಹೇಳಿದ್ದಾರೆಂದು ನಾನು ನೋಡುತ್ತಿದ್ದೆ. ಪುಟ ಸಂಖ್ಯೆ 6 ರಲ್ಲಿ, ಅದರ ಜೊತೆಗೆ ಪುಟ 2ರ 14(ಬಿ)ಯಲ್ಲಿ Benefit of development rights ಎಂದು ಹೇಳುತ್ತಾ, Sub-clause.2 ರಲ್ಲಿ The provisions of the section shall be applicable to the Local Planning Areas having City corporation and may be extended to other Local Planning areas as and when required...' ಎಂದು ಹೇಳಿದ್ದಾರೆ. ಅಂದರೆ ಇದನ್ನು ಈ ರಾಜ್ಯದ ಎಲ್ಲಾ ಪ್ಲಾನಿಂಗ್ ಏರಿಯಾಸ್ ಇರತಕ್ಕಂಥದ್ದಕ್ಕೆ ಅನ್ವಹಿಸುತ್ತದೆಂದು. ಇಲ್ಲಿ ಟಿಡಿಆರ್ ರೈಟ್ಸ್‌ನ್ನು ಪಟ ಸಂಖ್ಯೆ 6 ಹೇಳುತ್ತಾರೆ. ಯಾವ ಜಮೀನು ತೆಗೆದುಕೊಳ್ಳುತ್ತಾರೆಯೋ ಒಂದುವರೆ ಪಟ್ಟು ಅಥವಾ ಎರಡರಷ್ಟು ಎಂದು ಹೇಳಿದ್ದಾರೆ. ಘನತ್ಯಾಜ್ಯವನ್ನು ಹಾಕುವುದಕ್ಕೆ 50 ಲಕ್ಷ ರೂಪಾಯಿಗಳಿಗೆ ತೆಗೆದುಕೊಂಡಂಥವರಿಗೆ ಟಿಡಿಆರ್ ಅನ್ನು ನಗರದ ಮಧ್ಯೆ ಭಾಗದಲ್ಲಿ they can make use of OfSatrão 545 TDR rights in anywhere. ಇದನ್ನು ಏನು ಕಂಟ್ರೋಲ್ ಮಾಡುವುದಕ್ಕೆ ಯಾವ ಕ್ರಮವನ್ನು ಜರುಗಿಸಲಾಗುವುದೆಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ. ಎರಡನೆಯದಾಗಿ, ಲೇಔಟ್‌ಗಳ ಬಗ್ಗೆ ಪ್ರಸ್ತಾಪ 8. To regulate the development of land planned in organized ಈ ನಗರಗಳಲ್ಲಿ ಅತೀ ದೊಡ್ಡ ಸಮಸ್ಯೆ ಕಾಣುತ್ತಿರುವುದು ನೀರಿನ ಸಮಸ್ಯೆಯನ್ನು ಬೆಂಗಳೂರಿನಲ್ಲಿ ಪ್ರತಿ ಮನೆಯಲ್ಲಿಯೂ ಕೂಡ ಒಂದೊಂದು ಬೋರ್‌ವೆಲ್ ಇದೆ: ಕೊರೆಯುತ್ತಿದ್ದಾರೆ. ಇದರ ಪರಿಣಾಮ ಅಂತ ಜಲ ಬಹಳಷ್ಟು ಭತ್ತಿ ಹೋಗಿದೆ. ಈ ಲೇಔಟ್ಸ್ ಅನ್ನು ಮಾಡತಕ್ಕಂತಹ ಸಂದರ್ಭದಲ್ಲಿ Water guarantee ನ ಎಲ್ಲಿಯವರೆಗೆ ನೀರಿನ ಸೌಲಭ್ಯಗಳನ್ನು ಒದಗಿಸುವಂಥದ್ದಕ್ಕೆ ಚಿಂತನೆ ಮಾಡುವುದಿಲ್ಲವೋ, ಆ ಈ ರೀತಿಯ ಲೇಔಟ್ಸ್ ಅನ್ನು ಮಾಡುವುದರ ಮೂಲಕ ಎಲ್ಲಿಯೋ ಒಂದು ಕಡೆ ಜನರನ್ನು ಇವತ್ತು ಅಲ್ಲ, ನಾಳೆ ಕಷ್ಟಕ್ಕೆ ದೂಡತಕ್ಕಂತಹ ಸಂದರ್ಭಗಳಿದೆ. ಇನ್ನು ಘನತ್ಯಾಜ್ಯದ ಸಮಸ್ಯೆ ಇದೆ. ಇದನ್ನು ಪರಿಹಾರ ಮಾಡುವುದಕ್ಕೆ ಬಹುಶಃ ನಾನು ನೋಡಿದಂಥದ್ದರಲ್ಲಿ ಎಂ.ಎಸ್.ಪಾಳ್ಯ ಎಂದು ಯಲಹಂಕದಿಂದ ಎಂ.ಎಸ್.ಪಾಳ್ಯಕ್ಕೆ ಹೋಗಬೇಕಾದರೆ ಬಹಳ ಚಿಕ್ಕ ಏರಿಯದಲ್ಲಿ ಅಲ್ಲಿ ಒಂದು seggregate ಮಾಡುವುದಕ್ಕೆ ಅಲ್ಲಿ ಒಂದು ಪ್ಲಾಂಟ್ ಹಾಕಿದ್ದಾರೆ. Best plant, ಬೆಂಗಳೂರಿನಲ್ಲಿ ಇದು ಯಾವುದಾದರು ಇದ್ದರೆ ನನ್ನ ದೃಷ್ಟಿಯಲ್ಲಿ ಅಲ್ಲಿ ಯಾವ ವಾಸನೆಯೂ ಇಲ್ಲ, ಯಾವ ಸಮಸ್ಯೆ ಕೂಡ ಇಲ್ಲ. ಎಲ್ಲಿ. ಲೇಔಟ್ಸ್ ಮಾಡುತ್ತಿದ್ದಾರೆ. ಲೇಔಟ್ಸ್‌ನಲ್ಲಿ ಇವತ್ತು garbage issue solve ಮಾಡತಕ್ಕಂಥದ್ದಕ್ಕೆ ಅಲ್ಲಿ ಏರಿಯವನ್ನು earmark ಮಾಡತಕ್ಕಂಥದ್ದಕ್ಕೆ ಏನಾದರು

ಇದರಲ್ಲಿ ಮಾಡುತ್ತಾರೆಯೇ? ಅದರ ಬಗ್ಗೆ ಏನಾದರು ಪ್ರಸ್ತಾಪ ಇದೆಯೇ ಎಂದು ನೋಡಿದರೆ, ಅದೂ ಕೂಡ ಏನೂ ಕಾಣುತ್ತಿಲ್ಲ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಈ ಸಿಎ ಸೈಟ್ಸ್ ಎಂದು ಕೆಲವು ಕಡೆ ಮಾಡಿದ್ದಾರೆ. ಮೊನ್ನೆಯ ದಿವಸ ನಾನು ಯಾವುದೋ ಒಂದು ಲೇಔಟ್‌ಗೆ ಹೋಗಿದ್ದೆ. ಅಲ್ಲಿ ನೋಡಿ ಸಿಎ ಸೈಟ್ ಪೆಟ್ರೋಲ್ ಬಂಕ್‌ಗೆ ಮೀಸಲು ಇಟ್ಟಿದ್ದಾರೆ. ನಾನು ನೋಡಿದರೆ ಕೊನೆಯಲ್ಲಿದೆ, ಇದರ ಬಗ್ಗೆ ಕೆದರ ಅಲ್ಲಿ ಗುಂಡಿ ಇದೆ. ಅವರು ಏನು ಸಿಎ ಸೈಟ್ ಎಂದು ಇಡಬೇಕು, ಅದಕ್ಕೋಸ್ಕರವಾಗಿ ನೋಡಿ ಸಿಎ ಸೈಟ್ □□□□□ □□□□□□□□□□. ಇಟ್ಟು ಇದ್ದೇವೆ ಸಿ.ಎ. ಸೈಟ್

ಲೇಔಟ್‌ನ ಕೊನೆಯಲ್ಲಿ ಗುಂಡಿಗಳು ಇರುವಂತಹ ಜಾಗವನ್ನು ಸಿ.ಎ ಸೈಟ್- ಪೆಟ್ರೋಲ್ ಬಂಕ್‌ಗೆ ಎಂದು ನೋಟಿಫೈ ಮಾಡಿದ್ದಾರೆ. ಅಲ್ಲಿ ಯಾರು ಹೋಗಿ ಪೆಟ್ರೋಲ್ ಬಂಕ್ ಮಾಡುತ್ತಾರೆ? ಅವರ ಉದ್ದೇಶ ಅದು ಪೆಟ್ರೋಲ್ ಬಂಕ್‌ಗೆ ಸಿಎ ಸೈಟ್ ಇಟ್ಟಿದ್ದೇವೆ ಎನ್ನುವುದನ್ನು comply ಮಾಡುವುದಕ್ಕೆ ಕಂಡಿಷನ್‌ಗೋಸ್ಕರವಾಗಿ ತೋರಿಸುತ್ತಾರೆ. ಅದು ಉಪಯೋಗಕ್ಕೆ ಬರುವುದಿಲ್ಲ. ಇನ್ನು ಎರಡನೆಯದಾಗಿ, ಬೇರೆ ಏಕೆ ನಮ್ಮ ಬಡುಗಡೆ ಬಿಲ್ಡಿಂಗ್ ನಮ್ಮ ಅನೇಕ ಜನ ಸ್ನೇಹಿತರುಗಳು ಬಳ್ಳಾರಿ ರೋಡ್‌ನಲ್ಲಿ ಜುಡಿಶಿಯಲ್ ಲೇಔಟ್ ಮಾಡಿರತಕ್ಕಂಥದ್ದು ಇದೆ. ಆ ಲೇಔಟ್‌ನಲ್ಲಿ ಸಿಎ ಲ್ಯಾಂಡ್ ಎಂದು identify ಮಾಡಿದ್ದರು, ಅದರಲ್ಲಿ 450 ಸೈಟ್‌ಗಳನ್ನು, ಆ ಏರಿಯ which was earmarked for C.A. sites, ಅದಾದ ಮೇಲೆ ಏನಾಯಿತು ಸಿಎ ಸೈಟ್ಸ್ ಕನ್ವರ್ಟ್ ಮಾಡಿ ಎಲ್ಲಾ ಮಾರಾಟ ಮಾಡಿದ್ದಾರೆ. ಈಗ ಅದೊಂದು ಇತ್ಯ, ಜಿಲ್ಲಾಧಿಕಾರಿಗಳು ಪರ್ಮಿಷನ್ ಕೊಟ್ಟಿದ್ದಾರೆಯೋ, ಈ ಇನ್ನೂ ಮೇಲೆ ಸುಮಾರು 2 ದಶಕಗಳು ಮುಗಿದಿದೆ. No one has initiated any sort of action against the society. ಹಾಗಾಗಿ ಮಾನ್ಯ ಸಭಾಪತಿಯವರೆ, ಇದು ದೊಡ್ಡ ಆ್ಯಕ್ಟ್ ಅನ್ನು ತೆಗೆದುಕೊಂಡು ಬಂದಿರತಕ್ಕಂತಹ ಬಹುಶಃ ಯಾರು ಇದನ್ನು ಡ್ರಾಫ್ಟ್ ಮಾಡಿದ್ದಾರೆ 8 ಪುಟಗಳ ಒಂದು □□□□□□□ □□□□□□□□□□□□□□□ □□□□□□ □□□ □□□□□□□□□□ □□□ □□□□□□□□□□□□□□□□ ಹೀಗಿರುವಾಗ ಗ್ರಾಮೀಣ ಪ್ರದೇಶದಲ್ಲಿರುವ ಅಥವಾ ತಾಲ್ಲೂಕು ಮಟ್ಟದಲ್ಲಿರುವ ವಕೀಲರಿಗೆ ಸಹ ಇದು ಬಹಳ ಕಷ್ಟವಾಗಬಹುದು. ಇದನ್ನು ಎಲ್ಲಿಯಾದರೂ split ಮಾಡಿ ಸೆಕ್ಷನ್‌ಗಳನ್ನು ಎ, ಬಿ, ಸಿ ಎಂದು ಈಗೇನು 14(ಬಿ) 14(ಸಿ), 14(ಡಿ), 14(ಇ), 14(ಎಫ್) ರೀತಿಯಲ್ಲಿ ಇದನ್ನು ಸಹ split ಮಾಡುವುದು ಸೂಕ್ತ ಎನ್ನುವಂತಹ ಮಾತನ್ನು ನಾನು ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸರ್ಕಾರ ಯಾವುದಾದರೂ ಕಾನೂನುಗಳನ್ನು ಮಾಡಿದರೆ ಸಮಾಜಕ್ಕೆ ಉಪಯೋಗವಾಗುವಂತಹ ನಮ್ಮ ನಗರಗಳು ಅತ್ಯಂತ ಸುಸಜ್ಜಿತವಾಗಿ, ಜನೋಪಯೋಗಿ ಆಗುವಂತಹ ರೀತಿಯಲ್ಲಿರುವುದಕ್ಕೆ ಕಾನೂನುಗಳು ಬರಬೇಕೆನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.**ಹೆಚ್.**ವಿಜಯ ಶಂಕರ**(**ವಿಧಾನಸಭಾ ಕ್ಷೇತ್ರ: ಸನ್ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ತಮಗೆ ಧನ್ಯವಾದಗಳನ್ನು ತಿಳಿಸಬಯಸುತ್ತೇನೆ. ಪುಟ ಸಂಖ್ಯೆ:11 ರಲ್ಲಿ ಮಾನ್ಯ ಉಗ್ರಪ್ಪನವರು ಅದನ್ನು ಈಗಾಗಲೇ mention ಮಾಡಿದ್ದಾರೆ. 'ಭೂಪ್ರದೇಶದ ಅಭಿವೃದ್ಧಿಯನ್ನು ಯೋಜಿತ ಮತ್ತು ವ್ಯವಸ್ಥಿತ ವಿಧಾನದಲ್ಲಿ ನಿಯಂತ್ರಿಸುವುದಕ್ಕೆ' ಎಂದು ನಮೂದಿಸಿದ್ದೀರಿ. ಯೋಜಿತ ಮತ್ತು ವ್ಯವಸ್ಥಿತ ಎಂದರೇನೆಂಬ ಬಗ್ಗೆ ತಾವು ಸ್ಪಷ್ಟೀಕರಣವನ್ನು ನೀಡಬೇಕಾಗುತ್ತದೆ. ಒಂದು ನಗರ ವ್ಯವಸ್ಥಿತವಾಗಿ ಬೆಳೆಯುವುದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ನಾವು Growth ನ್ನು ಯಾವಾಗಲೂ ಸ್ವಾಗತಿಸುತ್ತೇವೆ, ಆದರೆ abnormal growth ಏನಿದೆ, ಅದನ್ನು ಖಂಡಿತವಾಗಿಯೂ ನಾವು ವಿರೋಧಿಸುತ್ತೇವೆ. ನಿಮ್ಮ ಉದ್ದೇಶ ಕೂಡ ಅದೇ ಆಗಿದೆ ಎಂದು ನಾನು ಭಾವಿಸುತ್ತೇನೆ. ನಮ್ಮ ಮೈಸೂರನ್ನು ಒಂದು ಉದಾಹರಣೆಯನ್ನಾಗಿ ತೆಗೆದುಕೊಂಡರೆ ಅಲ್ಲಿನ ಜನಸಂಖ್ಯೆ ಸುಮಾರು 10 ಲಕ್ಷದಷ್ಟಿದೆ. ಸ್ಥಳೀಯವಾಗಿ ಹಾಲಿ ವಾಸವಿರುವಂತಹ ಮನೆಗಳೆಷ್ಟು, ಅಂದರೆ ಅಧಿಕೃತವಾಗಿ ಮನೆಯನ್ನು ಹೊಂದಿರುವಂತಹ ಕುಟುಂಬಗಳ ಸಂಖ್ಯೆ ಎಷ್ಟು, ಇನ್ನೂ ಸ್ಥಳೀಯವಾಗಿ ಮನೆಗಳನ್ನು ಹೊಂದಬೇಕಾದ ಜನರ ಸಂಖ್ಯೆ ಎಷ್ಟು ಎಂಬುದನ್ನು ದಯವಿಟ್ಟು ತಾವು ಪಟ್ಟಿ ಮಾಡಿಸಬೇಕಾಗುತ್ತದೆ. ಆ ರೀತಿ ಪಟ್ಟಿ ಮಾಡಿದಾಗ ಇನ್ನುಳಿದಂತಹ ಎಷ್ಟು ಜನರಿಗೆ ಸ್ಥಳೀಯವಾಗಿ ಮನೆಗಳನ್ನು ಕೊಡಬೇಕಾದಂತಹ ಅಗತ್ಯತೆ ಇದೆ, ಅಂದರೆ ಎಷ್ಟು ಭೂಮಿಯನ್ನು ನಾವು ಪರಿವರ್ತನೆ ಮಾಡಬೇಕು ಎನ್ನುವಂತಹ ವಿಚಾರದಲ್ಲಿ ಸ್ಪಷ್ಟತೆ ಸಿಗುವುದಕ್ಕೆ ಸಾಧ್ಯವಿದೆ. ಅದರ ಮೇಲೂ ಇನ್ನೂ ಹೆಚ್ಚಿಗೆ 25 ಇಟ್ಟುಕೊಂಡೇ ಲೆಕ್ಕಾಚಾರ ಮಾಡಿ. ಅಚೇಚೆಯಿಂದ ಬರುವವರು, ಅಕ್ಕಪಕ್ಕದ ಜಿಲ್ಲೆಗಳಿಂದ ಬರುವವರು, ಹೊರಗಡೆಯಿಂದ ಬರುವವರು ಇರಬಹುದು. ನಾನು ಮೈಸೂರನ್ನು ಒಂದು ಉದಾಹರಣೆಯಾಗಿ ತೆಗೆದುಕೊಂಡು ಹೇಳುತ್ತಿದ್ದೇನೆ. ಅಲ್ಲಿ ಸುಮಾರು 10 ಸಾವಿರ ಜನಸಂಖ್ಯೆ ಇದೆ ಎಂದರೆ, ಅದರಲ್ಲಿ 6 ಲಕ್ಷ ಜನರಿಗೆ ಮನೆಗಳಿರಬಹುದು ಎನ್ನುವ ಅಂದಾಜಿನ ಮೇಲೆ ಇನ್ನು ಸುಮಾರು 4 ಲಕ್ಷ ಜನರಿಗೆ ಮನೆಗಳನ್ನು ಕೊಡಬೇಕಾದಂತಹ ಅನಿವಾರ್ಯತೆ ಇರಬಹುದು. ಪ್ರಾಧಿಕಾರ ಅಧಿಕೃತವಾಗಿ ಈವರೆವಿಗೂ ಸಹ ಸ್ವಾಧೀನಪಡಿಸಿಕೊಂಡಂತಹ ಭೂಮಿ ಎಷ್ಟು, ಅದರಲ್ಲಿ ಎಷ್ಟು ನಿವೇಶನಗಳನ್ನು ಮಾಡಬಹುದು, ಇದರ ಜೊತೆಗೆ ಖಾಸಗಿಯವರಿಗೆ ಸಹ ಅವಕಾಶ ಕೊಟ್ಟಿರುವುದರಿಂದ ಅವರು ಈ ಉದ್ದೇಶಕ್ಕಾಗಿ ಎಷ್ಟು ಜಮೀನನ್ನು ಖರೀದಿಸಿದ್ದಾರೆ, ಅದರಲ್ಲಿ ಎಷ್ಟು ನಿವೇಶನಗಳನ್ನು ಮಾಡಬಹುದು ಎನ್ನುವಂತಹ ಅಂಶಗಳನ್ನು ಸೂಕ್ಷ್ಮವಾಗಿ

ಪರಿಶೀಲಿಸಬೇಕಾಗುತ್ತದೆ. ತಮ್ಮ ಗಮನಕ್ಕೆ ತರುವುದಾದರೆ, ಪ್ರಾಧಿಕಾರವೂ ಸೇರಿ ಮೈಸೂರು ನಗರದ ಸುತ್ತಮುತ್ತಲೂ ಅಂದಾಜು 50,000 ಎಕರೆ ಸಾಗುವಳಿ ಜಮೀನು ಈ ಉದ್ದೇಶಕ್ಕೋಸ್ಕರ ಖಾಸಗಿ ಲೇಔಟ್‌ಗಳನ್ನು ಮಾಡಿಕೊಳ್ಳುವುದಕ್ಕೆ ಬಳಕೆಯಾಗಿದೆ. ಲೇಔಟ್‌ಗಳ ನಿರ್ಮಾಣಕ್ಕಾಗಿ ಅಷ್ಟು ಭೂಮಿಯ ಅವಶ್ಯಕತೆ ಇದೆಯೇ? ಮುಂದಿನ 50 ವರ್ಷ

ಶ್ರೀ ಗೋ.ಮಧುಸೂದನ್:- ಮಾನ್ಯ ಸಭಾಪತಿಯವರೇ, ಸಾವಿರಾರು ವರ್ಷಗಳಿಂದ ಮೈಸೂರು ನಗರ ಏನಿದೆ, ಅದರ ಜನಸಂಖ್ಯೆ ಈಗ ಎಷ್ಟು ಪ್ರದೇಶದಲ್ಲಿದೆ, ಅದರ 5 ಪಟ್ಟಿಗೂ ಹೆಚ್ಚು ಪ್ರದೇಶದಲ್ಲಿ ಈಗ ನಾವು ನಿವೇಶನಗಳನ್ನು ಮಾಡಿ ಎಲ್ಲ ಕಡೆಗೂ ನಿವೇಶನಗಳನ್ನು ಗುರುತಿಸುವುದಕ್ಕಾಗಿ ಕಲ್ಲುಗಳನ್ನು ಹಾಕಲಾಗಿದೆ. ರೀತಿ ಕಲ್ಲು ಹಾಕಿರುವ ಪ್ರದೇಶವನ್ನು ನೋಡಿದರೆ ಅದು ನಮಗೆ ಸ್ಮಶಾಣದ ರೀತಿಯಲ್ಲಿ ಕಾಣುತ್ತಿದೆ. ಶ್ರೀ ಸಿ.ಹೆಚ್.ವಿಜಯ ಶಂಕರ:- ಮಾನ್ಯ ಸಭಾಪತಿಯವರೇ, ಅಂದಾಜು ಮುಂದಿನ 50 ವರ್ಷಗಳಿಗಾಗುವಷ್ಟು ಭೂಮಿಯನ್ನು ಈಗಾಗಲೇ ಖಾಸಗಿಯವರಲ್ಲಿ ನಾವು ಕಾಣಲಿಕ್ಕೆ ಸಾಧ್ಯವಿದೆ. ಅವರಿಗೆ 2 ಉದ್ದೇಶಗಳಿರುವುದು ಸ್ಪಷ್ಟವಾಗುತ್ತಿದೆ. ಇವತ್ತಲ್ಲ ನಾಳೆ ದುಡ್ಡಾಗುತ್ತದೆ ಎನ್ನುವುದು 2 ಮೊದಲನೆಯ ಕಾರಣವಾದರೆ, ಎರಡನೆಯದಾಗಿ ಅವರ ಬಳಿ ಹಣ ಏನಿದೆ ಅದನ್ನು ಹೂಡಿಕೆ ಮಾಡುವುದಕ್ಕೆ ಬೇರೆ ಕ್ಷೇತ್ರಗಳಿಲ್ಲ. ಹೀಗಾಗಿ ಆ ಹಣವನ್ನು ತಂದು ಆ ಜಾಗದ ಮೇಲೆ ಹೂಡಿಕೆ ಮಾಡುತ್ತಿದ್ದಾರೆ. ಈ ರೀತಿಯಾಗಿ ಅನಧಿಕೃತ ಬಡಾವಣೆಗಳನ್ನು ನಮ್ಮ ನಗರದ ಸುತ್ತಮುತ್ತಲೂ ಕಾಣಬೇಕೆ? ಲೇಔಟ್‌ಗಳನ್ನು ಕಾಣುವುದಕ್ಕೆ ಈ ನಿಯಂತ್ರಣದಲ್ಲಿ ಆ ರೀತಿ ನಗರಗಳ ಯೋಜನೆ ಏನಿದೆ, ನಗರಗಳ ಗಾತ್ರ ಏನಿದೆ, ಆ ಗಾತ್ರವನ್ನು ಹಿಗ್ಗಿಸುವುದಾದರೆ ಯಾವ ಪ್ರಮಾಣದಲ್ಲಿ ಹಿಗ್ಗಿಸಬೇಕು, ಅಲ್ಲಿಯ ಅವಶ್ಯಕತೆ ಏನು, ಅಲ್ಲಿಯ ಬೇಡಿಕೆ ಏನು ಈ ಬಗ್ಗೆ ಯೋಚನೆ ಮಾಡಿ ಅದಕ್ಕೆ ತಕ್ಕಂತೆ ಬಡಾವಣೆಗಳನ್ನು, ಖಾಸಗಿ ಬಡಾವಣೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ನಾವು ನಿಯಂತ್ರಣದಲ್ಲಿ ಅವಕಾಶ ಮಾಡಿಕೊಡುವುದಕ್ಕೆ ಸಾಧ್ಯವಿಲ್ಲವೆ? ಇದು ನನ್ನ ಮನಸ್ಸಿನಲ್ಲಿರುವಂತಹ

ಮೊದಲನೆಯ ವಿಚಾರವಾಗಿದೆ. ಎರಡನೆಯದಾಗಿ ಈ ಖಾಸಗಿ ಬಡಾವಣೆಗಳಿಗೆ ಕಾಲಮಿತಿಯನ್ನು ಹಾಕಲಿಲ್ಲ. ಒಂದು ಬಡಾವಣೆಯನ್ನು ಖಾಸಗಿಯವರು ಮಾಡುತ್ತೇವೆ ಎನ್ನುವುದಾದರೆ ಅದನ್ನು ಎಷ್ಟು ವರ್ಷದಲ್ಲಿ ಸಂಪೂರ್ಣವಾಗಿ ಅಭಿವೃದ್ಧಿಪಡಿಸಬೇಕು, ಅಭಿವೃದ್ಧಿಪಡಿಸಿದ ಮೇಲೆ ಅದನ್ನು ಎಷ್ಟು ವರ್ಷದಲ್ಲಿ ಹಂಚಿಕೆ ಮಾಡಬೇಕು ಎನ್ನುವುದಕ್ಕೆ ಕಾಲಮಿತಿ ಇಲ್ಲವೇ? ಅದನ್ನು ಅಭಿವೃದ್ಧಿಪಡಿಸುವುದಕ್ಕೆ 10 ವರ್ಷ, 15 ವರ್ಷ, 20 ವರ್ಷಗಳಷ್ಟು ಸಮಯ ಬೇಕೆ? ಅನಂತರ ಮುಂದಿನ 50 ವರ್ಷಗಳವರೆಗೆ ಅವರಿಗೆ ನಿವೇಶನಗಳನ್ನು ಹಂಚಿಕೆ ಮಾಡುವುದಕ್ಕೆ ಸಮಯ ನೀಡಲಾಗುತ್ತದೆಯೇ? ಬಡಾವಣೆಗಳನ್ನು ಎಷ್ಟು ವರ್ಷಗಳಲ್ಲಿ ಅಭಿವೃದ್ಧಿಪಡಿಸಬೇಕು, ಹಂಚಿಕೆ ಮಾಡುವುದಾದರೆ ಎಷ್ಟು ವರ್ಷಗಳಲ್ಲಿ ಅದನ್ನು ಹಂಚಿಕೆ ಮಾಡಬೇಕು ಎನ್ನುವುದಕ್ಕೆ ಸಂಬಂಧಿಸಿದಂತೆ ತಾವು ಕಾಲಮಿತಿಯನ್ನು ತರುವುದಕ್ಕೆ ಸಾಧ್ಯವಿಲ್ಲವೆ? ಇದು ನನ್ನ ಎರಡನೆಯ ಪ್ರಶ್ನೆ. ಮತ್ತೊಂದು ವಿಚಾರವೆಂದರೆ, ನಾನು ಇದಕ್ಕೆ ಸಂಬಂಧಿಸಿದಂತೆ ಖಾಸಗಿ ಮಸೂದೆಯೊಂದನ್ನು ಈ ಸದನದಲ್ಲಿ ಮಂಡನೆ ಮಾಡಿ, ಅದರ ಮುಖಾಂತರ ನಾನು ಕೆಲವು ಬೇಡಿಕೆಗಳನ್ನಿಟ್ಟಿದ್ದೆ. ಆ ಬೇಡಿಕೆಗಳ ಬಗ್ಗೆ ಈ ವಿಧೇಯಕದಲ್ಲಿ ಯಾವುದೇ ಚಕಾರವನ್ನೆತ್ತಿಲ್ಲ. ಅದರಲ್ಲಿ ನಾನು ಕೇಳಿಕೊಂಡಿರುವುದೇನೆಂದರೆ, ಈಗ ಬೆಂಗಳೂರು ನಗರದ ಸುತ್ತಮುತ್ತಲೂ ಇರುವಂತಹ ಎಲ್ಲ ತೋಟಗಳು, ಕೆರೆಗಳು ಮಾಯವಾದವು. ಹೀಗಾಗಿ ಪ್ರಾಕೃತಿಕ ಅಸಮತೋಲನದ ಪರಿಸ್ಥಿತಿ ಏನು ನಿರ್ಮಾಣವಾಗುತ್ತಿದೆ, ಅದಕ್ಕೆ ಅವಕಾಶ ನೀಡದಂತೆ ಸಮತೋಲನವನ್ನು ಕಾಪಾಡಿಕೊಳ್ಳುವುದಕ್ಕೆ ಈ ನಿಯಂತ್ರಣದಲ್ಲಿ ಸಾಧ್ಯವಿಲ್ಲವೆ? ಈ ಪ್ರಾಕೃತಿಕ ಸಮತೋಲನವನ್ನು ಕಾಪಾಡಿಕೊಳ್ಳುವುದಕ್ಕೆ ಕೂಡ ನಿಮ್ಮ ಈ ಮಸೂದೆಗಳಲ್ಲಿ ಚಿಂತನೆ ಮಾಡಬೇಕೆನ್ನುವುದು ನನ್ನ ಮನವಿಯಾಗಿದೆ. ಆ ಹಿನ್ನೆಲೆಯಲ್ಲಿ ನಾನು ತಮಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಯಾವುದೇ ನಗರದ ಸುತ್ತಮುತ್ತಲೂ ಏನು ಸಾಂಪ್ರದಾಯಿಕ ಬೆಳೆ ಬೆಳೆಯುವಂತಹ ಭೂಮಿ ಇದೆ, ಅದು ಅಧಿಕೃತವಾಗಿ ಕೂಡ ಘೋಷಣೆಯಾಗಿದೆ. ಭೂಮಿಯನ್ನು ಯಾವುದೇ ಕಾರಣಕ್ಕೆ ಕೂಡ ನೀವು ಮುಟ್ಟಬಾರದು ಎಂದು ಇದರಲ್ಲಿ ಹೇಳಲಿಕ್ಕೆ ಸಾಧ್ಯವಿಲ್ಲವೆ? ಎರಡನೆಯದಾಗಿ ಅಧಿಕೃತ ತೋಟಗಳೇನಿದ್ದವು, ಸುಮಾರು 50 60 ವರ್ಷಗಳಿಂದ ಬೆಳೆಸಿರುವಂತಹ ತೋಟ, ನಗರದ ಬೇಡಿಕೆಯನ್ನು ಪೂರೈಸುವಂತಹ ತೋಟಗಳನ್ನು ಮುಟ್ಟಬಾರದು, ಅದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ ಎಂದು ಹೇಳುವುದಕ್ಕೆ ನಿಮಗೆ ಅವಕಾಶವಿಲ್ಲವೆ? ಮೂರನೆಯದಾಗಿ ಗದ್ದೆಗಳು, ಬಹಳಷ್ಟು ಹಣವನ್ನು ವೆಚ್ಚ ಮಾಡಿ ರೈತರು ಗದ್ದೆಗಳನ್ನು ನಿರ್ಮಾಣ ಮಾಡಿಕೊಂಡು ಅಲ್ಲಿ ಬತ್ತವನ್ನೇನು ಬೆಳೆಯುತ್ತಿದ್ದಾರೆ, ಅದು ಅಚ್ಚುಕಟ್ಟು ಪ್ರದೇಶ ಎಂಬುದಾಗಿ ಅಧಿಕೃತವಾಗಿ

ಘೋಷಣೆಯಾಗಿರುತ್ತದೆ. ಅದನ್ನು ಯಾವುದೇ ಕಾರಣಕ್ಕೂ ಸಹ ಸರ್ಕಾರವಾಗಲಿ ಅಥವಾ ಖಾಸಗಿಯವರಾಗಲಿ ಖರೀದಿಸಿ ಭೂಪರಿವರ್ತನೆ ಮಾಡುವುದಕ್ಕೆ ನಿಯಮಗಳಲ್ಲಿ ನಾವು ಅವಕಾಶಗಳನ್ನು ಕೊಡುವುದಿಲ್ಲ ಎಂಬ ಬಗ್ಗೆ ತಾವು ಚಿಂತನೆ ನಡೆಸುವುದಕ್ಕೆ ಸಾಧ್ಯವಿಲ್ಲವೆ? ಅದಕ್ಕಾಗಿ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಭೂಪ್ರದೇಶದ ಅಭಿವೃದ್ಧಿಯನ್ನು ಯೋಜಿತ ಮತ್ತು ವ್ಯವಸ್ಥಿತ ವಿಧಾನದಲ್ಲಿ ನಿಯಂತ್ರಣಕ್ಕೆ ತರುವಂತಹ ಸಂದರ್ಭದಲ್ಲಿ ಈ ರೀತಿ ಪ್ರಾಕೃತಿಕ ಅಸಮತೋಲನ ಆಗುವಂಥದ್ದೇನಿದೆ; ಸ್ಥಳೀಯವಾಗಿ ಪರಿಸರದ ಮೇಲೆ ಕೆಟ್ಟ ಪರಿಣಾಮ ಬೀರುವಂಥದ್ದೇನಿದೆ ಆ ಹಿನ್ನೆಲೆಯಲ್ಲಿ ಕೂಡ ತಾವು ಈ ಮಸೂದೆಯಲ್ಲಿ ಚಿಂತನೆ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ಸಭಾಪತಿಯವರೇ, ಕೊನೆಯದಾಗಿ ಒಂದು ವಿಚಾರವನ್ನು ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. 'ಕೆರೆಗಳು ಮತ್ತು ಜಲ ನಿಕಾಯಗಳ ಪುನಃಶ್ಚತನೋಪಕಾರ' ಎಂದು ಈ ವಿಧೇಯಕದ ಪುಟ ಸಂಖ್ಯೆ: 10ರಲ್ಲಿ ಕಾಣಿಸಲಾಗಿದೆ. ತಾವು ದಯವಿಟ್ಟು ನಮ್ಮ ಮೈಸೂರು ನಗರದ ಹುಣಸೂರು ಸಹ ಸೇರಿದಂತೆ ರಾಜ್ಯದ ಯಾವುದೇ ನಗರಗಳನ್ನು ನೋಡಿ, ಅಲ್ಲಿ ಎರಡು ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಕೇವಲ ಕೆರೆಯನ್ನು ರಕ್ಷಣೆ ಮಾಡುತ್ತೇವೆ ಎಂದರೆ ಅದು ಸಾಧ್ಯವಾಗುವುದಿಲ್ಲ, ಏಕೆಂದರೆ ಕೆರೆ ರಕ್ಷಣೆಯಾಗಬೇಕಾದರೆ ಕೆರೆಗೆ ಹರಿದು ಬರುವ ನೀರಿನ ಮೂಲ ಏನಿದೆ, ಅದನ್ನು ರಕ್ಷಣೆ ಮಾಡದೆ ಕೆರೆಯನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಆ ಕೆರೆಗೆ ನೀರು ಬರುವುದಿಲ್ಲವೆಂದರೆ ಅದು ಕೆರೆ ಎನಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅಲ್ಲದೆ ಅದು ಬಹಳ ಕಾಲದವರೆಗೆ ಕೆರೆಯಾಗಿ ಉಳಿಯಲಿಕ್ಕೆ ಕೂಡ ಸಾಧ್ಯವಿಲ್ಲ. ಅದಕ್ಕಾಗಿ ಸರ್ಕಾರ ತಂದಿರುವಂತಹ ಮಸೂದೆಯಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಕೆರೆಯನ್ನು ರಕ್ಷಣೆ ಮಾಡಬೇಕು, ಆ ಕೆರೆಗೆ ಬರುವಂತಹ ನೀರಿನ ಮೂಲ ಏನಿದೆ ಅದನ್ನು ಕೂಡ ರಕ್ಷಣೆ ಮಾಡಬೇಕು. ಉದಾಹರಣೆಗೆ ಹೇಳುವುದಾದರೆ ಮೈಸೂರಿನ ಕುಕ್ಕನಳ್ಳಿ ಕೆರೆಗೆ ನಮ್ಮ ಹನುಗೋಡದ ಲಕ್ಷ್ಮಣತೀರ್ಥ ನದಿಯ ನೀರು ಹರಿದುಬರುತ್ತದೆ. ಈ ಯೋಜನೆಯನ್ನು ಸನ್ಮಾನ್ಯ ಸರ್.ಎಂ.ವಿಶ್ವೇಶ್ವರಯ್ಯನವರು ರೂಪಿಸಿದ್ದರು. ಅದನ್ನು ನಾವು Series of Achkuts ಎಂದು ಕರೆಯುತ್ತೇವೆ. ನಮ್ಮ ಹನುಗೋಡ ಪಕ್ಕದಲ್ಲಿ ಲಕ್ಷ್ಮಣತೀರ್ಥ ನದಿಗೆ ಒಂದು ಅಡ್ಡಗಟ್ಟೆ ಹಾಕಿದ್ದಾರೆ. ಅದನ್ನು ನಮ್ಮ ಆಡುಭಾಷೆಯಲ್ಲಿ ಉರುಳುಗಟ್ಟೆ ಎಂದು ಕರೆಯುತ್ತೇವೆ. ಆ ಉರುಳುಗಟ್ಟೆಗೆ ಒಂದು ಪಿಕಪ್ ನಾಲೆಯನ್ನು ಕೊಟ್ಟಿದ್ದಾರೆ. ಆ ಪಿಕಪ್ ನಾಲೆಯಿಂದ Series of Achkuts ಪ್ರದೇಶದ ಮುಖಾಂತರ ಕೆರೆಯಿಂದ ಕೆರೆಗೆ ನೀರನ್ನು ಲಿಂಕ್ ಮಾಡುತ್ತಾ ಹೋಗಿದ್ದಾರೆ. ನಮ್ಮ ತಾಲ್ಲೂಕಿನಲ್ಲಿರುವಂತಹ 29 ಕೆರೆಗಳು ಆ ನಾಲೆಯಲ್ಲಿ ಭರ್ತಿಯಾಗುತ್ತವೆ, ಅಂದಾಜು 35,000 ಎಕರೆ ಅಚ್ಚುಕಟ್ಟಾಗುತ್ತದೆ. ಅಲ್ಲಿಂದ ಅದು ಹೆಗ್ಗಡದೇವನ ಕೋಟೆಯ 7,000 ಎಕರೆ ಪ್ರದೇಶವನ್ನು ಅಚ್ಚುಕಟ್ಟುಗೊಳಿಸಿ ಅನಂತರ ಆ ನೀರು ಕುಕ್ಕನಹಳ್ಳಿ ಕೆರೆಯನ್ನು ಸೇರುತ್ತದೆ. ಹೀಗಾಗಿ ನಮ್ಮಹುಣಸೂರಿನಿಂದ ಪ್ರಾರಂಭವಾಗುವ ನಾಲೆ ಹುಣಸೂರು ತಾಲ್ಲೂಕಿನ 35,000 ಎಕರೆ ಅಚ್ಚುಕಟ್ಟನ್ನು ಪೂರ್ಣಗೊಳಿಸಿ ಹೆಗ್ಗಡದೇವನಕೋಟೆ ತಾಲ್ಲೂಕಿನ 7,000 ಎಕರೆಗೆ ನೀರನ್ನು ಕೊಟ್ಟು ಉಳಿದಂತಹ ನೀರು ಹೋಗಿ ಸೇರುವುದು ಮೈಸೂರಿನ ಕುಕ್ಕನಹಳ್ಳಿ ಕೆರೆಗೆ ತಾವು ಬಯಸುವುದಾದರೆ ಮೂಲ ಯೋಜನೆಯನ್ನು ತಮ್ಮೆದುರಿಗೆ ತೆಗೆಸಿಡುತ್ತೇನೆ. ನಾನು ಹೇಳುತ್ತಿರುವಂತಹ ಮಾತಿನಲ್ಲಿ ಒಂದು ಪೈಸೆಯಷ್ಟು ಸುಳ್ಳಾದರೂ ನನ್ನ ಮಾತನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ತಯಾರಿದ್ದೇನೆ. ನಾನು ಈ ಉದಾಹರಣೆಯನ್ನು ಕೊಡುವುದಕ್ಕೆ ಕಾರಣವೆಂದರೆ, ಕುಕ್ಕನಹಳ್ಳಿ ಕೆರೆಗೆ ನೀರು ಬರುವಂತಹ ಮೂಲ ಏನಿದೆ, ನಮ್ಮ ತಾಲ್ಲೂಕಿನ ಬೆಂಕಿಪುರ ಗ್ರಾಮದ ಮುಂದೆ ಇರುವಂತಹ 16 ಕಿಲೋ ಮೀಟರ್ ನಾಲೆ ಏನಿದೆ, ಅದು ಸಂಪೂರ್ಣವಾಗಿ ಮುಚ್ಚಿಹೋಗಿದೆ. ಮೈಸೂರು ನಗರ ವ್ಯಾಪ್ತಿಯ 11 ಕಿಲೋ ಮೀಟರ್ ಕುಕ್ಕನಹಳ್ಳಿ ಕೆರೆಗೆ ನೀರು ಬರುವಂಥದ್ದು, ಸಂಪೂರ್ಣ ಬಡಾವಣೆಯಾಗಿದೆ. ಪೂರ್ಣವಾಗಿ MUDA ಬಡಾವಣೆಗಳಾಗಿವೆ. ಅಂದರೆ ಕುಕ್ಕನಹಳ್ಳಿ ಕೆರೆಗೆ ನೀರು ಬರುವಂತಹ ಮೂಲ ಏನಿದೆ, ಆ ಮೂಲವನ್ನು ಸಂಪೂರ್ಣವಾಗಿ ನಾಶಪಡಿಸಲಾಗಿದೆ. ಇದು ನಗರದಲ್ಲಿರುವಂತಹ ಕೇವಲ ಒಂದು ಕೆರೆಯ ವಿಚಾರವಲ್ಲ, ಕುಕ್ಕನಹಳ್ಳಿ ಕೆರೆ ನಿಮಗೆಲ್ಲರಿಗೂ ಪರಿಚಯವಿರುವುದರಿಂದ ಉದಾಹರಣೆಗಾಗಿ ಮಾತ್ರ ನಾನು ಅದನ್ನು ತೆಗೆದುಕೊಂಡಿದ್ದೇನೆ. ನಗರದಲ್ಲಿರುವ ಎಲ್ಲ ಕೆರೆಗಳ ಪರಿಸ್ಥಿತಿ ಕೂಡ ಇದೇರೀತಿಯಾಗಿದೆ. ಅದಕ್ಕಾಗಿ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ತಾವು ಇಲ್ಲಿ ಬಹಳ ಸ್ಪಷ್ಟವಾಗಿ ಕೆರೆಗಳ ಪುನಃಶ್ಚೇತನ ಎಂದು ಹೇಳಿದ್ದೀರಿ. ಆ ಪುನಶ್ಚೇತನ ಕಾರ್ಯಕ್ರಮಗಳನ್ನು ಕೈಗೊಳ್ಳುವಂತಹ ಸಂದರ್ಭದಲ್ಲಿ ಆ ಕೆರೆಗೆ ಹರಿದು ಬರುವಂತಹ ನೀರಿನ ಮೂಲಗಳಿಗೆ ಸಂಬಂಧಿಸಿದಂತೆ ನೀವು ಒಂದು ನೀಲಿನಕ್ಷೆಯನ್ನು ತಯಾರು ಮಾಡಬೇಕು. ಎಲ್ಲ

ಪ್ರಾಧಿಕಾರಗಳಿಗೂ, ನಗರಪಾಲಿಕೆಗಳಿಗೂ ನೀವು ಬಹಳ ಸ್ಪಷ್ಟವಾಗಿ ಸೂಚನೆ ಕೊಡಬೇಕು. ನಗರಗಳ ವ್ಯಾಪ್ತಿಯಲ್ಲಿರುವಂತಹ ಕೆರೆಗಳ ನೀರಿನ ಮೂಲವನ್ನು ಕಾಪಾಡಿಕೊಳ್ಳದಿದ್ದರೆ ಇನ್ನು ಸುಮಾರು ಹತ್ತಿಪ್ಪತ್ತು ವರ್ಷಗಳಲ್ಲಿ ಯಾವುದೇ ನಗರದ ವ್ಯಾಪ್ತಿಯಲ್ಲಿರುವಂತಹ ಯಾವುದೇ ಕೆರೆ ಸಹ ಅದು ಕೆರೆಯಾಗಿ ಉಳಿಯುವುದಕ್ಕೆ ಸಾಧ್ಯವಿಲ್ಲ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ ತಿಳಿಸಬಯಸುತ್ತಿದ್ದೇನೆ. ಈ ಹಿನ್ನೆಲೆಯಲ್ಲಿ ಸಕಾರ ಖಾಸಗಿ ಬಡಾವಣೆಗಳನ್ನು ನಿಯಂತ್ರಣ ಮಾಡಬೇಕು. ಹತ್ತು ವರ್ಷಗಳಲ್ಲಿ ಆ ನಿವೇಶನ ಅಭಿವೃದ್ಧಿ ಮಾಡುವುದಕ್ಕೆ, ಆ ನಿವೇಶನವನ್ನು ಹಂಚಿಕೆ ಮಾಡುವುದಕ್ಕೆ ಮತ್ತು ಸ್ಥಳೀಯವಾಗಿ ನಗರದ ಬೇಡಿಕೆಗೆ ತಕ್ಕಂತೆ ಚಿಂತನೆ ಮಾಡಬೇಕು ನಗರದ ಬೇಡಿಕೆ ಏನಿದೆ ಅದಕ್ಕೆ ತಕ್ಕಂತೆ ಭೂ ಪರಿವರ್ತನೆ ಮಾಡುವುದಕ್ಕೆ ಚಿಂತನೆ ಮಾಡಬೇಕು. ಇನ್ನು ಮೂರನೆಯದಾಗಿ ಕೆರೆಯ ವಿಚಾರದಲ್ಲಿ ಏನು ಹೇಳಿದ್ದೀರಿ, ಆ ಕರೆಯ ನೀರಿನ ಮೂಲಕ ಹಾಗೂ ಆ ಕೆರೆಗೆ ಬರುವಂತಹ ನೀರಿನ ಮೂಲವನ್ನು ಕೂಡ ಕಾಪಾಡುವಂತಹ ದಿಕ್ಕಿನಲ್ಲಿ ತಾವು ಮಸೂದೆಯಲ್ಲಿ ಸ್ಪಷ್ಟವಾಗಿ ಯೋಜನೆಯನ್ನು ರೂಪಿಸಬೇಕೆಂದು ಹೇಳುತ್ತಾ, ಇಷ್ಟು ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಸಭಾಪತಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ.ಬಿ.ಶಾಣಪ್ಪ ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, Karnataka Town and Country Planning Act ಗೆ amendment ಏನು ತಂದಿದ್ದೀರಿ ಅನೇಕ ವಿಷಯಗಳನ್ನು ತಾವು ಬಹಳ ಕೂಲಂಕಷವಾಗಿ ಹೇಳಿದ್ದೀರಿ. ಆದರೆ ಒಂದು ವಿಷಯವನ್ನು ಮಾತ್ರ ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳಬಯಸುವುದೇನೆಂದರೆ, ಈ ಹಿಂದೆ ನಾನೂ ಕೂಡ 1983- 84ನೇ ಸಾಲಿನಲ್ಲಿ Wadi-Shahabad Town Planning Authority ಛೇರ್ಮನ್ ಆಗಿ ಕಾರ್ಯ ನಿರ್ವಹಿಸಿದ್ದೇನೆ. ಅದಕ್ಕೆ ಯಾವುದೇ ರೀತಿಯಾದಂತಹ guidelines ಇಲ್ಲ. ಈಗ ಗುಲ್ಬರ್ಗಾದಲ್ಲಿ Gulbarga Development Authority (GDA) ಇದೆ, MUDA ಇದೆ, ಈ ಪಟ್ಟಣಗಳನ್ನು ಸುಂದರ ಪಟ್ಟಣಗಳನ್ನಾಗಿ ಮಾಡಬೇಕು, ಜನರಿಗೆ ಮನೆಗಳನ್ನು ಕೊಡಬೇಕು, ಒಳ್ಳೆಯ ರಸ್ತೆ, ನೀರು ಅಂದರೆ ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕೆ ತಾವು planning ಮಾಡಿದ್ದೀರಾ? ಮಾನ್ಯ ವಿಜಯಶಂಕರ್‌ರವರು ನನ್ನ ಮನಸ್ಸಿನಲ್ಲಿರುವಂತಹ ಹಲವಾರು ವಿಷಯಗಳನ್ನು ಅವರೇ ಪ್ರಸ್ತಾಪ ಮಾಡಿದರು. ತಮ್ಮ ಹತ್ತಿರ ಇಷ್ಟೇ ಜನರಿಗೆ ನಿವೇಶನಗಳನ್ನು ಹಂಚಿಕೆ ಮಾಡಬೇಕೆಂಬ planning ಏನಾದರು ಇದೆಯೇ? ಈಗ ಗುಲ್ಬರ್ಗಾದಲ್ಲಿ ಸುಮಾರು ಆರೇಳು ಲಕ್ಷ ಜನಸಂಖ್ಯೆ ಇದೆ. ನನಗೆ ತಿಳಿದ ಮಟ್ಟಿಗೆ ಸುಮಾರು 30 ಲಕ್ಷದಷ್ಟು ಜನರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ನಿವೇಶನಗಳಿವೆ. GDA ಅವರದು ಸುಮಾರು 3 ಸಾವಿರದಷ್ಟು ನಿವೇಶನಗಳಿವೆ. ಅದೇ ರೀತಿ ಖಾಸಗಿಯವರ ಬಗ್ಗೆಯಂತು ಹೇಳುವುದಕ್ಕೇ ಆಗುವುದಿಲ್ಲ. I am also a Member of the GDA. ಅಲ್ಲಿ ಯಾವುದೇ ರೀತಿಯಾದಂತಹ ಕಂಟ್ರೋಲ್ ಇಲ್ಲವೆ? ಎಲ್ಲಾ ಕಡೆ General Power of Attorney (GPA) ಅನೇಕ ಕಡೆ GPA ಯಿಂದ scandal ಆಗಿದೆ. ಬೆಂಗಳೂರಿನಲ್ಲಿಯೂ ಸಹ ಅದೇ ಆಗಿರುವುದು. ನಾನು ತಮಗೆ ಕೇಳುವುದೇನೆಂದರೆ, ಈಗ industrialization ಆಗಬೇಕು. ನಮ್ಮ Country ಮುಂದೆ ಹೋಗಬೇಕಾದರೆ ಔದ್ಯೋಗಿಕರಣ ಆಗಬೇಕು. ಪ್ರಪಂಚದ ಯಾವುದೇ ಮೂಲೆಗೂ ಹೋದರು industrialization has taken place and they have developed their countries on that line. ಈಗ ನಮ್ಮ ದೇಶದಲ್ಲಿ ಶೇಕಡ 80 ರಿಂದ ಶೇಕಡ 90ರಷ್ಟು ರೈತರ ಜಮೀನು ಇದೆ. ಈಗ ಉದಾಹರಣೆಗೆ ಹೇಳಬೇಕೆಂದರೆ, ನಮ್ಮ ಗುಲ್ಬರ್ಗಾದಲ್ಲಿ ಕೇವಲ 8-10 ಕಿ.ಲೋ.ಮೀಟರ್ ವ್ಯಾಪ್ತಿಯಲ್ಲಿ ಮಾತ್ರ fertile ಜಮೀನಿಲ್ಲ. ಎಲ್ಲಾ ಕಡೆಗಳಲ್ಲಿಯೂ ಸಹ fertile ಜಮೀನಿದೆ. ಈಗ ಮಾಫಿಯಾಗಳು 50 ಎಕರೆ, 100 ಎಕರೆ ಇದ್ದಂತಹ en they are applying to the GDA. ಅವರು ಏಕೆ ಅಷ್ಟೆ ಮಾಡುವುದಕ್ಕೆ ಹೊರಟಿದ್ದಾರೆ? ಅವರಿಗೇನಾದರು requisition ಇದೆಯೇ? ಟೌನ್ ಪ್ಲಾನಿಂಗ್‌ನಿಂದ ನಮಗೆ ಇಷ್ಟು ಮನೆಗಳು ಬೇಕು ಅದಕ್ಕೋಸ್ಕರ ನೀವು ನಮಗೆ ಲೇಔಟ್ ಮಾಡಿಕೊಡಿ ಎಂದು is there any requisition to the Private Land Developer? OTI DEO, JIDU ಎಕರೆ, ಐದು ಎಕರೆ ಇದ್ದವರ ಜಮೀನನ್ನು ನೀವು ಅಕ್ವೈರ್ ಮಾಡಿಕೊಳ್ಳುತ್ತೀರಿ, ಅದರೆ ನಮ್ಮ ಗುಲ್ಬರ್ಗಾ ಸುತ್ತಾ ಮುತ್ತಾ 50ಎಕರೆ, 100 ಎಕರೆಜಮೀನು ಹೊಂದಿದವರು ಇದ್ದಾರೆ. ಈಗ ರಿಲಾಯನ್ಸ್ ಇವರು ಬಂದಿದ್ದಾರೆ, ಸಹರಾದವರು ಬಂದಿದ್ದಾರೆ, ದೊಡ್ಡದೊಡ್ಡವರು ಬಂದು ನಮ್ಮ ಗುಲ್ಬರ್ಗಾ ಸುತ್ತಾ ಮುತ್ತ lots of people are purchasing the land and doing estate business. ಆದುದರಿಂದ ನಾನು ಕೇಳುವುದೇನೆಂದರೆ, ನೀವು ಇನ್ನೂ ಎಷ್ಟು ದಿವಸ ಇದೇ ರೀತಿ ಮಾಡಬೇಕೆಂದು

ಇದ್ದೀರಿ? ಮುತ್ತಿನಂತ ಜಮೀನು ಅದು. ಅದು ಬರಡು ಭೂಮಿಯಲ್ಲ. ಹಾಗಾಗಿ ನಾನು ಕೇಳುವುದೇನೆಂದರೆ, ಇವರಿಗೆ ನೀವು ಇದೇ ರೀತಿ ಪರ್ಮಿಷನ್ ಕೊಡುತ್ತಾ ಹೋದರೆ ವ್ಯವಸಾಯದ ಭೂಮಿ ಎಲ್ಲಿ ಉಳಿಯುತ್ತದೆ? ಇತ್ತ ಕಡೆ ಗುಲ್ಬರ್ಗಾಕ್ಕೆ ವಾಸವದತ್ತ ಬಂದರು, Rajashri Cements, South India, Holsman, Lafarge, ABL, Thermal Plants ಬಂತು, ಅವರುಗಳೆಲ್ಲಾ ಎಂಥೆಂಥ ಜಮೀನುಗಳ ಮೇಲೆ ಮಾಡುವುದಕ್ಕೆ ಹೊರಟ್ಟಿದ್ದಾರೆಂದರೆ, ತೊಗರಿ, ಜೋಳ, ಭತ್ತ, ಸಜ್ಜೆ ಬೆಳೆಯುವಂತಹ ಭೂಮಿಯನ್ನೇ ಅವರು ಖರೀದಿ ಮಾಡಿರುವುದು. ರೈತರು ಹೋರಾಟ ಮಾಡುತ್ತಾರೆ ಆದರೆ ಅವರನ್ನು ಯಾರೂ ಸಹ ಕೇಳುವುದಿಲ್ಲ. ಆದುದರಿಂದ ತಮ್ಮ ಮೂಲಕ ಸರ್ಕಾರವನ್ನು development ಕೇಳಬಯಸುವುದೇನೆಂದರೆ, ಮಾಡುವವರಿಗೆ ಎಷ್ಟು ಜಮೀನು town planning andಬೇಕಾಗುತ್ತದೆ? ಅಲ್ಲಿ ಇದ್ದಂತಹಕಾರ್ಖಾನೆಯವರ ಮೇಲೆ ಇವರು ಜವಾಬ್ದಾರಿ ಹಾಕುವುದಿಲ್ಲ. ನೋಟಿಫೈಡ್ ಏರಿಯಾ ಮಾಡಿಕೊಂಡು ಅವರು ತಮ್ಮದೇ ಆದಂತಹ ಪ್ಲಾನಿಂಗ್ ಕಾಲೋನಿ ಮಾಡುತ್ತಾರೆ. They are not paying tax to the Municipality. They are not paying tax to the Corporation. ನಾವು ನೋಟಿಫೈ ಏರಿಯಾ ಮಾಡಿಕೊಂಡಿದ್ದೇವೆ, ಕಾಲೋನಿಯಲ್ಲಿ ಸಾವಿರ ಮನೆಗಳನ್ನು ಕಟ್ಟಿದ್ದೇವೆ, ನಾವೇ ಡೆವಲಪ್ ಮಾಡುತ್ತೇವೆ, We will not give any money to the Municipality ಎಂದು ಹೇಳುತ್ತಾರೆ. ಹಾಗಾದರೆ ಸರ್ಕಾರದ ಜವಾಬ್ದಾರಿಯಾದರು ಏನಿದೆ? ನೀವು ಅವರ ಮೇಲೆ ತೆರಿಗೆ ಹಾಕಬೇಕು, ನೀವು ಅವರಿಗೆ ನಾವು ರಸ್ತೆ ನಿರ್ಮಾಣ ಮಾಡುತ್ತೇವೆ, ವಿದ್ಯುತ್ ಕೊಡುತ್ತೇವೆ ಎಂದು ಹೇಳಬೇಕು ಜೊತೆಗೆ you should be a part of the Municipality ಎಂದು ಹೇಳಬೇಕು. ಹಾಗೂ ಅವರಿಗೆ ಕೊಟ್ಟಿರುವಂತಹ option ವ್ಯಕ್ತಿಯಲ್ಲಿ ತೆಗೆಯಬೇಕು. ಅಂದರೆ ಸರ್ಕಾರ ಅವರಿಗೆ ಏನು concession ಕೊಟ್ಟಿದೆ ಅದನ್ನು ಮೊದಲು ತೆಗೆಯಬೇಕು. ಮುನಿಸಿಪಾಲಿಟಿಯಲ್ಲಿ ಹಣ ಇರುವುದಿಲ್ಲವೆ? ಕಾರ್ಪೊರೇಶನ್‌ನಲ್ಲಿ ಹಣ ಇಲ್ಲವೆ? ಇಂಥ ದೊಡ್ಡ ದೊಡ್ಡವರು ಇದ್ದಮೇಲೆ ಅಲ್ಲಿಗೆ ಹಣ ಎಲ್ಲಿಂದ ಬರಬೇಕು? ಅದಕ್ಕಾಗಿ ಸರ್ಕಾರ ಖಾಸಗಿಯವರು ಏನು ಲೇಔಟ್ ಮಾಡುತ್ತಾರೆ ಅವರಿಗೆ ದೊಡ್ಡದೊಡ್ಡವರು ಕಾರ್ಖಾನೆಗಳನ್ನು ಮಾಡುವುದಕ್ಕೆ ಸರ್ಕಾರ ಏನು concession ಕೊಟ್ಟಿದೆ ಅದನ್ನು ಮೊದಲು Withdraw ಮಾಡಬೇಕು. ಹಾಗೂ ಸರ್ಕಾರ ಎಷ್ಟರ ಮಟ್ಟಿಗೆ ಒಂದು town planning ವಿಸ್ತರಣೆ ಮಾಡಬೇಕು ಎನ್ನುವುದರ ಬಗ್ಗೆ ಒಂದು ನೀಲಿನಕ್ಷೆ ಇರಬೇಕು. ಗುಲ್ಬರ್ಗಾ ಸುತ್ತಾ ಮುತ್ತಾ 8 ಕಿ.ಲೋ.ಮೀಟರ್/green belt ವ್ಯಾಪ್ತಿಯಲ್ಲಿ ಮಾಡಿದರು. ಆದರೆ ಈಗ ಗುಲ್ಬರ್ಗಾ ಸುತ್ತಾ ಮುತ್ತಾ 8 ಕಿ.ಲೋ.ಮಿಟರ್ green belt ಇಲ್ಲ. ಅಲ್ಲಿ ಇರುವುದೆಲ್ಲಾ ಬರೀ ಲೇಔಟ್‌ಗಳೆ, That was the declaration, ಈ 8 ಕಿ.ಲೋ ಮೀಟರ್ ಒಳಗೆ ಯಾರೂ ಮನೆಗಳನ್ನು ಕಟ್ಟಬಾರದು, ಆ ಜಾಗದಲ್ಲಿ ಕೇವಲ ಮರಗಿಡಗಳು ಮಾತ್ರ ಇರಬೇಕೆಂದು ಇದೆ. ಮಾನ್ಯ ರಾಮಕೃಷ್ಣಹೆಗಡೆಯವರ ಕಾಲದಲ್ಲಿ ಗ್ರೀನ್ ಬೆಲ್ ಮಾಡಿದರು. The University was also covered. ಆದರೆ ಅಲ್ಲಿ ಒಂದೂ ಗಿಡ ಮರಗಳಿಲ್ಲ. ಆದರೂ ಇದರ ಬಗ್ಗೆ ಹೇಳುವವರು ಕೇಳುವವರು ಯಾರೂ ಇಲ್ಲ. ಆದಕಾರಣ ಸರ್ಕಾರಕ್ಕೆ ನನ್ನ ಸಲಹೆ ಏನೆಂದರೆ, ದಯಮಾಡಿ ನೀವು ಏನೇ ಮಾಡಿದರು ಪಟ್ಟಣಕ್ಕೆ ಎಷ್ಟು ಪ್ಲಾಟ್‌ಗಳ ಅವಶ್ಯಕತೆ ಇದೆ ಅಷ್ಟನ್ನು ಮಾತ್ರ ಕೊಟ್ಟಿದ್ದಾರೆ. ಈ ಬಿಲ್ಲನ್ನು ಕೆಲವೇ ವಿಚಾರಗಳಿಗೆ ಸೀಮಿತವಾಗಿ ತಂದಿದ್ದೇನೆ. ನನ್ನ ಇಚ್ಛೆ ಏನೆಂದರೆ, ಇದರಲ್ಲಿ ಆಸಕ್ತರಾದಂತಹ ಎಲ್ಲಾ ವಿಧಾನ ಸಭಾ ಮತ್ತು ವಿಧಾನ ಪರಿಷತ್ತಿನ ಸದಸ್ಯರನ್ನು ಭಾಗಿ ಮಾಡಿಕೊಂಡು ನಮ್ಮ entire town planning ಬಗ್ಗೆ ಸಾಕಷ್ಟು ರೀತಿಯಲ್ಲಿ ಚರ್ಚೆ ಮಾಡಬೇಕು, ಯಾವ ಯಾವ ರೀತಿ ಬದಲಾವಣೆಗಳನ್ನು ತರಬೇಕು ಎನ್ನುವ ಬಗ್ಗೆ ಇನ್ನೊಂದು ಸಲ ಈ ಬಿಲ್ಲನ್ನು ತಂದು ಆ ಬದಲಾವಣೆಗಳನ್ನು ತರಬೇಕೆಂಬ ಉದ್ದೇಶವನ್ನು ನಾನು ಇಟ್ಟುಕೊಂಡಿದ್ದೇನೆ. ಈಗಾಗಲೇ ತಾವುಗಳು ಬಹಷ್ಟು ವಿಚಾರಗಳ ಬಗ್ಗೆ ಗಮನಕ್ಕೆ ತಂದಿದ್ದೀರಿ. TDR ಬಗ್ಗೆ ಏನೇನು ಅವ್ಯವಸ್ಥೆ ಆಗುತ್ತದೆ, ಯಾವ ರೀತಿ ಭ್ರಷ್ಟಾಚಾರ ನಡೆಯುತ್ತಿದೆ. ಯಾವ ರೀತಿಯ ಒಂದು ದೊಡ್ಡ ಸ್ಕ್ಯಾಂಡಲ್ ಇದೆ ಎಂಬುದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೀರಿ.

ಶ್ರೀ ವಿನಯ ಕುಮಾರ್ ಸೊರಕೆ - ಯಾವ ರೀತಿಯ ದೊಡ್ಡ ಸ್ಕ್ಯಾಂಡಲ್ ಆಗಿದೆ. ಎನ್ನುವುದರ / ಕಳೆದ 2 ವರ್ಷಗಳಿಂದ ಸಾಕಷ್ಟು ಚರ್ಚೆಯನ್ನು ಮಾಡಿದ್ದೇವೆ. ಸಚಿವರ ನೇತೃತ್ವದಲ್ಲಿ ಇದರ ಬಗ್ಗೆ ಒಂದು ಪ್ರತ್ಯೇಕವಾದ ಸಭೆಯನ್ನು ನಡೆಸಿ, ಇದೆ ಅದರ ಬಗ್ಗೆ ತನಿಖೆಯನ್ನು ಕೂಡ ನಡೆಸಬೇಕು. ಈ ಹಿಂದೆ ಯಾವುದೇ ರೀತಿಯಲ್ಲಿ regulate ಮಾಡತಕ್ಕ ವಿಧಾನಗಳಿಲ್ಲ. scandal ಇದೆ ಎನ್ನುವ ಮಾತನ್ನು ನಮ್ಮ ಉಗ್ರಪ್ಪನವರು ಹೇಳಿದರು. ಮಾಡಬೇಕೆನ್ನುವ ಉದ್ದೇಶದಿಂದಲೇ

ಇಷ್ಟೊಂದು ಜೋಡಣೆ ಮಾಡಿಕೊಂಡು ಮಾನ್ಯ ಕಾನೂನು ಏನು ಸ್ಯಾಂಡಲ್ ಇರುವ ಟಿಡಿಆರ್ ನ ಬಗ್ಗೆ ಇದರಲ್ಲಿ ಬಹಳಷ್ಟು ದೊಡ್ಡ ಇದನ್ನೆಲ್ಲ ರೆಗ್ಯೂಲೇಟ್ ನಾವು ಮಾಡುತ್ತಿದ್ದೇವೆ. ಇದರಲ್ಲಿ ಟಿಡಿಆರ್ ಮತ್ತು ಲೇಔಟ್ ಮತ್ತು ಸೆಸ್ ಮತ್ತು 5 ವರ್ಷಗಳ ಮಾಸ್ಟರ್ ಪ್ಲಾನ್ ಬಗ್ಗೆ ಮಾತ್ರ ಇದೆ. ಕಳೆದ ಸಲ ಅಕ್ರಮ ಸಕ್ರಮದ ವಿಧೇಯಕವನ್ನು ಎರಡು ಸದನಗಳಲ್ಲಿ ಒಪ್ಪಿ, ಮಂಜೂರು ಮಾಡಿ ಕೊಟ್ಟಿದ್ದೀರಿ. ಏಕೆಂದರೆ ಬೇರೆ ಬೇರೆ ರಾಜ್ಯಗಳಲ್ಲಿ ಅಕ್ರಮ ಸಕ್ರಮದ ಅನುಷ್ಠಾನ ಆಗಿದೆ. ಇಲ್ಲಿಯೂ ಒಂದು ಅವಕಾಶವನ್ನು ನಾವು ನೀಡಬೇಕಾಗುತ್ತದೆ. ಬಹಳಷ್ಟು ವರ್ಷಗಳಿಂದ ಅನಧಿಕೃತವಾಗಿ ಕಟ್ಟಡಗಳನ್ನು ಕಟ್ಟಿಕೊಂಡು ಇರುತ್ತಾರೆ.

ಕಾರಣ ಇದ್ದರೂ ಸಹ ಅದು ಸರಿಯಾಗಿ ರೆಗ್ಯೂಲೇಟ್ ಆಗದ ಕಾರಣ ಇದು ಒಂದು ರೀತಿಯಲ್ಲಿ ಏಕಾಏಕಿಯಾಗಿ ನಡೆಯುತ್ತಿದೆ. ನಾನು ಮೊನ್ನೆ ಬೆಳಗಾವಿಗೆ ಹೋಗಿದ್ದೆನು. ಬೆಳಗಾವಿಯ ಜಿಲ್ಲಾಧಿಕಾರಿ, ಕಮೀಷನ, ಉಸ್ತುವಾರಿ ಸಚಿವರು ಎಲ್ಲರೂ ಸೇರಿಕೊಂಡು ಒತ್ತುವರಿಯನ್ನು ತೆರವುಗೊಳಿಸುವುದಕ್ಕೆ ಪ್ರಾರಂಭಿಸಿದರು. ನನ್ನ ಕಣ್ಣಾರೆ ಕಂಡ ಹಾಗೆ ಅಲ್ಲಿನ ಜನರು ಸ್ವಯಂ ತಾವಾಗಿಯೇ ಒತ್ತುವರಿಯನ್ನು ತೆರವುಗೊಳಸುವ ಕೆಲಸವನ್ನು ಮಾಡುತ್ತಿದ್ದರು. ಹುಬ್ಬಳ್ಳಿಯಲ್ಲಿ | ದಾವಣಗೆರೆಯಲ್ಲಿ ಈ ಕೆಲಸ ಪ್ರಾರಂಭ ಆಗಿದೆ. ಕಾನೂನನ್ನು regulate ಮಾಡದೇ ಹೋದಾಗ ಒಂದು ಈ ರೀತಿ ಜನರ ಬಳಿ ನಾವು ರೀತಿಯಲ್ಲಿ ಉತ್ತಮ ಪ್ರತಿಕ್ರಿಯೆ ಫಲಿತಾಂಶ ಬರದೇ ಹೋಗುತ್ತದೆ. ಒಂದೇ ಸಲಕ್ಕೆ ನಾವು ಎಲ್ಲಾ ಅನಧಿಕೃತ ಕಟ್ಟಡಗಳನ್ನು ತೆರವು ಮಾಡುತ್ತೇವೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇದನ್ನೆಲ್ಲ ಹಂತಹಂತವಾಗಿ ಮಾಡಬೇಕಾಗುತ್ತದೆ. ಟಿಡಿಆರ್ ಕೂಡ ರಸ್ತೆ ಮಾಡಬೇಕಾದರೆ ಅಥವಾ ಬೇರೆ ಬೇರೆ ಉದ್ದೇಶಕ್ಕಾಗಿ ಪಡೆಯಬೇಕಾದರೆ ಜಾಗವನ್ನು ಇವತ್ತು 1.5% ಅವರಿಬ್ಬರಿಗೂ ಒಂದು ರೀತಿಯ ಪರಿಹಾರ ಸಿಗಬೇಕು. ಇದ್ದುದ್ದನ್ನು 2% ಮಾಡಿದ್ದೇವೆ. ನಮ್ಮ ಉದ್ದೇಶ ಏನೆಂದರೆ ಯಾರು ಜಾಗವನ್ನು ಕಳೆದುಕೊಳ್ಳುತ್ತಾರೆ ಅವರಿಗೆ ಸೂಕ್ತ ಪರಿಹಾರ ಸಿಗಬೇಕೆನ್ನುವ ಉದ್ದೇಶದಿಂದ ಈ ಮಾರ್ಪಾಡನ್ನು ಮಾಡುತ್ತಿದ್ದೇವೆ. ಅದನ್ನು ಸಮಗ್ರವಾದ regulate ಮಾಡುತ್ತೇವೆ ಎಂದರೆ ಅದನ್ನೆಲ್ಲ ಅಳವಡಿಸುವ ಕೆಲಸ ಮಾಡಿದರು.

ಶ್ರೀ ವಿನಯಕುಮಾರ್ ಸೋರಕೆ**(ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಗಳೆ, ಮೈಸೂರು ಒಂದು ಪ್ರವಾಸಿ ತಾಣ, ಒಳ್ಳೆಯ ಹವಾಮಾನ ಇರುವಂತಹ ಪಟ್ಟಣ. ಇಂತಹ ಜಾಗದಲ್ಲಿ ಒಂದು ಸೈಟ್‌ಗೆ ಬಂಡವಾಳ ಹಾಕಲು ಜನ ಇಷ್ಟ ಪಡುತ್ತಾರೆ. More than 50,000 sites ಹಾಗೆ ಖಾಲಿ ಇವೆ. ಸೈಟ್ ತೆಗೆದುಕೊಂಡು ಐದು ವರ್ಷವಾದವರು ಮನೆ ಕಟ್ಟದಿದ್ದರೆ ಅಂತಹ ಸೈಟ್‌ಗಳನ್ನು ರದ್ದುಪಡಿಸುತ್ತೇವೆ ಎಂದು ನಾನು ಒಂದು ಸಾರಿ ಹೇಳಿಕೆ ಕೊಟ್ಟೆ. ಸ್ವಲ್ಪ ಜನ ಮನೆ ಕಟ್ಟಲು ಪ್ರಾರಂಭ ಮಾಡಿದರು.

ಶ್ರೀ ಗೋ.ಮಧುಸೂದನ್::- ಮಾನ್ಯ ಸಭಾಪತಿಗಳೆ, ನಮ್ಮ MUDA ಸೈಟ್ ಅಲಾಟ್ ಮಾಡಿ ಹಕ್ಕುಪತ್ರ ಕೊಡುವಾಗ ನೀವು ಇಷ್ಟು ದಿನಗಳಲ್ಲಿ ಮನೆ ಕಟ್ಟಬೇಕು, ಇಲ್ಲದಿದ್ದರೆ ಇಷ್ಟು ದಂಡವನ್ನು ಹಾಕುತ್ತೇವೆ, ಸೈಟ್ ವಾಪಸ್ ತೆಗೆದುಕೊಳ್ಳುತ್ತೇವೆ ಎಂದು ಎಲ್ಲಾ clause ಗಳು ಇವೆ. ಆ ಎಲ್ಲಾ clause ಗಳು ಪೇಪರ್ Des 25. aga clause Karnataka Urban Development Authorities (KUDA) Act ದಲ್ಲಿರುವ ಯಾವ clause ಗಳನ್ನು ಕರ್ನಾಟಕದಲ್ಲಿರುವ ಯಾವ ನಗರದಲ್ಲಿಯು ಇಂಪ್ಲಿಮೆಂಟ್ ಮಾಡಿರುವುದಿಲ್ಲ. ಈಗಲೂ ಸೈಟ್‌ಗಳು ಖಾಲಿ ಇವೆ. ಯಾರ ಮನೆಗಳನ್ನು ಕಟ್ಟುವುದಿಲ್ಲ, ಅವರಿಗೆ ಬೇಕಾಗಿಲ್ಲ. ಅವರಿಗೆ ಬೇಕಾದ ಬೆಲೆ ಬರುವವರೆಗೆ ಕಾಯುತ್ತಾರೆ. ಆಗ ಏನಾಗುತ್ತದೆ ಎಂದರೆ, most developed area ಸದಾಶಿವನಗರಕ್ಕೆ ಹೋಗಿ ನೋಡಿ, ಅಲ್ಲಿಯ ಭೂಮಿ ಬೆಲೆ ದೊಡ್ಡದಾಗಿದೆ. ಆದರೆ ಅಲ್ಲಿ ಮಧ್ಯೆ-ಮಧ್ಯೆ ಸೈಟ್‌ಗಳು ಖಾಲಿ ಇವೆ. ಯಾಕೆ ಬಿಟ್ಟಿದ್ದಾರೆ, ಯಾರ ಸೈಟ್ ಎಂದು ಕೇಳಿದರೆ ಸುತ್ತ-ಮುತ್ತ ಇರುವವರಿಗ್ಯಾರಿಗೂ ಗೊತ್ತಿಲ್ಲ. ಅಲ್ಲಿ ಕಸ ಹಾಕುತ್ತಾರೆ, ಹಾವು-ಹಲ್ಲಿ ಎಲ್ಲಾ ಅಲ್ಲಿ ಸೇರಿಕೊಳ್ಳುತ್ತಿವೆ. ಹೇಳುವವರು-ಕೇಳುವವರು ಇಲ್ಲ. ಅಲ್ಲಿ ಅನೇಕ ಅವ್ಯವಹಾರ ಚಟುವಟಿಕೆಗಳು ನಡೆಯುತ್ತವೆ. ಅಲ್ಲಿ ಒಂದು ಚಿಕ್ಕದಾದ ಶೆಡ್ ಹಾಕಿಕೊಂಡಿರುತ್ತಾರೆ ಅಲ್ಲಿ ಯಾರು ವಾಸ ಮಾಡುತ್ತಾರೆ ಎನ್ನುವುದು ಯಾರು ಎನ್ನುವುದು ಯಾರಿಗೂ ಗೊತ್ತಿಲ್ಲ. ಯಾರೋ ಉಗ್ರವಾದಿ ಸಹ ಬಂದು ಇದ್ದು

ಶ್ರೀ ವಿನಯಕುಮಾರ್ ಸೊರಕೆ:- ಮಾನ್ಯ ಸಭಾಪತಿಗಳೆ, ಈ ವಿಧೇಯಕದ ಮೇಲೆ ಸಾಕಷ್ಟು ಸಲಹೆ-ಸೂಚನೆಗಳನ್ನು ತಾವು ನೀಡಿದ್ದೀರಿ. ಕಾನೂನನ್ನು ಇನ್ನು ರೂಪಿಸಿಕೊಳ್ಳಬೇಕಾಗಿದೆ. ಕಾನೂನಿನಲ್ಲಿ ಎಲ್ಲಿ ಅವಕಾಶವಿದೆ ಅಲ್ಲಿ

ತಾವು ಕೊಟ್ಟಿರುವ ಸಲಹೆ-ಸೂಚನೆಗಳನ್ನು ಅಳವಡಿಸಲು ಪ್ರಯತ್ನ ಮಾಡುತ್ತೇವೆ. ನಾನು ಆಗಲೇ ಹೇಳಿದ ರೀತಿಯಲ್ಲಿ ಇದರಲ್ಲಿ ಸಮಗ್ರವಾಗಿ ಚಿಂತನೆಯಾಗಬೇಕು.

ಶ್ರೀ ಸಿ.ಎಚ್.ವಿಜಯಶಂಕರ್:- ನಿರ್ಧಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಿ.

ಸಭಾಪತಿಯವರು:- ಇನ್ನೊಂದು ಸಾರಿ ಮಿಟಿಂಗ್ ಮಾಡುತ್ತೇನೆ ಎಂದು ಅವರು ಹೇಳಿದ್ದಾರೆ.

ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು):- ಮಾನ್ಯ ಸಭಾಪತಿಗಳೆ, ವಿಧೇಯಕವನ್ನು ಅನುಮೋದಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಸಭಾಪತಿಯವರು:- ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ **2015**ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.

ಖಂಡ 2 ರಿಂದ 8ರವರೆಗೆ

ಸಭಾಪತಿಯವರು:- "ಖಂಡ 2 ರಿಂದ 8ರ ವರೆಗೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 8ರವರೆಗೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಸಭಾಪತಿಯವರು:- ಪ್ರಸ್ತಾವ ಏನೆಂದರೆ,

ಶೀರ್ಷಿಕೆ, ಪ್ರಸ್ತಾವನೆ ಹಾಗೂ "ಮೊದಲನೆಯ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ

ಖಂಡ, ದೀರ್ಘ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಪ್ರಸ್ತಾವದ ಅಂಗೀಕಾರ

ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು):- ಮಾನ್ಯ ಸಭಾಪತಿಗಳೆ,, ವಿಧಾನಸಭೆಯಿಂದ

ಅಂಗೀಕೃತ 'ರೂಪದಲ್ಲಿರುವ 2015ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಸಭಾಪತಿಯವರು:- ಪ್ರಸ್ತಾವ ಏನೆಂದರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2015ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

**11.** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ನೀತಿ ಮತ್ತು ಕಾರ್ಯಾಚರಣೆ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ.

ಶ್ರೀ ಎಚ್.ಕೆ.ಪಾಟೀಲ್ **(**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು**)** ನ ಚರ್ಚೆಗೆ ಸರ್ಕಾರದಿಂದ ಉತ್ತರ.:- ಮಾನ್ಯ ಸಭಾಪತಿಗಳೆ, ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಗೌರವಾನ್ವಿತ ಸದಸ್ಯರು ಬಹಳಷ್ಟು ಸಲಹೆ-ಸೂಚನೆಗಳನ್ನು, ಮಾರ್ಗದರ್ಶನವನ್ನು ನೀಡಿದ್ದಾರೆ. ಅವರಿಗೆಲ್ಲರಿಗೂ ಈ ಸಂದರ್ಭದಲ್ಲಿ ನನ್ನ ಕೃತಜ್ಞತೆಗಳನ್ನು ಹೇಳುತ್ತೇನೆ. ಮಾನ್ಯ ಸಿದ್ದರಾಮಣ್ಣನವರು, ಸ್ನೇಹಿತರಾದ ಮಧುಸೂದನ್‌ರವರು, ೧|| ಹುಲಿನಾಯ್ಕರ್‌ರವರು, ಸ್ನೇಹಿತರಾದ ಉಗ್ರಪ್ಪನವರು, ಗೆಳೆಯರಾದ ವಿಜಯಶಂಕರ್‌ರವರು, ಗಣೇಶ್ ಕಾರ್ಣಿಕ್‌ರವರು, ಸಿ.ಎಸ್.ನ್ಯಾಮಗೌಡರು, ಇ.ಕೃಷ್ಣಪ್ಪನವರು, ಕೋಟಾ ಶ್ರೀನಿವಾಸ ಪೂಜಾರಿಯವರು, ಮಹಾಂತೇಶ್ ಕೌಜಲಗಿಯವರು, ಸಹೋದರಿ ಶ್ರೀಮತಿ ಮೋಟಮ್ಮನವರು, ಗೆಳೆಯ ಶ್ರೀನಿವಾಸ ಮಾನೆ, ಗೆಳೆಯ ಹಾಲಪ್ಪ ಆಚಾರ್, ಶ್ರೀಕಾಂತ ಘೋಟೆಕರ್, ಧರ್ಮಸೇನ ಇವರೆಲ್ಲರೂ ಬಹಳ

(ಈ ಹಂತದಲ್ಲಿ ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿಯವರು ಸಭಾಪತಿಯವರ ಪೀಠವನ್ನು ಅಲಂಕರಿಸಿದರು) ದಯಾನಂದ, ಮೃತಂಜಯ ಜಿನಗಾ ಹಾಗೂ ವಿರೋಧ ಪಕ್ಷದ ನಾಯಕರಾದ ಮಾನ್ಯ ಈಶ್ವರಪ್ಪನವರು, ಮಾನ್ಯ ಅಲ್ಲಂಪ್ರಭು ಪಾಟೀಲ್ ರವರು, ನಾಯಕರಾದ ಮಾನ್ಯ ಈಶ್ವರಪ್ಪನವರು ಸ್ವಲ್ಪ ಹೆಚ್ಚು ಬುದ್ಧಿವಂತಿಕೆಯಿಂದ ಶ್ರೀನಿವಾಸ ಪೂಜಾರಿಯವರು.)

ಶ್ರೀ ಶಿವರಾಂ ಪಟೇಲ್:- ನಾನು ಮಾತನಾಡಿದ್ದೇನೆ ನನ್ನ ಹೆಸರು ಬಿಟ್ಟುಬಿಟ್ಟಿದ್ದಿರಿ. ನಾನು ಮಾತನಾಡುವಾಗ ತಾವು ಆಚೆಕಡೆ ಹೋಗಿದ್ದಿರಿ. ಅದಕ್ಕೆ ನನ್ನ ಬಿಟ್ಟುಬಿಟ್ಟಿದ್ದಿರಿ ನೀವು.

ಎಚ್.ಕೆ.ಪಾಟೀಲ್**:-** ಹಾಗೇನು ಇಲ್ಲ, ಮಾನ್ಯ ಶಿವರಾಂ ಪಟೇಲ್‌ರವರು ಇವರೆಲ್ಲರೂ ನಮ್ಮ ಇಲಾಖೆಯ ಅಭಿವೃದ್ಧಿ ವಿಚಾರದಲ್ಲಿ ಬಹಳಷ್ಟು ಚರ್ಚೆ ಮಾಡಿದ್ದಾರೆ. ಭಾರಿ ಖುಷಿ ವಿಚಾರ ಎಂದರೆ, ಯಾರೆ ಟೀಕೆ ಮಾಡುವ ಸಂದರ್ಭದಲ್ಲಿ ನನಗೆ ನೋವು ಅನ್ನಿಸುತ್ತಿರಲಿಲ್ಲ. ಕಾರಣ ಎಂದರೆ, ತಾನು ಅದರಲ್ಲಿ ಸದ್ದುದ್ದೇಶವನ್ನು ಸ್ಪಷ್ಟವಾಗಿ ಕಾಣುತ್ತಿದೆ. ಬಹಳಷ್ಟು ಟೀಕೆ ಮಾಡಿದವರು ಎಂದರೆ, ವಿರೋಧ ಪಕ್ಷದ

ಸದಸ್ಯರು: ಅವರಿಗೆ ನಿಮ್ಮ ಮೇಲೆ ಪ್ರೀತಿ ಜಾಸ್ತಿ.

ಶ್ರೀ ಎಚ್.ಕೆ.ಪಾಟೀಲ್:- ಇರಬಹುದು, ಪ್ರೀತಿ ಇರುವಲ್ಲಿಯೇ ಸದ್ದುದ್ದೇಶದ ಟೀಕೆಗಳು ಬರುತ್ತವೆ. ತಾವು ಕೊಟ್ಟಿರುವ ಸಲಹೆಗಳನ್ನು ನಮ್ಮ ಇಲಾಖೆ ಅತ್ಯಂತ ಗಂಭೀರವಾಗಿ ಪರಿಶೀಲನೆ ಮಾಡುತ್ತದೆ. ತಮ್ಮಿಂದ ನಾನು ಒಂದು ವಿಚಾರವನ್ನು ಏನು ಅಪೇಕ್ಷೆ ಮಾಡುತ್ತಿದ್ದೆ ಎಂದರೆ, ಈ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕೆಲವು ಅಮೂಲಾಗ್ರವಾಗಿ ಬದಲಾವಣೆ ತರುವಂತಹ ನಮ್ಮ ದೈನಂದಿನ ಕೆಲಸಗಳು ಕೆಲಸ ನಿರ್ಯಗಳ ಇಣ್ಣೆ, ಉದಾಹರಣೆಗೆ ಪಂಚಾಯಿತಿ ಕಚೇರಿ ಮುಂಜಾನೆ 10-3080☎ ಸಂಜೆ 5-30ರವರೆಗೆ ಇರಬೇಕೋ ಬೇಡವೋ? ಏಕೆಂದರೆ ಬಹಳಷ್ಟು ಗ್ರಾಮಗಳಲ್ಲಿ ಈ ಸಮಯದಲ್ಲಿ ಹೊಲಕ್ಕೆ ಕೆಲಸಕ್ಕೆ ಹೋಗಿಬಿಡುತ್ತಾರೆ. ಪಂಚಾಯಿತಿಗೆ ಬರುವವರು ಹೊಲಕ್ಕೆ ಹೋಗುವುದನ್ನು ಬಿಟ್ಟು ಬರಬೇಕು ಅಥವಾ ಹೊಲದಲ್ಲಿ ಕೆಲಸ ಬಿಟ್ಟು ಪಂಚಾಯಿತಿ ಕಛೇರಿ ಕ್ಲೋಸ್ ಆಗುವುದರೊಳಗೆ ಬರಬೇಕು. ಇಂತಹ ಕೆಲವು ಮಹತ್ವದ ಬದಲಾವಣೆಗಳನ್ನು ತರುವುದು ಅವಶ್ಯಕವಿದೆಯೇ? ಮಾನ್ಯ ಮರಿತಿಬ್ಬೇಗೌಡರು ಶಿಕ್ಷಕರ ವಿಚಾರದಲ್ಲಿ ಇಲ್ಲ ಎನ್ನದಂತೆ ಬಹಳಷ್ಟು ಒತ್ತಾಯ ಮಾಡಿ ಹೇಳುತ್ತಿರುತ್ತಾರೆ. ಇದರಲ್ಲಿಯೂ ಹೇಳಬೇಕಾಗಿತ್ತು ಎಂದು ಅಪೇಕ್ಷೆ ಮಾಡುತ್ತಿದ್ದೆನು.

ಶ್ರೀ ಹೆಚ್.ಕೆ. ಪಾಟೀಲ್:- ಮೊದಲು ಮಾದರಿ ಗ್ರಾಮದ ಬಗ್ಗೆ ಮಾನ್ಯ ವಿಜಯಶಂಕರ್‌ರವರು ಹೇಳಿದ್ದು, ನನಗೆ ಬರೆದೂ ಕಳುಹಿಸಿದ್ದಾರೆ. ಅವರು ಕಲ್ಪನೆ ಅಥವಾ ಭಾವಿಸಿಕೊಳ್ಳುವ ಮಾದರಿ ಗ್ರಾಮವನ್ನು ನಾನು ವೈಯಕ್ತಿಕವಾಗಿ ಸಂಪೂರ್ಣವಾಗಿ ಒಪ್ಪುವುದಿಲ್ಲ. ಏಕೆಂದರೆ ಅವರ ಕಲ್ಪನೆಯಲ್ಲಿ ಆಧುಕತೆಯನ್ನು ಸಂಪೂರ್ಣವಾಗಿ ಸರಿಸಿಟ್ಟಿದ್ದಾರೆ. ಹೊಸತಳಿ ಬೀಜ, ರಸಾಯನಿಕ ಗೊಬ್ಬರವನ್ನು ಅವರು ಒಪ್ಪುವುದಿಲ್ಲ, ಪಟ್ಟಣ ಮತ್ತು ಕೈಗಾರಿಕಾ ಪ್ರದೇಶಗಳಿಂದ ಗ್ರಾಮಕ್ಕೆ ಬರುವ ವಸ್ತುಗಳ ಬಗ್ಗೆ door close ಮಾಡಿಬಿಟ್ಟಿದ್ದಾರೆ. ಅದನ್ನು ಹೊರತುಪಡಿಸಿದರೆ ನಮ್ಮ ಗ್ರಾಮಗಳು ಮಾದರಿ ಗ್ರಾಮಗಳೆಂದರೆ ಸಂಪ್ರದಾಯಿಕ ಗ್ರಾಮಗಳು ಮಾತ್ರವಲ್ಲ, ಆಧುನಿಕ ಸೌಲಭ್ಯ ಮತ್ತು ಸೌಕರ್ಯಗಳನ್ನು ಒಳಗೊಂಡಿದ್ದು, ಆಧುನಿಕ ಜೀವನದ

ವಸ್ತುಗಳನ್ನು ಗ್ರಾಮೀಣ ಜನರ ಬದುಕಿಗೆ ತಲುಪಬೇಕು. ನಮ್ಮ ಊರಿನಲ್ಲಿ ಗೊಬ್ಬರ ಬಳಕೆ ಮಾಡಿಕೊಳ್ಳದಿದ್ದರೆ ಕೆರೆಗೆ ಬರುವ ನೀರು ಅಥವಾ ಬೋರ್‌ವೆಲ್ ನೀರು ಶುದ್ಧ ನೀರಾಗಲು ಸಾಧ್ಯವಿಲ್ಲ. ಅದು Contaminated water ಆಗಿರುತ್ತದೆ. ಅವರ ಪ್ರಕಾರ ಆಧುನಿಕ ಸೌಲಭ್ಯಗಳಲ್ಲಿ purification of water ಅಥವಾ ಮತ್ತೊಂದು ಇರಬಹುದು, ಅದನ್ನು ಬಿಡಬೇಕಾಗುತ್ತದೆ. ಆ ಕ್ಷೇತ್ರದಲ್ಲಿ ಅವರ ಮಾತಿಗೆ ಸ್ವಲ್ಪ ಬದಲಾವಣೆ ಬಯಸುತ್ತೇನೆ ನಾನು ನನ್ನ ಮಾತನ್ನು ಮುಗಿಸಿದ ಮೇಲೆ ನೀವು ಮಾತನಾಡಿದರೆ my thought process will be smooth.

ಶ್ರೀ **ಹೆಚ್. ವಿಜಯಶಂಕರ್**:- ಮಾದರಿ ಗ್ರಾಮದ ವಿಚಾರದಲ್ಲಿ ಗುಡಿ ಕೈಗಾರಿಕೆ ಮರೆಯಾಗಿದೆ, ಉಳುಮೆಗೆ ಬೇಕಾದ ಪದಾರ್ಥಗಳು, ರಸಗೊಬ್ಬರ, ಬೀಜ, ಔಷಧಿ ಸೇರಿದಂತೆ ರೈತನಿಗೆ ಪೂರಕವಾದ ಎಲ್ಲಾ ಅಂಶಗಳು ಪೇಟೆಯಿಂದ ಬರಬೇಕಾಗಿದೆ. ಗ್ರಾಮದ ಸ್ವಾವಲಂಬಿ ವ್ಯವಸ್ಥೆ ಸಂಪೂರ್ಣ ನಾಶವಾಗಿದೆ. ಮೊದಲು ಗ್ರಾಮಗಳು ಸ್ವಾವಲಂಬಿಯಾಗಿದ್ದು, ನಗರವು ಸ್ವಾವಲಂಬಿಯಾಗಿ ಗ್ರಾಮಗಳು ಪರಾವಲಂಬಿಯಾಗಿತ್ತು, ಪರಾವಲಂಬಿಯಾಗಿವೆ. ಆ ಹಿನ್ನಲೆಯಲ್ಲಿ ದೊಡ್ಡ ಜವಾಬ್ದಾರಿ ಇದೆ. ತಮಗೆ ಅನುಭವ ಇದೆ ಎಂದು ಹಿಂದೆ ನಾನು ಕಂಡ ಗ್ರಾಮದ ಕಲ್ಪನೆಯನ್ನು ತೆರೆದಿಟ್ಟಿದ್ದೇನೆ. ನಾನು ನಗರದಿಂದ ಬರುವ ವ್ಯವಸ್ಥೆಗಳನ್ನು ಬಂದ್ ಮಾಡಿರುವ ಬಗ್ಗೆ ತಿಳಿಸಿದರು. ನಾನು ಶ್ರೀ ಅಣ್ಣಾ ಹಜಾರೆಯವರು ಅಭಿವೃದ್ಧಿಪಡಿಸಿದ ಗ್ರಾಮಗಳಿಗೆ ಭೇಟಿ ಕೊಟ್ಟಿಲ್ಲ. ಆದರೆ ಅವರು ಅಭಿವೃದ್ಧಿ ಪಡಿಸಿದ ಗ್ರಾಮಗಳು ಮತ್ತು ಸ್ವಾವಲಂಬನೆಗೆ ಬೇಕಾದ ಕ್ರಮಗಳ ಬಗ್ಗೆ ಪತ್ರಿಕೆಗಳಲ್ಲಿ ಓದಿದ್ದೇನೆ. ಆ ಹಿನ್ನಲೆಯಲ್ಲಿ ಎಂಬ ಮಾಹಿತಿ ತರಬೇತಿಗೊಳಿಸುತ್ತಿದ್ದಾರೆ ಅವರು ಬೇರೆ ಬೇರೆಯವರನ್ನು ಹೇಗೆ ಪಡೆದುಕೊಂಡಿದ್ದೇನೆ. ಇವತ್ತು ಆಧುನಿಕತೆ ಮತ್ತು ಹಿಂದಿನ ಸಂಪ್ರದಾಯ ಪದ್ಧತಿಗಳೆರಡನ್ನು ಅವಿಷ್ಕಾರಗೊಳಿಸಿ ಮಾನ್ಯ ಹಜಾರೆಯವರು ಇವತ್ತಿಗೂ ಗ್ರಾಮಗಳನ್ನು ಸ್ವಾವಲಂಬಿಯನ್ನಾಗಿ ಮಾಡುವುದರಲ್ಲಿ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ ಎಂಬ ಮಾಹಿತಿಯನ್ನು ಪಡೆದುಕೊಂಡಿದ್ದೇನೆ. ತಾವು ದಯವಿಟ್ಟು ದಿಕ್ಕಿನಲ್ಲಿ ಚಿಂತನೆ ಮಾಡಿ, ಎರಡನ್ನು ಮಿಶ್ರಮಾಡಿ ಗ್ರಾಮಗಳನ್ನು ಸ್ವಾವಲಂಬನೆ ಮಾಡುವುದಕ್ಕೆ ಸಾಧ್ಯವಿದೆ ಎಂದು ನನ್‌ನ ಭಾವನೆ.

ಶ್ರೀ **ಹೆಚ್.ಕೆ. ಪಾಟೀಲ್**:- ಮಾನ್ಯ ಸಭಾಪತಿಯವರೇ, ನಾನು ರಾಲೆಗಾನ್ ಸಿದ್ದಿಗೆ ಹೋಗಿ ನೋಡಿದ್ದೇನೆ, ಮಾನ್ಯ ಹಜಾರೆಯವರ ಪ್ರಯೋಗವನ್ನು ಬಹಳ ಸಮೀಪದಿಂದ ಕಂಡಿದ್ದೇನೆ. ಮಾನ್ಯ ಸದಸ್ಯರು ಇಲ್ಯಾಂಗೋನ್ ಬಗ್ಗೆ ಪ್ರಸ್ತಾಪ ಮಾಡಿದ್ದನ್ನು ಸಂಪೂರ್ಣವಾಗಿ

ಶ್ರೀ **ಹೆಚ್.ಕೆ. ಪಾಟೀಲ್:-** ನಮ್ಮ ಹಳ್ಳಿ, ಗ್ರಾಮ ವಿಚಾರ ಮಾಡುವ ಮುಂದೆ ರಾಜಕೀಯ ಮಿಶ್ರಿತ ವಿಷಯಗಳು ಬಂದಾಗ ಈ ರೀತಿ ನಿಂತುಹೋಗುತ್ತದೆ. ನಾವು ಕಲ್ಪನೆ ಬಗ್ಗೆ ಮಾತನಾಡುತ್ತಿದ್ದು, ಅವರು ನೇರವಾಗಿ NREGA ನಲ್ಲಿ ಆಗುತ್ತಿರುವ ಅವ್ಯವಹಾರ, ಅದನ್ನು ಚೆಕ್ ಮಾಡುವ ಬಗ್ಗೆ ಹೇಳಿದ್ದು, ಮುಂದೆ ನಾನು ಆ ವಿಷಯಕ್ಕೆ ಬರುತ್ತೇನೆ. ಆಗ ಅವರು ಹೆಚ್ಚು ಬೆಳಕು ಚೆಲ್ಲಬಹುದು. ಮಾದರಿ ಗ್ರಾಮ ಮಾಡಬೇಕಾದ ಅವಶ್ಯಕತೆ ಇದ್ದು, ಅದಕ್ಕಾಗಿ 900 ಕೋಟಿ ರೂಪಾಯಿಗಳ ಗ್ರಾಮ ವಿಕಾಸ ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. ಸನ್ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರದ ಮೇಲೆ ಒಂದು ದೊಡ್ಡ ಗೂಬೆ ಕೂರಿಸಲಾಗುತ್ತಿದೆ. 'ಸುವರ್ಣ ಗ್ರಾಮ' ಯೋಜನೆಯನ್ನು ನಿಲ್ಲಿಸಿ ಸುಮಾರು ಎರಡು ವರ್ಷಗಳಾಗಿವೆ, ಈಗ 'ಗ್ರಾಮ ವಿಕಾಸ' ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ. ಅದಕ್ಕೆ ಸಂಬಂಧಪಟ್ಟ ಮಾರ್ಗಸೂಚಿಗಳು ಈಗ ಇಶ್ಯ ಆಗುತ್ತಿವೆ ಎನ್ನುವ ಟೀಕೆಗಳು ಕೇಳಿ ಬರುತ್ತಿವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 'ಸುವರ್ಣ ಗ್ರಾಮ' ಯೋಜನೆಯ ಪ್ರಾರಂಭವಾಗಿದ್ದ ಕೆಲಸಗಳು ಅಥವಾ ಕೆಲಸ ಪ್ರಾರಂಭವಾಗುವ ಹಂತದಲ್ಲಿ ಇದ್ದಂತಹ ಕೆಲಸಗಳನ್ನು ಪ್ರಾರಂಭ ಮಾಡುವುದಕ್ಕೆ ಸುಮಾರು ಅನುದಾನವನ್ನು ನೀಡಲಾಗಿದೆ. 'ಗ್ರಾಮ ವಿಕಾಸ' ಕಾರ್ಯಕ್ರಮ ಎನ್ನುವುದು ಸಂಪೂರ್ಣ ಹೊಸ ಕಲ್ಪನೆಯಾಗಿದೆ. ಗ್ರಾಮ ದೇವತೆ ಗುಡಿಯನ್ನು ನಾವು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡುತ್ತಿದ್ದೆವು. ಅದು ಪಾಳು ಬಿದ್ದಿದ್ದರೂ ಅದನ್ನು ಕಟ್ಟಿಸಬೇಕೆಂದು ನಾವು ಯಾರೂ ಪ್ರಯತ್ನಿಸುವುದಿಲ್ಲ. ಅದು ನಮ್ಮ ಗ್ರಾಮದ ಸಂಸ್ಕೃತಿಯ ದ್ಯೋತಕವಾಗಿದೆ. ಗ್ರಾಮ ದೇವತೆಯ ಗುಡಿ ತಲತಲಾಂತರದಿಂದ ಬಂದಿದೆ. ನನಗೆ ತಿರುಪತಿ ತಿಮ್ಮಪ್ಪನ ಬಗ್ಗೆ ಭಕ್ತಿ ಅದಕ್ಕಾಗಿ ವೆಂಕಟರಮಣಸ್ವಾಮಿ ದೇವಸ್ಥಾನವನ್ನು ಕಟ್ಟಿಸಿದೆ. ಇನ್ನು ಯಾರಿಗೋ ಬೀರಪ್ಪನ ಗುಡಿ ಬೇಕಾಗಿತ್ತು ಅವರು ಬೀರಪ್ಪನ ಗುಡಿಯನ್ನು ಕಟ್ಟಿಸಿದರು.

ಸ್ವಾಮಿ ಅಯ್ಯಪ್ಪನ ದೇವಸ್ಥಾನ ಬೇಕಾಗಿತ್ತು ಎಂದು ಸ್ವಾಮಿ ಅಯ್ಯಪ್ಪನ ಗುಡಿಯನ್ನು ಕಟ್ಟಿಸಲಾಗುತ್ತದೆ. ಹೀಗೆ ಸಮುದಾಯ ಭವನದ ಹೆಸರಿನಲ್ಲಿ ಶಾಸಕರ ನಿಧಿಯಿಂದ ಹಣವನ್ನು ತೆಗೆದುಕೊಂಡು ಹೊಸ ಹೊಸ ಗುಡಿಗಳನ್ನು ಕಟ್ಟಿಸುತ್ತಿದ್ದೇವೆ. ಆದರೆ, ಗ್ರಾಮದೇವತೆಯ ಗುಡಿಯನ್ನು ಕಟ್ಟಿಸುವುದಕ್ಕೆ ನಾವು ಯಾರೂ ಶಾಸಕರು ಮುಂದಾಗುತ್ತಿರಲಿಲ್ಲ. ಪಂಚಾಯಿತಿ ಅಧ್ಯಕ್ಷರು ಸಹ ಮುಂದಾಗುತ್ತಿರಲಿಲ್ಲ. ಈ ಕಾರಣದ ಹಿನ್ನೆಲೆಯಲ್ಲಿ ನಮ್ಮ ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಗ್ರಾಮ ದೇವತೆಯ ಗುಡಿಯನ್ನು ಅಭಿವೃದ್ಧಿಗೊಳಿಸುವುದಕ್ಕಾಗಿಯೇ ಹಣಕಾಸನ್ನು ಯಾವ ಬಾಬುಗಳಿಗೆ ಹಣವನ್ನು ಒದಗಿಸಲಾಗಿದೆ. 'ಗ್ರಾಮ ವಿಕಾಸ' ಯೋಜನೆಯಲ್ಲಿ ಯಾವ ಮೀಸಲಿಡಲಾಗಿದೆ ಅದಕ್ಕೆ ಮಾತ್ರ ಉಪಯೋಗಿಸಬೇಕೆಂದು ಇಲ್ಲ. ಫ್ಲೆಕ್ಸಿ ಫಂಡ್ ಆಗಿಯೂ ಸಹ ಬಳಸಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಸ್ವಲ್ಪ ಪ್ರಮಾಣದ ಹಣವನ್ನು ತೆಗೆದಿರಿಸಲಾಗಿದೆ. ಕೇವಲ ರಸ್ತೆ ಮತ್ತು ಚರಂಡಿಗಳಿಗೆ ಮಾತ್ರವಲ್ಲ, ಉಳಿದ ಎಲ್ಲ ಕಾರ್ಯಕ್ರಮಗಳಿಗೆ ಎಷ್ಟು ಹಣ ಬೇಕಾಗಬಹುದು ಎನ್ನುವುದನ್ನು ನಿರ್ಣಯ ಮಾಡಿಕೊಂಡು ಆ ಯೋಜನೆಯಲ್ಲಿ ಸೇರ್ಪಡೆ ಮಾಡಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮೊನ್ನೆ ಮಾತನಾಡುತ್ತಿದ್ದ ಸಂದರ್ಭದಲ್ಲಿ 15 ಅಂಶಗಳ ಬಗ್ಗೆ ಒತ್ತು ಕೊಟ್ಟು ಚರ್ಚೆ ಮಾಡಿದರು. ಈಗ ಅದನ್ನು 21 ಅಂಶಗಳೆಂದು ಮಾಡಿದ್ದೇವೆ. ಯಾವ ಗ್ರಾಮದಲ್ಲಿ ಗ್ರಾಮ ವಿಕಾಸ ಯೋಜನೆಯನ್ನು ತೆಗೆದುಕೊಳ್ಳುತ್ತೇವೆ ಆ ಗ್ರಾಮದಲ್ಲಿ ಎಲ್ಲ 21 ಅಂಶಗಳು ಜಾರಿಯಾಗಬೇಕೆನ್ನುವ ಹೊಸ ಕಲ್ಪನೆಯನ್ನು ಹೊಂದಲಾಗಿದೆ. ಇದಕ್ಕಾಗಿ 75 ಲಕ್ಷ ರೂಪಾಯಿಗಳನ್ನು ನೀಡಲಾಗುತ್ತಿದೆ. ಇದರ ಜೊತೆಗೆ 21 ಅಂಶಗಳು ಮತ್ತು ಇತರೆ ಕಾರ್ಯಕ್ರಮಗಳು ಅಂದರೆ ಶೌಚಾಲಯ ನಿರ್ಮಾಣ ಮುಂತಾದವುಗಳನ್ನು ಶೇಕಡಾ ನೂರಕ್ಕೆ ನೂರರಷ್ಟು ಅನುಷ್ಠಾನಗೊಳಿಸಬೇಕು ಮತ್ತು ಒಂದು ನಿರ್ದಿಷ್ಟವಾಗಿರುವ ರೂಪ ಆ ಗ್ರಾಮಕ್ಕೆ ಬರಬೇಕೆನ್ನುವ ದೃಷ್ಟಿಯಿಂದ ಒಂದು ಯೋಜನೆಯನ್ನು ತಂದಿದ್ದೇವೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಒಂದು ಸಾವಿರ ಗ್ರಾಮಗಳಲ್ಲಿ 'ಗ್ರಾಮ ವಿಕಾಸ' ಯೋಜನೆಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಿದ ಮೇಲೆ ಒಂದು ಹೊಸ ರೀತಿಯ ಗ್ರಾಮೀಣ ಬದುಕನ್ನು ನೋಡುವುದಕ್ಕೆ ಸಾಧ್ಯವಾಗಬಹುದು. ಹಿಂದೆ ನಾವು 'ಸುವರ್ಣ ಗ್ರಾಮ ಯೋಜನೆ, 'ಸುಗ್ರಾಮ ಯೋಜನೆಗಳನ್ನು ತಂದಂತಹ ಸಂದರ್ಭದಲ್ಲಿ ಗ್ರಾಮೀಣ ಜನರ ಬದುಕಿನ ಗುಣಮಟ್ಟವನ್ನು ಎತ್ತರಿಸುವುದಕ್ಕೆ ನಾವು ಪ್ರಯತ್ನ ಮಾಡಲಿಲ್ಲ. ಕೇವಲ ಮೂಲಭೂತ ಸೌಲಭ್ಯಗಳು ಅದರಲ್ಲೂ ರಸ್ತೆ ಮತ್ತು ಚರಂಡಿಗಳಿಗೆ ಮಾತ್ರ ಗಮನವನ್ನು ಹರಿಸಲಾಗುತ್ತಿತ್ತು. ಆದರೆ, ಈ ದೃಷ್ಟಿಕೋನವನ್ನು ಗ್ರಾಮ ವಿಕಾಸ' ಯೋಜನೆಯಲ್ಲಿ ಬದಲಾಯಿಸಲಾಗಿದೆ. 'ಗ್ರಾಮ ವಿಕಾಸ' ಯೋಜನೆ ಅನುಷ್ಠಾನಗೊಂಡ ಮೇಲೆ ಮಾನ್ಯ ಸದಸ್ಯರುಗಳಿಂದ ಸಾಕಷ್ಟು ವಿಚಾರಗಳು ಹರಿದು ಬರಬಹುದು ಎನ್ನುವ ಆಶಯವನ್ನು ವ್ಯಕ್ತಪಡಿಸುತ್ತಿದ್ದೇನೆ.

ಶ್ರೀ ಬಿ.ರಾಮಕೃಷ್ಣ:- ಸನ್ಮಾನ್ಯ ಸಭಾಪತಿಯವರೇ, ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಎಷ್ಟು ಗ್ರಾಮಗಳನ್ನು ಕೊಡಲಾಗುತ್ತದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇದರ ಜೊತೆಗೆ, ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿರುವ ಜನಪ್ರತಿಗಳಿಗೆ ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಗ್ರಾಮಗಳನ್ನು ಆಯ್ಕೆ ಮಾಡುವ ಯಾವುದೇ ಅಧಿಕಾರವನ್ನು ಕೊಟ್ಟಿಲ್ಲ. ಇದರ ಬಗ್ಗೆಯೂ ಮಾನ್ಯ ಸಚಿವರು ಬೆಳಕು ಚೆಲ್ಲಬೇಕಾಗಿದೆ.

ಶ್ರೀ ಹೆಚ್.ಕೆ.ಪಾಟೀಲ್- ಸನ್ಮಾನ್ಯ ಸಭಾಪತಿಯವರೇ, ಒಬ್ಬ ಎಂ.ಎಲ್.ಎ.ಗೆ 5 ಗ್ರಾಮಗಳನ್ನು ಕೊಟ್ಟಿದ್ದೇವೆ. ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ವಿಧಾನ ಪರಿಷತ್ತಿನ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿರುವ ಜನಪ್ರತಿನಿಧಿಗಳಿಗೆ ಯಾವುದೇ ಅಧಿಕಾರವನ್ನು ಕೊಟ್ಟಿಲ್ಲ. ಆದರೆ, ಉಸ್ತುವಾರಿ ಸಮಿತಿಯಲ್ಲಿ ವಿಧಾನ ಪರಿಷತ್ತಿನ ಸದಸ್ಯರು ಸಧ್ಯಕ್ಕೆ ಇಲ್ಲ.

ಶ್ರೀ ಪಟೇಲ್ ಶಿವರಾಂ: ಸನ್ಮಾನ್ಯ ಸಭಾಪತಿಯವರೇ, ಗ್ರಾಮಗಳ ಆಯ್ಕೆ ಸಮಿತಿಯಲ್ಲಿಯೂ ವಿಧಾನ ಪರಿಷತ್ತಿನ ಸದಸ್ಯರು ಇಲ್ಲವೇ?

ಶ್ರೀ ಹೆಚ್.ಕೆ.ಪಾಟೀಲ್- ಸನ್ಮಾನ್ಯ ಸಭಾಪತಿಯವರೇ, ಉಸ್ತುವಾರಿ ಸಮಿತಿಯ ಅಧ್ಯಕ್ಷರು ಎಂ.ಎಲ್.ಎ ಆಗಿರುತ್ತಾರೆ. ಪಂಚಾಯಿತಿ ಅಧ್ಯಕ್ಷರು ಸಹ ಅಧ್ಯಕ್ಷರಾಗಿರುತ್ತಾರೆ. ಮುಂದೆ ನಮ್ಮ ವಿಧಾನ ಪರಿಷತ್ತಿನ ಸದಸ್ಯರನ್ನು ಸಹ ಉಸ್ತುವಾರಿ ಸಮಿತಿಯೊಳಗೆ ಸೇರಿಸುವಂತಹ ನಿರ್ಣಯವನ್ನು ನಮ್ಮ ರಾಜ್ಯ ಸರ್ಕಾರ ಮಾಡುತ್ತದೆ.

ಶ್ರೀ ಪಟೇಲ್ ಶಿವರಾಂ:- ಸನ್ಮಾನ್ಯ ಸಭಾಪತಿಯವರೇ, ಗ್ರಾಮಗಳ ಆಯ್ಕೆ ಸಮಿತಿಯಲ್ಲಿಯೂ ವಿಧಾನ ಪರಿಷತ್ತಿನ ಸದಸ್ಯರಿಗೆ ಅವಕಾಶವನ್ನು ನೀಡಬೇಕೆನ್ನುವುದು ನನ್ನ ಒತ್ತಾಯವಾಗಿದೆ.

ಶ್ರೀ ಬಿ.ರಾಮಕೃಷ್ಣ:- ಸನ್ಮಾನ್ಯ ಸಭಾಪತಿಯವರೇ, ನಾವುಗಳು ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿರುವ ಜನಪ್ರತಿನಿಧಿಗಳಾಗಿದ್ದೇವೆ. ಎಂ.ಎಲ್.ಎ.ಗಳಿಗೆ ಅಧ್ಯಕ್ಷಗಿರಿಯನ್ನು ಕೊಟ್ಟಾಗಿದೆ. ನಮಗೂ ಸಹ ಒಂದು ಗೌರವ ಸ್ಥಾನವನ್ನು ನೀಡಬೇಕಾಗುತ್ತದೆ. ಏಕೆಂದರೆ, ಜನರು ನಮ್ಮನ್ನು ಸಹ ಒತ್ತಾಯಪೂರ್ವಕವಾಗಿ ಕೇಳುತ್ತಾರೆ. ಮಾನ್ಯ ಸಚಿವರು ಸಹ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿ ವಿಧಾನ ಪರಿಷತ್ತಿಗೆ ಬಂದಿದ್ದವರು. ಅವರಿಗೂ ಸಹ ನಮ್ಮ ಪರಿಸ್ಥಿತಿ ಅರ್ಥವಾಗುತ್ತದೆಂದು ನಾನು ಭಾವಿಸುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್: ಸನ್ಮಾನ್ಯ ಸಭಾಪತಿಯವರೇ, ಗ್ರಾಮಗಳ ಆಯ್ಕೆ ಸಮಿತಿಯಲ್ಲಿ ಏನು ಮಾಡುತ್ತೇವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಉಸ್ತುವಾರಿ ಸಮಿತಿಯಲ್ಲಿ ಅವರನ್ನು ಸದಸ್ಯರನ್ನಾಗಿ ಮಾಡಿ, ಆದಷ್ಟು ಬೇಗ ಆದೇಶವನ್ನು ಹೊರಡಿಲಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)-** ಸನ್ಮಾನ್ಯ ಸಭಾಪತಿಯವರೇ, ಅವರು ವಿರೋಧ ಪಕ್ಷದಲ್ಲಿದ್ದ ಸಂದರ್ಭದಲ್ಲಿ ಮತ್ತು ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಸಂದರ್ಭದಲ್ಲಿ ಆ ಕಷ್ಟಗಳನ್ನು ಅನುಭವಿಸಿದ್ದಾರೆ. ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾಗಿ ಬಂದಂತಹ ಸದಸ್ಯರು ಇದ್ದಾರೆ, ಬೇರೆ ಕ್ಷೇತ್ರಗಳಿಂದ ಬಂದಂತಹ ಸದಸ್ಯರು ಈ ಮನೆಯಲ್ಲಿದ್ದಾರೆ. ಶ್ರೀ ಬಿ.ರಮಾನಾಥ ರೈ ಸನ್ಮಾನ್ಯ ಸಭಾಪತಿಯವರೇ, ಅವರ ಸರ್ಕಾರ ಅಧಿಕಾರದಲ್ಲಿದ್ದಾಗ ಆ ಕೆಲಸವನ್ನು ಮಾಡಿದೆಯೇ?

ಕೆ.ಎಸ್.ಈಶ್ವರಪ್ಪ:- ಸನ್ಮಾನ್ಯ ಸಭಾಪತಿಯವರೇ, ನಾವು ಆ ಕೆಲಸವನ್ನು ಮಾಡಲಿಲ್ಲ ಎನ್ನುವ ಕಾರಣಕ್ಕಾಗಿ ಈ ಭಾಗದಲ್ಲಿ ಬಂದು ಕುಳಿತಿದ್ದೇವೆ. ಪುನಃ ಅವರು ಸಹ ಅದೇ ಕೆಲಸವನ್ನು ಮಾಡಿ ಈ ಭಾಗಕ್ಕೆ ಬರುತ್ತಾರೆಯೇ? ಅವರಿಗೆ ಈ ಭಾಗಕ್ಕೆ ಬರುವ ಆಸೆಯಿದೆಯೇ?

ಸನ್ಮಾನ್ಯ ಸಭಾಪತಿಯವರೇ, ಎಂ.ಎಲ್.ಎ.ಗಳಿಗೆ 'ಗ್ರಾಮ ವಿಕಾಸ' ಯೋಜನೆಯಡಿಯಲ್ಲಿ 5 ಗ್ರಾಮಗಳನ್ನು ಆಯ್ಕೆ ಮಾಡುವುದಕ್ಕೆ ಅಧಿಕಾರವನ್ನು ನೀಡಲಾಗಿದೆ ಅದನ್ನು ನಾನು ಸ್ವಾಗತಿಸುತ್ತೇನೆ. ವಿಧಾನ ಪರಿಷತ್ತಿನ ಸದಸ್ಯರಿಗೂ ಸಹ 2 ಗ್ರಾಮಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ಕೊಡಬೇಕಾಗಿದೆ. ಆಗ ಅವರು ಕೂಡ ಎದೆ ತಟ್ಟಿಕೊಂಡು ಅವರ ಕ್ಷೇತ್ರದಲ್ಲಿ ಓಡಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ, 'ಸ್ಥಳೀಯ ಸಂಸ್ಥೆಗಳ ಚುನಾವಣೆಯ ಸಂದರ್ಭದಲ್ಲಿ ಓಟು ಕೇಳುವುದಕ್ಕೆ ಮಾತ್ರ ಬರುತ್ತಾರೆ. ಬೇರೆ ಏನೂ ಮಾಡುವುದಿಲ್ಲ. ಸುಮ್ಮನೆ ಮಾತನಾಡುತ್ತಾರೆ. ಇವರಿಗೆ ಓಟು ಕೊಟ್ಟರೆಷ್ಟು, ಬಿಟ್ಟರೆಷ್ಟು ಎಂದು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಎಂ.ಎಲ್.ಸಿ.ಗಳು ತೊಂದರೆಯನ್ನು ಅನುಭವಿಸುತ್ತಾರೆ. ಆದ್ದರಿಂದ ದಯಮಾಡಿ ಎಂ.ಎಲ್.ಸಿ.ಗಳಿಗೆ ಎರಡು ಗ್ರಾಮಗಳನ್ನು ಆಯ್ಕೆ ಮಾಡುವುದಕ್ಕೆ ಸರ್ಕಾರ ಅವಕಾಶ ಕಲ್ಪಿಸಿಕೊಡಬೇಕಾಗುತ್ತದೆ.

ಶ್ರೀ ಜಿ.ಎಸ್.ನ್ಯಾಮಗೌಡ:- ಸನ್ಮಾನ್ಯ ಸಭಾಪತಿಯವರೇ, ಎಂ.ಎಲ್.ಸಿ.ಗಳ ನೋಡಲ್ ಕ್ಷೇತ್ರ ಎಲ್ಲಿದೆ ಅಲ್ಲಿ ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ.

ಶ್ರೀ ಬಿ.ರಾಮಕೃಷ್ಣ- ಸನ್ಮಾನ್ಯ ಸಭಾಪತಿಯವರೇ, ನಮ್ಮ ಜನ ಗ್ರಾಮೀಣ ಭಾಷೆಯಲ್ಲಿ ಬೈಯುತ್ತಾರೆ. ಅದನ್ನು ನಾನು ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಬಿ.ರಾಮಕೃಷ್ಣ- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವಿಷಯಾಂತರ ಮಾಡುವುದು ಬೇಡ. ನಾವು ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇವೆನ್ನುವುದು ಗೊತ್ತಾಗಬೇಕಾಗಿದೆ. ಆದ್ದರಿಂದ ಮಾನ್ಯ ಸಚಿವರು ಸ್ಪಷ್ಟವಾಗಿ ತಮ್ಮ ನಿಲುವನ್ನು ವ್ಯಕ್ತಪಡಿಸಬೇಕಾಗಿದೆ. ಜನರು ಓಟಾಕಿ ನಮ್ಮನ್ನು ಗೆಲ್ಲಿಸಿ ಕಳುಹಿಸಿಕೊಟ್ಟಿದ್ದಾರೆ. ನಾವು ಹಳ್ಳಿಗರ ಬೈಗುಳವನ್ನು ಕೇಳಬೇಕು. 'ಅವನಿಗೆ ನಾವು ಓಟು ಹಾಕಿಲ್ಲವೇ?' ಎಂದು ಹೇಳುತ್ತಾರೆ.

ಶ್ರೀ ಹೆಚ್.ಕೆ.ಪಾಟೀಲ್: ಸನ್ಮಾನ್ಯ ಸಭಾಪತಿಯವರೇ, ಹಳ್ಳಿಗರ ಬೈಗುಳ ಎಂದರೆ, ಅವರು ಇದಕ್ಕಾಗಿಯೇ ಬೈಯುವುದಿಲ್ಲ.

ಶ್ರೀ ಮರಿತಿಬ್ಬೇಗೌಡ: ಸನ್ಮಾನ್ಯ ಸಭಾಪತಿಯವರೇ, 'ಗ್ರಾಮ ವಿಕಾಸ' ಯೋಜನೆಯಡಿಯಲ್ಲಿ ಎಂ.ಎಲ್.ಎ.ಗಳಿಗೆ 5 ಗ್ರಾಮಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ನೀಡಲಾಗಿದೆ. ಇದು ಬಹಳ ಸಂತೋಷದ ಸಂಗತಿಯಾಗಿದೆ. ನಾವು ಅವರ ಹಕ್ಕನ್ನು ಕಸಿದುಕೊಳ್ಳುವುದಿಲ್ಲ. ಆದರೆ, ಈ ಸದನದಲ್ಲಿ ಮ ರಿಂದ 4 ರಿಂದ 6 ಬಾರಿ ಶಾಸಕರಾಗಿ ಆಯ್ಕೆಗೊಂಡಿರುವವರು ಇದ್ದಾರೆ. ಅವರ ಸ್ವಂತ ಗ್ರಾಮವನ್ನು ಸಹ ಈ ಯೋಜನೆಯಲ್ಲಿ ಸೇರಿಸಲಿಕ್ಕೆ ಆಗದೇ ಇರುವ ಒಂದು ಪರಿಸ್ಥಿತಿ ಇದೆ. ಅವರ ಹುಟ್ಟೂರನ್ನು ಇಂತಹ ಒಂದು ಯೋಜನೆಯಲ್ಲಿ ಫಲ ಕೊಡಲಿಕ್ಕೆ ಅವಕಾಶಗಳು ಇಲ್ಲದೇ ಇರತಕ್ಕಂಥಾದ್ದು ಬಹಳಷ್ಟಿದೆ. ಅವರುಗಳು 5 ಸಾರಿ ಶಾಸಕರಾಗಿ ಸದಸ್ಯರಾಗಿ ಅವರ ಊರನ್ನು ಇಂತಹ ಒಂದು ಯೋಜನೆಯಲ್ಲಿ ಸೇರಿಸಲಿಕ್ಕೆ ಆಗಲಿಲ್ಲವೆಂದರೆ, 5-6 ಬಾರಿ ಶಾಸಕರಾಗಿ ಆರಿಸಿ ಬಂದು ಏನು ಪ್ರಯೋಜನ ಎನ್ನತಕ್ಕಂಥಾದ್ದು ಬರುತ್ತದೆ. ಆದ್ದರಿಂದ ದಯಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಎರಡು ಗ್ರಾಮಗಳನ್ನಾದರೂ ಸಹ ಆಯ್ಕೆ ಮಾಡತಕ್ಕಂಥ ಅಧಿಕಾರವನ್ನು ವಿಧಾನ ಪರಿಷತ್ ಸದಸ್ಯರಿಗೆ ಕೊಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಎಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಸಭಾಪತಿಯವರೆ, ನಾನು ಈ ಸಂದರ್ಭದಲ್ಲಿ ಇಷ್ಟನ್ನು ಮಾತ್ರ ಹೇಳಬಹುದು. ಮಾನ್ಯ ರಾಮಕೃಷ್ಣರವರಿಗೆ ಪೂರ್ಣ ಸಮಾಧಾನವಾಗಲಿಕ್ಕಿಲ್ಲ. ನಾವು ಅವರ ಸಲಹೆಯನ್ನು ಗಂಭೀರವಾಗಿ ಪರಿಶೀಲನೆ ಮಾಡುತ್ತೇವೆ. ಆದರೆ ಈಗ ಸಧ್ಯ ನಾನು ನಿರ್ಣಯ ಮಾಡಬಹುದಾಗಿರುವಂಥಾದ್ದು ಎಂದರೆ, ತಕ್ಷಣದಲ್ಲಿ ಒಂದು ವಿಶೇಷವಾದ ಆದೇಶವನ್ನು ಹೊರಡಿಸಿ, ವಿಧಾನ ಪರಿಷತ್ ಸದಸ್ಯರನ್ನು ಉಸ್ತುವಾರಿ ಸಮಿತಿಯ ನಾನು ನಿರ್ಣಯ ಮಾನ್ಯ ಸದಸ್ಯರು ಕೇಳುವುದನ್ನು ಈಗ ಸದಸ್ಯರನ್ನಾಗಿ ಮಾಡುತ್ತೇವೆ. ಮಾಡುವುದಕ್ಕಾಗುವುದಿಲ್ಲ.

ಶ್ರೀ ಮರಿತಿಬ್ಬೇಗೌಡ:- ಮಾನ್ಯ ಸಭಾಪತಿಯವರೆ, ಮುಂದಿನ ದಿನಗಳಲ್ಲಿ ಆದರೂ ಮಾನ್ಯ ಸಚಿವರು ಇದನ್ನು ಪರಿಶೀಲನೆ ಮಾಡಲಿ. ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಾನು ಮೂರು ಬಾರಿ 15 ವರ್ಷಗಳಿಂದ ಈ ಸದನದಲ್ಲಿ ಶಾಸಕನಾಗಿ ಕೆಲಸವನ್ನು ಶಾಸಕನಾಗಿ ಆರಿಸಿ ಬಂದಿದ್ದೇನೆ. ನಿರ್ವಹಿಸುತ್ತಿದ್ದೇನೆ. ನನ್ನ ಹುಟ್ಟೂರನ್ನು ಇಂತಹ ಒಂದು ಯೋಜನೆಯಲ್ಲಿ ಸೇರಿಸಲಿಕ್ಕೆ ಆಗಲಿಲ್ಲವೆಂದರೆ ಇದರಿಂದೇನು ಉಪಯೋಗ? ನಾವೇನು ಮಾಡುವುದು? ಆದ್ದರಿಂದ ದಯಮಾಡಿ ಮಾನ್ಯ ಸಚಿವರು ಮುಂದಿನ ದಿನದಲ್ಲಾದರೂ ಕೂಡ ಇದರ ಬಗ್ಗೆ ದೀರ್ಘವಾಗಿ ಆಲೋಚನೆಯನ್ನು ಮಾಡಿ ವಿಧಾನ ಪರಿಷತ್ ಸದಸ್ಯರಿಗೆ ಎರಡು ಗ್ರಾಮಗಳಿಗಾದರೂ ಸಹ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರು ಉಸ್ತುವಾರಿ ಸಮಿತಿಯಲ್ಲಿ ಸದಸ್ಯರನ್ನಾಗಿ ಮಾಡುತ್ತೇನೆಂದು ಹೇಳಿದರು.

ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೆ, ಮರಿತಿಬ್ಬೇಗೌಡರು ಸಚಿವರಿಗೆ 'ಮುಂದಿನ ದಿನಗಳಲ್ಲಿ ಮಾಡುತ್ತೇವೆ, ಪರಿಶೀಲನೆ ಮಾಡುತ್ತೇವೆಂದಾದರೂ ಹೇಳಿ' ಎನ್ನುತ್ತಿದ್ದಾರೆ. ಮಾನ್ಯ ಸಚಿವರು ಪರಿಶೀಲನೆ ಮಾಡುತ್ತೇವೆಂದು ತಟ್ ಎಂದು ಹೇಳಿಬಿಡುತ್ತಾರೆ. ಮಾನ್ಯ ಮರಿತಿಬ್ಬೇಗೌಡರು ಬಹಳ ಒಳ್ಳೆಯವರು. ಮುಂದೆ ಪರಿಶೀಲನೆ ಮಾಡುತ್ತೇವೆಂದು ಮಾನ್ಯ ಸಚಿವರ ಬಾಯಲ್ಲಿ ತಟ್ಟೆ ಎಂದು ಹೇಳಿಸಿಬಿಡುತ್ತಾರೆ. ಮುಂದೆ ಎಂದರೆ ಇನ್ನು 50 ವರ್ಷಗಳ ವರೆವಿಗೂ ಆಗುತ್ತದೆ. ನಾನು ಮಾನ್ಯ ಸಚಿವರು ಮಾಡುವಂಥಾದ್ದನ್ನೇ ಹೇಳುತ್ತೇನೆ. ಅವರ ಕೈಯಲ್ಲಿ ಆಗದೇ ಇರುವುದನ್ನು ಖಂಡಿತವಾಗಿ ಹೇಳುವುದಿಲ್ಲ. ಸುಮ್ಮನೆ ಉಸ್ತುವಾರಿ ಸಮಿತಿಯ ಸದಸ್ಯತ್ವವನ್ನು ತೆಗೆದುಕೊಂಡು ಏನು ಮಾಡೋಣ?

ಶ್ರೀ ಮರಿತಿಬ್ಬೇಗೌಡ: ಮಾನ್ಯ ಸಭಾಪತಿಯವರೆ, ಉಸ್ತುವಾರಿ ಸಮಿತಿಯಲ್ಲಿ ಗ್ರಾಮ ಪಂಚಾಯ್ತಿ ಮಾನ್ಯ ಸಚಿವರು ಈ ಅಧ್ಯಕ್ಷರು ಉಪಾಧ್ಯಕ್ಷರು ಮತ್ತು ವಿಧಾನ ಪರಿಷತ್ ಸದಸ್ಯರು ಸದಸ್ಯರಂತೆ. ಸದನದಲ್ಲಿ ಬಹಳ ಹಿರಿಯರು. ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯನ್ನು ಬಹಳ ಸಮರ್ಥವಾಗಿ ನಡೆಸುತ್ತಿದ್ದಾರೆ ಎನ್ನುವುದನ್ನು ನಾವು

ಒಪ್ಪುತ್ತೇವೆ. ಆದರೆ ಉಸ್ತುವಾರಿ ಸಮಿತಿಯಲ್ಲಿ ಗ್ರಾಮ ಪಂಚಾಯ್ತಿ ಗ್ರಾಮ ಪಂಚಾಯ್ತಿ ಅಧ್ಯಕ್ಷರು ಉಪಾಧ್ಯಕ್ಷರು ಮತ್ತು ವಿಧಾನ ಪರಿಷತ್ ಸದಸ್ಯರು ಸದಸ್ಯರಾಗಿರುತ್ತಾರೆಂದು ಮಾಡಬಹುದೇ?

**ಡಾ|| ಮತ್ತಿಕಟ್ಟಿ ವೀರಣ್ಣ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಎಲ್ಲಾ ಸದಸ್ಯರು ಹೇಳಿದ್ದಾರೆ. ಮಾನ್ಯ ಎಚ್.ಕೆ.ಪಾಟೀಲರು ಈ ವಿಚಾರದಲ್ಲಿ ನಮ್ಮೆಲ್ಲರ ಪರವಾಗಿ ಖಂಡಿತವಾಗಿ ಮಾಡುತ್ತಾರೆನ್ನುವ ನಂಬಿಕೆ ನನಗಿದೆ. ಏಕೆಂದರೆ ಅವರು ಈ ಸದನದ ಸಭಾನಾಯಕರಾಗಿ, ವಿರೋಧ ಪಕ್ಷದ ನಾಯಕರಾಗಿ ಕೆಲಸವನ್ನು ನಿರ್ವಹಿಸಿದ್ದಾರೆ. 18 ವರ್ಷಗಳಿಗಿಂತ ಹೆಚ್ಚು ಕಾಲ ಅತ್ಯಂತ ಮಹತ್ವಪೂರ್ಣವಾಗಿ ಅವರ ರಾಜಕೀಯ ಜೀವನದಲ್ಲಿ ಹೆಚ್ಚು ಅವಕಾಶಗಳು ಬರುವ ರೀತಿಯಲ್ಲಿ ಈ ಸದನ ಅವರಿಗೆ ಸಹಕಾರವನ್ನು ಮಾಡಿದೆ. ಈ ಸದನದ ಸದಸ್ಯರ ಬಗ್ಗೆ ಅವರಿಗೆ ಗೌರವ, ಅಭಿಮಾನವೂ ಸಹ ಇದೆ. ದೃಷ್ಟಿಯಿಂದ ಖಂಡಿತವಾಗಿಯೂ ಎಲ್ಲಾ ಸದಸ್ಯರ ಅಪೇಕ್ಷೆಯಂತೆ ಮಾಡಲಿ. ವಿಧಾನ ಸಭಾ ಸದಸ್ಯರಿಗೆ ಬೇಕಾದರೆ 5 ಅಥವಾ 10 ಗ್ರಾಮಗಳನ್ನು ಕೊಡಲಿ. ದಯಮಾಡಿ ಉಸ್ತುವಾರಿ ಸಮಿತಿಯಲ್ಲಿ ವಿಧಾನ ಪರಿಷತ್ತಿನ ಸದಸ್ಯರನ್ನು ಹಾಕುವುದು ಬೇಡ. ತಮ್ಮ ಅವಗಾಹನೆಗೆ ಒಂದು ವಿಚಾರವನ್ನು ತರುತ್ತೇನೆ. ಬಹಳಷ್ಟು ಜನ ಸದಸ್ಯರ ಅಭಿಪ್ರಾಯದ ಪ್ರಕಾರ ಇಡೀ ಜಿಲ್ಲೆಯಲ್ಲಿ ಅವರು ಬಯಸಿದ ಎರಡು ಗ್ರಾಮಗಳನ್ನು ಕೊಡಿ. ಹಿಂದೆಯೂ ಸಹ ಬೇರೆ ಬೇರೆ ಯೋಜನೆಗಳಲ್ಲಿ ವಿಧಾನ ಸಭಾ ಸದಸ್ಯರಿಗೆ ಕೊಟ್ಟಿದ್ದಲ್ಲದೇ ನಮಗೂ ಸಹ ಕೊಟ್ಟಿದ್ದರು. ನಮ್ಮಂಥವರು ಹೇಳಿದ ಒಂದೆರಡು ಗ್ರಾಮಗಳನ್ನು ಸುವರ್ಣ ಗ್ರಾಮಗಳನ್ನಾಗಿ ಆಯ್ಕೆ ಮಾಡಿಕೊಳ್ಳಲು ಅವಕಾಶವನ್ನು ಕೊಟ್ಟಿದ್ದರು. ಇದು ತಮಗೂ ಸಹ ಗೊತ್ತಿದೆ. ಆ ದೃಷ್ಟಿಯಿಂದ ಮಾನ್ಯ ಸಚಿವರು ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆನ್ನುವ ನಂಬಿಕೆ ನನಗಿದೆ.

ಶ್ರೀಮತಿ ತಾರಾ ಅನೂರಾಧ:- ಮಾನ್ಯ ಸಭಾಪತಿಯವರೆ, ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ಮಹಾಭಾರತದಲ್ಲಿ ಕೃಷ್ಣ ಪಾಂಡವರ ಪರವಾಗಿ 5 ಗ್ರಾಮಗಳನ್ನಾದರೂ ಕೊಡಿ ಎಂದು ಕೇಳಿಕೊಂಡ. ಹಾಗೆ ಕೊಟ್ಟಿದ್ದರೆ ಕುರುಕ್ಷೇತ್ರವೇ ಆಗುತ್ತಿರಲಿಲ್ಲ. ಈಗ ನಮ್ಮ ಸದಸ್ಯರು ಎರಡು ಗ್ರಾಮಗಳನ್ನು ಕೊಡಿ ಎಂದು ಕೇಳುತ್ತಿದ್ದಾರೆ. ಮಾನ್ಯ ಸಚಿವರು ಎರಡು ಗ್ರಾಮಗಳನ್ನಾದರೂ ಕೊಡಲಿ, ಕುರುಕ್ಷೇತ್ರ ಆಗದೇ ಇರಲಿ.

ಶ್ರೀ ಭಾನುಪ್ರಕಾಶ್:- ಮಾನ್ಯ ಸಚಿವರು ಕುಮಾರವ್ಯಾಸನ ಕ್ಷೇತ್ರದಿಂದ ಬಂದವರು. ಯುದ್ಧವನ್ನು ತಪ್ಪಿಸುವುದಕ್ಕೆ ಗರಿಷ್ಠ ಪ್ರಯತ್ನ ಮಾಡಿದ್ದ. ಈಗ ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಕೃಷ್ಣನ ಪಾತ್ರವನ್ನು ನಿರ್ವಹಿಸಿ ಇದನ್ನು settle ಮಾಡುತ್ತಿದ್ದಾರೆ. ಮಾನ್ಯ ಸಚಿವರಲ್ಲಿ ನಾನು ವಿನಂತಿಯನ್ನು ಮಾಡುತ್ತೇವೆ. ಅವರು ಎರಡು ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲು ಮಾನ್ಯ ವಿಧಾನ ಪರಿಷತ್ ಸದಸ್ಯರಿಗೆ ಅವಕಾಶ ಮಾಡಿಕೊಡಲಿ. ಸುಮ್ಮನೆ ನಮಗೂ ಅವರಿಗೂ ಏಕೆ ಯುದ್ಧ

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಸಭಾಪತಿಯವರೆ, ದುರ್ಯೋಧನ ಒಂದು ಸೂಜಿ ಜಾಗವನ್ನು ಕೊಡುವುದಿಲ್ಲವೆಂದು ಹೇಳಿದ. ದಯಮಾಡಿ ಮಾನ್ಯ ಸಚಿವರು ದುರ್ಯೋಧನರಾಗುವುದು ಬೇಡ. ಎಲ್ಲರ ಅಪೇಕ್ಷೆ ಏನೆಂದರೆ ವಿಧಾನ ಪರಿಷತ್ತಿನ ಸದಸ್ಯರಿಗೆ ಎರಡು ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವನ್ನು ಕೊಡಬೇಕೆಂಬುದಾಗಿದೆ.

ಡಾ|| ಮತ್ತಿಕಟ್ಟಿ ವೀರಣ್ಣ:- ಅವರನ್ನು ದುರ್ಯೋಧನ ಎಂದು ಹೇಳಬೇಡಿ.

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಸಚಿವರು ದುರ್ಯೋಧನ ಹೌದೋ ಅಲ್ಲವೋ ಎನ್ನುವುದು ಈಗ ಗೊತ್ತಾಗುತ್ತದಲ್ಲ. ಮಾನ್ಯ ಸಚಿವರಿಗೆ ನಮ್ಮ ಕಳಕಳಿ ಅರ್ಥವಾಗಿದೆ. ಅವರು ದರ್ಯೋಧನ ಆಗುವುದಿಲ್ಲವೆನ್ನುವ ನಂಬಿಕೆಯಿಂದ ತಕ್ಷಣವೇ ಈ ಬಗ್ಗೆ ಘೋಷಣೆ ಮಾಡಬೇಕು. ಈ ಬಗ್ಗೆ ಇಡೀ ಸದನ ಅವರ ಜೊತೆಗಿರುತ್ತದೆ.

ಶ್ರೀ ಮರಿತಿಬ್ಬೇಗೌಡ: ನಾವು ಈಗ ಅಜ್ಞಾತವಾಸ ಅಥವಾ ವನವಾಸಕ್ಕೆ ಹೋಗುವುದಿಲ್ಲ.

ಶ್ರೀ ಎಚ್.ಕೆ.ಪಾಟೀಲ್:- ಮಾನ್ಯ ಸಭಾಪತಿಯವರೆ, ತಾವು ತಮ್ಮ ಸ್ಥಾನದಲ್ಲಿದ್ದಿದ್ದರೆ ಅದೇ ಧ್ವನಿಗೆ ಇಂಬು ಕೊಡುತ್ತಿದ್ದಿರಿ. ಒಂದು ಮಾತನ್ನು ನಾನು ನನ್ನ ಎಲ್ಲಾ ಸ್ನೇಹಿತರಲ್ಲಿ ಹಂಚಿಕೆ ಮಾಡಿಕೊಳ್ಳಲು ಬಯಸುವುದೇನೆಂದರೆ, ನಾವು ಮತ್ತು ಈಶ್ವರಪ್ಪನವರು ಕೈ ಸನ್ನೆ, ಬಾಯಿ ಸನ್ನೆಯಲ್ಲಿಯೇ ಮಾತನಾಡಿಕೊಂಡೆವು. ಅವರು ನನ್ನನ್ನು ಕುರಿತು "ನಿಮಗೆ ಈ ವಿಷಯದಲ್ಲಿ ಏನು ಬಲ ಕೊಡಬೇಕೋ ಕೊಡುತ್ತೇವೆ. ನಾವು ಮತ್ತು ಮತ್ತಿಕಟ್ಟಿ ವೀರಣ್ಣ ಬರುತ್ತೇವೆ. ಹೋಗೋಣ ನಡೆಯಿರಿ,

ಈ ಬಗ್ಗೆ ಒತ್ತಾಯ ಮಾಡೋಣ." ಎನ್ನುವ ಭರವಸೆಯನ್ನು ಕೊಟ್ಟಿದ್ದಾರೆ. ಸಚಿವ ಸಂಪುಟದಲ್ಲಿ ನಾನು ಅವರ ಪರವಾಗಿ ವಕೀಲನಾಗುತ್ತೇನೆ. ಮಾನ್ಯ ಮುಖ್ಯಮಂತ್ರಿಗಳನ್ನು ನಾವು ಮತ್ತು ನೀವು ಭೇಟಿಯಾಗಿ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಸೂಕ್ತವಾಗಿರತಕ್ಕಂಥ ಒಂದು ಸಮಯವನ್ನು ನಿಗದಿಗೊಳಿಸುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಸಭಾಪತಿಯವರೆ, ಸಚಿವ ಸಂಪುಟದಲ್ಲಿ ಹೇಳುವುದಕ್ಕೆ ಯಾರೋ ಒಬ್ಬ ಅಟೆಂಡರ್ ಅನ್ನು ಹಿಡಿದುಕೊಂಡರೂ ಸಹ ಈ ವಿಷಯ ಅಲ್ಲಿಗೆ ಹೋಗುತ್ತದೆ. ಈ ವಿಷಯವಾಗಿ ಇಡೀ ಸದನ ಮಾನ್ಯ ಸಚಿವರ ಜೊತೆಗಿದೆ. ದಯಮಾಡಿ ಅವರು ಇನ್ನೊಂದು ಕೆಲಸವನ್ನು ಮಾಡಲಿ. ನಾವೆಲ್ಲರೂ ಸಹ ಅವರ ಜೊತೆಗಿರುತ್ತೇವೆ. ಇದು ಏಕೆ ಆಗುವುದಿಲ್ಲವೆನ್ನುವುದನ್ನು ನೋಡೋಣ. ವಿಧಾನ ಪರಿಷತ್ತಿನ ಸದಸ್ಯರಿಗೆ ಎರಡು ಗ್ರಾಮಗಳನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡಿ, ಒಂದು ಗ್ರಾಮವನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವನ್ನು ಮಾಡಿಕೊಟ್ಟು ಈ ಬಗ್ಗೆ ನೀವು ಘೋಷಣೆಯನ್ನು ಮಾಡಿಸಿ.

ಶ್ರೀ ವಿ.ಎಸ್.ಉಗ್ರಪ್ಪ **(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ನನಗೆ ಒಂದು ವಿಚಾರ ಅರ್ಥವಾಗುತ್ತಿಲ್ಲ. ವಿಧಾನ ಪರಿಷತ್ತಿನ ಸದಸ್ಯರು ಎಂದರೆ ಅವರು ಎರಡನೇ ದರ್ಜೆಯ ಶಾಸಕರೇ? ಇಲ್ಲಿ ನಮ್ಮ ಸ್ನೇಹಿತರುಗಳ ಅಹವಾಲನ್ನು ಕೇಳಿದಾಗ ಎಲ್ಲೋ ಒಂದು ಕಡೆ ಈಗ ಶಿಷ್ಟಾಚಾರವನ್ನು ಪರಿಗಣಿಸಿದರೆ ವಿಧಾನ ಪರಿಷತ್ತಿನ ಸದಸ್ಯರು ಮೇಲೆ ಇರಬೇಕು, ನಂತರ ವಿಧಾನ ಸಭಾ ಸದಸ್ಯರು ಇರಬೇಕೆಂದು ಇದೆ. ಆದರೆ ಅಭಿವೃದ್ಧಿಯ ವಿಚಾರ ಬಂದಾಗ ಅವರಿಗೆ ಎಷ್ಟು ಜವಾಬ್ದಾರಿ ಇದೆಯೋ ಅಷ್ಟೇ ಜವಾಬ್ದಾರಿ ವಿಧಾನ ಪರಿಷತ್ತಿನ ಸದಸ್ಯರಿಗೂ ಸಹ ಇದೆ. ನಾನು ಸ್ಥಳೀಯ ಸಂಸ್ಥೆಗಳ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದ ಸಂದರ್ಭದಲ್ಲಿ ಎಂಎಲ್ಎ ಗಳಿಗಿಂತ ಹೆಚ್ಚು ಹಳ್ಳಿಗಳಿಗೆ ನಾನು ಭೇಟಿ ನೀಡುತ್ತಿದ್ದೆ. ಸಂಸದೀಯ ವ್ಯವಸ್ಥೆಯಲ್ಲಿ ಕೆಳಮನೆಯಾಗಲಿ ಅಥವಾ ಮೇಲ್ಮನೆಯಾಗಲಿ ಎರಡೂ ಮನೆಯ ಸದಸ್ಯರು ಶಾಸಕರು. ಎರಡೂ ಮನೆಯ ಸದಸ್ಯರು ಆಯಾಯ ರಾಜ್ಯದ ಅಥವಾ ರಾಷ್ಟ್ರದ ಅಭಿವೃದ್ಧಿಗೆ ತಮ್ಮನ್ನು ತಾವು ತೊಡಗಿಸಿಕೊಂಡಿರತಕ್ಕಂಥ ಶಾಸಕರುಗಳಾಗಿರುತ್ತಾರೆ. ಮೊದ್ದು" ಎಂದು ಹೇಳುತ್ತಾರೆ. ಎಲ್ಲಾ ಆ ಸದನದ  ಇವರಿಗೂ ಅಷ್ಟೇ ಎಲ್ಲೂ ಸಹ, ಇವರಿಗೆ ಜಾಸ್ತಿ, ಇವರಿಗೆ ಕಡಿಮೆ ಎಂದು ತಾರತಮ್ಯ ಮಾಡುವಂಥದ್ದು ಇಲ್ಲ. ಇದು ಎಲ್ಲೋ ಒಂದು ಕಡೆ ತಪ್ಪು ಸಂದೇಶ ಹೋಗುತ್ತದೆ. ನಾನು ಈ ಇಲಾಖೆಯ ಮೇಲೆ ಮಾತನಾಡಬೇಕಾದರೆ ಒಂದು ಮಾತನ್ನು ಹೇಳಿದೆ. ನಾವು ಆಂಧ್ರಪ್ರದೇಶ ಬಾರ್ಡರ್ ಹತ್ತಿರ ಇದ್ದೇವೆ. "ಸರ್ವ ರೋಗಾಲಕು ಸಾರಾಯಿ ಅಂದರೆ ಎಲ್ಲಾ ರೋಗಗಳಿಗೆ ಸಾರಾಯಿ ಮದ್ದು ಎಂದರ್ಥ. ಸಮಸ್ಯೆಗಳಿಗೆ ಎಂಎಲ್ಎಗಳೇ ಮದ್ದು ಎನ್ನುವ ರೀತಿಯಲ್ಲಿ ಚಿತ್ರಣ ಸಾಗುತ್ತಿದೆ. ಮಾನ್ಯ ಸಚಿವರು ಎರಡೂ ಸದನದ ಸದಸ್ಯರಾಗಿದ್ದರು. ಈ ಸದನದ ಸದಸ್ಯರಾಗಿ, ಗದಗ ಇರಬಹುದು ಅಥವಾ ರಾಜ್ಯದ ಇನ್ನಿತರ ಭಾಗಗಳ ಅಭಿವೃದ್ಧಿಗೆ ತಮ್ಮನ್ನು ತಾವು ತೊಡಗಿಸಿಕೊಂಡು ಕೆಲಸ ಮಾಡಿದವರಾಗಿದ್ದಾರೆ. ಸದಸ್ಯರಾಗಿ, ಮಂತ್ರಿಗಳಾಗಿ ಅಭಿವೃದ್ಧಿ ದಿಸೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. There is no difference. ಹಾಗಾಗಿ ನಿಮ್ಮ ಅವಧಿಯಲ್ಲಿ, ಈ ಸದನಕ್ಕೆ ನಾನು ಮಾತು ಕೊಟ್ಟಿದ್ದೇನೆ, ಇಬ್ಬರೂ ಸಹ ಅಭಿವೃದ್ಧಿ ಮಾಡತಕ್ಕಂಥದ್ದಕ್ಕೆ ಬದ್ಧರಿದ್ದಾರೆ, ಅವರಿಗೆ ಎಷ್ಟು ಜವಾಬ್ದಾರಿ ಇದೆಯೋ ನಾನು ಪ್ರಾರಂಭದಲ್ಲಿ ಮಾತನಾಡಬೇಕಾದರೆ, ಜವಾಬ್ದಾರಿ ಇದೆ ಎಂಬ ಮಾತುಗಳನ್ನು ಹೇಳಬೇಕಾಗುತ್ತದೆ. ಪಂಚಾಯತ್ ವ್ಯವಸ್ಥೆ ಎಷ್ಟರಮಟ್ಟಿಗೆ ಕ್ರಿಯಾಶೀಲವಾಗುತ್ತದೆಯೋ ಅಷ್ಟರಮಟ್ಟಿಗೆ ಶಾಸಕರ ಜವಾಬ್ದಾರಿ ಕಡಿಮೆಯಾಗುತ್ತಾ ಹೋಗುತ್ತವೆ ಎಂದು ಹೇಳಿದೆ. 11ನೇ ಶೆಡ್ಯೂಲ್‌ನಲ್ಲಿ 29 ಇಲಾಖೆಗಳನ್ನು ಪಂಚಾಯತ್ ರಾಜ್ ವ್ಯವಸ್ಥೆಗೆ ಕೊಟ್ಟಿದ್ದಾರೆ. ಆ ಜವಾಬ್ದಾರಿಗಳ ನಿರ್ವಹಣೆ ಪಂಚಾಯತ್ ವ್ಯವಸ್ಥೆಯ ಮೂಲಕ ಮಾಡುವಂತಹ ಸಂದರ್ಭದಲ್ಲಿ ಸಲಹೆಗಳನ್ನು ಕೊಡುವ ಅಥವಾ ಯಾವುದಾದರೂ ಆಯ್ಕೆಗಳನ್ನು ಮಾಡುವ ಸಂದರ್ಭದಲ್ಲಿ ಎರಡೂ ಮನೆ ಶಾಸಕರುಗಳನ್ನು ಒಂದೇ ಸಮನಾಗಿ ನೋಡುವಂತಹ ಕೆಲಸ ತಮ್ಮ ಅವಧಿಯಲ್ಲಿ ಆಗಬೇಕು. ಅವರಿಗೆ 5 ಇವರಿಗೆ 2 ಎನ್ನುವುದನ್ನು ಬಿಟ್ಟು, ಸದನದ ಮೂಲಕ, ಎರಡೂ ಇವರಿಬ್ಬರೂ ಅಭಿವೃದ್ಧಿಯ ಸದನದ ಸದಸ್ಯರುಗಳು ಅಥವಾ ಎರಡೂ ಸದನದ ಶಾಸಕರು ಸಮಾನರು ದೃಷ್ಟಿಯಿಂದ ಕೆಲಸ ಮಾಡುತ್ತಾರೆ ಎನ್ನುವ ಸಂದೇಶವನ್ನು ತಮ್ಮ ಮೂಲಕ ಬಯಸುತ್ತೇನೆ.

ಶ್ರೀ ವಿ.ಸೋಮಣ್ಣ:- ಮಾನ್ಯ ಸಭಾಪತಿಗಳೆ, ಮಾನ್ಯ ಉಗ್ರಪ್ಪನವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಹಿರಿಯ ಸಚಿವರಾದ ಮಾನ್ಯ ಹೆಚ್.ಕೆ.ಪಾಟೀಲರು ಈ ಮನೆಯಲ್ಲಿ 17-18 ವರ್ಷ ಇದ್ದರು. ನಾನು ಸ್ವತಃ ವಸತಿ ಮಂತ್ರಿಯಾಗಿ ಈ ಸದನದ ಸದಸ್ಯರನ್ನು ಉಪಾಧ್ಯಕ್ಷರನ್ನಾಗಿ ಮಾಡುತ್ತೇನೆ ಎಂದು ಮಾತು ಕೊಟ್ಟೆ. ಅದಾದ ಮೇಲೆ ಅಧಿಕಾರಿಗಳ ಸಭೆ ಕರೆದೆ. ಇಲ್ಲೇನಾಗಿದೆ ಎಂದರೆ, ಕೆಳಮನೆ ಮತ್ತು ಮೇಲ್ಮನೆ, ಅಧಿಕಾರಿಗಳನ್ನು ಕರೆಸಿ ಮೀಟಿಂಗ್ ಮಾಡಿ ಏನೆಲ್ಲಾ ಮಾಡಿದರೂ, ಅವರು ಕೊಟ್ಟ ತೀರ್ಮಾನ ಏನಾಗಿತ್ತು ಎಂದರೆ, ಮಂತ್ರಿಗಳು ಮಾಡಬೇಕು ಎನ್ನುವ ಭಾವನೆಯನ್ನು ಹೊಂದಿದ್ದರೂ ಅಧಿಕಾರಿಗಳು ಎಲ್ಲೋ ಒಂದು ಕಡೆ ಎತ್ತಿಕಟ್ಟುವ ಕೆಲಸವನ್ನು ಮಾಡಿ ವ್ಯವಸ್ಥಿತವಾಗಿ ತಮ್ಮದೇ ಬೇಳೆಯನ್ನು ಬೇಯಿಸಿಕೊಳ್ಳುತ್ತಾರೆ. ಶಾಸಕರ ನಿಧಿ ಇದೆ. ವಿಧಾನ ಪರಿಷತ್ತಿನ ಸದಸ್ಯರು ತಮ್ಮ ನಿಧಿಯನ್ನು ರಾಜ್ಯದ ಯಾವುದೇ ಭಾಗಗಳಿಗೆ ಕೊಡಬಹುದು. ಆದರೆ ವಿಧಾನಸಭೆಯ ಸದಸ್ಯರು ಆಯಾ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರುವ ಕಟ್ಟುಪಾಡು ಇದೆ. ಅದೇರೀತಿ ಲೋಕಸಭಾ ಸದಸ್ಯರು ಅವರ ಕ್ಷೇತ್ರಕ್ಕೆ ವ್ಯಾಪ್ತಿಗೆ ಕೊಡಬೇಕಾಗುತ್ತದೆ, ಆದರೆ ರಾಜ್ಯಸಭಾ ಸದಸ್ಯರು ರಾಷ್ಟ್ರದ ಯಾವುದೇ ಭಾಗಕ್ಕೆ ಕೊಡಬಹುದಾಗಿರುತ್ತದೆ. ನಾನು ಮಾನ್ಯ ಸಚಿವರನ್ನು ಇಕ್ಕಟ್ಟಿಗೆ ತಗುಲಿಸಲು ಇಷ್ಟಪಡುವುದಿಲ್ಲ. ಅವರು ತಗುಲಿ ಹಾಕಿಕೊಳ್ಳುವವರೂ ಅಲ್ಲ, ನನಗಿಂತ ಅವರು 100 ಪಟ್ಟು ಬುದ್ಧಿವಂತರು. ಆದರೆ ಮಾನ್ಯ ಉಗ್ರಪ್ಪನವರು ಹೇಳಿದ ಹಾಗೆ ಒಂದನ್ನು ಮಾಡಬಹುದು. ಇವೆಲ್ಲವೂ ಇಲಾಖೆಗೆ ಸಂಬಂಧಪಟ್ಟ ಹಾಗೆ, ಅಭಿವೃದ್ಧಿಗೆ ಸೂಚಕವಾಗಿರುವಂಥದ್ದು. ಈ ಸೂಚಕವನ್ನು ನಾವು ಯಾವರೀತಿ ಪರಿಗಣಿಸಬಹುದು ಎನ್ನುವುದಕ್ಕೆ ಸಂಬಂಧಪಟ್ಟಂತೆ ಬೇರೆಯವರ ಜೊತೆ ಚರ್ಚೆ ಮಾಡುವುದಕ್ಕೆ ಮೊದಲು ತಾವು ನಿಮ್ಮ ಮನೆಯಲ್ಲಿಯೇ ಇರಬಹುದಾದಂಥ ತಮ್ಮ Principal Secretary Chief Secretary, CEO ಯಾರು ಜಿಲ್ಲಾ ಪಂಚಾಯಿತಿಯಲ್ಲಿರುತ್ತಾರೋ ಅವರಿರಬಹುದು, ಈ ಆಧಾರಸ್ತಂಭಗಳನ್ನು ಬಿಗಿ ಮಾಡಿದರೆ ಏನಾದರೂ ಒಂದು ಮಾಡಬಹುದು. ನನ್ನ ಕೈಯಲ್ಲಿ ಮಾಡುವುದಕ್ಕೆ ಆಗಲಿಲ್ಲ ಎನ್ನುವ ಕಾರಣಕ್ಕೋಸ್ಕರ ಇದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಎರಡೂ ಸದನ, ಕೆಳಮನೆ-ಮೇಲ್ಮನೆ ಒಂದೇ ನಾಣ್ಯದ ಎರಡು ಮುಖಗಳು. ಇರಬಹುದು, ಜಿಲ್ಲಾಧಿಕಾರಿಗಳಿರಬಹುದು, ಮಾನ್ಯ ಉಗ್ರಪ್ಪನವರು, ಸರ್ವ ರೋಗಾಲಕು ಸಾರಾಯಿ ಮೊದ್ದು ಎಂದು ಏನು ಹೇಳಿದರೋ ಸಕಲಕ್ಕೂ ಒಂದಲ್ಲ ಒಂದು ಮದ್ದು ಇದ್ದೇ ಇರುತ್ತದೆ. ಆದರೆ ಮಾಡತಕ್ಕಂಥ ಇಚ್ಛಾಶಕ್ತಿ, ಕ್ರೀಯಾಶೀಲತೆ ಇರಬೇಕು. ಈ ಸದನದ ಸದಸ್ಯರೂ ಕೂಡ ಸಾಕಷ್ಟು ವಿಚಾರಗಳನ್ನು ತಿಳಿದುಕೊಳ್ಳುವುದಕ್ಕಿಂತ ಹೆಚ್ಚಾಗಿ ಹಳ್ಳಿಗಾಡಿನ ಜನರ ಜೀವನಮಟ್ಟದಲ್ಲಿ ಕೆಲವೊಂದು ಸುಧಾರಣೆ ಮಾಡಬೇಕು ಎನ್ನುವ ಅವರ ಬಯಕೆಗೆ ಒಂದಷ್ಟು ಶಕ್ತಿಯನ್ನು ಬೇರೆ ತಿರುವು ಕೊಟ್ಟಿರಿ. ಮಾನ್ಯ ಉಗ್ರಪ್ಪನವರು ಎರಡೂ ಹೇಳಿದರು. ನಮಗೆ ಅರ್ಧಧ್ರ ಪಾಲು ಕೊಡಿ ಎಂದು ಹೇಳಿದರು, ಅದರ ಜೊತೆಗೆಯೇ, ಅಂಗ ರಾಜನಿಗೆ ಹೇಗೆ ಒಂದು ರಾಜ್ಯ ಕೊಟ್ಟರೋ ಹಾಗೆಯೇ ಕೊಡಬೇಕು ಎಂದು compromising formula suggest ಮಾಡಿದ್ದಾರೆ. ಒಂದು ಮಾತನ್ನು ನಾನು ತಮಗೆ ಹೇಳುತ್ತೇನೆ. ಮಾನ್ಯ ಈಶ್ವರಪ್ಪನವರಿಗೆ, ಮಾನ್ಯ ಸೋಮಣ್ಣನವರಿಗೆ, ಮಾನ್ಯ ಪುಟ್ಟಸ್ವಾಮಿಯವರಿಗೆ ಇದು ಗೊತ್ತಿರುತ್ತದೆ. ಮಂತ್ರಿಯಾದವರಿಗೆ ಸ್ವಲ್ಪ ಪ್ರಮಾಣದ discretionary ಏನಿರುತ್ತದೆ . . . ನಾನು ಅದನ್ನೇ ಚೆಕ್ ಮಾಡಿಕೊಳ್ಳುವುದಕ್ಕೆ ಅಧಿಕಾರಿಗಳ ಹತ್ತಿರ ಹೋಗಿ ಎಷ್ಟಿರಬಹುದು, ಏನಿರಬಹುದು ಎಂದು ಕೇಳಿಕೊಂಡು ಬಂದೆ. ಆದರೆ ಆ ಪ್ರಮಾಣ ಅಷ್ಟು ದೊಡ್ಡದಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಇವತ್ತು ನಡೆದಿರುವ ಚರ್ಚೆಯ ಬಗ್ಗೆ ಸಂಪೂರ್ಣ ಮನವರಿಕೆ ಮಾಡಿ, ಅವರ ಮನಸ್ಸನ್ನು ಗೆದ್ದು . . ವಿಧಾನಪರಿಷತ್ತೆಂದರೆ ನಮ್ಮ ಮುಖ್ಯಮಂತ್ರಿಗಳಿಗೆ ವಿಶೇಷ ಗೌರವ ಇದೆ. ಆದ್ದರಿಂದ ಆ ದಿಸೆಯಲ್ಲಿ, ಸ್ವಲ್ಪಮಟ್ಟಿಗಾದರೂ ಸಮಾಧಾನ ತರುವಂತಹ ನಿಲುವನ್ನು ರಾಜ್ಯ ಸರ್ಕಾರ ತೆಗೆದುಕೊಳ್ಳುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಭಾಪತಿಗಳೆ, ಸನ್ಮಾನ್ಯ ಸಿದ್ದರಾಮಣ್ಣನವರು ಪಂಚಾಯತ್ ಪುನರ್ವಿಂಗಡಣೆ ವಿಚಾರವಾಗಿ ಪ್ರಸ್ತಾಪ ಮಾಡಿದರು. ಪುನರ್ವಿಂಗಡಣೆ ತಪ್ಪಾಯಿತು ಎನ್ನುವ ಮಾತು ಅವರಿಂದ ಬಂತು. ಅದೇ ನಿಮ್ಮ ಮಾತನ್ನು ಮುಂದುವರೆಸಿಕೊಂಡು ಹೋಗಿ ಮಾನ್ಯ ಕವಟಗಿಮಠರವರೂ ಸಹಿತ, ಪುನರ್ವಿಂಗಡಣೆಯೊಳಗೆ ಹೆಚ್ಚು-ಕಡಿಮೆ .

ಶ್ರೀ ಆರ್.ಕೆ.ಸಿದ್ರಾಮಣ್ಣ:-ತಪ್ಪು ಮಾಹಿತಿ ಹೋಗಬಾರದು. ಸಮಿತಿ ಪೂರ್ಣ ಪ್ರಮಾಣದಲ್ಲಿ ಪುನರ್ವಿಂಗಡಣೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ ಎನ್ನುವಂಥದ್ದನ್ನು ಅವರೇ ಒಪ್ಪಿಕೊಂಡಿದ್ದಾರೆ. ವರದಿಯ ಪುಟ 4ರಲ್ಲಿ, “ಸಮಿತಿಯು ರಾಜ್ಯದ ಜಿಲ್ಲಾ ಗ್ರಾಮಪಂಚಾಯಿತಿಗಳನ್ನು ಪುನರ್ವಿಂಗಡಣೆ ಮಾಡುವ ಪ್ರಯತ್ನವನ್ನು ಮಾಡಿಲ್ಲ” ಎಂದು ಹೇಳಿದೆ. ಇದು ಒಂದು ಭಾಗ.

ಇನ್ನೊಂದು ಕಡೆ, ಅದರ ಮಿತಿಗಳು ಏನೇನಿತ್ತು ಎನ್ನುವುದನ್ನು ಹೇಳಿದ್ದಾರೆ. 1 ರಿಂದ 5 ಮಿತಿಗಳನ್ನು ಹೇಳಿದ್ದಾರೆ. ಎಲ್ಲವನ್ನೂ ತಮ್ಮ ಗಮನಕ್ಕೆ ತರುವುದಕ್ಕೆ ಹೋಗುವುದಿಲ್ಲ. ಪುಟ 5, 4ನೆಯ ಪಾಯಿಂಟ್‌ನಲ್ಲಿ, "ಉಪಗ್ರಾಮ, hamlet ಇತರೇ ಕಂದಾಯೇತರ ಗ್ರಾಮಗಳ ಸಮಸ್ಯೆಗಳನ್ನು ಆಲಿಸಿದರೂ ಜನಸಂಖ್ಯೆ ಮತ್ತು ಕಂದಾಯ ಇಲಾಖೆಯ ನೀತಿಗಳಿಂದಾಗಿ ಆ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗಿಲ್ಲ" ಎಂದಿದೆ. ಇನ್ನೊಂದು ಕಡೆ, ಅದನ್ನು ನಾವು ಕನ್ಸಿಡರ್ ಮಾಡಲೇ ಇಲ್ಲ ಎಂದು ಹೇಳಿದ್ದಾರೆ. ಉಪಗ್ರಾಮ ಇರಬಹುದು, hamlet ಇರಬಹುದು, ಯಾವುದು ಕಂದಾಯೇತರ ಗ್ರಾಮಗಳು ಇವೆಯೋ ಇವುಗಳನ್ನು ಗಮನದಲ್ಲಿಟ್ಟುಕೊಳ್ಳದೇ ಮಾಡಿರತಕ್ಕಂಥ ವಿಂಗಡಣೆ ಇದಾಗಿದೆ.

ಶ್ರೀ ಆರ್.ಕೆ.ಸಿದ್ದರಾಮಣ್ಣ:- ಅದನ್ನು ಗಮನಕ್ಕೆ ತೆಗೆದುಕೊಳ್ಳದೆ ಮಾಡಿರತಕ್ಕಂಥ ವಿಂಗಡಣೆ ಇದಾಗಿದೆ. ಹಾಗಾಗಿ ಇದು ಪರಿಪೂರ್ಣವಾದಂಥ ವಿಂಗಡೆಯಲ್ಲ.

ಶ್ರೀ ಪಟೇಲ್ ಶಿವರಾಮ್:- ಮಾನ್ಯ ಸಭಾಪತಿಯವರೆ, ಮಾನ್ಯ ಸಿದ್ಧರಾಮಣ್ಣನವರು ಹೇಳಿದ್ದು ಸರಿ ಇದೆ. ಇನ್ನು ಪರಿಪೂರ್ಣವಾದಂಥ ವಿಂಗಡಣೆಯಾಗಿಲ್ಲ. ಉದಾಹರಣೆಗೆ ನಮ್ಮ ಗ್ರಾಮ ಪಂಚಾಯ್ತಿಯಲ್ಲಿ 45 ಜನ ಸದಸ್ಯರಿದ್ದಾರೆ. ಅದನ್ನು ಪಟ್ಟಣ ಪಂಚಾಯ್ತಿ ಮಾಡಿ ಎಂದು ನಿಮ್ಮ ನಂಜಯ್ಯಮರ್‌ರವರು ಬಂದಾಗ ಕೂಡ ವಿನಂತಿ ಮಾಡಿದ್ದೇವೆ. ಇಂತಹ ಅನೇಕ ಸಮಸ್ಯೆಗಳಿವೆ. ಪುನರ್ ವಿಂಗಡಣೆ ಸರಿಯಾಗಿ ಆಗಲಿಲ್ಲ.

ಶ್ರೀ ಹೆಚ್.ಕೆ.ಪಾಟೀಲ್ :- ಮಾನ್ಯ ಸಭಾಪತಿಯವರೆ, ಮಾನ್ಯ ಸಿದ್ದರಾಮಣ್ಣನವರಿಗೆ ಮತ್ತು ಮಾನ್ಯ ಪಟೇಲರಿಗೆ ಹೇಳಬಯಸುವುದೇನೆಂದರೆ ಬಹುಶಃ ಪುನರ್‌ವಿಂಗಡಣೆಯೊಳಗೆ ಸಂಪೂರ್ಣವಾಗಿ ವೈಜ್ಞಾನಿಕವಾಗಿ ಮುನರ್ ವಿಂಗಡಣೆಯಾಗಿದ್ದರೆ ಪುನರ್‌ವಿಂಗಡಣಾ ಸಮಿತಿ ರಾಜ್ಯದ ಬಹುತೇಕ ಎಲ್ಲಾ ಭಾಗಗಳಲ್ಲಿ ಪ್ರವಾಸ ಮಾಡಿ ಜನರ ಅತ್ಯಂತ ಸಮೀಪ ಹೋಗಿ ಪುನರ್ ವಿಂಗಡಣೆ ಮಾಡಿದ್ದರೆ ಅವರು 434 ಹೊಸ ಪಂಚಾಯ್ತಿಗಳನ್ನು ಶಿಫಾರಸ್ಸು ಮಾಡಿ, ಇವೊತ್ತು ರಾಜ್ಯದಲ್ಲಿದ ಒಟ್ಟು 459 ಪಂಚಾಯ್ತಿಗಳನ್ನು ನಾವು ಮಾಡುವುದಕ್ಕೆ ಸಾಧ್ಯವಾಗಿದೆ. ಇನ್ನು ಪಟೇಲರು ಹೇಳಿದ ವಿಷಯದ ಬಗ್ಗೆ ಹೇಳಬೇಕಾದರೆ 45 ಜನ ಸದಸ್ಯರು ಒಂದೇ ಹಳ್ಳಿಯಲ್ಲಿದ್ದರೆ ಅದನ್ನು ಪಟ್ಟಣ ಪಂಚಾಯ್ತಿ ಮಾಡುವುದಕ್ಕೆ ಕೆಲವು ಕರಾರುಗಳಿವೆ. ಅದು ಹಾರೋಗೇರಿ ಕ್ರಾಸ್‌ನಲ್ಲಿ 74 ಸನ್ಮಾನ್ಯ ಕವಟಗಿಮಠರವರಿಗೆ ಗೊತ್ತಿದೆ. ಅವರ ಹಾರೋಗೇರಿ ಸದಸ್ಯರಿದ್ದಾರೆ. ನಾವು ಅದನ್ನು ಪಟ್ಟಣ ಪಂಚಾಯ್ತಿ ಮಾಡಿದ್ದೇವೆ.

ಶ್ರೀ ಪಟೇಲ್ ಶಿವರಾಂ:- ಮಾನ್ಯ ಸಭಾಪತಿಯವರೆ, ಸತ್ಯಮಂಗಲ ಎನ್ನುವ ಒಂದೇ ಒಂದು ಗ್ರಾಮ ಹಾಸನ ನಗರಕ್ಕೆ ಸೇರಿದೆ. ಅದನ್ನು ಮಾಡಲಿಲ್ಲ. ಆ ಗ್ರಾಮ ಪಂಚಾಯ್ತಿಯವರು ಬರೆದು ಕೊಟ್ಟಿದ್ದಾರೆ.

ಶ್ರೀ ಹೆಚ್.ಕೆ.ಪಾಟೀಲ್:- ಮಾನ್ಯ ಸಭಾಪತಿಯವರೆ, ಅವರು ಬರೆದು ಕೊಟ್ಟಿದ್ದರೆ ಇವೊತ್ತು ಕೂಡ ಅದನ್ನು ಪಟ್ಟಣ ಪಂಚಾಯ್ತಿ ಮಾಡುವುದಕ್ಕೆ ನಾವು ಕ್ರಮ ಕೈಗೊಳ್ಳುತ್ತೇವೆ. ನೀವು 45 ಹೇಳುತ್ತಿದ್ದೀರಿ ಆದರೆ 20 ಜನ ಸದಸ್ಯರಿದ್ದು ಅಲ್ಲಿ ಜನಸಂಖ್ಯೆ 15000ಕ್ಕಿಂತ ಜಾಸ್ತಿ ಇದ್ದರೆ ಅವು ಯಾವ ಪಂಚಾಯ್ತಿಯನ್ನು ಕೂಡ ಇಡುವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಇನ್ನು ಶಿರೂರ್ ಗ್ರಾಮ ಇದೆ ಅಲ್ಲಿನ ಸ್ಥಳೀಯ ಜನರು ನಮಗೆ ಪಟ್ಟಣ ಪಂಚಾಯ್ತಿ ಬೇಡ ನಾವು ಗ್ರಾಮ ಪಂಚಾಯ್ತಿಯಾಗಿಯೇ ಇರುತ್ತೇವೆಂದು ಹೇಳಿದರು. ಆ ಪಂಚಾಯ್ತಿಯಾಗಿಯೇ ನಾವು ಮುಂದುವರೆಯುತ್ತೇವೆಂದು ಅವರು ಹೇಳುವುದಾದರೆ, ನಾವು ಪಟ್ಟಣ ಪಂಚಾಯ್ತಿಯಾಗಿ ಹೋಗುವುದಿಲ್ಲ ಎಂದು ಹೇಳಿ ಬರೆದು ಕೊಡಲಿಲ್ಲ ಅಂದರೆ, ಅವರು ಠರಾವು ಮಾಡದಿದ್ದರೆ, ಅವರ ಅಭಿಪ್ರಾಯ ಹಳ್ಳಿಯೊಳಗೆ ಉಳಿಯಬೇಕೆಂದಿದ್ದರೆ ಅವರಿಗೆ ನಾವು ಅವಕಾಶ ಮಾಡಿ ಕೊಟ್ಟಿದ್ದೇವೆ.

ಶ್ರೀ ಕೋಟ ಶ್ರೀನಿವಾಸ್ ಪೂಜಾರಿ:- ಮಾನ್ಯ ಸಭಾಪತಿಯವರೆ, ನಂಜಯ್ಯನಮಠರವರು ಇಡೀ ರಾಜ್ಯದಲ್ಲಿ ತಿರುಗಾಟ ಮಾಡಿದ್ದಾರೆ. ಹೊಸ ಆಲೋಚನೆಗಳನ್ನು ಮಾಡಿದ್ದಾರೆ. ಅವರು ಎಲ್ಲಿಯಾದರು ವಿಫಲರಾಗಿದ್ದಾರೆಂದು ನಮಗೆ ಅನಿಸಿದರೆ ಅದಕ್ಕೆ ಕಾರಣವೇನೆಂದರೆ ಬರೀ ಕ್ಷೇತ್ರ ವಿಂಗಡಣೆ ಬಗ್ಗೆ ಮಾತ್ರ ಅವರು ಗಮನ ಕೊಟ್ಟಿದ್ದಲ್ಲ. ಅವರು ಅದನ್ನು ಮೀರಿ ಕೆಲವು ಶಿಫಾರಸ್ಸುಗಳನ್ನು ಮಾಡುವುದಕ್ಕೆ ಹೊರಟರು. ಅವರು ಕ್ಷೇತ್ರ ವಿಂಗಡಣೆಗೆ ಸೀಮಿತವಾಗಿ ಕೆಲಸ ಮಾಡಿದ್ದರೆ ನಾಜೂಕಾಗಿ ಮತ್ತು ಅರ್ಥವೆತ್ತವಾಗಿ ಮಾಡಬಹುದೆಂದು ನಮಗನಿಸುತ್ತದೆ. ತೊಂದರೆ ಇಲ್ಲ. ಈಗ ಆಗಿಯಾಗಿದೆ.

ಶ್ರೀ ಹೆಚ್.ಕೆ.ಪಾಟೀಲ್:- ಮಾನ್ಯ ಸಭಾಪತಿಯವರೆ, ಪುನರ್ ವಿಂಗಡಣೆ ವಿಚಾರ ಮಾತ್ರ ನಾನು ಮಾತನಾಡುತ್ತೇನೆ. ಅವರು ಉಳಿದ ಅಭಿಪ್ರಾಯಗಳೇನಿವೆ ಅವರು ಟರ್ಮ್ಸ್ ಆಫ್ ರೆಫರನ್ಸ್‌ನಲ್ಲಿರಲಿಲ್ಲವೆಂದರೆ ಅದರ ಬಗ್ಗೆ ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವ ಅವಶ್ಯಕತೆ ಇಲ್ಲ. ಈ ಪುನರ್ ವಿಂಗಡಣೆ ನಂತರ ನಾವು ಸ್ವಲ್ಪ ಪ್ರಮಾಣದ ಚುನಾವಣೆಗೆ ಸಂಬಂಧಿಸಿದಂಥ ಕಾನೂನು ತಿದ್ದುಪಡಿ ತಂದಿದ್ದೇವೆ. ತಾವೆಲ್ಲಾ ದೊಡ್ಡ ಮನಸ್ಸು ಮಾಡಿಕೊಂಡು ಅದನ್ನೆಲ್ಲಾ ತಾವು ಒಪ್ಪಿಕೊಂಡಿದ್ದೀರಿ. ಆಮೇಲೆ ಪಂಚಾಯ್ತಿಯ ಚುನಾವಣೆಯಾಯಿತು. ಪಂಚಾಯ್ತಿ ಚುನಾವಣೆ ಆಗುವಂಥ ಸಂದರ್ಭದೊಳಗೆ ಬಹಳಷ್ಟು ಜನ ಚುನಾವಣೆ ಆಗುವುದಿಲ್ಲ, ನೀವು ಪುನರ್ ವಿಂಗಡೆ ಮಾಡುತ್ತಿದ್ದೀರಿ, ನೀವು ಚುನಾವಣೆ ಮಾಡುವುದಿಲ್ಲ. ಪಂಚಾಯ್ತಿ ಚುನಾವಣೆ ಘೋಷಣೆ ಮಾಡಿದ್ದೇವು, ಚುನಾವಣೆ ಆಗುವುದಿಲ್ಲ ಎಂದು ಹೇಳಿದ್ದರು. ಆದರು ಪಂಚಾಯ್ತಿ ಚುನಾವಣೆ ನಡೆದವು. ಆ ಚುನಾವಣೆ ಅತ್ಯಂತ ಶಾಂತ ರೀತಿಯಿಂದ ನಡೆಯಿತು ಎನ್ನುವುದನ್ನು ನಾವು ನೀವು ಎಲ್ಲರು ಅಭಿಮಾನದಿಂದ ಒಪ್ಪಿಕೊಳ್ಳಬೇಕಾಗುತ್ತದೆ. this is more than a mini general election ನಾಲ್ಕು ಕೋಟಿ ಜನರಿಗೆ ಸಂಬಂಧ ಇರತಕ್ಕಂಥ ಸ್ಥಳೀಯ ಸರ್ಕಾರಗಳು ಇವೊತ್ತು ನಿರ್ಮಾಣ ಆದವು. ಮಾನ್ಯ ಸಭಾಪತಿಯವರೆ, ನಮ್ಮ ಚುನಾವಣೆ ಇತಿಹಾಸವನ್ನು ನೋಡಿದರೆ ಎಂದು ಇಲ್ಲದ ಕಡಿಮೆ ಪ್ರಮಾಣದ ಪೊಲೀಸ್ ಕಂಪ್ಲೇಂಟ್‌ಗಳು, ಎಂದು ಇಲ್ಲದ ಕಡಿಮೆ ಪ್ರಮಾಣದ ಸಂಘರ್ಷಗಳು. ಅಂದರೆ ನಮ್ಮ ಗ್ರಾಮೀಣ ಭಾಗದ ಮತದಾರ ಪ್ರಬುದ್ಧ ಆಗುತ್ತಿದ್ದಾನೆ. ಆ ಒಂದು ಪ್ರಜಾಪ್ರಭುತ್ವಕ್ಕೆ ಅರ್ಥೈಸಿಕೊಳ್ಳುವಂಥ ಶಕ್ತಿ ಅವನದು ಸಾಕಷ್ಟು ಹೆಚ್ಚಾಗಿದೆ. ಆ ಕಾರಣಕ್ಕಾಗಿ ನಾವು ಇವೊತ್ತು ಅವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಚುನಾವಣೆ ನಡೆದಂಥ ಸಂದರ್ಭದಲ್ಲಿ ಆ ಪ್ರವಾಸಗಳನ್ನು ಹೊರತುಪಡಿಸಿ ಕೆಲವು ಮಂದಿ ಧರ್ಮಸ್ಥಳಕ್ಕೆ ಹೋದರು, ಕೆಲವು ಮಂದಿ ಉಡುಪಿಗೆ ಹೋದರು, ಕೆಲವು ಮಂದಿ ತಿರುಪತಿಗೆ ಹೋದರು, ಕೆಲವು ಮಂದಿ ಯಲ್ಲಮ್ಮನ ಗುಡ್ಡಕ್ಕೆ ಹೋದರು, ಕೆಲವು ಮಂದಿ ಗೋವಾಕ್ಕೆ ಹೋದರು. ಈ ಪ್ರವಾಸ ಹೋಗುವಂಥ ಸನ್ನಿವೇಶ ಏನು ಸೃಷ್ಠಿಯಾಯಿತು ಇದನ್ನು ಹೊರತುಪಡಿಸಿದರೆ ಪಂಚಾಯ್ತಿ ಚುನಾವಣೆಗಳು ಅತ್ಯಂತ ಶಾಂತವಾಗಿ ಹಾಗೂ ಬಹಳಷ್ಟು ಕಡಿಮೆ ಪ್ರಮಾಣದ ಸಂಘರ್ಷದಿಂದ ನಡೆದಿವೆ. ಕೋರ್ಟ್‌ಗಳಲ್ಲಿ ಕೂಡ ಖಟ್ಲೆಗಳು ಬಹಳ ಕಡಿಮೆ ಪ್ರಮಾಣದ್ದಾದವು.

ಶ್ರೀ ಪಟೇಲ್ ಶಿವರಾಂ:- ಮಾನ್ಯ ಸಭಾಪತಿಯವರೆ, ಇದನ್ನು ತಡೆಗಟ್ಟುವುದಕ್ಕೂ ಕೂಡ ಅವಕಾಶವಿತ್ತು. ನಾವು ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯನ್ನು ನೇರವಾಗಿ ಮಾಡಿ ಎಂದು ನಾವು ಹೇಳಿದ್ದೇವು. ಅದೂ ಅಲ್ಲದೆ ಮೀಸಲಾತಿಯನ್ನು ಅಧ್ಯಕ್ಷ, ಉಪಾಧ್ಯಕ್ಷರ ಜೊತೆಗೆ ಮಾಡಿದ್ದರೆ ಇಷ್ಟೊಂದು ಪೈಪೋಟಿ ನಡೆಯುತ್ತಿರಲಿಲ್ಲ. ನೇರವಾಗಿ ಚುನಾವಣೆ ಮಾಡಬೇಕಾಗಿತ್ತು.

ಶ್ರೀ ಹೆಚ್.ಕೆ.ಪಾಟೀಲ್:- ಇವೊತ್ತು ಈ ಪಂಚಾಯ್ತಿ ಸದಸ್ಯರೇನು ಆಯ್ಕೆಯಾಗಿದ್ದಾರೆ. ಅವರು ಎದುರಿಗೆ ಬಹುದೊಡ್ಡ ಸವಾಲು ನಿಂತಿದೆ. ನಮ್ಮ ಪಂಚಾಯ್ತಿಗಳೆಲ್ಲಾ ಅಭಿವೃದ್ಧಿ ಕೆಲಸದೊಳಗೆ ವಿಶೇಷವಾಗಿ ಇವೊತ್ತು ಪಾಲ್ಗೊಳ್ಳುತ್ತಿದ್ದಾರೆ. ನಿಮಗೆ ಆಶ್ಚರ್ಯ ಅನಿಸಬಹುದು, ಒಂದು ಕಾರ್ಯಕ್ರಮ ತೆಗೆದುಕೊಂಡರೆ ಒಂದೇ ಸಮಯದಲ್ಲಿ ಆರು ಸಾವಿರ ಸಂಸ್ಥೆಗಳು, ಆರು ಸಾವಿರ ಸಮೂಹ ಇವೊತ್ತು ಸರ್ಕಾರದ ಕಾರ್ಯಕ್ರಮ ಮಾಡುವುದಕ್ಕೆ ಪ್ರಾರಂಭ ಮಾಡುತ್ತಿವೆ. ಇತಿಹಾಸದೊಳಗೆ ಹಿಂದೆ ಇಷ್ಟು ದೊಡ್ಡ ಪ್ರಮಾಣದ ಸಂಘಟನೆಗಳು, ಜನಸಮೂಹ, ಒಂದು ಕೆಲಸ ಸರ್ಕಾರ ಮಾಡಬೇಕೆಂದರೆ ಅಷ್ಟು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಉದಾಹರಣೆಗೆ ಹೇಳುವುದಾದರೆ ಶೌಚಾಲಯ ನಿರ್ಮಾಣ, ಸನ್ಮಾನ್ಯ ಈಶ್ವರಪ್ಪನವರು ನಮಗೆ ಸರ್ಕಾರ ಕೊಟ್ಟಂಥ ಸಂದರ್ಭದಲ್ಲಿ ನಾವು ಐವತ್ತು ಲಕ್ಷಕ್ಕಿಂತ ಹೆಚ್ಚು ಶೌಚಾಲಯಗಳನ್ನು ನಾವು ನಿರ್ಮಾಣ ಮಾಡಬೇಕಾಗಿತ್ತು. ನಿಮ್ಮಲ್ಲಿರತಕ್ಕಂಥ ಅಂಕಿಸಂಖ್ಯೆಯೋ, ಪತ್ರಿಕೆಯ ಭಾಗವೋ ನೆನಪು ಇಲ್ಲ, ನಾವು ಹತ್ತು ಲಕ್ಷದ ಗುರಿ ಹಾಕಿಕೊಂಡಿದ್ದೇವು, ಎರಡು ಲಕ್ಷ ಚಿಲ್ಲರೆ ಮಾತ್ರ ಸಾಧನೆ ಮಾಡಿದ್ದೀರಿ, ಅದನ್ನು ಓದುವುದಕ್ಕೂ ಸಹಿತ ನನಗೆ ಅಪಮಾನ ಅನಿಸುತ್ತದೆ. ಎನ್ನುವಂಥ ಮಾತನ್ನು

ಶ್ರೀ ಆರ್.ಕೆ.ಸಿದ್ದರಾಮಣ್ಣ:- ಮಾನ್ಯ ಸಭಾಪತಿಯವರೆ, ಅವರು ಶೌಚಾಲಯಕ್ಕೆ ಮುಂದೆ ಹೋಗುತ್ತಿದ್ದಾರೆ. ಈ ಪುನರ್ ವಿಂಗಡಣೆಗೆ ಸಂಬಂಧಪಟ್ಟ ಹಾಗೆ..

ಶ್ರೀ ಹೆಚ್.ಕೆ.ಪಾಟೀಲ್:- ಮಾನ್ಯ ಸಭಾಪತಿಯವರೆ, ಅದನ್ನೆಲ್ಲಾ ಅವರು ಕ್ಯಾರಿಫಿಕೇಶನ್‌ನೊಳಗೆ ಕೇಳಲಿ, ನಾನು ಮಾನ್ಯ ಈಶ್ವರಪ್ಪನವರು ಹೇಳಿರುವಂಥ ಮಾತನ್ನು ಉತ್ತರಿಸುತ್ತಿದ್ದೇನೆ. ನಾವು 8 ಲಕ್ಷ 54 ಸಾವಿರ ಶೌಚಾಲಯಗಳನ್ನು ಕಟ್ಟಿದ್ದೇವೆ. ನಾನು ಇದರ ಕ್ರೆಡಿಟ್ ಅನ್ನು ಪ್ರಧಾನ ಕಾರ್ಯದರ್ಶಿಯವರಿಗೆ, ಹೆಚ್ಚುವರಿ ಅಪರ ಕಾರ್ಯದರ್ಶಿಯವರಿಗೆ, ಸಿ.ಇ.ಓರವರಿಗೆ ಕೊಡುವುದಿಲ್ಲ. ಅಥವಾ ಇದರ ಕ್ರೆಡಿಟ್ ಅನ್ನು ನಾನು ನನಗೆ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಆ ಕ್ರೆಡಿಟ್ ಆ ಪಂಚಾಯ್ತಿಗಳಿಗೆ ಹೋಗಬೇಕು. ಅದು ಗ್ರಾಮಪಂಚಾಯ್ತಿಯ ಅಧ್ಯಕ್ಷ ಇರಬಹುದು, ಗ್ರಾಮಪಂಚಾಯ್ತಿಯ ಉಪಾಧ್ಯಕ್ಷ ಇರಬಹುದು, ಗ್ರಾಮಪಂಚಾಯ್ತಿಯ ಸದಸ್ಯರಿರಬಹುದು, ಗ್ರಾಮಪಂಚಾಯ್ತಿಯ ಪಿ.ಡಿ.ಓ ಇರಬಹುದು, ತಾಲ್ಲೂಕು ಪಂಚಾಯ್ತಿಯ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಪಿ.ಡಿ.ಓ. ಇರಬಹುದು, ಅಥವಾ ಜಿಲ್ಲಾಪಂಚಾಯ್ತಿಯ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರು ಅಥವಾ ಇ.ಓ. ಇರಬಹುದು. ಇವರೆಲ್ಲರು ಈ ಪ್ರಕ್ರಿಯೆಯೊಳಗೆ ದೇಶದ ಇದು ಅತ್ಯಂತ ಮಹತ್ವದ ಯೋಜನೆ ಇದು, ರಾಜ್ಯದ ಅತ್ಯಂತ ಗಂಭೀರವಾಗಿರತಕ್ಕಂಥ ಯೋಜನೆ.. ಈ ಒಂದು ಪ್ರಕ್ರಿಯೆಯಲ್ಲಿ ದೇಶದ ಒಂದು ಮಹತ್ವದ ಯೋಜನೆ, ರಾಜ್ಯದ ಅತ್ಯಂತ ಒಂದು ಗಂಭೀರವಾದ ಯೋಜನೆ ನಮ್ಮ ಸಹೋದರ-ಸಹೋದರಿಯರ ಘನತೆ-ಗೌರವವನ್ನು ಕಾಪಾಡತಕ್ಕಂತಹ ಯೋಜನೆ, ಆರೋಗ್ಯವಂತಹ ಸಮಾಜವನ್ನು ಸೃಷ್ಟಿ ಮಾಡುವುದಕ್ಕೆ ಇದು ಒಂದು ದೊಡ್ಡ ಅಸ್ತ್ರ, ಅಂದರೆ 8,54,000. .

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳ 15 ಅಂಶಗಳ ಪ್ರಗತಿ ಪರಿಶೀಲನಾ ಕಾರ್ಯಕ್ರಮಗಳ ತಾವೇ ಅಂದರೆ ಸರ್ಕಾರದಿಂದ ಕೊಟ್ಟಿರುವಂತಹ ಉತ್ತರ. ಅದರಲ್ಲಿ ಶೌಚಾಲಯದ ಬಗ್ಗೆಯೂ ಪ್ರಸ್ತಾಪ ಮಾಡಿದ್ದೀರಿ. ಮನೆಗೊಂದು ಶೌಚಾಲಯ, ಗುರಿ 9,98,435, ಗುರಿ ಸಾಧನೆ 2,15,115, ನೀವೇ ಕೊಟ್ಟಿರುವಂತ ಮಾಹಿತಿಯ ಪ್ರತಿಯನ್ನು ನಿಮಗೆ ಕಳುಹಿಸಿಕೊಡುತ್ತೇನೆ. ಇದನ್ನು ನಾನು ಪ್ರಿಂಟ್ ಮಾಡಲಿಕ್ಕೆ ಬರುವುದಿಲ್ಲ. ಶ್ರೀ ಹೆಚ್.ಕೆ.ಪಾಟೀಲ್:- ಅದನ್ನು ಕೊಡಿ, ಅದು ಯಾವುದು ಎಂದು ನಾನು ನೋಡುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್:- ಕಳುಹಿಸಿ ಕೊಟ್ಟರೆ ನಾನು ಅದರ ಬಗ್ಗೆ ಹೇಳುತ್ತೇನೆ. ನನ್ನ ಹತ್ತಿರ ಇರುವಂತಹ ಮಾಹಿತಿಯನ್ನು ಸಹ ನಾನು ತಮಗೆ ಹೇಳುತ್ತೇನೆ. ನಮ್ಮ ರಾಜ್ಯ ಸರ್ಕಾರವನ್ನು number ನಾವು one in construction of toilets ಎಂದು ಕೇಂದ್ರ ಸರ್ಕಾರ declare ಮಾಡಿದೆ. ಅದಕ್ಕೆ ಅರ್ಜಿಯನ್ನು ಹಾಕಿರಲಿಲ್ಲ. ನಮ್ಮ MIS ನಲ್ಲಿ ಇದ್ದಂತಹ ಮಾಹಿತಿಯನ್ನು ತೆಗೆದುಕೊಂಡು ನಂಬರ್ ಒನ್ ಎಂದು declare ಮಾಡಿದೆ. ನಂತರ ಒಂದೆರಡು ಮೂರು ದಿನ ಬಿಟ್ಟು ನಮ್ಮ ರಾಜ್ಯಕ್ಕೆ ಒಂದು ದೊಡ್ಡ ಬಹುಮಾನವನ್ನು ಕೊಟ್ಟಿದೆ and for your kind information, ದೇಶದೊಳಗೆ 1,10,000,00 ಶೌಚಾಲಯಗಳನ್ನು ಕಟ್ಟಿದ್ದರೆ ಅದರ ಪೈಕಿ ನಮ್ಮ ಕರ್ನಾಟಕದೊಳಗೆ ನಾವು ಇಲ್ಲಿಯವರೆಗೆ ಎರಡು ವರ್ಷಗಳಲ್ಲಿ ಒಟ್ಟು 13,80,000 ಶೌಚಾಲಯಗಳನ್ನು ಕಟ್ಟುವುದರ ಮೂಲಕ we have built more than 13 per cent of the total number of toilets which are built in the entire Country. position. As regards percentage we stand at 2nd ನಮಗಿಂತ ಮೇಲೆ ಇರುವುದು Mizoram, ಅದನ್ನು ಬಿಟ್ಟರೆ ಬೇರೆ ಯಾವುದೇ ರಾಜ್ಯಗಳು ಹೆಚ್ಚು ಶೌಚಾಲಯಗಳನ್ನು ಕಟ್ಟಿರುವುದಿಲ್ಲ. ಇದು ಎಲ್ಲಿಗೆ dropdown ಆಗುತ್ತದೆ ಎಂದರೆ ನಾವು 8,54,000 ಶೌಚಾಲಗಳನ್ನು ಕಟ್ಟಿದ್ದರೆ ಅಂದರೆ ನಾವು ಈ ವರ್ಷದ್ದು ಅಂದರೆ 2014-15ನೇ ಸಾಲಿನದ್ದು. ನಂತರ ಬರುವುದು 6 ಲಕ್ಷ. ನಂತರ ಬರುವ ಗುಜರಾತ್‌ನಲ್ಲಿ 3 ಲಕ್ಷ ಶೌಚಾಲಯಗಳು, ಅಂದರೆ, ಈ ಶೌಚಾಲಯ ಕಟ್ಟುವಂತಹ ಕೆಲಸದೊಳಗೆ ನಮ್ಮ ಪಂಚಾಯಿತಿಗಳ ಭಾಗವಹಿಸುವಿಕೆಯಿಂದ, ನಮ್ಮ ರಾಜ್ಯದ ನಮ್ಮ ಗ್ರಾಮಗಳ ಶೌಚಾಲಯ ಕಟ್ಟುವ ಕಾರ್ಯಕ್ರಮದಲ್ಲಿ ಬಹಳಷ್ಟು ಯಶಸ್ವಿಯಾಗಿದ್ದೇವೆ. ಅಥವಾ ಏನು ವರದಿ ತಮಗೆ ಈ ವಿಚಾರದಲ್ಲಿ ಅಂಕಿ-ಸಂಖ್ಯೆಗಳ ವಿಚಾರದಲ್ಲಿ ಏನು ಸರಿಪಡಿಸಬೇಕು, ನಮ್ಮಿಂದ ಬೇಕು, ಅದನ್ನು ಕಳುಹಿಸಿಕೊಡುತ್ತೇವೆ. ಸರ್ಕಾರದವರು ಬರೆದಿರುವಂತಹ ವಿವರಗಳನ್ನು ಸಹ ಇದರ ಜೊತೆ ತಮಗೆ ಕಳುಹಿಸಿಕೊಡುತ್ತೇವೆ. ಮತ್ತೆ ಶುದ್ಧ ನೀರಿನ ಬಗ್ಗೆ ಪ್ರಸ್ತಾಪ ಆಯಿತು.

ಶ್ರೀ ಬಿ.ರಾಮಕೃಷ್ಣ:- ಮಾನ್ಯ ಸಭಾಪತಿಯವರೆ, 2015-16ನೇ ಸಾಲಿನಲ್ಲಿ ನಾವು 4,32,000 ಶೌಚಾಲಯಗಳನ್ನು ಕಟ್ಟಿದ್ದೇವೆಂದು ಮಾನ್ಯ ಸಚಿವರು ಹೇಳಿದರು.

ಶ್ರೀ ಹೆಚ್.ಕೆ.ಪಾಟೀಲ್:- ನಾನು ಹೇಳಿಲ್ಲ.

ಶ್ರೀ ಬಿ.ರಾಮಕೃಷ್ಣ:- ನಾನು clarification ಕೊಡಿ. 2015-16ನೇ ಸಾಲಿನ ಬಜೆಟ್ ಬುಕ್ ತೆಗೆದು ನೋಡಿದರೆ ಗೊತ್ತಾಗುತ್ತದೆ. ಪೂರ್ಣವಾಗಿ ಹೇಳಿ ಬಿಡುತ್ತೇನೆ, ಅಮೇಲೆ ತಾವು ಅದಕ್ಕೆ ಉಳಿದಂತೆ 2013-14-15ನೇ ಸಾಲಿನಲ್ಲಿ

4,32,000 ಶೌಚಾಲಯಗಳನ್ನು ಕಟ್ಟುತ್ತೇವೆಂದು ಹೇಳಿದ್ದೀರಿ. ಕಟ್ಟಿದಂತಹ 6 ಲಕ್ಷ ಶೌಚಾಲಯಗಳು ಏನಾದವು? ಅದಕ್ಕೆ ಎಷ್ಟು ಅನುದಾನವನ್ನು ತೆಗೆದಿಟ್ಟಿದ್ದೀರಿ. ಎಷ್ಟು ಖರ್ಚಾಗಿದೆ, ಇನ್ನು ಎಷ್ಟು ಉಳಿದುಕೊಂಡಿದೆ? ಗ್ರಾಮಂತರಹಳ್ಳಿ

ಶ್ರೀ ಹೆಚ್.ಕೆ.ಪಾಟೀಲ್:- ನೋಡಿ" ನಮ್ಮ ಒಟ್ಟು ಕುಟುಂಬಗಳ ಸಂಖ್ಯೆ 85,14,554, (ಗ್ರಾಮಾಂತರದ್ದು. 30,15,284. This is unnecessary exercise. ಅದಕ್ಕೆ ನಾನು ಹೇಳುತ್ತಿದ್ದೇನೆ. I have lot of respect for you.

ಶ್ರೀ ಬಿ.ರಾಮಕೃಷ್ಣ:- 2015-16ನೇ ಸಾಲಿನಲ್ಲಿ ವೈಯಕ್ತಿಕ ಶೌಚಾಲಯಕ್ಕೆ ಎಷ್ಟು ಅನುದಾವನ್ನು ಒದಗಿಸಿದ್ದೀರಿ? ಎಷ್ಟು ಖರ್ಚು ಮಾಡಿದ್ದೀರಿ, ಅದರಲ್ಲಿ ಎಷ್ಟು ಹಣ ಉಳಿದುಕೊಂಡಿದೆ ಎಂದು ತಿಳಿಸಿ.

ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)

ಶ್ರೀ ಹೆಚ್.ಕೆ. ಪಾಟೀಲ್**:-** ವೈಯಕ್ತಿಕ ಶೌಚಾಲಯಕ್ಕೆ 2014-15ನೇ ಸಾಲಿಗೆ ಒಟ್ಟು ಎಷ್ಟು ಅನುದಾನ ಎನ್ನುವುದರ ಬಗ್ಗೆ ನಿಮಗೆ ಅಂಕಿ-ಅಂಶಗಳನ್ನು ಕೊಡುತ್ತೇನೆ.

ಶ್ರೀ ಬಿ.ರಾಮಕೃಷ್ಣ:- ಮಾನ್ಯ ಸಭಾಪತಿಯವರೆ, ನಾನು ಇಲ್ಲಿ ಕೇಳುವುದೇನೆಂದರೆ, ಎಷ್ಟು ಶೌಚಾಲಯಗಳಾಗಿವೆ, ಮತ್ತು ಎಷ್ಟು ಮಿಸ್ಸಿಂಗ್ ಶೌಚಾಲಯಗಳಾಗಿವೆ ಎನ್ನುವುದರ ಬಗ್ಗೆ ಮಾಹಿತಿಯನ್ನು ಕೇಳುತ್ತಿದ್ದೇನೆ.

ಸಭಾಪತಿಯವರು:- ಮಾನ್ಯ ಸಚಿವರು ಸ್ವಲ್ಪ ಸಮಯದಲ್ಲಿಯೇ ಅದರ ಮಾಹಿತಿಯನ್ನು ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಬಿ.ರಾಮಕೃಷ್ಣ:- ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ಕೇಳುತ್ತಿದ್ದೇನೆ. ಹೇಳಬಯಸುತ್ತ

ಶ್ರೀ ಹೆಚ್.ಕೆ.ಪಾಟೀಲ್:- ಗೊತ್ತಿದ್ದು, ಮಾತನಾಡಿದ್ದು, ನಾನು ಇದೇ ಸದನದಲ್ಲಿ ಹೇಳಿದ್ದು, ಎಂದು

ಹೇಳಿ, ಅದರ ಬಗ್ಗೆ ಪದೇ ಪದೇ ಕೇಳಿದರೆ ಹೇಗೆ ?

ಶ್ರೀ ಬಿ.ರಾಮಕೃಷ್ಣ:- ಮಾನ್ಯ ಸಭಾಪತಿಯವರೆ, ನಾನು ಕೇಳುತ್ತಿರುವುದೇನೆಂದರೆ, ಸ್ಪಷ್ಟವಾಗಿ ಮಾಹಿತಿಯನ್ನು ಕೊಟ್ಟರೆ ನಾನು ಕುಳಿತುಕೊಳ್ಳುತ್ತೇನೆ.

ಸಭಾಪತಿಯವರು:- ಸಚಿವರು ಅದರ ಬಗ್ಗೆ ಮಾಹಿತಿಯನ್ನು ಕೊಡುತ್ತೇನೆಂದು ಹೇಳುತ್ತಿದ್ದಾರೆ. ಆದ್ದರಿಂದ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ರಾಮಕೃಷ್ಣ:- ಈ ವಿಚಾರದಲ್ಲಿ ನನಗೆ ಎರಡೇ ಮಾತಿನಲ್ಲಿ ಸ್ಪಷ್ಟ ಉತ್ತರ ಕೊಟ್ಟರೆ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್:- ಶೌಚಾಲಯಗಳ ಬಗ್ಗೆ ಸಂಪೂರ್ಣ ದಾಖಲೆ ಏನಿದೆ, ಅದನ್ನು ನಿಮಗೆ ಕಳುಹಿಸಿಕೊಡುತ್ತೇನೆ. ಇಲ್ಲಿ ಗಮನಿಸಿ. ಒಂದು ವಿಚಾರವನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. ನಮ್ಮ ಎರಡು ವರ್ಷಗಳ ಅವಧಿಯೊಳಗೆ ಈ ಅವಧಿಯೊಳಗೆ ಈ ಶೌಚಾಲಯಗಳ ಮಿಸಿಂಗ್ ಆಗಬಾರದು ಎಂದು ಕೆಲಸ ಮಾಡುತ್ತಿದ್ದೇವೆ. ಏಕೆಂದರೆ, ನಾವು ಈ ಸದನದಲ್ಲಿ ಮಾತನಾಡಿದ ಮೇಲೆ ಅದರಲ್ಲೂ 19 ಲಕ್ಷ ಮಿಸಿಂಗ್ ಶೌಚಾಲಯಗಳಿವೆ ಎಂದು ಹೇಳಿ, ನಾವು ಈಗಾಗಲೇ ಅದನ್ನು ನಮ್ಮ ಕಮಿಟಿಯ ವಿಚಾರಣೆಗೂ ಸಹಿತ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಬಿ.ರಾಮಕೃಷ್ಣ:- ಮಾನ್ಯ ಸಭಾಪತಿಯವರೆ, 19 ಸಾವಿರ ಶೌಚಾಲಯಗಳು ಮಿಸಿಂಗ್ ಆಗಿವೆ, ಅದರ ಬಗ್ಗೆ ವಿಚಾರಣೆ ಮಾಡಿಸುತ್ತಿದ್ದೇನೆಂದು ಸಚಿವರು ಹೇಳಬೇಕು.

ಶ್ರೀ ಹೆಚ್.ಕೆ.ಪಾಟೀಲ್:- ಈ ವಿಚಾರವಾಗಿ ನಾವು ಇದೇ ಸದನದಲ್ಲಿ ಚರ್ಚೆ ಮಾಡಿದ್ದೇವೆ.

ಶ್ರೀ ಬಿ.ರಾಮಕೃಷ್ಣ:- ಮಾನ್ಯ ಸಭಾಪತಿಯವರೆ, ನನಗೆ ಈಗ ಈ ಬಗ್ಗೆ ಹೇಳಬೇಕು.

ಶ್ರೀ ಹೆಚ್.ಕೆ.ಪಾಟೀಲ್:- ಸರಿ, ಸಭಾಪತಿಯವರೆ, ನೋಡಿ, ನಮಗೆ 2015-16ನೇ ಸಾಲಿನ ಮಾಹಿತಿಯನ್ನು ಕೇಳಿದ್ದಾರೆ. ಬಜೆಟ್‌ನೊಳಗೆ ನಾವು 500 ಕೋಟಿ ರೂಪಾಯಿಗಳನ್ನು ಶೌಚಾಲಯ ನಿರ್ಮಾಣಕ್ಕೆಂದು ಇಟ್ಟಿದ್ದೇವೆ. 125 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. 93 ಕೋಟಿ ರೂಪಾಯಿಗಳು ಈಗಾಗಲೇ ಖರ್ಚು ಮಾಡಲಾಗಿದೆ. ನಮಗೆ ಇನ್ನು 500 ಬೇಕಾಗಬಹುದೇನೋ? ಈಗಾಗಲೇ ನಮ್ಮ ಕೋಟಿಗಿಂತ ಹೆಚ್ಚು ಹಣ ಟಾರ್ಗೆಟ್ 10 ಲಕ್ಷ ನಿಗದಿ ಮಾಡಿದ್ದೇವೆ, ಮೊದಲ 3 ನಾನು ಒಂದು ಮಾತನ್ನು ತಿಂಗಳಿನಲ್ಲಿ ನಾವು ಒಂದೂವರೆ ಲಕ್ಷಕ್ಕಿಂತ ಹೆಚ್ಚು ಈಗಾಗಲೇ ಹೋಗಿದ್ದೇವೆ. ನಾನು ಹೇಳಲಿಕ್ಕೆ ಬಯಸುತ್ತೇನೆ. ನಾವು ಈ ಶೌಚಾಲಯಗಳನ್ನು ಕಟ್ಟುತ್ತೇವೆ, ಆಗಬಹುದು, ಈಗ ಏನು machineries ಇದೆ. ಹಿಂದಿನ ಕಾಲದಂತೆ ಈಗ ಏತಕ್ಕೆ ಆಗುವುದಿಲ್ಲ, ಆಗಬಾರದು ಏತಕ್ಕೆ, ಆಗಿರಬಹುದೇನೋ ಆ ಸಂಶಯಗಳು ಆಡಳಿತ ಮಾಡುವವರ ಹತ್ತಿರ ಬರುತ್ತವೆ, ವಿರೋಧ ಪಕ್ಷದಲ್ಲಿರುವವರ ಹತ್ತಿರವೂ ಸಹ ಬರುತ್ತವೆ. ಅದು ಆಗಬಾರದು ಎಂದು ಹೇಳಿ, ನಾನು ಕಳೆದ ಬಾರಿ ಜನವರಿ 26ಕ್ಕೆ ಒಂದು ವಿಚಾರವನ್ನು ಪತ್ರಿಕೆಯಲ್ಲಿ ಘೋಷಣೆ ಮಾಡಿದ್ದ and I took back that statement. ಅದು ಏನೆಂದರೆ, 1000 ಗ್ರಾಮಗಳನ್ನು ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳನ್ನಾಗಿ ಮಾಡುತ್ತೇವೆಂದು ಹೇಳಿದ್ದೆ. ಆ ಸಂದರ್ಭದಲ್ಲಿ ನಾವು ವೇಗವಾಗಿ ಹೋಗುತ್ತಿದ್ದೆವು. ಎಲ್ಲೋ ಒಂದು ಕಡೆ ಒಂಡು ನನಗೆ catution, ಇಲ್ಲ, ಎಂದು ಅನ್ನಿಸುತ್ತಿತ್ತು. 1000 ಗ್ರಾಮಗಳಾಗುವುದಿಲ್ಲ. ಇನ್ನು 12 ದಿವಸಗಳ ಸಮಯ ಇತ್ತು. Achier ಗ್ರಾಮಗಳು ಬಯಲು ಬಹಿರ್ದೆಸೆ ಮುಕ್ತ ನಮ್ಮ ಎಲ್ಲಾ 190 ಜನ Social Auditors ಇದ್ದಾರೆ. ಯಾವುದು 1000 ಎಂದು ಲಿಸ್ಟ್ ಇತ್ತು, ಅದನ್ನು Verificationಗೆ ಕಳುಹಿಸಿದೆವು. ಅವರುಗಳೆಲ್ಲಾ ಹೋಗಿ ಏನು ಮಾಡುತ್ತಾರೆ, ಎಲ್ಲವನ್ನು ನಾವು ನೋಡಿಕೊಂಡು ಬಂದೆವು. ಪ್ರತಿ ಶೌಚಾಲಯಕ್ಕೆ ಹೋಗುವುದು, ಅದರ ಮೇಲೆ ನಂಬರ್ ಬರೆಯುವುದು, ತಮ್ಮ ಇನಿಷಿಯಲ್ಸ್ ಬರೆಯುವುದು, ರೌಂಡ್ ಮಾರ್ಕ್ ಮಾಡಿ ಡೇಟ್ ಹಾಕಿ ಬರುವುದು, Physical verification... ಡಿಡಿಟಿ ಹೊಡೆಯುವ ಮುನ್ನ ಮಾಡುತ್ತಿದ್ದರಲ್ಲಾ, ಆ ರೀತಿ ಮಾಡುವುದು.

ಮಾನ್ಯ ಸಭಾಪತಿಯವರೆ, That figure came down to 266, 266 ಮಾತ್ರ 100%. ಉಳಿದದ್ದು, ಹಾಗಾದರೆ ಬೋಗಸ್ ಇದ್ದವೇನು? ಇಲ್ಲ. ಅದರಲ್ಲಿ 94% ಇದ್ದವು. 95% ಇದ್ದವು, 96% ಇದ್ದವು. ಕೆಲವು ಕಡೆ ಒಬ್ಬರಿಬ್ಬರು dispute ಮಾಡಿ 1-2% ಅನ್ನು ಉಳಿಸಿಕೊಂಡಿದ್ದರು. ಆದರೆ, ವಾಸ್ತವಿಕವಾಗಿ ನಾನು ಏನು 100% ಎಂದು ಹೇಳಿದ್ದೆ, ಬಂದಿದ್ದು 266 ಮಾತ್ರ. ಅಂದರೆ ಈ Concurrence social audit ಅನ್ನು ಸಹ ಈ ಶೌಚಾಲಯಗಳನ್ನು ಕಟ್ಟಿದ್ದಾರೋ ಇಲ್ಲವೋ ಎಂದು ನೋಡುವುದಕ್ಕೆ ಇವತ್ತು ಮಾಡುತ್ತಿದ್ದೇವೆ. ಆದ್ದರಿಂದ ಈ ಒಂದು ನೈಜವಾಗಿರತಕ್ಕಂತಹ ಶೌಚಾಲಯ ಕಾರ್ಯಕ್ರಮ ನಮ್ಮ ರಾಜ್ಯದಲ್ಲಿ ನಡೆದಿದೆ. The credit ಕೊಪ್ಪಳದ ಮೊಗಲಾಯ್ ಮಂಡ್ಯದಲ್ಲಿ ಶೌಚಾಲಯ should go to Panchayath, Taluka Panchayath and Zilla ಎಲ್ಲಿಯವರೆಗೆ ನಮ್ಮ ಗ್ರಾಮೀಣ ನಾಯಕತ್ವ ಈ ಕಾರ್ಯಕ್ರಮವನ್ನು Panchayath. ಅಪ್ಪಿಕೊಂಡಿತು ಅಂದರೆ, ಕೊಪ್ಪಳದ ಒಬ್ಬ ಜಿಲ್ಲಾ ಪಂಚಾಯತಿ ಅಧ್ಯಕ್ಷ ಹಳ್ಳಿ ಹಳ್ಳಿಗೆ ಹೋಗಿ ಅಲ್ಲಿನ ಮುದುಕರಿಗೆ ಕಾಲಿಗೆ ನಮಸ್ಕಾರ ಮಾಡಿ ಶೌಚಾಲಯ ಕಟ್ಟಿ ಎಂದು ಹೇಳಿ ಬಂದಿದ್ದಾರೆ. ಮಾನ್ಯ ಹಾಲಪ್ಪ ಆಚಾರ್ ಅವರು ತಮ್ಮ ಕೊಪ್ಪಳದ ಅನುಭವವನ್ನು ಹೇಳಬೇಕು. ಎಂಬ ಊರಿನಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಶೌಚಾಲಯಗಳನ್ನು ಕಟ್ಟಿದರು. ಕಾರ್ಯಕ್ರಮದ ಸಂವಾದ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದ್ದೆನು. ಸಂಜೆ ನನಗೆ ದೂರವಾಣಿ ಕರೆ ಮಾಡಿ, ಸಾರ್ ತಾವು ಜುಲೈ 7ನೇ ತಾರೀಖಿನಂದು ನಮ್ಮ ಮಂಡ್ಯಕ್ಕೆ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದ್ದಿರಿ. ಶೌಚಾಲಯ ಕಾರ್ಯಕ್ರಮದ ಸಂವಾದ ಅವತ್ತು ನಮಗೆ 1 ಲಕ್ಷ ಟಾರ್ಗೆಟ್ ಕೊಟ್ಟಿದ್ದು ಕೊಪ್ಪಳ ಜಿಲ್ಲೆಯ ಉದಾಹರಣೆಯನ್ನು ಕೊಟ್ಟಿದ್ದಿರಿ. ಅಂದರೆ, ನಾವು ಇವತ್ತು ಒಂದು ಲಕ್ಷ ನಾಲ್ಕು ಸಾವಿರ ಶೌಚಾಲಯದ ಗುರಿಯನ್ನು ಮುಟ್ಟಿದ್ದೇವೆ. ಅದನ್ನು ತಮಗೆ ತಿಳಿಸುವುದಕ್ಕೆ ನನಗೆ ಆನಂದವೆನಿಸುತ್ತದೆ ಎಂದು ಬಂದು ಮಹಿಳಾ ಸಿ.ಇ.ಓ ಅವರು ಅಭಿಮಾನದಿಂದ ಹೇಳಿದರು. Mandya crossed one lakh, Belgaum is nearing one lakh Jay ಈ

ಕಾರ್ಯಕ್ರಮ ಏನು ಇದೆ ಅದು ಜನ ಕಾರ್ಯಕ್ರಮ ಆಗಿದೆ. ಜನಾಂದೋಲನ ಕಾರ್ಯಕ್ರಮ ಆಗಿದೆ. ಈ ಕಾರ್ಯಕ್ರಮವನ್ನು ಯಶಸ್ಸು ಮಾಡುವುದರಲ್ಲಿ ನಿಮ್ಮೆಲ್ಲರ ಪಾತ್ರ ಬಹಳ ಅವಶ್ಯವಿದೆ. I must appreciate Mr.Halappa Achar and Mr.Boseraj. ಕೊಪ್ಪಳದಲ್ಲಿನ ಶೌಚಾಲಯ ಸಮರ ಕಾರ್ಯಕ್ರಮದಲ್ಲಿ ವೈಯಕ್ತಿಕವಾಗಿ ಪಾಲ್ಗೊಂಡವರು. ಕಾರ್ಯಕ್ರಮ ಇರಲಿ, ದೊಡ್ಡ ಕಾರ್ಯಕ್ರಮ ಇರಲಿ, ಯುವಕರ ಸಭೆ ಇದ್ದರೂ ಸಹ ಎಂ.ಎಲ್.ಸಿ. ಗಳು ಮತ್ತು ಎಂ.ಎಲ್.ಎ.ಗಳು ಅಲ್ಲಿ ಹಾಜರಿರುತ್ತಾರೆ. ಇವತ್ತು ಅದು ಆಗುವುದಕ್ಕೆ ಸಾಧ್ಯವಾಗಿದ್ದರೆ ಎರಡನೆಯದು, ನೀವೇನು ಪ್ರಸ್ತಾಪ ಮಾಡಿದ್ದೀರಲ್ಲಾ ಅದು ನಿಮ್ಮ ಕಾಲದಲ್ಲಿ ಮಾಡಿರತಕ್ಕಂಥದ್ದು ಅದು defluoridation unit ಮೂರೂವರೆ ಲಕ್ಷ ರೂಪಾಯಿಗಳಿಗೆ ನೀವು Water life ಕೊಟ್ಟಿದ್ದೀರಿ, ಇನ್ನು ಎರಡು-ಮೂರು ಕಂಪನಿಗಳಿಗೆ ಕೊಟ್ಟಿದ್ದೀರಿ. ಆದರೆ ಈ ಶುದ್ಧ ನೀರಿನ ಘಟಕಗಳು reverse osmosis, ultraviolet, ಪ್ರೋಸಸ್‌ಗಳ ಮೂಲಕ ಇವತ್ತು ನೀರು defluoridation ಇದೆ. ಶುದ್ಧೀಕರಣವಾಗುತ್ತದೆ. ಅದರಲ್ಲಿ ಒಂದು ಸಾವಿರದಲ್ಲಿ, ಇತ್ತೀಚಿನ ಮಾಹಿತಿ ಪ್ರಕಾರ We have crossed 900. ಇನ್ನು 85-90 ಮಾಡಬೇಕಾಗಿದೆ. ಅವುಗಳನ್ನು 15-20 ದಿವಸದಲ್ಲಿ Commission ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಗೋ.ಮಧುಸೂದನ್:- ಯೂನಿಟ್ ಕಾಸ್ಟ್ ಎಷ್ಟಾಗುತ್ತದೆ? ಈಗ NADB ಹಣ ಬಂದಿದೆ. ಈಗ ಆ NADB ಹಣದಲ್ಲಿ 38 ಲಕ್ಷ ರೂಪಾಯಿಗಳನ್ನು ನಾನು ಸುಮಾರು 8-9 ಕುಡಿಯುವ ನೀರಿನ ಶುದ್ಧ ಘಟಕಗಳಿಗೆ ಪೂರ್ಣ ಹಣವನ್ನು ಕೊಡುತ್ತಿದ್ದೇನೆ. ಅದಕ್ಕೆ ಬಂದಿರುವಂತಹ ಕಾಸ್ಟ್ ನನಗೆ ಬೆಂಗಳೂರಿನ ಬೇರೆ ಬೇರೆ ಕಡೆಯಿಂದ ಬಂದಿರುವವರು 4 ಲಕ್ಷ ರೂಪಾಯಿ ಕೊಡುತ್ತಿದ್ದಾರೆ. 38 ಲಕ್ಷ ಕೊಟೇಶನ್ ಕೋಟ್ ಮಾಡುತ್ತಿದ್ದಾರೆ. ಅದಕೋಸ್ಕರ ನಾನು ಕೇಳುತ್ತಿದ್ದೇನೆ. ಏನಾದರೂ ಅದಕ್ಕಿಂತ ಕಡಿಮೆ ಬರುವ ಹಾಗಿದ್ದರೆ ಇನ್ನು ಹೆಚ್ಚಿನ ಹಳ್ಳಿಗಳಿಗೆ ಕೊಡಬಹುದು ಎನ್ನುವ ಯೋಚನೆ.

ಶ್ರೀ ಪಟೇಲ್ ಶಿವರಾಂ:- ಅದಕ್ಕೆ ಸರ್ಕಾರ ಏನಾದರೂ ಮ್ಯಾಚಿಂಗ್ ಗ್ರಾಂಟ್ ಕೊಟ್ಟರೆ ಮಾನ್ಯ ಮಧುಸೂದನ್ ರವರು ಹೇಳಿದ ಹಾಗೆ ಹೆಚ್ಚೆಚ್ಚು ಶುದ್ಧ ಕುಡಿಯುವ ನೀರಿನ ಘಟಕವನ್ನು ಮಾಡಬಹುದು.

ಶ್ರೀ ಎಚ್.ಕೆ.ಪಾಟೀಲ್:- ಮಾನ್ಯ ಮಧುಸೂದನ್‌ರವರೇ, ನೀವು ಕೊಡಬೇಕೆಂದು ಮಾಡಿದ್ದೀರಾ?

ಶ್ರೀ ಗೋ.ಮಧುಸೂದನ್:- ಮೊದಲನೆ ಬಾರಿಗೆ ಮಾನ್ಯ ಪಾಟೀಲ್‌ರವರು ನಮಗೆ ಕೊಟ್ಟಿದ್ದಾರೆ. ಆದಷ್ಟು ನಾವು ಕುಡಿಯುವ ನೀರಿನ ಘಟಕಗಳಿಗೆ ಉಪಯೋಗಿಸುತ್ತಿದ್ದೇವೆ.

ಶ್ರೀ ಎಚ್.ಕೆ.ಪಾಟೀಲ್:- ನೀವು ಅದನ್ನು ನಮ್ಮ ಇಲಾಖೆಗೆ ಕೊಡಿ. ಅದಕ್ಕೆ ಐದು ಲಕ್ಷ ರೂಪಾಯಿ ಒಂದು ಯೂನಿಟ್ ಗೆ ಮ್ಯಾಚಿಂಗ್ ಗ್ರಾಂಟ್ ಸೇರಿಸಿ ಕೊಡುತ್ತೇವೆ. ಹಳ್ಳಿಗಳನ್ನು ಐಡೆಂಟಿಫೈ ಮಾಡಿ ನಮಗೆ ಲಿಸ್ಟ್ ಕೊಡಿ ಅದಕ್ಕೆ ನಾವು 5-5 ಲಕ್ಷ ರೂಪಾಯಿ ಗ್ರಾಂಟ್ ಕೊಡುತ್ತೇವೆ.

ಶ್ರೀ ಗೋ.ಮಧುಸೂದನ್:- ಹಾಗಾದರೆ ನಾವು ಪೂರ್ಣವಾಗಿ ಬರೆದುಕೊಡುತ್ತೇವೆ. ನೀವು ಅವರ ಹತ್ತಿರ ತೆಗೆದುಕೊಂಡುಬಿಡಿ. ಪಾಟೀಲ್‌ರವರೇ ತಾವು ಎಚ್.ಕೆ.ಪಾಟೀಲ್‌ರವರಿಗೆ ಕೊಟ್ಟುಬಿಡಿ.

ಸಭಾಪತಿಯವರು:- ಬಾಯಲ್ಲಿ ಹೇಳುವುದಕ್ಕಾಗುತ್ತದೆಯೇ? ಲಿಖಿತ ಮೂಲಕ ಕೊಡಿ. ಶ್ರೀ ಪಟೇಲ್ ಶಿವರಾಂ:- ಮಾನ್ಯ ಮಧುಸೂದನ್‌ರವರು ಹೇಳಿದ ಹಾಗೆ ಹಳ್ಳಿಗಳ ಹೆಸರುಗಳನ್ನು ಕೊಟ್ಟುಬಿಡಿ.

ಶ್ರೀ ಗೋ.ಮಧುಸೂದನ್:- ನಮಗೆ ಬಹಳ ಅನುಕೂಲವಾಯಿತು, ನಾವು ನಿಮಗೆ ಪಟ್ಟಿ ಕೊಡುತ್ತೇವೆ. ಅದರಲ್ಲೂ ನಾವು ಮಾಡಿಸುತ್ತಿರುವುದೇನೆಂದರೆ, ಇದಕ್ಕೆ ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ, ಪುರಸಭೆಯನ್ನೇ ನಾವು ನೋಡಲ್ ಏಜನ್ಸಿ ಮಾಡಿ ಮಾಡುತ್ತಿರುವುದು. ಎಲ್ಲವೂ ನಿಮ್ಮ ವ್ಯಾಪ್ತಿಗೆ ಬರುವಂಥದ್ದೇ ಆಗುತ್ತದೆ. ನಾವು ಪೂರ್ಣ ಹಣವನ್ನು ನಿಮಗೆ ಕೊಡುತ್ತೇವೆ. ಆ ಹಳ್ಳಿಗಳು ಯಾವ್ಯಾವುದು ಎಂದು ನಾವು ಪಟ್ಟಿ ಕೊಡುತ್ತೇವೆ. ನೀವು ಮಾಡಿಕೊಟ್ಟರೆ ಸಾಕು.

ಶ್ರೀ ಎಚ್.ಕೆ.ಪಾಟೀಲ್:- ಮಾನ್ಯ ಎಸ್.ಆರ್.ಪಾಟೀಲ್‌ವರು ಮೊನ್ನೆ ನಮ್ಮ ಜೊತೆ ಮಾತನಾಡುತ್ತಾ ಹೇಳುತ್ತಿದ್ದರು, ಈಗ ನ್ಯಾನೋ ಟೆಕ್ನಾಲಜಿ ಲಭ್ಯವಾಗಿದೆ. ಅದರಿಂದ ಇನ್ನು ಕಾಸ್ಟ್ ಕಡಿಮೆಯಾಗುತ್ತದೆ, the plant will cost around

three lakhs ಎಂದು ಹೇಳುತ್ತಿದ್ದರು. ಅಂದರೆ ಈಗೇನು ನೀರು reverse osmosis ದಲ್ಲಿ ಬಹಳಷ್ಟು ವೇಸ್ಟ್, rejection ಆಗುತ್ತದೆ, ಆ rejection ಕಡಿಮೆಯಾಗುತ್ತದೆಂದು ಹೇಳುತ್ತಿದ್ದರು. ಆದ್ದರಿಂದ ಟೆಕ್ನಾಲಜಿಯನ್ನು ನೋಡಬೇಕಾಗಿರತಕ್ಕಂಥದ್ದು.

ಶ್ರೀ ವೈ.ಎ.ನಾರಾಯಣಸ್ವಾಮಿ:- ಮಾನ್ಯ ಸಚಿವರೇ, ನದಿ ಮೂಲಗಳಿರುವ ಊರುಗಳ ಬಗ್ಗೆ ತಾವು ಹೇಳುತ್ತಿದ್ದೀರಿ. ಇಡೀ ರಾಜ್ಯಕ್ಕೆ ಸಾವಿರ ಘಟಕಗಳ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ನದಿಮೂಲ ಇಲ್ಲದಿರುವ ಕಡೆ 1300-1500 ಅಡಿಗೆ ನೀರು ಹೋಗಿದೆ. ಸುಮಾರು 80 ಪರ್ಸೆಂಟ್ ಹಳ್ಳಿಗಳು arsenic, fluoride, nitrate ನಿಂದ ತುಂಬಿತುಳುಕಾಡುತ್ತಿದೆ. ಬಹಳ ಗಂಭೀರವಾದ ಪರಿಸ್ಥಿತಿ ಆ ಕಡೆ ಇದೆ. ನನ್ನ ಮನವಿ ಏನೆಂದರೆ, ಈ ಬಯಲು ಸೀಮೆ ಭಾಗಗಳಲ್ಲಿ ನದಿ ಮೂಲಗಳು ಇಲ್ಲದಿರುವ ಊರುಗಳೇನಿವೆ ಅಲ್ಲಿ ಬಹಳ ವಿಷಯುಕ್ತ ನೀರು ಕುಡಿಯುತ್ತಿದ್ದಾರೆ. ಅವರೆಲ್ಲರಿಗೂ ಕಡ್ಡಾಯವಾಗಿ ಸಮಾರೋಪಾದಿಯಲ್ಲಿ ಎಲ್ಲಾ ಊರುಗಳಿಗೂ ಘಟಕಗಳನ್ನು ಕೊಡಬೇಕೆಂದು ನಾನು ಆಗ್ರಹ ಮಾಡುತ್ತೇನೆ. ತಾಲ್ಲೂಕಿಗೆ ಇಷ್ಟು ಎಂದು ಹಂಚುವುದಕ್ಕೆ ಹೋಗಬೇಡಿ. ಈ ಭಾಗಕ್ಕೆ ಶೇಕಡ 80 ರಷ್ಟು ಹಳ್ಳಿಗಳಿಗೆ ಎಫೆಕ್ಟ್ ಆಗಿದೆ. ಅವೆಲ್ಲವುಗಳಿಗೆ ಕೊಡಬೇಕೆಂದು ನಾನು ಆಗ್ರಹ ಮಾಡುತ್ತೇನೆ.

ಶ್ರೀ ಎಚ್.ಕೆ.ಪಾಟೀಲ್:- ಮಾನ್ಯ ಸಭಾಪತಿಯವರೇ, ನಾನು ಒಂದು ವಿಚಾರವನ್ನು ಹೇಳುತ್ತೇನೆ. ಕೆಲವು ಕಡೆ ಫ್ಲೋರೈಡ್, ನೈಟ್ರೇಟ್, ಐರನ್, arsenic affected ಇಲ್ಲ. ಕೂಡ affect ಇಲ್ಲದಂತಹ ಗ್ರಾಮಗಳಲ್ಲೂ biological ಯಾವು contamination ಸಲುವಾಗಿ ಶುದ್ಧ ನೀರಿನ ಘಟಕವನ್ನು ಕೇಳುತ್ತಿದ್ದಾರೆ. ಅಲ್ಲಿ ನಾವು discretionary, ಈಗ ಬೇಡ, ನೀವು ಎರಡು ತೆಗೆದುಕೊಳ್ಳಿ, ಮೂರು ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇವೆ. ಆದರೆ, ನಾನು ಒಂದು ಭರವಸೆಯನ್ನು ಕೊಡುವುದಕ್ಕೆ ಈ ಸಂದರ್ಭದಲ್ಲಿ ಈ ವೇದಿಕೆಯನ್ನು ಉಪಯೋಗ ಮಾಡುತ್ತೇನೆ. ಎಲ್ಲೆಲ್ಲಿ ಫ್ಲೋರೈಡ್ affected, fluoride contaminated ಇದೆ, ಆ ಎಲ್ಲಾ ಗ್ರಾಮಗಳಲ್ಲೂ ಕೂಡ ನಾವು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸುತ್ತೇವೆ. ಈ 7,000 ಘಟಕಗಳಲ್ಲಿ ಆ ಪ್ರದೇಶಗಳಿಗೆ ಹೆಚ್ಚಿನ ಮಾನ್ಯತೆಯನ್ನು ಕೊಡುತ್ತೇವೆ ಹಾಗೂ ಅದನ್ನು ತೀವ್ರವಾಗಿ ಈ ವರ್ಷ ಮುಕ್ತಾಯವಾಗುವುದರೊಳಗೆ, ಮಾರ್ಚ್ ಒಳಗಾಗಿ ಸನ್ಮಾನ್ಯ ಈಶ್ವರಪ್ಪನವರು ನನಗೆ ಒಂದು ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಒಂದು ಆನೆ ಬಲವನ್ನು ಕೊಟ್ಟ ಹಾಗೆ ಮಾಡಿದ್ದಾರೆ. ಅವರು ಏನು ಹೇಳಿದ್ದಾರೆಂದರೆ; I really appreciate this from bottom of heart. ಪಾಟೀಲ್‌ರವರೇ, ನಿಮ್ಮ ಯೋಜನೆ, ನಿಮ್ಮ ಟಾರ್ಗೆಟ್, ನಿಮ್ಮ ಮಾಡಿ ವೆರಿಫೈ ಮಾಡಿ, ಭರವಸೆ, ನೀವು ಡಿಸ್ಟ್ರಿಕ್ಟವೈಸ್ ಟೂರ್ ಮುಟ್ಟುವುದರೊಳಗೆ ಎಲ್ಲಿ ತೊಂದರೆಯಾಗಿದೆ ಎಂಬುದನ್ನು ನೋಡಿ, ನಾನು ಆಗೇ ಹೋಗಲಿ ಎನ್ನುವುದನ್ನು ನೋಡುತ್ತೇನೆ, ನಿಮ್ಮ ಗಮನಕ್ಕೂ ಅದನ್ನು ತರುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಆ ಸದುದ್ದೇಶದ ಎಚ್ಚರಿಕೆಯ ಮಾತು ಏನಿದೆ ನಾನು ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನೀವು ದಯಮಾಡಿ ಆ ಕೆಲಸ ಮಾಡಿ, ನಾನು ಹಾಗೂ ನಮ್ಮ ಎಲ್ಲ ಮಿತ್ರರರು ಸೇರಿ 7,000 ಟಾರ್ಗೆಟ್‌ನ್ನು ನಾವು ಈ ವರ್ಷ ಪೂರ್ಣಗೊಳಿಸುತ್ತೇವೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಶ್ರೀಮತಿ ಜಯಮ್ಮ:- ಮಾನ್ಯ ಸಭಾಪತಿಯವರೇ, ಚಳ್ಳಕೆರೆ, ಮೊಳಕಾಲ್ಮೂರು, ಪಾವಗಡ, ಆ ಕಡೆಯೆಲ್ಲಾ ತುಂಬಾ ಕುಡಿಯುವ ನೀರಿನ ಅಭಾವ ಇದೆ. ಮೊದಲು ನೀರು ಕೊಡಿ. ಏಕೆಂದರೆ, ಹೊಸಪೇಟೆಗೆ 90 ಕಿ.ಮೀ. ಅಥವಾ 70 ಕಿ.ಮೀ. ಆಗುತ್ತದೆ. ಆ ಕಡೆಯವರಿಗೆ ಮೊದಲು ನೀರು ಕೊಡಿ, ನೀರು ಕೊಟ್ಟ ಮೇಲೆ ಶೌಚಾಲಯ ಕೊಡಿ, ಆಮೇಲೆ ನೀರಿನ ಘಟಕಗಳನ್ನು ಕೂಡ ಮಾಡಿದರೆ ಅಲ್ಲಿನ ಜನಗಳಿಗೆ ಕುಡಿಯುವುದಕ್ಕೆ ನೀರಾದರು ಸಿಗುತ್ತದೆಂದು ಈ ಸಂದರ್ಭದಲ್ಲಿ ನಾನು ಮನವಿ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಚ್.ಕೆ.ಪಾಟೀಲ್:- ಮಾನ್ಯ ಸಭಾಪತಿಯವರೇ, the same voice We are repeating to Hon'ble Prime Minister Mr. Modi. She has told us in Kannada, I tell the same in English to Hon'ble Prime Minister. ಇದನ್ನು ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ಸ್ವಚ್ಛ ಭಾರತ ಅಭಿಯಾನದ Chief Ministers' Sub-group ಏನಿದೆಯಲ್ಲಾ ಆ Sub-group ನಲ್ಲೂ ಇದೇ ಮಾತನ್ನು ಹೇಳಿದ್ದಾರೆ.

ಶ್ರೀ ವೈ.ಎ.ನಾರಾಯಣಸ್ವಾಮಿ:- ದೆಹಲಿಯಲ್ಲಿ ಪ್ರಧಾನಮಂತ್ರಿಯವರು ನೀತಿ ಆಯೋಗ ಸಮಿತಿಯ ಸಭೆಗೆ ಕರೆದರೆ ಮುಖ್ಯಮಂತ್ರಿಗಳು ಹೋಗುವುದಿಲ್ಲವಲ್ಲಾ? ನಮ್ಮ ಕಷ್ಟ ಕೇಳುವವರು ಯಾರು? ಪತ್ರ ಬರೆದರೆ ಆಗುತ್ತದೆಯೇ?

ಶ್ರೀ ವಿ.ಎಸ್.ಉಗ್ರಪ್ಪ:- ಸುಮ್ಮನೆ ಈ ಮಾಡುವುದರಲ್ಲಿ ಅರ್ಥವಿಲ್ಲ. ನಿಮ್ಮ ಪ್ರಧಾನ ಮಂತ್ರಿಗಳು ದೇಶಕ್ಕಿಂತ ಹೆಚ್ಚು ವಿದೇಶಗಳಲ್ಲೇ ಇರುತ್ತಾರೆ. ಇಷ್ಟೆಲ್ಲಾ ದೇಶ ವ್ಯಾಪಿ ರೈತರ ಆತ್ಮಹತ್ಯೆಗಳಾಗುತ್ತಿವೆ. ಅವರಿಗೆ ಅದೇನು ಅರ್ಥವೇ ಆಗುವುದಿಲ್ಲ. ಯಾವುದಕ್ಕೆ ಕರೆದಿದ್ದಾರೆ. ಯಾವುದಕ್ಕೆ ಹೋಗಿಲ್ಲ ಮುಖ್ಯಮಂತ್ರಿಗಳು ಎನ್ನುವುದನ್ನು ಹೇಳಬೇಕಾಗುತ್ತದೆ. ಸುಮ್ಮನೆ baseless charges ಏಕೆ ಮಾಡುತ್ತೀರಿ? (ಗೊಂದಲ)

ಸಭಾಪತಿಯವರು:- ಈಗ ಆ ವಿಷಯದ ಬಗ್ಗೆ ಚರ್ಚೆ ಬೇಡ. ಕುಡಿಯುವ ನೀರಿಗೆ ನಿಂಬಾ ಇಲ್ಲದಂತೆ ಏನೇನು ಬೇಕು ಅದನ್ನು ಮಾನ್ಯ ಸಚಿವರು ಹೇಳುತ್ತಾರೆ.

ಶ್ರೀ ಗೋ.ಮಧುಸೂದನ್:- ಮಾನ್ಯ ಉಗ್ರಪ್ಪನವರೇ, ನಮ್ಮ ಪ್ರಧಾನ ಮಂತ್ರಿಗಳು ಯಾವ ದೇಶಕ್ಕೆ ಹೋಗಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿರುತ್ತದೆ. ನಿಮ್ಮ ನಾಯಕರು ಎಲ್ಲಿ ಹೋಗಿದ್ದಾರೆಂದು ಯಾರಿಗೂ ಗೊತ್ತಾಗುವುದಿಲ್ಲ.

ಶ್ರೀ ಬಿ.ರಮಾನಾಥರೈ:- ಅವರು ಇನ್ನು ಪ್ರಧಾನ ಮಂತ್ರಿ ಆಗಿಲ್ಲವಲ್ಲಾ, ಪ್ರಧಾನ ಮಂತ್ರಿಯಾದ ಮೇಲೆ ಫ್ರೀಯಾಗಿರುತ್ತಾರೆ. ಅದೊಂದು ಮಾಡಿಸಿ.

ಶ್ರೀ ಡಿ.ಎಸ್.ವೀರಯ್ಯ:- ಚಿಕ್ಕಬಳ್ಳಾಪುರ, ಕೋಲಾರ, ಈ ಭಾಗದಲ್ಲಿ ನೀವು ವಿಸಿಟ್ ಮಾಡಿದ್ದೀರೋ ಇಲ್ಲವೋ ನನಗಂತೂ ಗೊತ್ತಿಲ್ಲ. ಪ್ರತಿಯೊಂದು ಕುಟುಂಬದಲ್ಲಿಯೂ ಕೂಡ ಅವರ ಹಲ್ಲುಗಳೆಲ್ಲಾ ಹಳದಿಯಾಗಿವೆ. ಇದಕ್ಕೆ ಕಾರಣ ಫ್ಲೋರೈಡ್‌ಯುಕ್ತವಾದ ನೀರು ಕುಡಿಯುವುದರಿಂದ ಈ ರೀತಿಯಾಗಿದೆ ಮತ್ತು ಜನಗಳು ಕುಬ್ಬರಾಗಿದ್ದಾರೆ. ಎತ್ತರ ನಾಲ್ಕು, ನಾಲ್ಕೂವರೆ ಅಡಿ ಇದ್ದಾರೆ. ಅವರು ಬಗ್ಗಿಕೊಂಡು ನಡೆಯುತ್ತಾರೆ. ಮನುಷ್ಯರು ಆ ರೀತಿ ಇರುವಾಗ ಎಲ್ಲರಿಗೂ ಒಂದೇ ಮಾನದಂಡವನ್ನು ಮಾಡಿ ಇಷ್ಟೇ ಕೊಡುತ್ತೇವೆಂದು ಹೇಳುವುದು ಸರಿಯಲ್ಲ. ಚಿಕ್ಕಬಳ್ಳಾಪುರ ಮತ್ತು ಮತ್ತು ಕೋಲಾರ ಬಹುತೇಕ 90 ಪರ್ಸೆಂಟ್ ನೀರು ಫ್ಲೋರೈಡ್‌ಯುಕ್ತವಾಗಿದೆ. ಇಂತಹ ಕಡೆ ಹೆಚ್ಚು ಆದ್ಯತೆ ಕೊಟ್ಟು ಸಮಾರೋಪಾಧಿಯಲ್ಲಿ ಶುದ್ದೀಕರಣ ಘಟಕಗಳನ್ನು ಹಾಕಿ. ಕನಿಷ್ಟ ನೀರೇ ಸಿಗುವುದಿಲ್ಲ, ಕೊನೆಯ ಪಕ್ಷ ಒಂದು ಗ್ಲಾಸ್ ಶುದ್ಧ ನೀರನ್ನು ಕೊಡುವಂತಹ ಕೆಲಸ ಮಾಡಿ,

ಶ್ರೀ ಬಿ.ರಾಮಕೃಷ್ಣ:- ಮಾನ್ಯ ಸಭಾಪತಿಯವರೇ, ಚಿಕ್ಕಬಳ್ಳಾಪುರ, ಕೋಲಾರಕ್ಕೆ ನಾನು ಕಂಡ ಹಾಗೆ ನೀರು ಬೇಕು ಎಂದು ಹೇಳುತ್ತಿರುತ್ತಾರೆ. ಅವರು ಏನು ಕೇಳುವುದಿಲ್ಲ. ಯಾವಾಗ ಕೊಡುತ್ತಾರೆ, ಯಾವಾಗ ಪೂರ್ಣಗೊಳಿಸುತ್ತಾರೆ ಎಂದು ಅಷ್ಟು ಮಾತ್ರ ಅವರಿಗೆ ನೇರವಾಗಿ, ಸ್ಪಷ್ಟವಾಗಿ ಹೇಳಿಬಿಡಲಿ, ಆರು ವರ್ಷಗಳಿಂದ ಅವರು ಚಿಕ್ಕಬಳ್ಳಾಪುರಕ್ಕೆ ನೀರು ಕೇಳುವುದು ಬಿಡುವುದಿಲ್ಲ, ಇವರು ಕೊಡುತ್ತೇವೆಂದು ಹೇಳುವುದಿಲ್ಲ. ಸುಮ್ಮನೆ ಏಕೆ, ಅವರು ಸರಿಯಾಗಿ ಹೇಳಲಿ, ನೀರು ಯಾವಾಗ ಕೊಡುತ್ತಾರೆ?

(ಗೊಂದಲ)

ಶ್ರೀ ಬಿ.ರಾಮಕೃಷ್ಣ:- ನಿಮಗೆ ಕೋಲಾರದಲ್ಲಿ, ಚಿಕ್ಕಬಳ್ಳಾಪುರದಲ್ಲಿ ಜನರು ಎಷ್ಟು ಕಷ್ಟ ಬೀಳುತ್ತಿದ್ದಾರೆ ಎಂಬುದು ಗೊತ್ತಿಲ್ಲ. ಇದು ನಮ್ಮ ರಾಜ್ಯ, ನಮ್ಮ ದೇಶ. ಒಂದೇ ಮಂಡ್ಯವೂ ಒಂದೇ, ಅದರಲ್ಲೇನಿದೆ? ಕೋಲಾರವೂ

ಸಭಾಪತಿಯವರು:- ಸಚಿವರಿಗೆ ಬಿಡಿ ಮಾತನಾಡುತ್ತಾರೆ. ಸಮಸ್ಯೆ ಏನು, ಪರಿಹಾರ ಏನು ಎಂದು ಸಚಿವರು ಹೇಳುತ್ತಾರೆ.

(ಗೊಂದಲ)

ಶ್ರೀ ಬಿ.ರಾಮಕೃಷ್ಣ:- ಮಾನ್ಯ ಸಭಾಪತಿಯವರೆ ನಾವು ಈ ಸಮಸ್ಯೆಯನ್ನು ಯಾವಾಗ ಪರಿಹಾರ ಮಾಡುತ್ತೀರಿ ಎಂದು ಕೇಳುತ್ತಿದ್ದೇವೆ. ಅದರಲ್ಲಿ ತಪ್ಪೇನಿದೆ.

**ಸಭಾಪತಿಯವರು:-** ಸಚಿವರಿಗೆ ಉತ್ತರವನ್ನು ಹೇಳುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಮತ್ತು ಬೆಂಬಿಯತ್

**ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ ಕೋಲಾರ, ಚಿಕ್ಕಬಳ್ಳಾಪುರ ಇವೆರಡು ಅತ್ಯಂತ ಹೆಚ್ಚು ಅಶುದ್ಧ ನೀರಿನಿಂದ ಮತ್ತು ನೀರಿನ ಕೊರತೆಯಿಂದ ಬಳಲುವಂತಹ ಜಿಲ್ಲೆಗಳು. ಅದೇ ರೀತಿಯಲ್ಲಿ ಇನ್ನು ಕೆಲವು ಜಿಲ್ಲೆಗಳು ನಮ್ಮ ರಾಜ್ಯದಲ್ಲಿವೆ. ಅವುಗಳ ಬಗ್ಗೆ ವಿಶೇಷ ಒತ್ತನ್ನು ಕೊಡುತ್ತೇವೆ. ಈ ಟಾರ್ಗೆಟ್‌ಗಳನ್ನು ಹೆಚ್ಚು ಮಾಡುವುದರಲ್ಲಿಯೂ ಕೂಡ ಹಿಂದೆ ಮುಂದೆ ಆ ಎಲ್ಲಾ ಕಡೆಗಳಲ್ಲಿ ಸೂಕ್ತವಾದಂತಹ ನೋಡುವುದಿಲ್ಲ. ಎಲ್ಲೆಲ್ಲಿ fluoride affected area ಕಾರ್ಯಕ್ರಮಗಳನ್ನು ರೂಪಿಸುತ್ತೇವೆ. ಇವತ್ತಿನ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಅದೇ ಮಾತನಾಡುವಂತಹ ಸಂದರ್ಭದಲ್ಲಿ, ಕೆ.ಎಸ್.ಈಶ್ವರಪ್ಪನವರು ರೀತಿಯಾಗಿ ಸನ್ಮಾನ್ಯ ಶ್ರೀ ವಿ.ಎಸ್.ಉಗ್ರಪ್ಪನವರು ಮಾತನಾಡುವಂತಹ ರೀತಿಯಲ್ಲಿ ಪಂಚಾಯಿತಿಗಳ ವರ್ಕಿಂಗ್ ಬಗ್ಗೆ ಮಾನ್ಯ ಅಲ್ಲಮಪ್ರಭು ಪಾಟೀಲ್‌ರವರು ನಮ್ಮ ಪಂಚಾಯಿತಿಯಲ್ಲಿ ಸಿಬ್ಬಂದಿಗಳಲ್ಲ. ಶ್ರೀ ಕೆ.ಎಸ್.ಈಶ್ವರಪ್ಪನವರು ಉಪ ಮುಖ್ಯಮಂತ್ರಿಗಳಾಗಿ ಕೆಲಸವನ್ನು ಮಾಡಿದ್ದಾರೆ. ಅವರು ಬಿಟ್ಟು ಹೋದಾಗ, ಮಾನ್ಯ ಬಸವರಾಜ ಹೊರಟ್ಟಿಯವರು ಕೂಡ ಗ್ರಾಮೀಣಾಭಿವೃದ್ಧಿ ಸಚಿವರಾಗಿ ಕೆಲಸವನ್ನು ಮಾಡಿದ್ದಾರೆ. ಸನ್ಮಾನ್ಯ ಶ್ರೀನಿವಾಸ ಪೂಜಾರಿಯವರು ಕೂಡ ಸಚಿವರಾಗಿದ್ದರು. ಪ್ರತಿ ಪಂಚಾಯಿತಿಗೆ regularly appointed, legally appointed ವ್ಯಕ್ತಿಗಳು 1.6 persons per Panchayat ಇತ್ತು. ಇವತ್ತಿನ ದಿವಸ ನಾವು ಸುಮಾರು 30,000 ಅನಧಿಕೃತವಾಗಿರತಕ್ಕಂಥದ್ದು ಮತ್ತು ಬೇರೆ ಬೇರೆ ಕಾರಣಗಳಿಂದ ಅಪೂವಲ್ ಆಗದೇ ಇರತಕ್ಕಂಥದ್ದು, ಅವೆಲ್ಲವನ್ನೂ ಅಪೂವಲ್ ಮಾಡಿ ಸುಮಾರು 30,000 ಹುದ್ದೆಗಳನ್ನು ನಾವು ಅಪ್ರೂವಲ್ ಮಾಡಿದ್ದೇವೆ. ಪ್ಲಸ್ ಸುಮಾರು 600 ಹೆಚ್ಚು ಇಂಜಿನಿಯರ್‌ಗಳನ್ನು ನಾವು ನೇಮಕ ಮಾಡಿದ್ದೇವೆ.

**ಶ್ರೀ ಪಟೇಲ್ ಶಿವರಾಂ:-** ಮಾನ್ಯ ಸಭಾಪತಿಯವರೆ,

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರವನ್ನು ಕೊಡಲಿ ತಾವು ಕುಳಿತುಕೊಳ್ಳಿ.

ಶ್ರೀ ಪಟೇಲ್ ಶಿವರಾಂ:- ಮಾನ್ಯ ಸಭಾಪತಿಯವರೆ, 28 ಇಲಾಖೆಗಳ ಕಾರ್ಯವನ್ನು ನಿರ್ವಹಿಸುವ ಇಲಾಖೆ ಇದೆ. ಆದರೆ ಯಾವುದೇ ನೌಕರರನ್ನು ಆಯ್ಕೆ ಮಾಡುವಂತಹ ಅಧಿಕಾರ ನಿಮಗೆ ಇಲ್ಲ. ಅದುದರಿಂದ ಒಂದು ನೇಮಕಾತಿ ಪ್ರಾಧಿಕಾರವನ್ನು ಮಾಡಿ.

ಶ್ರೀ **ಹೆಚ್.ಕೆ.ಪಾಟೀಲ್**:- ಮಾನ್ಯ ಸಭಾಪತಿಯವರೆ, 1.6 persons ನಿಂದ ಇವತ್ತು 6 persons per Panchayat ಹೊಂದುವುದಕ್ಕೆ ಸಾಧ್ಯವಾಗಿದೆ.

**(ಗೊಂದಲ)**

ಶ್ರೀ **ಎಸ್.ಆರ್.ಪಾಟೀಲ್**:- ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಕೊಡಲಿ. ಉತ್ತರವನ್ನು ಕೊಟ್ಟ ನಂತರ ಬೇಕಾದರೆ clarification ಬೇಕಾದರೆ ಕೇಳಲಿ, ನಿಮಗೆ ಸಚಿವರಿಂದ ಉತ್ತರ ಮಾನ್ಯ ಸದಸ್ಯರುಗಳಿಗೆ ಬೇಕೋ, ಬೇಡವೋ? ನಿಮಿಷಕ್ಕೊಮ್ಮೆ ಮಧ್ಯೆದಲ್ಲಿ ಕೇಳಿದರೆ ಸಚಿವರು ಯಾವ ರೀತಿಯಾಗಿ ಹೇಳುತ್ತಾರೆ?

ಸಭಾಪತಿಯವರು:- ಬೇಡ ನಿಮ್ಮಗಳಿಗೆ ಉತ್ತರ ಎಂದರೆ ಈ ವಿಷಯವನ್ನು ಮುಕ್ತಾಯಗೊಳಿಸುತ್ತೇನೆ. ಮಾನ್ಯ ಸಚಿವರು ಏನು ಉತ್ತರವನ್ನು ಹೇಳುತ್ತಾರೆ. ಅದು ಹೇಳಿ ಮುಗಿಯಲಿ.

(ಗೊಂದಲ**)**

ಶ್ರೀ ಕೋಟ ಶ್ರೀನಿವಾಸ ಪೂಜಾರಿ:- ಮಾನ್ಯ ಸಭಾಪತಿಯವರೆ, ಕೆಲವು ಸಾರಿ ಮಧ್ಯೆ ಪ್ರವೇಶವನ್ನು ಮಾಡುತ್ತಿದ್ದೇವೆ. ಅದು ಅಡ್ಡ ಬರುತ್ತೇವೆಂದು ಅರ್ಥವಲ್ಲ. ಕೆಲವು ಸಾರಿ ನಾವು ಸಾಂದರ್ಭಿಕವಾಗಿ ಮಾನ್ಯ ಸಚಿವರು ಕೊಟ್ಟಂತಹ ಉತ್ತರಕ್ಕೆ ಒಂದಿಷ್ಟು ಸಮಜಾಯಿಸಿ ಕೇಳಬೇಕಾಗುತ್ತದೆ. ತಾವು ಮಂತ್ರಿಗಳಿದ್ದೀರಿ. 30,000 ಪಂಚಾಯಿತಿ ಸಿಬ್ಬಂದಿಗಳನ್ನು ಖಾಯಂಗೊಳಿಸಿದ್ದೇವೆ. ಇದರಿಂದ ನಮ್ಮ ಖಾಯಮಾತಿ ಮಟ್ಟ ಹೆಚ್ಚಿದೆ ಎಂದು ಹೇಳಿದರು. ಏನಾಗಿದೆ: 30,000 ಪಂಚಾಯಿತಿ

ಸಿಬ್ಬಂದಿಗಳನ್ನು ಖಾಯಂಗೊಳಿಸಿದ್ದೀರಿ. ಇನ್ನು 15,000 ಪಂಚಾಯಿತಿ ಸಿಬ್ಬಂದಿಗಳು ತಾಂತ್ರಿಕ ಕಾರಣದಿಂದ ಹಾಗೆಯೇ ಉಳಿದುಕೊಂಡಿದ್ದಾರೆ. ಖಾಯಮಾತಿ ಅನ್ನುವಂತಹ ಆದೇಶವನ್ನು ಬಿಟ್ಟರೆ ಕನಿಷ್ಠ ಮೆಡಿಕಲ್ ಸೌಲಭ್ಯಗಳನ್ನು ಕೊಡಬೇಕಲ್ಲವೇ, ಕನಿಷ್ಠ ಭವಿಷ್ಯ ನಿಧಿಯನ್ನು ಕೊಡಬೇಕಲ್ಲವೇ, ಅದು ಯಾವುದನ್ನು ಮಾಡಿಲ್ಲ. ನಾನು ಹೇಳುತ್ತಿರುವುದು ತಪ್ಪು ಎಂದು ನಿಮಗೆ ಅನಿಸುತ್ತದೆ? 10-15 ವರ್ಷಗಳಿಂದ ಕೆಲಸವನ್ನು ಮಾಡುತ್ತಿದ್ದರು ಅವರನ್ನು ಖಾಯಂಗೊಳಿಸಿದ್ದೀರಿ. ಇದಕ್ಕೆ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರನ್ನು ಖಾಯಂಗೊಳಿಸುವ ಉದ್ದೇಶಗಳೇನು ಎಂದರೆ, ಅವರ ಭವಿಷ್ಯ ನಿಧಿ ಮತ್ತು ಆರೋಗ್ಯ ವಿಮೆಯನ್ನು ಕೊಡುವುದು ಉದ್ದೇಶವಾಗಿತ್ತು. ತಾವು ಏನು ಮಾಡುತ್ತೀರಿ?

ಶ್ರೀ ಬೋಸ್‌ರಾಜ್**:** ಮಾನ್ಯ ಸಭಾಪತಿಯವರೆ, ನಮ್ಮ ಸರ್ಕಾರ ಬಂದಮೇಲೆ ಅವರನ್ನು ಖಾಯಂಗೊಳಿಸಿದೆ. ನಿಮ್ಮ ಸರ್ಕಾರ ಇದ್ದಾಗ ಅದನ್ನೂ ಕೂಡ ಮಾಡಿರಲಿಲ್ಲ.

ಕೋಟ ಶ್ರೀನಿವಾಸ ಪೂಜಾರಿ:- ಮಾನ್ಯ ಸಭಾಪತಿಯವರೆ, ಹಾಗಾದರೆ ನಾವು ಇದರ ಬಗ್ಗೆ ಪ್ರಶ್ನೆಯನ್ನು ಕೇಳುವುದು ಬೇಡವೇ?

ಬಿ.ರಾಮಕೃಷ್ಣ:- ಮಾನ್ಯ ಸಭಾಪತಿಯವರೆ, ನಾವು ಪ್ರಸ್ತಾಪ ಮಾಡಿದಂತಹ ಯಾವುದೇ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದೀರಾ? ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಅಧಿಕಾರ ಇಲ್ಲದೇ ಇರುವುದರಿಂದ ಪ್ರಾಧಿಕಾರವನ್ನು ರಚನೆ ಮಾಡಿ ಎಂದು ಶ್ರೀ ಪಟೇಲ್ ಶಿವರಾಂ ರವರು ಕೇಳಿದರು. ಅದಕ್ಕೆ ಉತ್ತರವನ್ನು ಕೊಟ್ಟಿದ್ದೀರಾ? ಇಲ್ಲಯೇ?

ಶ್ರೀ ಎಸ್**.**ಆರ್**.**ಪಾಟೀಲ್ **(**ಸಭಾನಾಯಕರು):- ಮಾನ್ಯ ಸಭಾಪತಿಯವರೆ, ಒಂದು ವಾಕ್ಯವನ್ನು ಮುಗಿಸುವುದಕ್ಕೆ ಮುಂಚಿತವಾಗಿಯೇ intervene ಮಾಡುತ್ತಾರೆಂದರೆ ಅವರಿಗೆ ಮಾನ್ಯ ಸಚಿವರಿಂದ ಉತ್ತರ ಬೇಕೋ ಬೇಡವೋ ಕೇಳಿ.

ಸಭಾಪತಿಯವರು**:-** ಶ್ರೀ ಬಿ.ರಾಮಕೃಷ್ಣರವರೆ ದಯಮಾಡಿ ಕುಳಿತುಕೊಳ್ಳಿ. ಸಚಿವರು ಉತ್ತರವನ್ನು ಕೊಡಲಿ. (ಗೊಂದಲ) ಉತ್ತರವನ್ನು ಕೊಡುವುದಕ್ಕೆ ಸರ್ಕಾರ ಇದೆ. ಮಾನ್ಯ ಬೋಸ್‌ರಾಜ್‌ರವರೆ ಉತ್ತರವನ್ನು ಕೊಡಲು ನೀವು ಯಾರು? ದಯಮಾಡಿ ಕುಳಿತುಕೊಳ್ಳಿ, ಸರ್ಕಾರ ಉತ್ತರವನ್ನು ಕೊಡುವುದು ನೀವು ಉತ್ತರವನ್ನು ಕೊಡುವುದಕ್ಕೆ ಬರುವುದಿಲ್ಲ. ನಿಮ್ಮದು ಏನಾದರು ಪ್ರಶ್ನೆ ಇದ್ದರೆ ಕೇಳಿ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಅಶ್ವಥನಾರಾಯಣ: ಮಾನ್ಯ ಸಭಾಪತಿಯವರೆ, ನಾವು ಕೇಳಿರುವಂತಹ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟರೆ ಸಾಕು. ಸುಮ್ಮನೆ ಜನರಲ್ ಅಗಿ ಹೇಳಿಕೊಂಡು ಹೋಗುವುದು ಬೇಡ.

ಸಭಾಪತಿಯವರು**:-** ಮಾನ್ಯ ಬೋಸ್‌ರಾಜ್‌ರವರೆ, ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆ. ನೀವು ಏಕೆ ಉತ್ತರವನ್ನು ಕೊಡುತ್ತೀರಿ?

ಶ್ರೀ ಕೋಟ ಶ್ರೀನಿವಾಸ ಪೂಜಾರಿ:- ಮಾನ್ಯ ಸಭಾಪತಿಯವರೆ, ನಾವು ಮಂತ್ರಿಗಳ ಹತ್ತಿರ ಪ್ರಶ್ನೆಯನ್ನು ಕೇಳುತ್ತೇವೆ. ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ನಮ್ಮ ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳುತ್ತೇವೆ. ಶ್ರೀ ಬೋಸ್ ರಾಜ್‌ರವರು ಉತ್ತರವನ್ನು ಕೊಡುವುದಕ್ಕೆ ಶುರು ಮಾಡಿದರೆ ಮಂತ್ರಿಗಳು ಉತ್ತರವನ್ನು ಕೊಡುವುದಕ್ಕೆ ಸಮರ್ಥ ಇಲ್ಲವೆಂದು ನಮಗೆ ಅನ್ನಿಸಿಬಿಡುತ್ತದೆ. ಎಲ್ಲದ್ದಕ್ಕೂ ಶ್ರೀ ಬೋಸ್‌ರಾಜ್‌ರವರೆ ಉತ್ತರವನ್ನು ಕೊಡುವುದಾದರೆ ಮಂತ್ರಿಗಳು ಏಕೆ? ನಿಮ್ಮ ಮನಸ್ಸಿಗೆ ಬಂದಂತೆ ಮಾತನಾಡಬೇಡಿ.

Down waarwy

ಶ್ರೀ ಹೆಚ್**.**ಕೆ**.**ಪಾಟೀಲ್: ಮಾನ್ಯ ಸಭಾಪತಿಯವರೆ, ನಾನು ಶ್ರೀ ರಾಮಕೃಷ್ಣರವರ ಹತ್ತಿರ ಒಂದನ್ನು ಹೇಳುವುದಕ್ಕೆ ಬಯಸುತ್ತೇನೆ. ಹೇಳಬಾರದು ಅದರೂ ಹೇಳುತ್ತೇನೆ. ಏನೆಂದರೆ, ಇದು ನಮ್ಮ ಇಲಾಖೆಯ ಕಾರ್ಯನೀತಿ ವಿಧಾನಗಳ ಬಗ್ಗೆ ಚರ್ಚೆ, ಇದು ಪ್ರಶೋತ್ತರವಾಗಿದ್ದರೆ ನೀವು ಏನೇನು ಕೇಳುತ್ತೀರಿ ಅದಕ್ಕೆ ಒಂದೊಂದಾಗಿ ಉತ್ತರವನ್ನು ಹೇಳುತ್ತೇನೆ. ಆದರೆ ನನ್ನದು ಕೂಡ ಜವಾಬ್ದಾರಿ ಇರುತ್ತದೆ. ಇಲಾಖೆ ಬಗ್ಗೆ ನಿಮಗೆ ತಿಳಿಸಿಕೊಡಬೇಕು. ನಿಮ್ಮಗಳ ಮುಖಾಂತರ ರಾಜ್ಯಕ್ಕೆ

ತಿಳಿಸಿಕೊಡಬೇಕು. ನಮ್ಮ ಗುರಿ ಏನಿದೆ, ನಮ್ಮ ಉದ್ದೇಶ ಏನಿದೆ ಅವುಗಳನ್ನು ಈಡೇರಿಸುವುದಕ್ಕೆ ನಿಮ್ಮನ್ನೆಲ್ಲರನ್ನೂ ನಮಗೆ ಅನುಕೂಲವಾಗುವಂತಹ ರೀತಿಯಲ್ಲಿ ಇಲಾಖೆಗೆ ನಿಮ್ಮ ಬಲಪಡೆದುಕೊಳ್ಳಬೇಕು.

ಶ್ರೀ ಬಿ.ರಾಮಕೃಷ್ಣ:- ಮಾನ್ಯ ಸಭಾಪತಿಯವರೆ, ಇಲಾಖೆಯ ಕಾರ್ಯವೈಖರಿಯ ಬಗ್ಗೆ ಚರ್ಚೆ ಮಾಡುವುದು ಎಂದು ನಾನು ತಿಳಿದುಕೊಂಡಿದ್ದೆ.

ಶ್ರೀ ಹೆಚ್.ಕೆ.ಪಾಟೀಲ್:- ಮಾನ್ಯ ಸಭಾಪತಿಯವರೆ, ಅದರಲ್ಲಿ ಇದೆ ದಯಮಾಡಿ ಓದಿ.

ಶ್ರೀ ಬಿ.ರಾಮಕೃಷ್ಣ**:-** ಮಾನ್ಯ ಸಭಾಪತಿಯವರೆ, ನಾನು ಓದುತ್ತಿದ್ದೆ. ನನಗೂ ಕೂಡ ಕನ್ನಡ ಓದುವುದಕ್ಕೆ ಬರುತ್ತದೆ.

ಶ್ರೀ ಹೆಚ್.ಕೆ.ಪಾಟೀಲ್:- ಮಾನ್ಯ ಬಿ.ರಾಮಕೃಷ್ಣರವರೆ ಅದನ್ನು ಓದಬೇಡಿ, ಅಜೆಂಡಾವನ್ನು ಓದಿ.

ಸಭಾಪತಿಯವರು**:-** ಇದು ಪ್ರಶೋತ್ತರವಲ್ಲ, ಕಲಾಪ ಅಲ್ಲ.

ಶ್ರೀ ಬಿ.ರಾಮಕೃಷ್ಣ:- ಮಾನ್ಯ ಸಭಾಪತಿಯವರೆ, ಇದು ಪ್ರಶೋತ್ತರವಲ್ಲ. ನಿಮ್ಮ ಪ್ರಕಾರ ಇಲಾಖಾ ಚರ್ಚೆಯ ಮೇಲೆ ಉತ್ತರ. ಇಲಾಖಾ ಚರ್ಚೆ ಎಂದರೇನು? ಇಲಾಖೆಯಲ್ಲಿ ಏನು ಕೆಟ್ಟದ್ದು ಅಗಿದೆ, ಒಳ್ಳೆಯದಾಗಿದೆ ಅದನ್ನು ವಿಮರ್ಶೆ ಮಾಡುವಂಥದ್ದು. ಇದು ಹೌದೋ ಅಥವಾ ಇಲ್ಲವೋ ಎನ್ನುವುದರ ಬಗ್ಗೆ ದಯಮಾಡಿ ಮಾನ್ಯ ಸಚಿವರು ಹೇಳಲಿ, ಅದರ ಬಗ್ಗೆ ಬೆಳಕನ್ನು ಚೆಲ್ಲಿ ಎಂದು ಕೇಳಿದ್ದೆ ಹೊರತು, ಎಂದು ಹೇಳ: ಇಲಾಖೆಯ ಬಗ್ಗೆ ನೀವು ಮಾತನಾಡಬೇಡಿ, ನೀವು ಚರ್ಚೆ ಮಾಡಿ ಉತ್ತರ ಕೊಡಿ ಎಂದು ಕೇಳುತ್ತಿದ್ದೇನೆ. ಮೊದಲೇ ಏಕೆ ಚರ್ಚೆಗೆ ಇಟ್ಟುಕೊಳ್ಳಬೇಕಾಗಿತ್ತು? ಮಧ್ಯದಲ್ಲಿ ಯಾರು ಮಾತನಾಡುವುದಿಲ್ಲವೇ?

ಮೋಟಮ್ಮ**:-** ಮಾನ್ಯ ಸಭಾಪತಿಯವರೆ, ಆ ನಿಯಮ ಇರುವುದೇ ಹಾಗೆ, ಮಂತ್ರಿಗಳು ಇಲಾಖೆಯ ಬಗ್ಗೆ ಪೂರ್ಣವಾಗಿ ಉತ್ತರವನ್ನು ಹೇಳಿದ ಮೇಲೆ ನಮಗೆ ಏನು doubt ಬರುತ್ತದೆ ಅದನ್ನು ನೋಟ್ ಮಾಡಿಕೊಂಡು ಮಂತ್ರಿಗಳು ಉತ್ತರವನ್ನು ಮುಗಿಸಿದ ಮೇಲೆ ಕೇಳುವುದು.

ನೀವುಗಳು ಆ ಇಲಾಖೆಯಲ್ಲಿ ಏನೇನು

ಸಭಾಪತಿಯವರು:- ಮೊದಲು ಸಚಿವರು ಹೇಳಲಿ ಬಿಡಿ. ಆಗಬೇಕೆಂದು ಹೇಳಿದ್ದೀರಿ. ಅವರು ಅದಕ್ಕೆ ಉತ್ತರವನ್ನು ಹೇಳುತ್ತಾರೆ. ಅವರು ಕೊಡುವಂತಹ ಉತ್ತರ ನಿಮಗೆ ಒಪ್ಪಿಗೆ ಆಗಬಹುದು ಅಥವಾ ಆಗದೇ ಕೂಡ ಇರಬಹುದು. ಅದಕ್ಕೆ ನಾನೇನು ಮಾಡುವುದಕ್ಕೆ ಬರುವುದಿಲ್ಲ. ಆದರೆ ನೀವುಗಳು ಪ್ರಸ್ತಾಪ ಮಾಡಿದಂತಹ ಪ್ರಶ್ನೆಗಳಿಗೆ ಅವರು ಉತ್ತರವನ್ನು ಹೇಳುತ್ತಿದ್ದಾರೆ. ಶೌಚಾಲಯಗಳ ಬಗ್ಗೆ, ಕುಡಿಯುವ ನೀರಿನ ಬಗ್ಗೆ ಹೇಳಿದರು. ಈಗ ಇನ್ನೊಂದು ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ನಾನು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಸನ್ಮಾನ್ಯ ಶ್ರೀನಿವಾಸ ಪೂಜಾರಿಯವರು □□□□ □□□□□□□ ಅವರು ಇನ್ನು ಹತ್ತು ಹದಿನೈದು ಸಾವಿರ ಹೇಳಿದರು. ಅವರು ಏನು ಉಳಿದಿದ್ದಾರೆ,

ಶ್ರೀ ಹೆಚ್.ಕೆ.ಪಾಟೀಲ್:- ಮಾನ್ಯ ಸಭಾಪತಿಯವರೆ, ಮಾನ್ಯ ಬಿ.ರಾಮಕೃಷ್ಣರವರು ನಮ್ಮ ಇಲಾಖಾ ನೀತಿ ಮತ್ತು ಕಾರ್ಯಾಚಾರಣೆ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದಾರೆ. ಅದಕ್ಕೆ ನಾವು ಈಗ ನಾನು ಉತ್ತರವನ್ನು ಕೊಡುತ್ತಿದ್ದೇನೆ. ಹೇಳಿದಂತಹ ವಿಷಯಕ್ಕೆ ಸ್ಪಂದಿಸುವುದಕ್ಕೆ ಬಯಸುತ್ತೇನೆ. ನೌಕರರನ್ನು ಖಾಯಂಗೊಳಿಸುವುದು ಉಳಿದಿದೆ ಎಂದು genuine ಅಗಿ 7-8 ವರ್ಷಗಳ ಕಾಲ ಸೇವೆ ಮಾಡಿದ್ದಾರೆ. ಮಾಡುವುದಕ್ಕೆ ಬಿಡುವುದಿಲ್ಲ. ಅವರು ನೈಜವಾಗಿ ಸೇವೆ ಮಾಡಿದ್ದರೆ ಕೆಲವು ಪಂಚಾಯಿತಿಯಲ್ಲಿ ಠರಾವು ಮಾಡಿ ಸೇವೆಯನ್ನು ಮಾಡಿದ್ದರೆ, ಈಗ ಕೆಲವು ಪಂಚಾಯಿತಿಯವರು ತೊಟ್ಟಿ-ಸರ್ಟಿಫಿಕೇಟ್ ಅನ್ನು ಕೂಡ- ತೆಗೆದುಕೊಂಡು ಬರುವುದನ್ನು ಮಾಡುತ್ತಿದ್ದಾರೆ. ಅಂತಹ ಫ್ರಾಡ್‌ಗಳನ್ನು ಯಾವುದೇ ಕಾರಣಕ್ಕೂ ಸಹಿತ ಈ ಬ ಸಂದರ್ಭದಲ್ಲಿ ಅಸುವುದಕ್ಕೆ ಬಿಡುವುದಿಲ್ಲ. ಮತ್ತೆ ಅವರಿಗೆ ಏನೇನು ಸವಲತ್ತುಗಳನ್ನು ಕೊಡಬೇಕು ಅದು ಸಂದರ್ಭದಲ್ಲಿ ಅಸುವುದಕ್ಕೆ ಬಿಡುವುದಿಲ್ಲ. ಮತ್ತೆ ಅವರಿಗೆ ಏನೇನು ಸವಲತ್ತುಗಳನ್ನು ಕೊಡಬೇಕು ಅದು

ಮಾನ್ಯ ಶ್ರೀನಿವಾಸ ಪೂಜಾರಿಯವರಿಗೂ ಕೂಡ ಗೊತ್ತಿರುವಂಥದ್ದೆ. ಮೂಡಿದ್ದು ಎನ್ನುವುದಕ್ಕೆಗ ಖಾಯಂಗೊಳಿಸಲು ಅನುಮೋದನೆಯನ್ನು ಕೊಟ್ಟಿದ್ದೇವೆ. ಇದ್ಯಾವುದು ಹೋರಾಟ ನಡೆದಿತ್ತು, ಅವರುಗಳು ವಿಧಾನಸೌಧಕ್ಕೆ ಬಂದು ಮುತ್ತಿಗೆಯನ್ನು ಹಾಕಿದ್ದರು ಅಥವಾ ಸ್ವತಂತ್ರ ಹೋರಾಟಗಾರರ ಪಾರ್ಕ್‌ನಲ್ಲಿ ಬಂದು ಅಮರಣಾಂತರ ಉಪವಾಸವನ್ನು ಕುಳಿತುಕೊಂಡಿದ್ದರು ಅಥವಾ ಮಂತ್ರಿಗಳ ಮನೆಗೆ ಬಂದು ಮುತ್ತಿಗೆಯನ್ನು ಹಾಕಿದ್ದರು ಅಥವಾ ಮುಖ್ಯಮಂತ್ರಿಗಳ ಕಾರಿಗೆ ಅಡೆ-ತಡೆ ಮಾಡಿ ನಿಂತರು ಅಥವಾ ಕೋರ್ಟ್ ಹೋಗಿದ್ದರು ಎನ್ನುವ ಆ ಕಾರಣಕ್ಕೆ ಅವರನ್ನು ಖಾಯಂಗೊಳಿಸಿದ್ದೇವೆಂದಲ್ಲ.

ತಾವೆಲ್ಲರೂ ಒಪ್ಪುತ್ತೀರಿ ಎಂದು ನಾನು ಭಾವಿಸುತ್ತೇನೆ, ಈ ಯಾವುದೇ ಸನ್ನಿವೇಶ ಇಲ್ಲದಾಗ 15 ವರ್ಷಗಳಿಂದ ಏನು ಹೋರಾಟ ನಡೆದಿತ್ತು, ಹೋರಾಟವನ್ನು, ನಮಗಿರುವಂತಹ ಅವಶ್ಯಕತೆಯನ್ನು ಹಾಗೂ ಆ ನೌಕರರು ಪಡತಕ್ಕಂತಹ ಬವಣೆಯನ್ನು ಗಮನಿಸಿ ನಾವೀಗ ಸುಮಾರು 30 ಸಾವಿರ . .. There is no parallel incident where 30,000 employees are approved or regularized in any State. Ja ಮಾಡಿರುವಂತಹ ಒಂದು ಸಾಧನೆ. ಸನ್ಮಾನ್ಯ ಒಂದು ಕಾರ್ಯವೈಖರಿ, ನಾವು ಮುಖ್ಯಮಂತ್ರಿಯವರು ಇಂತಹ ಒಂದು ದೊಡ್ಡ ನಿರ್ಣಯನ್ನು ತೆಗೆದುಕೊಳ್ಳುವಾಗ ಅವರು ನೀಡುವಂತಹ ಗಮನ ಹಾಗೂ ನಮಗೆ ಕೊಟ್ಟಿರುವಂತಹ ಬೆಂಬಲ ಮತ್ತು ಪ್ರೋತ್ಸಾಹವನ್ನು ನಾನು ಇವತ್ತು ನೆನಪಿಸಿಕೊಳ್ಳುತ್ತೇನೆ. ಈ ಚರ್ಚೆಯಲ್ಲಿ ಒಂದು ಮಾತು ಬಂತು, ಪಂಚಾಯಿತಿ ಅಧ್ಯಕ್ಷರಿಗೆ ಅಂದರೆ, ಜಿಲ್ಲಾ ಪಂಚಾಯಿತ್ ಅಧ್ಯಕ್ಷರಿಗೆ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ ಈ ನೌಕರರ ಮೇಲೆ ನಿಯಂತ್ರಣ ಇರಬೇಕು, ಮುಖ್ಯ ಕಾರ್ಯ ನಿರ್ವಾಹಕರ ಮೇಲೆ ನಿಯಂತ್ರಣ ಇರಬೇಕು, ಪಿ.ಡಿ.ಓ.ಗಳ ಮೇಲೆ ನಿಯಂತ್ರಣ ಇರಬೇಕು. ಇಲ್ಲದಿದ್ದರೆ ಪಂಚಾಯಿತಿಗಳ ಅಧ್ಯಕ್ಷನನ್ನು ಬಹಳ ಸಣ್ಣ ಮನುಷ್ಯನನ್ನು ನೋಡಿದಂತೆ ನೋಡುತ್ತಾರೆ. ಸಿ.ಆರ್. ಬರೆಯುವಂತಹ ಸಂದರ್ಭದಲ್ಲಿ, ಪಿ.ಡಿ.ಓ.ಗಳ ಸಿ.ಆರ್.ಗಳನ್ನು ರಿವ್ಯೂ ಮಾಡುವುದಕ್ಕೆ ಇವತ್ತು ನಾವು ಗ್ರಾಮ ಪಂಚಾಯಿತಿ ಅಧ್ಯಕ್ಷನಿಗೆ ಅಧಿಕಾರ ಕೊಟ್ಟಿದ್ದೇವೆ. ಇ.ಓ.ಗಳ ಸಿ.ಆರ್. ರಿವ್ಯೂ ಮಾಡುವುದಕ್ಕೆ ನಾವು ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ ಅಧಿಕಾರ ಕೊಟ್ಟಿದ್ದೇವೆ. ಸಿ.ಇ.ಓ. ಅವರ ಸಿ.ಆರ್. ರಿವ್ಯೂ ಮಾಡುವುದಕ್ಕೆ ಇವತ್ತು ನಮ್ಮ ಇದೇ ಮೊದಲ ಬಾರಿಗೆ ಇದನ್ನು ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಅಧಿಕಾರ ಕೊಟ್ಟಿದ್ದೇವೆ. ಮಾಡಲಾಗಿದೆ. It was there much earlier. ನಮ್ಮ ಹೊಸ ಕಾನೂನು ಬಂದ ಮೇಲೆ ಇರಲಿಲ್ಲ, ರಾಷ್ಟ್ರ ಮಟ್ಟದಲ್ಲಿಯೂ ಇದು ಇರಲಿಲ್ಲ. ಅಂದರೆ 1993ರ ನಂತರ ಅದು ಇರಲಿಲ್ಲ. ಬೇರೆ ಬೇರೆ ಪಕ್ಷಗಳ ಸರ್ಕಾರ ನಮ್ಮ ರಾಜ್ಯದಲ್ಲಿ ಆಡಳಿತ ನಡೆಸಿ ಹೋದವು, ಆದರೆ ನಾವು ಈ ಅವಕಾಶವನ್ನು, ಈ ಗೌರವವನ್ನು, ಈ ಒಂದು ಅಧಿಕಾರವನ್ನು ಅವರಿಗಾಗಿ ಮಾಡಿಕೊಟ್ಟೆವು. ಮಾಡಬೇಕಾಗಿತ್ತು, ಅದನ್ನು ಮಾಡಿದ್ದೇವೆ ಎನ್ನುವಂತಹ ವಿಚಾರವನ್ನು ಬಹಳ ಸಂತೋಷದಿಂದ ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ನನಗೆ ಬಹಳ ಜನ ನಾವು ಪಂಚಾಯಿತಿ ಕಛೇರಿಯ ಮುಂದೆ ಧ್ವಜಾರೋಹಣ ಮಾಡಬೇಕು ಎಂದು ನಿರ್ಣಯ ಮಾಡಿ, ಅದನ್ನು ತಿಳಿಸಿದಂತಹ ಸಂದರ್ಭದಲ್ಲಿ ಆ ಬಗ್ಗೆ ಕೆಲವು ಕಡೆಗಳಿಂದ ಎಷ್ಟು ಟೀಕೆಗಳು ಬಂದವೆಂದರೆ, 'ಯಾರು ಬರುತ್ತಾ, ಪಂಚಾಯಿತಿಯಲ್ಲಿ ಯಾರೂ flag ಹಾರಿಸುವಂಗಿಲ್ಲ, ಅದು ರಾತ್ರಿ ಅಲ್ಲಿಯೇ ಉಳಿದುಬಿಡುತ್ತದೆ, ನೋಡ್ರಿ-ಬಿಡಿ' ಎಂದು ರೀತಿಯಾದಂತಹ ಟೀಕೆಗಳು ಬಂದವು. ಆದರೆ ನಾವೆಲ್ಲರೂ ಗಮನಿಸುತ್ತಿದ್ದೇವೆ, ಈಗ ಎಷ್ಟು ಕಡೆ ಟೀಕೆಗಳು ಉಳಿದಿವೆ? ಆ ಶಿಸ್ತು, ಆ ರಾಷ್ಟ್ರಪ್ರೇಮ ಪ್ರತಿ ಪಂಚಾಯಿತಿಯಲ್ಲಿ ಹೇಗೆ ವ್ಯಕ್ತವಾಗುತ್ತಿದೆ ನಾವು ಪಂಚಾಯತಿಗಳನ್ನು ಪಂಚಾಯಿತಿಯವರು ಇವತ್ತು ಉತ್ತರ ಕೊಟ್ಟಿದ್ದಾರೆ ಎಂದು ನಾನಂತೂ ಭಾವಿಸುತ್ತೇನೆ. ಅದನ್ನು ಲಘುವಾಗಿ ಕಾಣುವವರಿಗೆ ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಶುದ್ಧ ಕುಡಿಯುವ ನೀರಿನ ವಿಚಾರವನ್ನು ತಿಳಿಸುವಂತಹ ಸಂದರ್ಭದಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ವಿಚಾರವನ್ನು ಸಹ ತಿಳಿಸಿದೆ. ಸನ್ಮಾನ್ಯ ಈಶ್ವರಪ್ಪನವರಿಗೆ ಹೇಳುತ್ತೇನೆ, ಏಕೆಂದರೆ I want his strength to fight at the national level. ನಮ್ಮ ರಾಜ್ಯದಲ್ಲಿ ಮೊದಲಿಗೆ ಪ್ರತಿ ವ್ಯಕ್ತಿಗೆ 40 ಲೀಟರ್ ಅಂದರೆ, 40 LPCD ನೀರನ್ನು ಗ್ರಾಮಸ್ಥರಿಗೆ ಕೊಡುತ್ತಿದ್ದೆವು, ಅದನ್ನು 55 LPCD ಗೆ ಹೆಚ್ಚಿಸಿದೆವು. ನಗರ ಪ್ರದೇಶದವರಿಗೆ 100 ಲೀಟರ್, ಬೆಂಗಳೂರಿನಲ್ಲಿ 135 ಲೀಟರ್, ದೆಹಲಿಯಲ್ಲಿ 185 ಲೀಟರ್ ಈ ರೀತಿಯೆಲ್ಲಾ ಇದೆ. ಸುಮಾರು ನಾಲ್ಕೈದು ಕ್ಯಾಬಿನೆಟ್ ಸಭೆಯೊಳಗೆ ಸನ್ಮಾನ್ಯ ಎಸ್.ಆರ್.ಪಾಟೀಲ್‌ರವರು ಮತ್ತು ನಾವು ಚರ್ಚೆ ಮಾಡುತ್ತಿದ್ದೆವು. ಇವತ್ತು ಹೆಚ್ಚಿನ ಪ್ರಮಾಣದ ನೀರು ಬೇಕಾಗಿತ್ತೆಂದರೆ, ಪಟ್ಟಣದವರಿಗಿಂತ ಗ್ರಾಮೀಣ ಪ್ರದೇಶದವರಿಗೆ ಹೆಚ್ಚಿನ ಪ್ರಮಾಣದ ನೀರಿನ ಗ್ರಾಮೀಣ ಪ್ರದೇಶದ ಪ್ರತಿ ಕುಟುಂಬದ ಅವಶ್ಯಕತೆ ಇರುತ್ತದೆ. ಅದಕ್ಕೆ ಕಾರಣ ಸಹ ಇದೆ. ಸರಾಸರಿ ನೀರಿನ

ಅಗತ್ಯತೆಯ ಬಗ್ಗೆ ಮಾಹಿತಿಯನ್ನು ತೆಗೆದುನೋಡಿದರೆ ಅ ಕುಟುಂಬದ ಜೊತೆಗೆ ಎಮ್ಮೆ, ಕೋಣ, ಹಸು, ಎತ್ತು, ನಾಯಿ, ಕುರಿ, ಮೇಕೆ, ಬೆಕ್ಕು ಈ ರೀತಿ ಒಂದಿಲ್ಲೊಂದು ಪ್ರಾಣಿ ರೂಪಾಯಿಗಳಷ್ಟು ಹಣ ಅಕೌಂಟ್ಸ್‌ನಲ್ಲಿಯೇ ಇಲ್ಲ ಎನ್ನುವಷ್ಟರ ಮಟ್ಟಿಗೆ ನಮಗೆ ಈಗ ಒಂದು ಹಂತಕ್ಕೆ ಬರುತ್ತಿದೆ. ಆ ಸಮಿತಿ ಅದರ ಸಂಪೂರ್ಣ ವಿವರಗಳನ್ನು ತನ್ನ ಅಂತಿಮ ವರದಿಯಲ್ಲಿ ನೀಡಲಿದೆ. ನಾನು ಈ ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸುವುದಕ್ಕೆ ಕಾರಣವೆಂದರೆ, ನಮ್ಮ ಇಲಾಖೆಯಲ್ಲಿ ಆರ್ಥಿಕ ಶಿಸ್ತು ಏನಿತ್ತು, ಆ ಆರ್ಥಿಕ ಶಿಸ್ತಿನ ಕೊರತೆಯಾಗಿ ಹೋಗಿತ್ತು. ಆ ಆರ್ಥಿಕ ಶಿಸ್ತನ್ನು ಮತ್ತೆ ತರುವಂತಹ ಒಂದು ದೊಡ್ಡ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. NREG ಯಲ್ಲಿ ಎರಡು ವರ್ಷದಲ್ಲಿ ನಾವು ಸಂಪೂರ್ಣ ಬದಲಾವಣೆಯನ್ನು ಮಾಡಿಬಿಟ್ಟೆವು. ಗ್ರಾಮ ಪಂಚಾಯಿತಿಗಳೆಂದರೆ ತಮಗೆಲ್ಲಾ ಗೊತ್ತಿರುವಂಥದ್ದೇ ಆಗಿದೆ. ಎಲ್ಲರೂ ಅವರನ್ನು ಒಂದು ರೀತಿ ಕಳ್ಳರನ್ನು ನೋಡುವಂತೆ ನೋಡುತ್ತಿದ್ದೆವು. 'ಹೇ, ಅದರಲ್ಲಿ ಎಷ್ಟು ಲೂಟಿಯಾಗಿದೆಯೋ, ಎಷ್ಟು ಬಿಟ್ಟಿದೆಯೋ' ಎನ್ನುವಂತಹ ಪರಿಸ್ಥಿತಿ ಇತ್ತು. ಏಕೆಂದರೆ ಸಿ.ಎ.ಜಿ. ವರದಿಯಲ್ಲಿಯೇ 624 ಕೋಟಿ ರೂಪಾಯಿಗಳಷ್ಟು ಹಣದ ಲೆಕ್ಕಕ್ಕೆ ಸಂಬಂಧಿಸಿದಂತೆ ಏನೂ ಕೆಲಸವಿಲ್ಲ, ಉದ್ಯೋಗವನ್ನೂ ಕೊಟ್ಟಿಲ್ಲ, ಆ ಹಣದಲ್ಲಿ ಅವ್ಯವಹಾರವಾಗಿದೆ ಎಂದು ವರದಿಯನ್ನೇ ಕೊಟ್ಟುಬಿಟ್ಟರು. ರೂಪಾಯಿಗಳಷ್ಟು ಹಣ ಅಕೌಂಟ್ಸ್‌ನಲ್ಲಿಯೇ ಇಲ್ಲ ಎನ್ನುವಷ್ಟರ ಮಟ್ಟಿಗೆ ನಮಗೆ ಈಗ ಒಂದು ಹಂತಕ್ಕೆ ಬರುತ್ತಿದೆ. ಆ ಸಮಿತಿ ಅದರ ಸಂಪೂರ್ಣ ವಿವರಗಳನ್ನು ತನ್ನ ಅಂತಿಮ ವರದಿಯಲ್ಲಿ ನೀಡಲಿದೆ. ನಾನು ಈ ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸುವುದಕ್ಕೆ ಕಾರಣವೆಂದರೆ, ನಮ್ಮ ಇಲಾಖೆಯಲ್ಲಿ ಆರ್ಥಿಕ ಶಿಸ್ತು ಏನಿತ್ತು, ಆ ಆರ್ಥಿಕ ಶಿಸ್ತಿನ ಕೊರತೆಯಾಗಿ ಹೋಗಿತ್ತು. ಆ ಆರ್ಥಿಕ ಶಿಸ್ತನ್ನು ಮತ್ತೆ ತರುವಂತಹ ಒಂದು ದೊಡ್ಡ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. NREG ಯಲ್ಲಿ ಎರಡು ವರ್ಷದಲ್ಲಿ ನಾವು ಸಂಪೂರ್ಣ ಬದಲಾವಣೆಯನ್ನು ಮಾಡಿಬಿಟ್ಟೆವು. ಗ್ರಾಮ ಪಂಚಾಯಿತಿಗಳೆಂದರೆ ತಮಗೆಲ್ಲಾ ಗೊತ್ತಿರುವಂಥದ್ದೇ ಆಗಿದೆ. ಎಲ್ಲರೂ ಅವರನ್ನು ಒಂದು ರೀತಿ ಕಳ್ಳರನ್ನು ನೋಡುವಂತೆ ನೋಡುತ್ತಿದ್ದೆವು. 'ಹೇ, ಅದರಲ್ಲಿ ಎಷ್ಟು ಲೂಟಿಯಾಗಿದೆಯೋ, ಎಷ್ಟು ಬಿಟ್ಟಿದೆಯೋ' ಎನ್ನುವಂತಹ ಪರಿಸ್ಥಿತಿ ಇತ್ತು. ಏಕೆಂದರೆ ಸಿ.ಎ.ಜಿ. ವರದಿಯಲ್ಲಿಯೇ 624 ಕೋಟಿ ರೂಪಾಯಿಗಳಷ್ಟು ಹಣದ ಲೆಕ್ಕಕ್ಕೆ ಸಂಬಂಧಿಸಿದಂತೆ ಏನೂ ಕೆಲಸವಿಲ್ಲ, ಉದ್ಯೋಗವನ್ನೂ ಕೊಟ್ಟಿಲ್ಲ, ಆ ಹಣದಲ್ಲಿ ಅವ್ಯವಹಾರವಾಗಿದೆ ಎಂದು ವರದಿಯನ್ನೇ ಕೊಟ್ಟುಬಿಟ್ಟರು. I must appreciate the efforts of the ರೀತಿಯಾದಂತಹ ಪ್ರಯತ್ನಗಳನ್ನು ಮಾಡಿದರು. Hon'ble Rural Development Minister, Government of India. There was a shortage of Rs.1000 crore. ಈ ರೀತಿ ಯಾವ ಕಾರಣಕ್ಕೂ ಸಹ ಆಗಬಾರದು. ಆದರೆ ಆಂಧ್ರ ಪ್ರದೇಶಕ್ಕೆ ಈ ರೀತಿ ಆಗಲಿಲ್ಲ. Andra Pradesh got the entire amount of Rs.4,000 crore at a time. We got Rs.1,900 crore in almost six or seven installments. ಈ ರೀತಿ ಆಗಬಾರದು. ನಾನು ಈ ವೇದಿಕೆ The last installment was just denied. ಮುಖಾಂತರ ಕೇಂದ್ರ ಸರ್ಕಾರಕ್ಕೆ ಆಗ್ರಹ ಮಾಡುವುದೇನೆಂದರೆ, ಕಳೆದ ಸಲ ನಮ್ಮ NREGA ಕಾರ್ಯಕ್ರಮದಲ್ಲಿ ನಮಗೆ ಕೊಡಬೇಕಾದಂತಹ ಹಣವನ್ನು ಏನು ಕಡಿತ ಮಾಡಿದ್ದೀರಿ, ಅದನ್ನು ಹೆಚ್ಚುವರಿಯಾಗಿ ಮಾಡಿ ಈ ಸಲ ಕೊಡಬೇಕೆಂದು ವಿನಂತಿಯನ್ನು ಮಾಡುತ್ತೇನೆ. ಇನ್ನೊಂದು ವಿಷಯವೇನೆಂದರೆ, ನಮ್ಮ ಇಲಾಖೆ ಮಾಡಿರುವಂಥದ್ದು ಕೇಳಿದರೆ ಒಂದು ರೀತಿಯಲ್ಲಿ ನಿಮಗೂ ಸಹ ಸಂತೋಷವಾಗಬಹುದು. ಮಾನ್ಯ ಹೊರಟ್ಟಿಯವರ ಟಿಪ್ಪಣಿಗಳನ್ನು ನಾನು ನೋಡುತ್ತಿದ್ದೆ. Ombudsman, JADE ADAJ, Ombudsman Appellate Authority ಮಾಡುವಂಥದ್ದು, NREGA ಕಾನೂನು ಬಂದು ಇಷ್ಟು ವರ್ಷಗಳಾಗಿದ್ದರೂ ಸಹ Ombudsman Appellate Authorityಯನ್ನೇ ಮಾಡಿರಲಿಲ್ಲ. ಆದರೆ ನಾವು ಕಳೆದ ಒಂದು ವರ್ಷದಿಂದ ಮಾನ್ಯ ಕೋ.ಶ್ರೀನಿವಾಸಯ್ಯನವರ ನೇತೃತ್ವದಲ್ಲಿ ಅದು ಈಗಾಗಲೇ ಕೆಲಸ ಮಾಡುತ್ತಿದೆ. ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿದೆ. ನಾಲ್ಕು ಜಿಲ್ಲೆಗಳನ್ನು ಹೊರತುಪಡಿಸಿ Ombudsman Appellate Authority

Social Audit Directorate, which is one of the very important component of NREGA implementation, ಅದನ್ನು ನಾವು ಈಗಾಗಲೇ Directorate ಸೃಷ್ಟಿ ಮಾಡಿ, ಅದು ಕೆಲಸ ಮಾಡುತ್ತಿದೆ. ಪಂಚಾಯತ್ ಪರಿಷತ್ತು ಕಾನೂನಿನ ಪ್ರಕಾರ ಏನು ಮಾಡಬೇಕು, ಅದನ್ನು ಸನ್ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾದ ಮೇಲೆ ನಿಮಂತ್ರಿಸಲಾಗಿದೆ. ರೀತಿಲಕುಲ್ಲ

ಬಸವರಾಜ ಹೊರಟ್ಟಿ:- ಮಾನ್ಯ ಸಚಿವರೇ, ಈ ಸಂದರ್ಭದಲ್ಲಿ Ombudsman ಪ್ರಗತಿಯ ಬಗ್ಗೆ ಏನಾದರು ಹೇಳಬಯಸುತ್ತೀರಾ?

- ಶ್ರೀ ಹೆಚ್.ಕೆ.ಪಾಟೀಲ್ ಮುಂದು ನಮಗೂ ಒಂದು ರೀತಿಯ ಹುಮ್ಮಸ್ಸು ಆಸಕ್ತಿ ಇರುತ್ತದೆ. That means you are all so keenly interested. ನಮ್ಮ ಹೊಲ ನಮ್ಮ ರಸ್ತೆ ಕಾರ್ಯಕ್ರಮವನ್ನು ಮೊದಲಿಗೆ ಇಲ್ಲಿ ತೆಗೆದುಕೊಂಡು ಬಂದಾಗ ಇಲ್ಲಿ ಪ್ರಸ್ತಾಪ ಮಾಡಿದಾಗ ನಮ್ಮ 15 ಅಂಶಗಳ ಕಾರ್ಯಕ್ರಮದಲ್ಲಿ ನಾವು ಅದನ್ನು ತಂದಾಗ ಬಹಳಷ್ಟು ಜನರು they did not believe that such a thing will happen. ಅಂದರೆ ನಮ್ಮ ಹೊಲ ನಮ್ಮ ರಸ್ತೆ ಎನ್ನುವುದನ್ನು ಹೇಗೆ ಮಾಡಲು ಸಾಧ್ಯ? ಮಾಡಲು ಆಗುತ್ತಿಲ್ಲ, ಇರುವ ರಸ್ತೆಗಳನ್ನು ಗ್ರಾಮೀಣಾಭಿದ್ದಿ ಇಲಾಖೆಗೆ ನಿರ್ವಹಣೆ ನಿಜವಾಗಿಯೂ ಈ ರಸ್ತೆಗಳ ನಿರ್ವಹಣೆ ಮಾಡುವುದು ಬಹಳ ಕಠಿಣವಾಗಿದೆ. 1 ಲಕ್ಷ 55 ಸಾವಿರ ಕಿ.ಮೀ ಉದ್ದದ ರಸ್ತೆ ನಮ್ಮ ಗ್ರಾಮೀಣಾಭಿವೃದ್ಧಿ ಇಲಾಖೆಯ ಸುಪರ್ದಿಯಲ್ಲಿದೆ. ಕಡಿಮೆ ಹಣ. But, the grant we get is very small. ಸನ್ಮಾನ್ಯ ಈಶ್ವರ ಖಂಡ್ರೆಯವರ ನಾಯಕತ್ವದಲ್ಲಿ ನಾನು ಒಂದು ಸಮಿತಿಯನ್ನು ರಚನೆ ಮಾಡಿದ್ದೆನು. ರಸ್ತೆಗಳನ್ನು ನಾವು ಅಪ್‌ಗ್ರೇಡ್ ಮಾಡಬೇಕಾದರೆ ರಿಪೇರಿ ಮಾಡಬೇಕಾದರೆ ಹೇಗೆ ತಂತ್ರಜ್ಞಾನದ ಮತ್ತು ಸಂಪನ್ಮೂಲದ ಉಪಯೋಗವನ್ನು ಮಾಡಬೇಕೆನ್ನುವ ಬಗ್ಗೆ ಬೇರೆ ಬೇರೆ ಕಡೆ ಹೋಗಿ ಅಧ್ಯಯನ ನಡೆಸಿ ನಮಗೆ ವರದಿ ನೀಡಬೇಕೆಂದು ಆ ಸಮಿತಿಗೆ ಸೂಚಿಸಿದ್ದೆನು. ಆ ಸಮಿತಿಯವರು ಬಹಳಷ್ಟು ದಿವಸ ಮಧ್ಯಪ್ರದೇಶ, ಗುಜರಾತ್, ಮಹಾರಾಷ್ಟ್ರ, ಆಂಧ್ರಪ್ರದೇಶ, ಮತ್ತು ತಮಿಳುನಾಡು ಎಲ್ಲಾ ಕಡೆಗಳಿಗೂ ಹೋಗಿ ಅಲ್ಲಿ ಅಧ್ಯಯನ ನಡೆಸಿದರು. ಆ ವರದಿಯ ಪ್ರಕಾರ ಹತ್ತು ವರ್ಷಗಳಲ್ಲಿ ಈಗ ನಮ್ಮಲ್ಲಿರುವ ಎಲ್ಲಾ ಮಣ್ಣಿನ ರಸ್ತೆ ಮತ್ತು ಕಡಿ ರಸ್ತೆಗಳನ್ನು ಅಪ್ ಗ್ರೇಡ್ ಮಾಡಿ ಇದನ್ನೆಲ್ಲ all season road ಮಾಡಬೇಕೆಂದರೆ 70,000 ಕೋಟಿ ರೂಪಾಯಿಗಳು ನಮಗೆ 23. We require Rs.70,000 crore in ten years. How much are we providing? Hardly we are providing Rs.150 crores or 200 crores or 300 crores. ನಾವು ಇದಕ್ಕೆ ಏನು ಮಾಡುತ್ತೇವೆ ಎಂದರೆ pressure ತಡೆದುಕೊಳ್ಳುವುದಕ್ಕೆ ನಮಗೆ ಆಗುವುದಿಲ್ಲ. ನಾವು ಶಾಸಕರ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್‌ಗಳನ್ನು ಮಾಡಿ, ನೀವು ಎಲ್ಲೆಲ್ಲಿ ರಿಪೇರಿ ಮಾಡಿಸಿಕೊಳ್ಳಬೇಕೋ ಅದನ್ನು ಮಾಡಿಸಿಕೊಳ್ಳಿ ಎಂದು ಕೈ ಬಿಟ್ಟುಬಿಡುತ್ತೇವೆ. that is not the solution. That is only a working arrangement in crisis. ಇದು ಕೇಂದ್ರಸರ್ಕಾರಕ್ಕೂ ಕೂಡ ದೊಡ್ಡ ಸಮಸ್ಯೆಯೆ, ಇಂತಹ ಸಮಸ್ಯೆಯ ಹಿನ್ನಲೆಯಲ್ಲಿ ವಾಜಪೇಯಿಯವರು ಇದ್ದಂತಹ ಸಂದರ್ಭದಲ್ಲಿ ಹೇಗೆ Golden Quadrilateral Corridor Roads, which came in a very big way, ಅದೇ ರೀತಿಯಲ್ಲಿ ಪ್ರತಿಯೊಂದು ರಾಜ್ಯಕ್ಕೂ ದೊಡ್ಡ ಪ್ರಮಾಣದ ಹಣ forh ಇದಕ್ಕಾಗಿ ನೋಡಲಾಗುವ ಅನುದಾನವನ್ನು ಕಳೆದ ಸಲ ಅನುದಾನ ಕಡಿತ ಏಕೆಂದರೆ ಪಟ್ಟಣದವರಿಗೆ ಬೇಕು. ಮಾಡಲಾಗಿತ್ತು. ಅದಕ್ಕೆ ಇನ್ನೂ ಹೆಚ್ಚಿನ ಹಣ ಬೇಕಾಗುತ್ತದೆ. ನಾವು ತಲಾ 2400 ಮತ್ತು urbanites ಹೆಚ್ಚಿನ ಫೋಕಸ್ ಮಾಡಬೇಕು. ರೂಪಾಯಿ ಪಟ್ಟಣದವರಿಗೆ ರಸ್ತೆಗಳ ಸಲುವಾಗಿ ನೀಡುತ್ತೇವೆ. Whereas, for rural roads, we are not giving per capita of Rs.400. This is the difference between the rural area and urban area. Urban area should also develop, but at the same time, we are not in a position to neglect rural people. ಹಿಂದೆ ಹಳ್ಳಿಯವರು ಪಟ್ಟಣಗಳಿಗೆ ಹೋಗುವ ಪ್ರಶ್ನೆ ಬರುತ್ತಿರಲಿಲ್ಲ. ಹೋಗುವ ಪ್ರಶ್ನೆ ಬರುತ್ತಿರಲಿಲ್ಲ. ಒಂದು ಊರಿನಿಂದ ಒಂದು ಊರಿಗೆ ಒಂದು ಊರಿನಿಂದ ಮತ್ತೊಂದು ಊರಿಗೆ ಇವತ್ತು ನಮ್ಮಲ್ಲಿ ಸಾಕಷ್ಟು ಬದಲಾವಣೆ ಆಗಿದೆ. ಬೆಳಿಗ್ಗೆ ಸಂಜೆ, ಸೈಕಲ್ ಮೋಟಾರ್, ಕಾರು, ಹಾಗಾಗಿ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿ ಆ ದಿಶೆಯಲ್ಲಿ ನಾವು ಕೆಲಸವನ್ನು ಬಸ್ಸುಗಳಲ್ಲಿ ಓಡಾಡುತ್ತಲೇ ಇರುತ್ತಾರೆ. ಮಾಡಲು ಹೆಚ್ಚಿನ ಹಣದ ಅವಶ್ಯಕತೆ ಇದೆ. ಮಾಡಬೇಕಾಗುತ್ತದೆ. ಅದರಿಂದಲೇ ಇವತ್ತು ನಮ್ಮ ಹೊಲ ನಮ್ಮ ರಸ್ತೆ ಎನ್ನುವ ಕಾರ್ಯಕ್ರಮವನ್ನು ಪ್ರಾರಂಭದಲ್ಲಿ ಯಾರೂ ಅಷ್ಟು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಮೊನ್ನೆ ನಮ್ಮ ಹುಲಿನಾಯಕರ್‌ರವರು ಮಾತನಾಡಿದ ಸಂದರ್ಭದಲ್ಲಿ ಅವರು ಹೆಚ್ಚಿನ ಸಮಯ ನಮ್ಮ ಹೊಲ ನಮ್ಮ ರಸ್ತೆಯ ಬಗ್ಗೆಯೇ ಮಾತನಾಡಿದರು. ಅದರಲ್ಲಿ ಹೊರಟ್ಟಿಯವರು ಸಹ ಪಾತ್ರಧಾರಿಗಳಾಗಿದ್ದಾರೆ. ನಮ್ಮ ನವಲಗುಂದ, ಧಾರವಾಡ, ನರಗುಂದ, ಗದಗ, ರೋಣ, ಶಿರಟ್ಟಿ ಈ ಭಾಗಗಳಲ್ಲಿ ನಮ್ಮ ಹೊಲ ನಮ್ಮ ರಸ್ತೆ ಕಾರ್ಯಕ್ರಮವನ್ನು ಇವತ್ತು ಗ್ರಾಮೀಣ ಜನರು ಹೊಲದ ಮಾಲೀಕರು ಅದನ್ನು ನೋಡಿದರೆ ಆಶ್ಚರ್ಯ ಆಗುತ್ತದೆ, ಜಾಗ ಬಿಟ್ಟಿದ್ದಾರೆ. ಒಂದೆ ಮಾಲೀಕರು ಯಾರು ಅರ್ಧ ಅಡಿ ಜಾಗ ಬಿಡುತ್ತಿರಲಿಲ್ಲ, ತಮ್ಮ ಬದುವಿಗೆ ಬೇರೆಯವರ ಜೆಸಿಬಿ ಹತ್ತಿದ್ದರೆ ಜಗಳ ಮಾಡಿ, ಎಸ್‌ಪಿ

ಹತ್ತಿರ ದೂರು  ತೆಗೆದುಕೊಂಡು ಹೋಗುತ್ತಿದ್ದನು. ಪೋಲಿಸ್ ಠಾಣೆಗೆ, ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಶಾಸಕರ ಬಳಿ ಹೋಗುತ್ತಿದ್ದನು. ಆದರೆ ಇವತ್ತು ಜಮೀನು ಮಾಲೀಕರೆ ಮುಂದೆ ನಿಂತು ರಸ್ತೆ ಎಷ್ಟು ಬೇಕು ಅಷ್ಟು ಜಾಗವನ್ನು ಬಿಟ್ಟು ಸಲ್ಲಿ ಸುಮಾರು 2000 ಕಿ.ಮೀ ಉದ್ದದ ರಸ್ತೆ ಆಗಿದೆ. ಅಲ್ಲಿ ರಸ್ತೆ ಮಾತ್ರ ಆಗಿರದೇ ಮಧುಸೂದನ್‌ರವರಿಗೆ ಆಶ್ಚರ್ಯ ಆಗಬಹುದು, because this type of work we have not seen in the Government working.  1 ಕಿ.ಮೀ ರಸ್ತೆಯನ್ನು formation ಮಾಡುವುದಕ್ಕೆ 1 ಲಕ್ಷ ರೂಪಾಯಿಗಳನ್ನು, 1 ಲಕ್ಷದ 10 ಸಾವಿರ, 1 ಲಕ್ಷ 15 ಸಾವಿರ ರೂಪಾಯಿಗಳ ವೆಚ್ಚವಾಗಿದೆ, whereas, as per our Schedule of Rates ಪ್ರಕಾರ ನಾವು ಹೋಗಿ, ಟೆಂಡರ್ ಕರೆದಾಗ 19 ರಿಂದ 30 ಲಕ್ಷದವರೆಗೆ road formation ಗಾಗಿ ಹಣ provide ಮಾಡಲಾಗಿದೆ.

ಶ್ರೀ ಗೋ.ಮಧುಸೂದನ್:- ಲೋಕೋಪಯೋಗಿ ಇಲಾಖೆಯ ರಸ್ತೆಗಳನ್ನು ಇವರಿಗೆ ವಹಿಸಿಬಿಡಿ.

ಶ್ರೀ ಹೆಚ್.ಕೆ.ಪಾಟೀಲ್:- ಅವರ ಉದ್ದೇಶ ಏನೆಂಬುದು ನನಗೆ ಗೊತ್ತಿಲ್ಲ. ಈ ನಮ್ಮ ಹೊಲ ನಮ್ಮ ರಸ್ತೆ ಯನ್ನು ಈ ಭಾಗದಲ್ಲಿಯೂ ಮಾಡಬೇಕಾದ ಅವಶ್ಯಕತೆ ಇದೆ.

**ಶ್ರೀ ಮಹಾಂತೇಶ ಎಂ, ಕವಟಗಿಮಠ(ಸ್ಥಳಿಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು

ಗ್ರಾಮೀಣ ರಸ್ತೆಗಳ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಈಗ ಈಶ್ವರ ಖಂಡ್ರೆಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯ ಮಾಡಿ, ವರದಿಯ ಪ್ರಕಾರ ಇಡೀ ರಾಜ್ಯಕ್ಕೆ ಇಂತಹ ರಸ್ತೆಗಳನ್ನು ನಿರ್ಮಿಸಲು 70,000 ರೂಪಾಯಿಗಳು ಬೇಕಾಗಿದ್ದು ಅದಕ್ಕಾಗಿ ಕೇಂದ್ರಸರ್ಕಾರಕ್ಕೆ ಮನವಿಯನ್ನು ನೀಡಬೇಕೆಂದು ಏನು ಮಾತನಾಡಿದ್ದಾರೆ ಆ ಹಿನ್ನಲೆಯಲ್ಲಿ ಕೇಂದ್ರಸರ್ಕಾರ ಮುಂದಿನ 10 ವರ್ಷಗಳಿಗೆ ಬೇಕಾದಂತಹ ಒಂದು action plan ಮಾಡಿ ಕೇಂದ್ರಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ಕಳುಹಿಸಬೇಕೆಂದು ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಸಭಾಪತಿಗಳೇ, it is worth to go and see. ತಾವು ಹೊಸ ಹೊಸ ವಿಚಾರ ಗಳನ್ನು ಮಾಡುತ್ತಿರುತ್ತೀರಿ. ಗಾಂಧೀಜಿಯನ್ನು ವಿಧಾನಸೌಧ ಮತ್ತು ವಿಕಾಸಸೌಧದ ಮಧ್ಯೆದಲ್ಲಿ ಕೂರಿಸುವುದರ ಮೂಲಕ ಗ್ರಾಮೀಣ ಪ್ರದೇಶದ ಅಭಿವೃದ್ಧಿಯ ಬಗ್ಗೆ ತಮ್ಮ ಬದ್ಧತೆ ಏನು ಎನ್ನುವುದನ್ನು ತೋರಿಸಿದಿರಿ. ನಮ್ಮ ಹೊಲ ನಮ್ಮ ರಸ್ತೆ ಕಾರ್ಯಕ್ರಮಗಳ ಅಧ್ಯಯನಕ್ಕಾಗಿ ನಮ್ಮ ಸದನದ ಸಮಿತಿಗಳನ್ನು ಕಳುಹಿಸಿದರೂ ಸಹ really it will be an educative tour for us. ಆ ವಿಚಾರದಲ್ಲಿ ತಾವು ವಿಚಾರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಎಸ್.ನ್ಯಾಮಗೌಡ:- ಇದಕ್ಕೆ ಶ್ರಮದಾನ ಮಾಡಿದ್ದಾರೆಯೇ?

ಶ್ರೀ ಹೆಚ್.ಕೆ.ಪಾಟೀಲ್:- ಇಲ್ಲಿ ಶ್ರಮದಾನ ಕಡಿಮೆ, ಎಲ್ಲವನ್ನು ಜೆಸಿಬಿಯಿಂದ ಮಾಡಿಸಿದ್ದಾರೆ. It is not done under the MGNREG. ಅವರು ನಮ್ಮ ಗ್ರಾಮೀಣಾಭಿವೃದ್ಧಿ ಇಲಾಖೆಯ ಕಡೆಯಿಂದ ಕೆಲವು ಪ್ರಮಾಣದ ಹಣವನ್ನು ಪಡೆದುಕೊಂಡಿದ್ದಾರೆ. ತಮ್ಮ ಶಾಸಕರ ನಿಧಿಯಿಂದ ಹಣ ಪಡೆದುಕೊಂಡಿದ್ದಾರೆ. ಬದ್ಧರಿಂದ ಪಂಚಾಯಿತಿಗಳಿಂದ ಪಂಚಾಯಿತಿ ಫಂಡ್‌ಗಳನ್ನು ಪಡೆದುಕೊಂಡಿದ್ದಾರೆ. ಕೆಲವು ಕಡೆ ಕೆಲವರು ಟ್ರಾಕ್ಟರ್‌ಗಳನ್ನು ಉಚಿತವಾಗಿ ನೀಡಿದ್ದಾರೆ. ಕೆಲವು ಕಡೆ ಜೆಸಿಬಿ ಮಾಲೀಕರು ಡಿಸೇಲ್ ನೀವೇ ಹಾಕಿಸಿಕೊಂಡು ಕೆಲಸ ಮಾಡಿಕೊಳ್ಳಿ ಎಂದು ಹೇಳಿದ್ದಾರೆ. ಆದರೆ ಯಾರು ಬಂದು ನಿಂತು ಗುದ್ದಲ್ಲಿ ಸಲಾಕೆ ತೆಗೆದುಕೊಂಡು ಕೆಲಸ ಮಾಡಿರುವುದಿಲ್ಲ. ಮಾನ್ಯ ಶ್ರೀನಿವಾಸ ಪೂಜಾರಿಯವರು ನಮ್ಮ ರಾಜ್ಯ ಸರ್ಕಾರ, ಏನು ಇವುಗಳ functionaries, functions, funds devolution ಪ್ರಸ್ತಾಪವನ್ನು ಮಾಡಿದರು. ಅದರ ಬಗ್ಗೆ ಸನ್ಮಾನ್ಯ ಪೂಜಾರಿಯವರಿಗೆ ಇಷ್ಟೆ ಹೇಳಲಿಕ್ಕೆ ಬಯಸುತ್ತೇನೆ. Tata Institute of Social Sciences ಇವರು Devolution Report of 2014-15 ಅನ್ನು ಮಾಡಿದ್ದಾರೆ. In this Devolution Report, the State of Karnataka stands much in top. ಶ್ರೀ ಎಚ್.ಕೆ.ಪಾಟೀಲ್(ಮುರಡು ಎರಡರಲ್ಲಿ ನಾವು ಎರಡನೆ ಸ್ಥಾನದಲ್ಲಿದ್ದೇವೆ. Functions, Functionaries and Funds in India, we are on top in two areas. In one area, we are third. Average o aggregate & they have kept us in third rank. JK GOD OF T.I.S.S. (Tata Institute of Social Sciences)

Devolution Report ಆಧಾರದ ಮೇಲೆ, Devolution Report ಅಂದರ ಏನು? It was like a judgment of those umpires. ಎರಡು ಕೋಟಿ ರೂ.ಗಳ ಬಹುಮಾನವನ್ನು ಕೊಟ್ಟಿದ್ದಾರೆ. ಇಲಾಖೆಯ ಮಂತ್ರಿಗಳನ್ನು ಕರೆಯಿಸಿಕೊಂಡು ಮಾನ್ಯ ಪ್ರಧಾನ ಮಂತ್ರಿಗಳು ನಮ್ಮ ರಾಜ್ಯಕ್ಕೆ ಪ್ರೋತ್ಸಾಹದ ಮನ್ನಣೆಯನ್ನು ಕೊಟ್ಟಿದ್ದಾರೆ ಎನ್ನುವುದನ್ನು ಬಹಳ ಸಂತೋಷದಿಂದ ಹೇಳಲು ಬಯಸುತ್ತೇನೆ. ಅದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರನ್ನು ಪ್ರಧಾನ ಮಂತ್ರಿಗಳಾದ ಮಾನ್ಯ ಮೋದಿಯವರು, ನಮ್ಮಲ್ಲಿ ನಡೆದಿರುವ ಸಜ್ಜೆ ಭಾರತ ಯೋಜನೆ ಅಡಿಯಲ್ಲಿ Chief Ministers' Sub-Group ಗೆ ಅಧ್ಯಕ್ಷರಾಗಬೇಕು ಎಂದು ಹೇಳಿದರು. Chief Ministers' Sub-Group ಗೆ ಅಧ್ಯಕ್ಷರಾಗಬೇಕು ಎಂದು ಹೇಳುವುದರ ಮುಖಾಂತರ ನಮ್ಮ ರಾಜ್ಯಕ್ಕೆ ಗೌರವವನ್ನು ಸೂಚಿಸಿದ್ದರು ಎಂದು ಹೇಳಬಯಸುತ್ತೇನೆ. ಅದರ ಜೊತೆಗೆ ನಮ್ಮ ರಾಜ್ಯ ಸರ್ಕಾರ ಈಗಾಗಲೆ ಹಾಕಿಕೊಂಡಿರುವಂತಹ ಕಾರ್ಯಕ್ರಮಗಳಿಗೆ....

ಶ್ರೀ ಬಸವರಾಜ ಹೊರಟ್ಟಿ:- ಅವರು ಏಕೆ ಒಪ್ಪಿಕೊಳ್ಳಲಿಲ್ಲ ಅದನ್ನು ಹೇಳಿ.

ಶ್ರೀ ಎಚ್.ಕೆ.ಪಾಟೀಲ್:- ಕಾರ್ಯಭಾರದ ಒತ್ತಡದಿಂದ ಅವರು ಒಪ್ಪಿಕೊಳ್ಳಲಿಲ್ಲ. ಆದರೆ ಆ ಸಮಿತಿಗೆ ಮಾನ್ಯ ಮುಖ್ಯಮಂತ್ರಿಗಳು ಬಹಳ ದೊಡ್ಡ ಮಾರ್ಗದರ್ಶನ ಮಾಡಲು ಪ್ರಾರಂಭ ಮಾಡಿದ್ದಾರೆ. ತಮಗೆ ಗೊತ್ತಿದೆ, ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳು ನಮ್ಮ ರಾಜ್ಯಕ್ಕೆ ಬಂದು one of the very important meeting where almost pre-final notes of Neeti Ayog were finalized. ಶ್ರೀ ಹೆಚ್.ಕೆ. ಪಾಟೀಲ್:- ಅವರು ಸದನದಲ್ಲಿ ಇಲ್ಲದಿರುವಾಗ ವಿಷಯವನ್ನು ಪ್ರಸ್ತಾಪ ಮಾಡಿದ್ದು, ಅವರು ಸಹಕಾರ ಸಚಿವರಾಗಿದ್ದಾಗ ಸಹಕಾರ ಸಪ್ತಾಹ ಆಚರಣೆ ಮಾಡುವ ಸಂದರ್ಭದಲ್ಲಿ ಒಂದು ವರ್ಷದಲ್ಲಿ ಸಹಕಾರಿ ಸಂಸ್ಥೆಗಳ ವಿಶೇಷ ಪಾಲ್ಗೊಳ್ಳುವಿಕೆಯಿಂದ ಗದ ಮಾಡೆಲ್‌ನಲ್ಲಿ 1000 ಘಟಕಗಳನ್ನು ಮಾಡಬೇಕೆಂದು ನಿರ್ಣಯ ಮಾಡಿ ಸಾಕಷ್ಟು ಪ್ರೋತ್ಸಾಹ ಮಾಡಿದ್ದರು. ಅಲ್ಲಿಂದ ಪ್ರಾರಂಭವಾಗಿ ಇವತ್ತು ಸರ್ಕಾರ ರೂ.5 ಲಕ್ಷಗಳನ್ನು ಸಹಕಾರ ಸಂಘ, ಎನ್‌ಜಿಓ ಅಥವಾ ಗ್ರಾಮ ಪಂಚಾಯಿತಿ ಮುಂದೆ ಬಂದರೆ ಅನುದಾನವಾಗಿ ಕೊಡುತ್ತದೆ.

**Sri G.S. NYAMAGOUDA**: Rural Development Officer (RDO) ಅವರನ್ನು ಆಡಳಿತ ಚುರುಕುಗೊಳಿಸಲು ರೆವಿನ್ಯೂಗೆ ಮಾಡುತ್ತೇನೆ ಎಂದು ಹೇಳಿದ್ದರು.

ಶ್ರೀ ಹೆಚ್.ಕೆ. ಪಾಟೀಲ್:- ಸುವರ್ಣ ಗ್ರಾಮ ಯೋಜನೆಯಲ್ಲಿ ವಿಶ್ವಬ್ಯಾಂಕ್‌ನ 2000 ಕೋಟಿ ಪ್ರಸ್ತಾವನೆ ಈಗಾಗಲೇ ಹಣಕಾಸಿನ ಇಲಾಖೆಯಿಂದ ಒಪ್ಪಿಗೆ ಪಡೆದು ಹೋಗಿದ್ದು, ಅದು ಬಂದ ಮೇಲೆ Rural Development Officer ಅನ್ನು ಮಾಡುತ್ತೇವೆ.

ಡಾ: ಎಂಆರ್. ಹುಲಿನಾಯ್ಕರ್:- ಗ್ರಾಮೀಣ ಕುಡಿಯುವ ನೀರಿನ ಸರಬರಾಜು ಬಗ್ಗೆ ಸಚಿವರಿಗೆ ಇರುವ ಕಾಳಜಿ ಮತ್ತು Commitment ಗೆ ಅಭಿನಂದನೆ ಸಲ್ಲಿಸುತ್ತಾ, ನಮ್ಮ ತುಮಕೂರು ಜಿಲ್ಲೆಯ ಕುಡಿಯುವ ನೀರಿನ ಬಗ್ಗೆ ಸುಮಾರು ರೂ380 ಕೋಟಿ Action Plan ಕೊಟ್ಟಿದ್ದು, ರೂ.120 ಕೋಟಿಗೆ ಅಲಾಟ್ ಮಾಡಿದ್ದರೂ ರೂ.57 ಕೋಟಿ ಬಿಲ್ ಇನ್ನೂ ಆಗಿಲ್ಲ. ಇನ್ನೂ ರೂ.252 ಕೋಟಿ ಯಾವಾಗ ಅನುದಾನ ಕೊಡುತ್ತಾರೆ. ಅಲ್ಲಿ ಕಛೇರಿ, ನೌಕರರು ಇಲ್ಲ, ಅವರಿಗೆ ವಾಹನಗಳು ಇಲ್ಲ. ಮಾರ್ಚ್‌ನಿಂದ ಸಂಬಳ ಆಗಿಲ್ಲ. ಈ ಸಾರಿ ಮಳೆ ಕಡಿಮೆ ಆಗಿರುವುದರಿಂದ ನೀರಿನ ಕೊರತೆ ಜಾಸ್ತಿ ಇದೆ. ಅವರು ಹೇಗೆ ಮಾಡಲು ಸಾಧ್ಯ ಎಂದು ದಯವಿಟ್ಟು ತಿಳಿಸಬೇಕು.

ಶ್ರೀ ಹೆಚ್.ಕೆ. ಪಾಟೀಲ್:- ಮಾನ್ಯ ಸದಸ್ಯರು RWSS Department ನಲ್ಲಿ ತಾಂತ್ರಿಕ ತೊಂದರೆಯಿಂದ ಹಣಕಾಸು ಬಿಡುಗಡೆ ಆಗಿರಲಿಲ್ಲ. ಈ ವಿಚಾರವಾಗಿ ನಿನ್ನೆ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ಪರಿಹಾರ ಹುಡುಕಿಕೊಂಡಿದ್ದೇವೆ. 2-3 ದಿವಸಗಳಲ್ಲಿ RWSS Department ನ ನೌಕರರಿಗೆ ಸಂಬಳ ಬಿಡುಗಡೆ ಮಾಡುತ್ತೇವೆ. ಅವರು ಬಾಕಿ ಕೊಡುವ ಬಗ್ಗೆ ಪ್ರಸ್ತಾಪ ಮಾಡಿದ್ದು, NRDWP ಬರಬೇಕಾದ ಹಣ ಬಂದಿರಲಿಲ್ಲ ಮತ್ತು ಬರುವುದು ನಿಧಾನವಾಗುತ್ತಿದೆ. ಆದಾಗ್ಯೂ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿದ್ದೇವೆ. ಅದಕ್ಕೆ ವಿಶೇಷ ಅನುದಾನ ಬಿಡುಗಡೆ ಮಾಡುವ ಬಗ್ಗೆ ಕೋರಿದ್ದು, ಸೂಕ್ತವಾದ ನಿರ್ಣಯ ಮಾಡುವ ಬಗ್ಗೆ ಭರವಸೆ ಕೊಟ್ಟಿದ್ದಾರೆ.

ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:- ಗ್ರಾಮಗಳ ಅಭಿವೃದ್ಧಿ ಬಗ್ಗೆ ಸಾರ್ವಜನಿಕ ಹಿತಾಸಕ್ತಿ ಇರುವುದರಿಂದ ಮಹಾರಾಷ್ಟ್ರ-ಕರ್ನಾಟಕ ಗಡಿ ತಾಲ್ಲೂಕುಗಳಲ್ಲಿನ ಅನೇಕ ಹಳ್ಳಿಗಳು ಗ್ರಾಮೀಣಾಭಿವೃದ್ಧಿಯಲ್ಲಿ ವಂಚಿತವಾಗಿವೆ. ಅಧಿಕಾರಿಗಳು 4 ತಿಂಗಳಲ್ಲಿ ಮೂಲಭೂತ ಸೌಕರ್ಯ ಒದಗಿಸುವ ಹಾಗೂ ಕ್ರಿಯಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ ಹೇಳಿದ್ದಾರೆ. ಮಾನ್ಯ ಸಚಿವರು ಅದಕ್ಕೆ 30, 31 ನೇ ತಾರೀಖು ಮಂಜೂರಾತಿ ಕೊಡಿಸುವ ಬಗ್ಗೆ ಸದನದಲ್ಲಿ ಹೇಳಿದ್ದರು. ಖಾನಾಪುರ ತಾಲ್ಲೂಕಿನ ಹಳ್ಳಿಗಳ ಬಗ್ಗೆ ನಾಳೆಯಾದರೂ ಆದೇಶ ಪತ್ರವನ್ನು ಕೊಡುವ ಕೆಲಸ ಆಗಬೇಕು. ಬೆಳಗಾಂ ಜಿಲ್ಲೆಯಲ್ಲಿ ನಿರ್ಮಲ ಭಾರತಿ ಯೋಜನೆಯಲ್ಲಿ ಶೌಚಾಲಯಕ್ಕೆ ಕೊಡುವ ಬಾಕಿ ಬಗ್ಗೆ ನಿನ್ನೆ ನಾನು ಮಾಹಿತಿ ತೆಗೆದುಕೊಂಡಿದ್ದು, ಅಲ್ಲಿನ 18 ವಿಧಾನ ಸಭಾ ಕ್ಷೇತ್ರಗಳಲ್ಲಿ ರೂ.18 ಕೋಟಿ ಬಾಕಿಯಿದೆ. ಆದಷ್ಟು ಬೇಗ ಹಣ ಬಿಡುಗಡೆಯಾದರೆ ಶೌಚಾಲಯ ನಿರ್ಮಾಣಕ್ಕೆ ಚಾಲನೆ ಸಿಗುತ್ತದೆ.

ಶ್ರೀ ಬಿ. ರಾಮಕೃಷ್ಣ:- ಗೌರವ ಧನದ ಬಗ್ಗೆ ಬೆಳಕು ಚೆಲ್ಲಬೇಕು, ಇದು ಸುಮಾರು ಪೆಂಟಿಂಗ್ ಉಳಿದುಕೊಂಡಿದೆ.

*ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ*:- ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗ್ರಾಮ ಸಭೆ ಮತ್ತು ವಾರ್ಡ್ ಸಭೆ ಎಂದು ಆಗುತ್ತದೆ. ಇವುಗಳಲ್ಲಿ ಜನರ ಭಾವನೆ ಮತ್ತು ಅನಿಸಿಕೆಗಳನ್ನು ಹೇಳುತ್ತಿದ್ದು, ಇದರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಇಲ್ಲಿಯವರೆಗೂ ಕ್ರಮ ಆಗುತ್ತಿಲ್ಲ. ಬಹುಶ: Action Taken Report ಇದ್ದರೆ ಅವರ ಭಾವನೆಗಳಿಗೆ ಸರ್ಕಾರ, ಇಲಾಖೆ ಅಥವಾ ಪಂಚಾಯಿತಿ ಸ್ಪಂದಿಸುವ ಪತ್ರ ಅಥವಾ ಉತ್ತರ ಬರುವುದಿಲ್ಲ. ಒಂದು ಗ್ರಾಮ ಸಭೆಯಲ್ಲಿ ಬಂದ ಬೇಡಿಕೆಗಳಿಗೆ ಮುಂದಿನ 6 ತಿಂಗಳು ಕಳೆದರೂ ಏನೂ ಕ್ರಮವಾಗಿದೆ ಎಂಬ ಕನಿಷ್ಟ ಪ್ರಕ್ರಿಯೆ ನಡೆದರೆ ಅರ್ಥಪೂರ್ಣವಾಗುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್:- ಮಾನ್ಯ ಪ್ರತಾಪಚಂದ್ರ ಶೆಟ್ಟರು ಉಪಯುಕ್ತ ಸಲಹೆ ಕೊಟ್ಟಿದ್ದು. ನಾವು ಗ್ರಾಮ ಸಭೆ ಮಾಡಿ ನಿರ್ಣಯ ಮಾಡಿದ ನಂತರ ಏನಾಯಿತು ಎಂಬ ಬಗ್ಗೆ ಬಹಳಷ್ಟು ಸಂದರ್ಭದಲ್ಲಿ ಗೊತ್ತಾಗುವುದಿಲ್ಲ. ಯಾರೋ ಒಬ್ಬರು continuous ಆಗಿ monitor ಮಾಡಿದರೆ ಗೊತ್ತಾಗುತ್ತದೆ. ಅದನ್ನು ವಿಡಿಯೋ ಮಾಡುತ್ತಿದ್ದು, ಕ್ರಮ ತೆಗೆದುಕೊಂಡ ವರದಿ ಕೊಡುತ್ತಿಲ್ಲ. ಹಿಂದಿನ ಸಭೆಯ ನಿರ್ಣಯಗಳ ಬಗ್ಗೆ ಕ್ರಮ ತೆಗೆದುಕೊಂಡ ವರದಿಯನ್ನು ಮುಂದಿನ ಗ್ರಾಮ ಸಭೆಯಲ್ಲಿ ಮಂಡನೆ ಮಾಡಬೇಕು, ಕ್ರಮ ತೆಗೆದುಕೊಂಡ ವರದಿಯನ್ನು ರಾಜ್ಯ ಸರ್ಕಾರದ ಪಂಚಾಯತ್ ರಾಜ್ ಪ್ರಧಾನ ಕಾರ್ಯದರ್ಶಿಯವರಿಗೆ ಕಳುಹಿಸಬೇಕು, ಒಬ್ಬ ನೋಡಲ್ ಅಧಿಕಾರಿಯನ್ನು ಕೇಂದ್ರ ಕಛೇರಿಯಲ್ಲಿ ಮಾಡಿ, ಎಷ್ಟು ಮಾಡಿದ್ದಾರೆ, ಎಷ್ಟು ಶೇಕಡಾವಾರು ಮಾಡಿದ್ದಾರೆ, ಎಷ್ಟು ಮಾಡಿಲ್ಲ, ಎಂಬಿತ್ಯಾದಿ ವಿಷಯಗಳು ಹಾಗೂ ಗ್ರಾಮ ಸಭೆಗಳ ನಡೆವಳಿ, ಕ್ರಮ ತೆಗೆದುಕೊಂಡ ವರದಿಯನ್ನು ಪ್ರತಿ ವರ್ಷ ಮಾಡುವಂತೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಪಟೇಲ್ ಶಿವರಾಂ:- ನಾನು ಜಿಲ್ಲಾ ಪರಿಷತ್ ವ್ಯವಸ್ಥೆಯಲ್ಲಿ ಅಧ್ಯಕ್ಷನಾಗಿ ಕೆಲಸ ಮಾಡಿ, ಹತ್ತು ವರ್ಷ ಕಳೆದ ನಂತರ ರಾಜಕೀಯ ಸನ್ನಿವೇಶದಲ್ಲಿ ಜಿಲ್ಲಾ ಪಂಚಾಯಿತಿ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಎರಡು ವಿಚಾರದಲ್ಲಿ ಅಜಗಜಾಂತರ ವ್ಯತ್ಯಾಸ ಇದೆ. ಜಿಲ್ಲಾ ಪರಿಷತ್ ಇದ್ದಾಗ 28 ಇಲಾಖೆ ಇತ್ತು. ಆಗ ಸಹಕಾರಿ ಇಲಾಖೆಯನ್ನು ವಾಪಸ್ಸು ತೆಗೆದುಕೊಂಡ ಸನ್ನಿವೇಶ ಇತ್ತು. ಅಲ್ಲಿಂದ ಇಲ್ಲಿಯವರೆಗೂ ಇರುವ ಸಮಸ್ಯೆ ಬಗ್ಗೆ ಹೇಳಿದ್ದು, ನಮ್ಮಲ್ಲಿ ಯಾವುದೇ ನೌಕರರನ್ನು ಆಯ್ಕೆ ಮಾಡುವ ಪ್ರಾಧಿಕಾರ ಇಲ್ಲ. ಯಾವಾಗಲೂ ನಿಯೋಜನೆ ಮೇಲೆ ಎಲ್ಲಾ ಅಧಿಕಾರಿ, ನೌಕರರು ಕೆಲಸ ಮಾಡುತ್ತಿದ್ದು, ಹಿಂದೆ 28 ಇಲಾಖೆಗಳ ಮೇಲೆ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಗೆ ನಿಯಂತ್ರಣ ಇತ್ತು. ಈಗ C.R. ಬರೆಯುವುದಕ್ಕೆ ಕೊಟ್ಟಿರಬಹುದು. ಆದರೆ ಅಷ್ಟೊಂದು ಪ್ರಮಾಣದ ಅಧಿಕಾರ ಇಲ್ಲ. ಆದ್ದರಿಂದ ಒಂದು ನೇಮಕಾತಿ ಪ್ರಾಧಿಕಾರವನ್ನು ರಚನೆ ಮಾಡಬೇಕೆಂದು ಸರ್ಕಾರದ ಮುಂದೆ ಪ್ರಸ್ತಾವನೆ ಮಾಡಿದರೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್:- ಸಲಹೆ ಮಾನ್ಯ ಸದಸ್ಯರ ಸೂಕ್ತವಾದುದು, ಪರಿಶೀಲನಾರ್ಹವಾದ ಸಲಹೆಯಾಗಿದ್ದು, ಅದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇನೆ. ಸಮಗ್ರ ಕಾನೂನು ತಿದ್ದುಪಡಿ ತರುವ ಸಂದರ್ಭದಲ್ಲಿ ಅವರ ಪ್ರಶ್ನೆಗೆ ಉತ್ತರ ಸಿಗಬಹುದು.

ಶ್ರೀ ಕೋಟಾ ಶ್ರೀನಿವಾಸ ಪೂಜಾರಿ- ಮಾನ್ಯ ಮಂತ್ರಿಯವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ನಾವೆಲ್ಲರೂ ಮೆಚ್ಚುವಂತಹ ಉತ್ತರ ಕೊಟ್ಟಿದ್ದಾರೆ. ಆದರೆ ಒಪ್ಪುವಂತಹ ಉತ್ತರ ಕೊಟ್ಟಿಲ್ಲ. ಇದನ್ನು ಒಪ್ಪಬೇಕಾದರೆ ಒಟ್ಟು ಚರ್ಚೆ ಮಾಡಿದಾಗ ಕೆಲವು ವಿಷಯಗಳನ್ನು ಉಲ್ಲೇಖ ಮಾಡಿದ್ದೇವೆ. ವಿಧಾನ ಸೌಧದಲ್ಲಿ ಅಧಿಕಾರ ಹೆಪ್ಪುಗಟ್ಟಿದೆ. 29 ಮಾತಿನಲ್ಲಿ ವರ್ಗೀಕರಣ ಮಾಡಿದರು.

ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗೆ ಪಂಚಾಯಿತಿಗೆ ಕೊಡುತ್ತಾರೆ. ಅಂದರೆ 29 ಇಲಾಖೆಗಳನ್ನು ವರ್ಗೀಕರಿಸಬೇಕೆಂಬ ವಿಷಯಕ್ಕೆ ಉತ್ತರ ಕೊಟ್ಟಿಲ್ಲ. ಇದರಲ್ಲಿ ಗೊಂದಲ ಇಲ್ಲ. ಈಗ ಮಾನ್ಯ ರಮೇಶ್ ಕುಮಾರ್ ವರದಿ ಬಗ್ಗೆ ಮಾತನಾಡಿ, ಒಳ್ಳೆ ಅಜ್ಜ ಮೊಮ್ಮಕ್ಕಳಿಗೆ ಕತೆ ಹೇಳಿ ಸಮಾಧಾನ ಪಡಿಸಿದಂತೆ ಆಯಿತು. ಅದರಲ್ಲಿ ಸ್ವಾರಸ್ಯ ಇತ್ತು. ಸತ್ಯ ಇಲ್ಲ. ಅವರಿಗೆ ಒಂದೇ ಸಾರಿ ಕಷ್ಟವಾಗುತ್ತದೆ. ಈಗ ಇರುವ ಸಂವಿಧಾನ, ಈಗಿನ ನಿಯಮ ಮತ್ತು ಪಂಚಾಯಿತಿ ಕಾಯ್ದೆಯಡಿ 29 ಇಲಾಖೆಗಳನ್ನು ವರ್ಗೀಕರಣ ಮಾಡಲು ಏನೂ ಸಮಸ್ಯೆಗಳು ಇಲ್ಲ. ಅದನ್ನು ಏಕೆ ಸೃಷ್ಟಿ ಮಾಡಿಕೊಳ್ಳುತ್ತಾರೆ ಮತ್ತು ಏಕೆ ಬಿಡುಗಡೆ ಮಾಡುವುದಿಲ್ಲ ಎಂದು ದಯವಿಟ್ಟು ಹೇಳಬೇಕು. ವರ್ಗೀಕರಣ ಮಾಡುವ ಶಕ್ತಿ ಈಗಿನ ಕರ್ನಾಟಕ ಸರ್ಕಾರದಲ್ಲಿ ಈಗಿನ ಮಂತ್ರಿಮಂಡಲದಲ್ಲಿ ಅವರಿಗೆ ಮಾತ್ರ ಇದೆ.

ಶ್ರೀ **ಹೆಚ್.ಕೆ. ಪಾಟೀಲ್:-** ಅವರು ಮಾಡಿರುವ observation ಗೆ ಉತ್ತರ ಕೊಡಬೇಕೆಂದರೆ ಅರ್ಧ ಗಂಟೆ ಬೇಕಾಗುತ್ತದೆ. ಅದಕ್ಕೆ ನಾನು ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ. ಅವರು ಹೇಳಿದ್ದನ್ನು ಗಂಭೀರವಾಗಿ ಗಮನಿಸಿದ್ದು, ಬರುವ ದಿವಸಗಳಲ್ಲಿ ನಮ್ಮ ಕ್ರಮಗಳ ಮುಖಾಂತರ ಉತ್ತರ ಬರುತ್ತದೆ.

ಶ್ರೀ ವಿ.ಎಸ್**.** ಉಗ್ರಪ್ಪ:- ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಅತ್ಯಂತ ದೀರ್ಘವಾದ ಎರಡೂವರೆ ತಾಸು ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಅಭಿನಂದಿಸುತ್ತೇನೆ. ನಾನು ಕೆಲವು ಮೂಲಭೂತ ಪ್ರಶ್ನೆಗಳನ್ನು ಇಟ್ಟಿದ್ದು, Electoral Reforms ಗೆ ಕ್ರಮ ಏನು? 22 ದಿವಸಗಳ ಕಾಲ ಗ್ರಾಮ ಪಂಚಾಯಿತಿಗೆ ಅವಶ್ಯಕತೆ ಇದೆಯೇ? 3ರಿಂದ 5 ದಿವಸಗಳಲ್ಲಿ ಚುನಾವಣೆ ಏಕೆ ಮುಗಿಸಬಾರದು ಎಂಬುದಕ್ಕೆ 'No reply'. ಎರಡನೆಯದಾಗಿ,

ಶ್ರೀ ಕೆ.ಎಸ್**.**ಈಶ್ವರಪ್ಪ-ಮಾನ್ಯ ಸಭಾಪತಿಗಳೆ, ನಾನು ಮಾನ್ಯ ಸಚಿವರಿಗೆ ಅಭಿನಂದನೆ ಸಲ್ಲಿಸುತ್ತೇನೆ. Target ಇಟ್ಟುಕೊಂಡರೆ, ಪ್ರತಿ ಜಿಲ್ಲೆಯಲ್ಲೂ ಕೂಡ ತಿಂಗಳಿಗೆ ಎಷ್ಟು ಮಾಡಬೇಕು, ಏನು ಮಾಡಬೇಕು ಎಂದು ಸಿಇಓಗಳು ಬೆನ್ನು ಹತ್ತುತ್ತಾರೆ. ಇಲ್ಲದೇ ಹೋದರೆ ಹೇಳುವವರು ಇರುವುದಿಲ್ಲ, ಕೇಳುವವರೂ ಇರುವುದಿಲ್ಲ. ಪ್ರತಿತಿಂಗಳು ಹೀಗೆ ಮಾಡಬೇಕು. ಸಾಧ್ಯವಾದರೆ ಪ್ರತಿ ತಿಂಗಳೂ ಕೂಡ ನೀವು ಎಲ್ಲಾ ಸಿಇಓಗಳ ಜೊತೆ ಮೀಟಿಂಗ್ ಮಾಡಬೇಕು. ಕೆಲವು ಕಡೆ ಹೋಗುವುದಕ್ಕಾಗುತ್ತದೆ. ಕೆಲವು ಕಡೆ ಹೋಗುವುದಕ್ಕಾಗುವುದಿಲ್ಲ. Video Conference ಸಹ ಮಾಡಬಹುದು ಆದರೆ, ಎದುರು ಕೂರಿಸಿಕೊಂಡು ಕೇಳಿದಾಗ ಮಾತ್ರ ಕೆಲಸಗಳು ಆಗುತ್ತವೆ. ಈ ದಿಕ್ಕಿನಲ್ಲಿ ನೀವು ಪ್ರಯತ್ನ ನಡೆಸಬೇಕು. ಈ ಯೋಜನೆಯನ್ನು 9 ತಿಂಗಳಲ್ಲಿ 6 ಸಾವಿರ ಮುಟ್ಟಬೇಕು ಎನ್ನುವುದು ಸಣ್ಣ ಗುರಿಯೇನಲ್ಲ. 6 ಸಾವಿರ ಮುಟ್ಟಬೇಕು ಎನ್ನುವುದಾದರೆ ನೀವೂ ಸಾಕಷ್ಟು ಇದಕ್ಕೆ ಶ್ರಮ ಹಾಕಬೇಕು. ನೀವು ಅಷ್ಟೇ ಅಲ್ಲ, ನಾವು ಅಷ್ಟೇ ಶ್ರಮ ಹಾಕಬೇಕಾಗುತ್ತದೆ. ನಮಗೂ ಜವಾಬ್ದರಿ ಇದೆ, ಅದು ನಮ್ಮ ಕರ್ತವ್ಯ ಕೂಡ ಆಗಿದೆ. ನಾನು ಎಲ್ಲಾ ಜಿಲ್ಲೆಗಳಿಗೆ ಹೋಗುತ್ತೇನೆ. ಈ ದಿಕ್ಕಿನಲ್ಲಿ ಗಮನಕೊಡಿ. ಯಾವ ಯಾವ ತಿಂಗಳಲ್ಲಿ ಏನೇನು ಮಾಡುತ್ತೀರಿ, physically ಏನು ಸಾಧನೆ ಮಾಡುತ್ತೇವೆ ಎಂದು ಗುರಿ ಇಟ್ಟುಕೊಂಡಿದ್ದಿರೋ, ಮತ್ತು financially ಏನು ಸಾಧನೆ ಮಾಡುತ್ತೇವೆ ಎಂದು ಗುರಿಯನ್ನು ಇಟ್ಟುಕೊಂಡಿದ್ದೀರೋ ಆ ವಿವರಗಳನ್ನು ದಯವಿಟ್ಟು ಕಳುಹಿಸಿ ಕೊಡಿ. ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳ 15 ಅಂಶಗಳ ಕಾರ್ಯಕ್ರಮಗಳ ಪ್ರಗತಿ, ವರದಿ 31.3.2015. ಇದರಲ್ಲಿ ಹಿಂದೆ-ಮುಂದೆ ಇಲ್ಲ. ಇದರಲ್ಲಿ in progress ಇದೆ, completed ಕೂಡ ಇದೆ. In progress and completed ಎರಡೂ ಸೇರಿದರೂ ಅನೇಕ ಪ್ರಾಜೆಕ್ಟ್‌ಗಳು ಶೇಕಡ 50 ರಷ್ಟೂ ಕೂಡ ಆಗುವುದಿಲ್ಲ. ಈಗೇನು ನನ್ನ ಹತ್ತಿರ ಕಾಪಿ ಇದೆಯೋ ಇದರ ಬಗ್ಗೆ ತಾವು ಸ್ಪಷ್ಟಿಕರಣ ನೀಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಸರ್ಕಾರದಿಂದ ಕೊಡುವ ದಾಖಲೆಯಲ್ಲೂ ವ್ಯತ್ಯಾಸವಾಗಿಬಿಟ್ಟರೆ ನಾವು ಯಾವುದರ ಮೇಲೆ depend ಆಗಬೇಕು? ಅದಕ್ಕೋಸ್ಕರ ತಾವು ಇದನ್ನು ಗಮನಿಸಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. . .2009-10 ರಲ್ಲಿ 72 ಪರ್ಸೆಂಟ್

utilisation ಆಯಿತು, 2010-11 ರಲ್ಲಿ 62 ಪರ್ಸೆಂಟ್ utilisation ಆಯಿತು. 2011-12 ರಲ್ಲಿ 83.91, ಪರ್ಸೆಂಟ್ utilisation ಆಯಿತು. 2012-13 ರಲ್ಲಿ 82 ಪರ್ಸೆಂಟ್ utilisation ಆಯಿತು. We were 95 per cent and then we came back to 90 per cent. This is for your information.

ಶ್ರೀ ಕೆ.ಎಸ್.ಈಶ್ವರಪ್ಪ- ಮಾನ್ಯ ಸಭಾಪತಿಯವರೇ, ನಾನು ಅರ್ಥಶಾಸ್ತ್ರಜ್ಞ ಅಲ್ಲ. ಕೇಂದ್ರದಿಂದ ಬಂದಂತಹ ಹಣ ಖರ್ಚು ಮಾಡಿ ಮತ್ತೆ ಹೋಗಿ ಜಾಸ್ತಿ ಕೇಳುವ ಪದ್ಧತಿ ಇದೆ ಆಗ ಎಷ್ಟು, ಈಗ ಎಷ್ಟು ಪರ್ಸೆಂಟ್ ಖರ್ಚು ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ಹೇಳಿದ್ದಾರೆ. ಅವರು ಅತೀ ಹೆಚ್ಚು ಉಪಯೋಗ ಮಾಡಿದ್ದಾರೆಂದು ಮಾಡಿಕೊಳ್ಳುತ್ತಿದ್ದಾರೆ. ಅದಕ್ಕೆ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತಿದ್ದೇನೆ. 90 ಪರ್ಸೆಂಟ್ ಎನ್ನುವುದು ಆಮೇಲೆ. 90 ಪರ್ಸೆಂಟ್ ಎಷ್ಟು ಕೋಟಿಗೆ ನಮಗೆ 10 ಪರ್ಸೆಂಟ್‌ಗೆ short ಆಯಿತು ಮಾನ್ಯ ಸಭಾನಾಯಕರೇ, ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಯಾವುದೇ ಇಲಾಖೆಯ ಮಂತ್ರಿ ಮಾತನಾಡುತ್ತಿರುವಂತಹ ಸಂದರ್ಭದಲ್ಲಿ ನಾನು ಖಂಡಿತ ಅವರ ಜೊತೆಯಲ್ಲಿದ್ದು ಮಾತನಾಡುತ್ತೇನೆ, ಎಲ್ಲರೂ ಹೇಳುತ್ತಾರೆ ಕೇಂದ್ರಕ್ಕೆ ಹೋಗೋಣ, ಕೊಟ್ಟಿರುವ ಹಣವನ್ನು ಏಕೆ ಕೇಂದ್ರದಿಂದ ಹಣ ತರೋಣ, ಖಂಡಿತ ಹಣ ತರೋಣ. ಖರ್ಚು ಮಾಡುತ್ತಿಲ್ಲ? 2014-15ಕ್ಕೆ ಹಣಕಾಸು ಆಯೋಗದ ಅನುದಾನವನ್ನು ಕುಡಿಯುವ ನೀರಿನ ಯೋಜನೆಗೆ ಬಳಸುವುದಕ್ಕೆ 5500 ಕೋಟಿ ರೂಪಾಯಿ Multi-village water supply schemeಗೆ ಬೇಕು ಎನ್ನುವ ಸುದ್ದಿ ಇದೆ. ಹೌದು ಎನ್ನುವುದಾದರೆ ಹೌದು ಎಂದು ಹೇಳಿ, ಇಲ್ಲದಿದ್ದರೆ ಇಲ್ಲ ಎಂದು ಹೇಳಿ. ಇದಕ್ಕೆ ಹಣ ಎಲ್ಲಿಂದ ತರುತ್ತಾರೆ? 7000 ಎಂದು ನಾವು ದೊಡ್ಡ ಗುರಿಯನ್ನು ಇಟ್ಟುಕೊಂಡಿದ್ದೇವೆ. ಬಾಯಿಗೆ ಹೇಳುವುದಕ್ಕೇನು? 2013-14 ರಲ್ಲಿ 1000, ಸಾಧನೆ ಎಷ್ಟು? ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ,

ಇಲ್ಲಿ ಮಾನ್ಯ ಎಚ್.ಕೆ.ಪಾಟೀಲ್‌ರವರಿಗೆ ಟೀಕೆ ಮಾಡಬೇಕೆನ್ನುವ ಉದ್ದೇಶವಿಲ್ಲ. ನಾನು ಖುದ್ದು ರಾಯಚೂರಿಗೆ ಹೋಗಿದ್ದೆ. ನಿಮ್ಮ ಊರಿನಲ್ಲಿ 111 ರಲ್ಲಿ 36 ಆಗಿದೆ ಎಂದು ಹೇಳಿದರು. ನಮ್ಮ ಎಂ.ಎಲ್.ಎ. ಅವರನ್ನು ಕರೆದುಕೊಂಡು ಹೋಗಿದ್ದೆ. ಅಲ್ಲಿ ಒಂದೇ ಒಂದು ಆಗಿಲ್ಲ. ನಾನು ತುಂಬಾ ನೊಂದು ಹೇಳುತ್ತಿದ್ದೇನೆ. ಅವರು ತಪ್ಪು ಮಾಡುತ್ತಿದ್ದಾರೆಂದು ಹೇಳುತ್ತಿಲ್ಲ. ಇಲಾಖೆಯಲ್ಲಿ ಬಿಗಿ ಇಲ್ಲ, ಹೇಳುವವರಿಲ್ಲ, ಕೇಳುವವರಿಲ್ಲ, ಹೋಗೋಣ ನಡಿ ಎಂದು ಹೇಳಿದಾಗ ಆ ಸಾಮಾಗ್ರಿ ಅಲ್ಲಿದೆ, ಇಲ್ಲಿದೆ, ಇಲ್ಲಿ ಬರುತ್ತದೆ ಎಂದು ಹೇಳುತ್ತಾರೆ. 7000ಕ್ಕೆ, ಕಳೆದ ಎರಡು ವರ್ಷದಲ್ಲಿ 3,000ಕ್ಕೆ ಸುಮಾರು 900 ಚಿಲ್ಲರೆ ಆಗಿದೆ. ಇವರು ಕೊಟ್ಟರು ನಾವು ಒಪ್ಪಿಕೊಳ್ಳಬೇಕು. ಮಾನ್ಯ ರಾಮಕೃಷ್ಣರವರು ಪಟ್ಟಿ ಕೊಡಿ ಎಂದು ಹೇಳಿದರು, ರಾಮಕೃಷ್ಣರವರಿಗೆ ಗ್ಯಾರಂಟಿ ಅವರಿಗೆ ಪಟ್ಟಿ ಸಿಗುತ್ತದೆ, ಆದರೆ ನೀರು ಸಿಗುವುದಿಲ್ಲ. ಪಟ್ಟಿ ಬೇಕೋ, ನೀರು ಬೇಕೋ?

ಶ್ರೀ ಬಿ.ರಾಮಕೃಷ್ಣ:- ನೀರು ಬೇಕು. ಅವರಿಗೆ

ಶ್ರೀ ಕೆ.ಎಸ್.ಈಶ್ವರಪ್ಪ:- ಇದು ನಮಗೆ ಸಮಸ್ಯೆಯಾಗುತ್ತಿರುವುದು. ನೀವು ಹೇಳುವುದು ಸರಿ ಇದೆ. ಮಾನ್ಯ ಎಚ್.ಕೆ.ಪಾಟೀಲ್‌ರವರೇ, ನಾನು ಏಕೆ ಹೇಳುತ್ತಿದ್ದೇನೆಂದು ಅರ್ಥ ಮಾಡಿಕೊಳ್ಳಿ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಕುಡಿಯುವ ನೀರಿಗೆ ರಾಜಕಾರಣ ಬೆರೆಸಿದರೆ ನಾವು ಮನುಷ್ಯರಲ್ಲ. ನಾನು ಏನು ಹೇಳುತ್ತಿದ್ದೇನೆಂದರೆ, ನೀವು ಪ್ರವಾಸ ಮಾಡಿ ನಾವು ಏಕೆ ಪ್ರವಾಸ ಮಾಡುತ್ತೇವೆಂದರೆ, ನಮಗೆ ಹೇಳುವವರು ಕೇಳುವವರು ಇದ್ದಾರೆ ಎಂದು ಅನಿಸುತ್ತದೆ. ಎರಡು ವರ್ಷಕ್ಕೆ ನೀವು 1000 ಸಾಧನೆ ಮಾಡದಿದ್ದವರು ಮೂರನೇ ವರ್ಷಕ್ಕೆ 7000ಕ್ಕೆ ಹೋಗಿಬಿಡುತ್ತೀರಾ? ಹೇಗೆ ಹೋಗುತ್ತೀರಿ? ಮ್ಯಾಜಿಕ್ ಮಾಡುತ್ತೀರಾ? ಈ ಅಧಿಕಾರಿಗಳು ಹೋಗಿ ಬೇರೆ ಅಧಿಕಾರಿಗಳು ಬರುತ್ತಾರೆಯೇ? ನೀವು ಕೊಟ್ಟಿರುವುದನ್ನು ನಾನು ನಂಬುತ್ತೇನೆ. 10 ಪರ್ಸೆಂಟ್, 15 ಪರ್ಸೆಂಟ್, 5 ಪರ್ಸೆಂಟ್ ಪ್ರಶ್ನೆಯಲ್ಲ. 10 ಪರ್ಸೆಂಟ್ ಎಷ್ಟು ಕೋಟಿ? ಈ ದಿಕ್ಕಿನಲ್ಲಿ ತಾವು ಗಮನಿಸಬೇಕು. ವಿವರಕ್ಕೆ ಹೋಗುವುದಿಲ್ಲ. ತಾವು ಕೊಟ್ಟಿರುವುದನ್ನು ನಾನು ಗಮನಿಸುತ್ತೇನೆ. ವ್ಯತ್ಯಾಸ ಆಗಿದ್ದರೆ ಮತ್ತೆ ನಿಮ್ಮ ಗಮನಕ್ಕೆ ತರುತ್ತೇನೆ. ಯಾವ ಅಧಿಕಾರಿಗಳು ನಿಮಗೆ ತಪ್ಪು ವರದಿ ಕೊಡುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ನಾನು ಬಿಡುವುದಿಲ್ಲ. ಈ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕು. ಇನ್ನು ಎರಡು ಇನ್ನು ನಾನು ವಿವರಕ್ಕೆ ಹೋಗುವುದಿಲ್ಲ. ಬಹಳ ಸಮಯ ಆಯಿತು. ಅಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ. ತುಮಕೂರು ಜಿಲ್ಲಾ ಪಂಚಾಯಿತಿಯ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೇನೆ. 2014ರ ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ವರದಿ, ತುಮಕೂರಿನಲ್ಲಿ ನಾಲ್ಕು ಕೋಟಿ ರೂಪಾಯಿ

ಅವ್ಯವಹಾರವಾಗಿದೆ ಎಂದು ತಮ್ಮ ಗಮನಕ್ಕೆ ತಂದಿದ್ದೇನೆ. ಒಬ್ಬರಿಗಾದರೂ ಅಮಾನತ್ತು ಮಾಡಬೇಕಲ್ಲವೆ? ಇನ್ನು ಪೂರ್ತಿ ಓದಿದರೆ ಎಷ್ಟು ಜನಕ್ಕೆ ಬರುತ್ತದೆಯೋ ಗೊತ್ತಿಲ್ಲ. ಪುಣ್ಯಕ್ಕೆ ಅಲ್ಲೊಂದು ಇಲ್ಲೊಂದು ವರದಿಗಳಿವೆ. ಈ ರೀತಿ ವರದಿಗಳು ಇಲ್ಲವೆಂದರೆ ನಾವೇನು ಮಾಡುವುದಕ್ಕೆ ಆಗುತ್ತಿರಲಿಲ್ಲ. ನಾನು ಅದಕೋಸ್ಕರ ನಿಮಗೆ ಕಳಕಳಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಆ ಅಧಿಕಾರಿಗಳು ನನಗೇನು ವೈರಿಯಲ್ಲ, ಮಿತ್ರರು ಅಲ್ಲ, ದ್ವೇಷವೂ ಅಲ್ಲ. ಒಬ್ಬ ಅಧಿಕಾರಿಗಳ ಮೇಲೆ ಎಚ್.ಕೆ.ಪಾಟೀಲರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಬಿಗಿಯಾದ ಒಬ್ಬ ಮಂತ್ರಿಗಳಿದ್ದಾರೆ ಎನ್ನುವ ಈ ಭಾವನೆ ಬಂದರೆ ಉಳಿದಂತಹ ಅಧಿಕಾರಿಗಳು ಚುರುಕಾಗಿರುತ್ತಾರೆ. ದುಡ್ಡು ಮುಟ್ಟಬೇಕಾದರೆ ದೇವರ ದುಡ್ಡು ಎಂದು ಯೋಚನೆ ಮಾಡುತ್ತಾರೆ. ಇಲ್ಲ ಎಂದರೆ ಏನಾಗುತ್ತದೆ, " ಘೋಡಾ ಹೈ ಮೈದಾನ ಹೈ ಎನ್ನುವ ಗಾದೆ ಮಾತಿನ ಹಾಗೆ ಎಷ್ಟು ಬೇಕಾದರೂ ಲೂಟಿ ಮಾಡಿಕೊಂಡು ಹೋಗು, ಯಾರು □□□□□□□□□□□□□□□ □□□□□□□□□ ಹೇಳುವವರಿಲ್ಲ, ಕೇಳುವವರಿಲ್ಲ ಅದಕೋಸ್ಕರೆ ಈಗೇನು ಒಂದು ಉದಾಹರಣೆ ನಿಮ್ಮ ಕೈಗೆ ಸಿಕ್ಕಿದೆ ಇದರ ಬಗ್ಗೆ ದಯವಿಟ್ಟು ಕ್ರಮ ತೆಗೆದುಕೊಳ್ಳಿ. ಎರಡನೆಯದು, ಮಾನ್ಯ ನಾರಾಯಣಸ್ವಾಮಿಯವರು ಪ್ರಸ್ತಾಪ ಮಾಡಿದರು, ಅದರಲ್ಲಿ ನಾನು ಪ್ರಸ್ತಾಪ ಮಾಡಿದ್ದೇನೆ. 2013 ಅಂದರೆ ಎರಡೂವರೆ ವರ್ಷಗಳಿಂದ ಎಷ್ಟು ಸಲ ಹೋಗಿ ಬಂದಿದ್ದಾರೆ? ಜಿಲ್ಲಾ ಪಂಚಾಯಿತಿಯಿಂದ ಪಿ.ಡಿ.ಓ.ಗೆ 3-3 ಸಲ ನೋಟಿಸ್ ಕೊಟ್ಟಿದ್ದಾರೆ, ಅಲ್ಲೇನೋ ಲೋಕಲ್ ರಾಜಕಾರಣ ಎಂದು ಎರಡೂವರೆ ವರ್ಷದಿಂದ ನೀವೇ ಉತ್ತರ ಕೊಡುತ್ತಿದ್ದೀರಿ. ಲೋಕಲ್ ರಾಜಕಾರಣ ಏನು? ಸರ್ಕಾರದ ದುಡ್ಡು ಇಟ್ಟುಕೊಂಡು ಲೋಕಲ್ ರಾಜಕಾರಣ ಮಾಡುತ್ತಾರೆಯೇ? ಅಧಿಕಾರಿಗಳಿಗೆ ರಾಜಕಾರಣ ಮಾಡುವುದು ಏನು ಸಂಬಂಧ? ನಾವು ನೀವು ರಾಜಕಾರಣ ಮಾಡೋಣ. ಆ ಬಡವರಿಗೆ ಕೊಡಬೇಕಾದ ಹಣದಲ್ಲಿ ಏಕೆ ರಾಜಕಾರಣ ಮಾಡುತ್ತಾರೆ? ಅವರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ನಿಮಗೇನು? ಹಾಗಾದರೆ ನೀವು ಒಂದು ರಾಜಕೀಯ ಪಕ್ಷದ ಜೊತೆಯಲ್ಲಿ ಇರುತ್ತೀರಾ? ನೀವು ಮಂತ್ರಿ ಸ್ಥಾನದಲ್ಲಿದ್ದೀರಿ, ನೀವು ಯಾವುದೇ ಪಕ್ಷದ ಪ್ರತಿನಿಧಿಯಲ್ಲ. ಯಾವ ಅಧಿಕಾರಿ ತಪ್ಪು ಮಾಡುತ್ತಾನೆಯೋ ಹಣ ನಾಳೆ ಬೆಳಿಗ್ಗೆಯೇ ಅಧಿಕಾರಿಯಿಂದ ಕೊಡಿಸುತ್ತೇನೆ. ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ನಿಮ್ಮಿಂದ ಉತ್ತರ ಬರಬೇಕಾಗಿತ್ತು. ನಿಮ್ಮಿಂದ ನಾನು ಇದನ್ನು ನಿರೀಕ್ಷೆ ಮಾಡಿದ್ದೆ. ಅದು ಬಿಟ್ಟು ನಾನು ಕರೆಯುತ್ತೇನೆ, ಮೀಟಿಂಗ್ ಮಾಡುತ್ತೇನೆ, ಹಣ ಕೊಡಿಸುವ ಪ್ರಯತ್ನ ಮಾಡುತ್ತೇನೆ, ಅಲ್ಲಿ ರಾಜಕಾರಣ ಇದೆ, ಇದು ಉತ್ತರವೇ? ಸದನದಲ್ಲಿ ರೆಕಾರ್ಡ್ ಆಗುತ್ತಿದೆ.

ಶ್ರೀ ಎಚ್.ಕೆ.ಪಾಟೀಲ್ಸ್ **;-*** ಮಾನ್ಯ ಸಭಾಪತಿಯವರೇ, ಸಂಪೂರ್ಣ ಮಾಹಿತಿ ಈ ರೀತಿ ಇದೆ. 539 ಶೌಚಾಲಯಗಳನ್ನು ಅಲ್ಲಿ ಕಟ್ಟಿರತಕ್ಕಂಥದ್ದು. ಅದರಲ್ಲಿ ಒಂದು ಹೇಳಿಕೆಯ ಪ್ರಕಾರ 277 ಹೊಸ ಶೌಚಾಲಯಗಳು, 266 ಹಳೆಯ ಶೌಚಾಲಯಗಳು. ಇದರಲ್ಲಿ ಕೆಲವು ಈಗಾಗಲೇ ಅನುದಾನ ಅಥವಾ ಪ್ರೋತ್ಸಾಹ ಧನ ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಕೆ.ಡಿ.ಪಿ ಸಭೆ, ಇತರೆ ಸಭೆಗಳಲ್ಲಿ ಸಾಕಷ್ಟು ವಾದ ವಿವಾದಗಳಾಗಿವೆ. ಅಂತಿಮ ತೀರ್ಮಾನಕ್ಕೆ ಬರುವುದಕ್ಕಾಗಿಲ್ಲ. ಅದಕ್ಕೆ ನಾನು ಆ ಸಂಬಂಧಪಟ್ಟಿರತಕ್ಕಂಥ ಅಧಿಕಾರಿಗಳನ್ನು ಕರೆಯಿಸಿ ನಮ್ಮ ಪ್ರಧಾನ ಕಾರ್ಯದರ್ಶಿಗಳ ಮುಖಾಂತರ ಅಥವಾ ಅದರ ಗಂಭೀರತೆಯನ್ನು ನೋಡಿಕೊಂಡು ಆ ಸಮಸ್ಯೆಯನ್ನು ಬಗೆಹರಿಸುತ್ತೇನೆಂದು ನಾನು ಹೇಳಿದೆ. ಮಾನ್ಯ ನಾರಾಯಣಸ್ವಾಮಿಯವರು ಹೇಳಿದ ಮೇಲೆ ಅದಕ್ಕೆ ನೋಟಿಸ್‌ನ್ನು ಕೊಡಿಸಿದ್ದೆ. ಆದರೆ ಅದು ಆದಮೇಲೆ ನಾನು ಅದನ್ನು ಗಮನಿಸಿರಲಿಲ್ಲ. ಇದನ್ನು ನನ್ನ ಗಮನಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು, ಅವರು ತಂದಿದ್ದಾರೆ. ತಕ್ಷಣದಲ್ಲಿ ಹಣಕಾಸು ಕಟ್ಟಿದವರು ಯಾರು ಇದ್ದಾರೆ ಅವರಿಗೆ ಮುಟ್ಟಿಸುವುದಕ್ಕೆ ನೋಡುತ್ತೇವೆ. ಒಂದು ವೇಳೆ ಕಟ್ಟಿದ್ದಾರೆಯೋ ಕಟ್ಟಿಲ್ಲವೋ ಎನ್ನುವುದರ ಸಲುವಾಗಿ ತನಿಖೆಯಾಗಬೇಕಾಗಿದ್ದರೆ ಅದನ್ನು ಮಾಡಿಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ**:-** ಮಾನ್ಯ ಸಭಾಪತಿಯವರೇ, ಮೊನ್ನೆ ಸಚಿವ ಸಂಪುಟದ ಸಭೆಯಲ್ಲಿ ಸುಮಾರು 50 ಪರ್ಸೆಂಟ್‌ನಷ್ಟು ರಾಜ್ಯದ ಜಿಲ್ಲೆಗಳಲ್ಲಿ ಬರಗಾಲ ಇದೆ ಎಂದು ಅವರೇ ಹೇಳುತ್ತಿದ್ದಾರೆ. ಸ್ವಾಭಾವಿಕವಾಗಿ ಬರಗಾಲ ಎಂದ ತಕ್ಷಣ ಕುಡಿಯುವುದಕ್ಕೂ ನೀರು ಸಿಗುವುದಿಲ್ಲವೆಂದು ಭಯ ಆಗುತ್ತದೆ. ಈಗ ಈ Multi-village water supply scheme ನ್ನು ಪೂರ್ಣ ಮಾಡುವ ದಿಕ್ಕಿನಲ್ಲಿ ಆದ್ಯತೆ ಮೇಲೆ ಅವಕಾಶ ಕೊಟ್ಟರೆ ಮಾತ್ರ ಸ್ವಲ್ಪ ಅವಕಾಶ ಆಗುತ್ತದೆ. ಏಕೆಂದರೆ, ಸ್ವಾಭಾವಿಕವಾಗಿ Multi-village water supply scheme ನದಿ ಮೂಲ ಅಥವಾ ಬೇರೆ ಬೇರೆ ಕಡೆಗಳಲ್ಲಿ ನೀರು ಇರುವ

ಜಾಗವನ್ನೇ ಹುಡುಕಿ surface water ಮಾಡಿರುವುದೆಂದು ಅವರಿಗೆ ಗೊತ್ತಿದೆ. ಏಕೆಂದರೆ, ಇವತ್ತು ನಾವು ಚರ್ಚೆ ಮಾಡಿಕೊಂಡು ನಾವೇನೋ ಒಂದಿಷ್ಟು ಸಲಹೆ ಕೊಟ್ಟೆವು, ಅವರೇನೋ ಉತ್ತರ ನಾನು ವಿವರಕ್ಕೆ ಕೊಟ್ಟರು, ನಾವು ಹೋದೆವು ಎನ್ನುವುದಕ್ಕಿಂತಲೂ ಫಲಿತಾಂಶ ಬೇಕು. LocJjdy. Day Multi-village water supply scheme do ಮಾಡಿದರು, ಎಷ್ಟು ಮುಗಿಸಿದರು ಎಂಬುದು ಗೊತ್ತಿಲ್ಲ. ನನ್ನ ಲೆಕ್ಕ ಪ್ರಕಾರ ಸುಮಾರು 200- 221 ರಲ್ಲಿ ಅರ್ಧಂಬರ್ಧ ನಿಂತಿದೆ. ಅವರು ತುಂಬಾ ಒಳ್ಳೆಯ ಉತ್ತರ ಕೊಟ್ಟಿದ್ದಾರೆ.

ಶ್ರೀ ಬಿ.ರಾಮಕೃಷ್ಣ:- ಆರು ವರ್ಷವಾದರೂ ಇನ್ನು ಪೂರ್ಣವಾಗಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ:- ಅವರು ಸಮಾಧಾನವಾದ ಉತ್ತರ ಕೊಟ್ಟರು.

ಶ್ರೀ ಬಿ.ರಾಮಕೃಷ್ಣ:- ಆರು ವರ್ಷವಾದರೂ Multi-village water supply scheme ಆಗಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಸಭಾಪತಿಯವರೇ, ರಾಮಕೃಷ್ಣರವರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಾವುದು ಮುಗಿಯುವ ಸ್ಥಿತಿ ಬರುತ್ತಿದೆ ಅದಕ್ಕೆ ನಾನು ಮೊದಲನೆ ಆದ್ಯತೆ ಕೊಡುತ್ತೇನೆಂದು ಹೇಳಿದ್ದೀರಿ. ಅದು ಒಳ್ಳೆಯ ತೀರ್ಮಾನ. ಅದರ ಜೊತೆಗೆ ಅನೇಕ ವರ್ಷಗಳಿಂದ ನಿಂತಿದೆಯೆಲ್ಲಾ ಅದಕ್ಕೂ ಏನು ಮಾಡಬೇಕೆನ್ನುವುದು ಪ್ರಶ್ನೆ. village water supply scheme ತೆಗೆದುಕೊಳ್ಳಬೇಕಾದರೆ ಕುಡಿಯುವುದಕ್ಕೆ ನೀರಿಲ್ಲ ಹೀಗಿರಬೇಕಾದರೆ 6-8 ಎನ್ನುವ ಕಾರಣಕ್ಕಾಗಿಯೇ ನಾವು ತೆಗೆದುಕೊಳ್ಳುವುದಲ್ಲವೆ?

ಈ Multi- ವರ್ಷದವರೆಗೂ ಆಗಲಿಲ್ಲವೆಂದರೆ ಅವರು ಕಾರಣ, ನಾನು ಕಾರಣ ಎಂದು ಹೇಳುತ್ತಿಲ್ಲ. ಈಗ ಅವರ ಕೈಯಲ್ಲಿ ಅಧಿಕಾರ ಇದೆ. ಅವರು ಗ್ರಾಮೀಣಾಭಿವೃದ್ಧಿ ಸಚಿವರು. ಶ್ರೀ ಕೆ.ಎಸ್.ಈಶ್ವರಪ್ಪ(ಮುಂದುವರೆದಿದೆ)Multi Village Scheme ಗಳನ್ನು . . ಯಾವರೀತಿ ನೀವು 9 ತಿಂಗಳಲ್ಲಿ 6 ಸಾವಿರ ಶುದ್ಧ ನೀರಿನ ಘಟಕಗಳನ್ನು ಸ್ಥಾಪನೆ ಮಾಡುವುದಕ್ಕೆ ಪ್ರತಿತಿಂಗಳು ಇಂತಿಷ್ಟು ಎಂದು target ಇಟ್ಟುಕೊಂಡು ಮಾಡುವುದಕ್ಕೆ ಹೊರಟಿದ್ದೀರೋ ಅದೇರೀತಿ ಇವುಗಳಿಗೂ ಕೂಡ ಯಾವ ಯಾವ ತಿಂಗಳುಗಳಲ್ಲಿ ಯಾವುದನ್ನು ಮಾಡುತ್ತೇವೆ ಎಂದು target ಇಟ್ಟುಕೊಳ್ಳಬೇಕು. ನೀವು ಗುರಿ ಇಟ್ಟುಕೊಳಲಿಲ್ಲ ಎಂದರೆ ಇವು ಹೀಗೆಯೇ ಬಿದ್ದಿರುತ್ತವೆ ಎಂದು ತುಂಬಾ ಸ್ಪಷ್ಟವಾಗಿ ಹೇಳುತ್ತೇನೆ. ನಾವು ಇಲ್ಲಿ ಕೂಗುವುದು, ನೀವು ಒಂದು ಉತ್ತರ ಕೊಟ್ಟು ಹೋಗುವುದು ಅದೇ ಆಗಿಬಿಡುತ್ತದೆ. 3 ಗಂಟೆಗಳ ಕಾಲ ಉತ್ತರ ಕೊಟ್ಟರು ಎಂದು ಉತ್ತರದಿಂದ ಸಮಾಧಾನ ಸಿಗುತ್ತದೆಯೇ ವಿನಃ ನೀರು ಸಿಗುವುದಿಲ್ಲ. ನಾನು ನಿಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ನಾವು ಇವತ್ತು ನೀವು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದೀರಿ, ಇದು ನಿಮ್ಮ ಕರ್ತವ್ಯವಾಗಿದೆ. ಸಭಾತ್ಯಾಗ ಮಾಡುವುದಿಲ್ಲ, ಧರಣಿ ಮಾಡುವುದಿಲ್ಲ. .

ಡಾ: ಮತ್ತಿಕಟ್ಟೆ ವೀರಣ್ಣ:- ಇವತ್ತಲ್ಲ, ಯಾವತ್ತೂ ಧರಣಿ ಮಾಡಬೇಡಿ

ಶ್ರೀ ಕೆ.ಎಸ್.ಈಶ್ವರಪ್ಪ:-ಎಮ್ಮೆ ಮೇಲೆ ಮಳೆ ಬಿದ್ದ ಹಾಗಾದರೆ ಆಗ ಧರಣಿ ಮಾಡಬೇಕಾಗುತ್ತದೆ. ಮಾನ್ಯ ಸಚಿವರಿಗೆ ಒಂದಿಷ್ಟು ಕಳಕಳಿ ಇದೆ. ನಾನು ವಿರೋಧ ಪಕ್ಷದ ನಾಯಕನಾಗಿ ಇಷ್ಟೊಂದು soft ಆಗಿ ಮಾತನಾಡುತ್ತಿರುವುದು ಇದೇ ಮೊದಲನೆ ಸಲ ಅಂದುಕೊಳ್ಳುತ್ತೇನೆ. . .

ಶ್ರೀ ಹೆಚ್.ಕೆ.ಪಾಟೀಲ್:- ಇದಕ್ಕೆ ನಾವು soft ಎಂದು ಹೇಳಬೇಕೇ? . . .(ಸದನದಲ್ಲಿ ನಗು)

ಶ್ರೀ ಕೆ.ಎಸ್.ಈಶ್ವರಪ್ಪ:-ಹಾಗಾದರೆ ನನ್ನ ಭಾಷೆಯನ್ನು ಪ್ರಾರಂಭ ಮಾಡಲೇ? ಮಾನ್ಯ ಸಭಾಪತಿಗಳೆ, ಈ Multi Village Schemeಗೆ ಸಂಬಂಧಪಟ್ಟಂತೆ, ಮಾನ್ಯ ಮುಖ್ಯಮಂತ್ರಿಗಳು ಎಷ್ಟು ಹಣ ಕೊಡುತ್ತಾರೆ, ಬರಗಾಲ ಪ್ರದೇಶಕ್ಕೆ ನೀರು ಕೊಡುವುದಕ್ಕೆ ಎಲ್ಲಾ ಜಿಲ್ಲಾಧಿಕಾರಿಗಳ ಹತ್ತಿರ ದುಡ್ಡಿದೆ ಎನ್ನುವ ಏಕೆ ಜಿಲ್ಲೆಯಲ್ಲಿ ಏನೇನು ಪ್ರಾಜೆಕ್ಟ್ ಹಾಕಿಕೊಂಡಿದ್ದೀರಿ ಮತ್ತು ಯಾವ ಯಾವ ತಿಂಗಳಲ್ಲಿ ಇದನ್ನು ಮುಗಿಸುತ್ತೀರಿ ಹೇಳಬೇಕು. ಈ ರೀತಿ ಕುಡಿಯುವ ನೀರನ್ನು ಯೋಜನೆಗಳನ್ನು ಮಾಡುವ ನಿಟ್ಟಿನಲ್ಲಿ ಭರವಸೆ ಬರಬೇಕು. ಮತ್ತೆ ನಾವು ನವೆಂಬರ್ ತಿಂಗಳಿನಲ್ಲಿ ಸೇರುತ್ತಿದ್ದೇವೆ. ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್ ಇನ್ನೂ 4 ತಿಂಗಳಿದೆ. ಮತ್ತೆ ಆಕಡೆ 5 ತಿಂಗಳು ಮಾತ್ರ ಉಳಿಯುತ್ತದೆ. Action plan ಕೊಟ್ಟ ಮೇಲೆ ಅವರ ಜವಾಬ್ದಾರಿ ಇನ್ನೂ ಜಾಸ್ತಿಯಾಗುತ್ತದೆ. Action plan ನಲ್ಲಿ, ಈ ತಿಂಗಳಲ್ಲಿ ಇಷ್ಟಿಷ್ಟು ಕೆಲಸ ಮಾಡುತ್ತೇವೆ ಎಂದು ಸಂಜೆ

ಅರ್ಧ ಗಂಟೆಯಲ್ಲಿ ಟೈಪ್ ಮಾಡಿಕೊಟ್ಟು ಬಿಡುತ್ತಾರೆ. ನಾನು ಮತ್ತೆ ಹೇಳುತ್ತಿದ್ದೇನೆ. ಈ 4 ತಿಂಗಳಿಗೆ ಸಂಬಂಧಪಟ್ಟಂತೆ ನೀವು action plan ಅನ್ನು ಒಂದು ವಾರ, ಹದಿನೈದು ದಿವಸಗಳ ಒಳಗೆ ಕಳುಹಿಸಿ ಕೊಡುತ್ತೀರಿ ಎಂದು ನಂಬಿದ್ದೇನೆ. ಕಳುಹಿಸಿ ಕೊಡುತ್ತೀರಿ ಅಲ್ಲವೇ? ಕಳುಹಿಸಿ ಕೊಡುತ್ತಾರೆ. ಕಳುಹಿಸಿ ಕೊಟ್ಟಮೇಲೆ ಈ 4 ತಿಂಗಳಲ್ಲಿ ನಿಮ್ಮ target reach ಆಗಲಿಲ್ಲ ಎಂದರೆ, ಮುಂದಿನ ಅಧಿವೇಶನ ಹೇಗೆ ನಡೆಯುತ್ತದೆಯೋ ನಾನು ಹೇಳುವುದಕ್ಕೆ ಬರುವುದಿಲ್ಲ. ಕುಡಿಯುವ ನೀರು ಕೊಡುವುದಕ್ಕಾಗುವುದಿಲ್ಲ ಎಂದರೆ ಬಹಳ ಕಷ್ಟವಾಗುತ್ತದೆ. ಈ ನಿಟ್ಟಿನಲ್ಲಿ ಒತ್ತಾಯ ಮಾಡಿ, ಈ ದಿಸೆಯಲ್ಲಿ ನೀವು ಯಶಸ್ವಿಯಾಗಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಪೂರ್ಣ ನಿಮ್ಮ ಜೊತೆ ಇರುತ್ತೇವೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಕುಡಿಯುವ ನೀರು ಕೊಡಲೇಬೇಕು.

ಸಭಾಪತಿಗಳು:- ಗ್ರಾಮೀಣಾಭಿವೃದ್ಧಿ ಇಲಾಖೆಯ ಮೇಲೆ ನಡೆದಂತಹ ಚರ್ಚೆ ಮತ್ತು ಉತ್ತರ ಇಲ್ಲಿಗೆ ಮುಕ್ತಾಯಗೊಂಡಿದೆ. ನಾನು ಮಧ್ಯಾಹ್ನ ಹೇಳುವಾಗ ನಾಳೆ ದಿವಸ ಬೆಳಿಗ್ಗೆ 10.00 ಗಂಟೆಗೆ ಸಭೆ ಸೇರುತ್ತದೆ ಎಂದು ತಿಳಿಸಿದ್ದೆ. ಆದರೆ ಕಾರಣಾಂತರಗಳಿಂದ ನಾಳೆ ಬೆಳಿಗ್ಗೆ ಸಭೆ 11.00 ಗಂಟೆಗೆ ಸೇರುತ್ತದೆ. ಅಲ್ಲಿಯ ತನಕ ಸದನವನ್ನು ಮುಂದೂಡುತ್ತೇನೆ.

**(**ಸದನವು ರಾತ್ರಿ **8** ಗಂಟೆ **45** ನಿಮಿಷಕ್ಕೆ ಮುಕ್ತಾಯಗೊಂಡು

ಪುನಃ ದಿನಾಂಕ **31**ನೇ ಜುಲೈ ಮಾಹೆ **2015**ರ ಶುಕ್ರವಾರ ಬೆಳಿಗ್ಗೆ **11.00** ಗಂಟೆಗೆ ಸೇರಲು ನಿಶ್ಚಯಿಸಿತು**)**